VOLUME NO:23

NOT AVAILABLE

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹಸ್ಪತಾಧ್ಯೇಷ್ಟರಾದ ನೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ. ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ. ಖರ್ಚು ಸೇರಿ ೩ ರೂ ೪ ಆಣೆ.

ಸಂವುಟ ೨೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೪ ನೇ ಏಪ್ರಿಲ್ ೧೯೫೦ [ಸಂಚಿಕೆ ೧

ಕೈ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಅಚಲಕೀರ್ತಿ

—

ವೀರಶೈವಮತವು ಪರಮಪವಿತ್ರವಾದುದು ಯುಗ ಯುಗಾದಿಗಳಿಂದ ನಡೆದು ಬಂದ ಈ ಮಹಾಮತ ಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರು ಕಾಶಿ, ಕೇದಾರ ಬಾಳೇಹೊನ್ನೂರು, ಉಜ್ಜಯಿನಿ, ಶ್ರೀಶೈಲ ಕ್ಷೇತ್ರಗಳಲ್ಲಿ ತಮ್ಮ ವೀರಗಳನ್ನೇರ್ಪಡಿಸಿ ಪ್ರಕಾಶಿಸು ತ್ತಿದ್ದುದು ಲೋಕಪ್ರಸಿದ್ಧವೇ ಆಯಿ ಈ ಪಂಚಪೀಠಗಳ ವಾಸಸ್ಥಾನವನ್ನು ನೋಡಿದರೆ ಒಂದಾನೊಂದುಕಾಲದಲ್ಲಿ ವೀರಶೈವಮತವು ಆಸೇತುಹಿಮಾಚಲಪರ್ಯಂತವಾಗಿ ಭರತಖಂಡದಲ್ಲೆಲ್ಲಾ ವ್ಯಾಪಿಸಿತ್ತೆಂದು ಧಾರಾಳವಾಗಿ ಹೇಳಬಹುದು. ಮುಂದೆ ಕಲಿಕಾಲಪ್ರಭಾವದಿಂದ ಆ ಮಹಾಚಾರ್ಯರ ಹೆಸರು ಕ್ರಮೇಣ ಮರೆಮಾಚುತ್ತ ಬಂದದ್ದನ್ನು ನೋಡಿ ಸಾಕ್ಷಾತ್ಪರಶಿವನು ತನ್ನ ಪಂಚ ಮುಖಗಳಿಂದುದ್ಭವಿಸಿದ ಪಂಚಾಚಾರ್ಯರ ಮಹಿಮೆ ಯನ್ನು ಪುನಃ ಪ್ರಕಾಶಗೊಳಿಸಲೋಸುಗ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರನ್ನು ಉದಯಿಸಿದನೋ ಏನೋ ಎನ್ನುವಂತೆ ಪಂಡಿತರು ಜನ್ಮವೆತ್ತಿ, ಶ್ರೀಜಗದ್ಗುರು ಪಂಚಾಚಾರ್ಯರ ಶ್ರೇಷ್ಠತ್ವ ಹಾಗೂ ವೀರಶೈವಧರ್ಮದ ಪ್ರಾಶಸ್ತ್ಯ ಇವೇ ಮೊದಲಾದ ಮಹತ್ಕಾರ್ಯಗಳನ್ನು ಜನಸಾಮಾನ್ಯರಲ್ಲಿ ಲೇಖನಮೂಲಕ ತಿಳುಹಿಸಲೋಸುಗ ಬಹು ಪ್ರಯಾಸಪಟ್ಟು ಮೈಸೂರು ರಾಜಧಾನಿಯಲ್ಲಿ "ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್" ಎಂಬ ಮುದ್ರಣಾಲಯವನ್ನು ಸ್ಥಾಪಿಸಿ ತದ್ದ್ವಾರಾ "ಪಂಚಾ ಚಾರ್ಯಪ್ರಭಾ" ವಾರಪತ್ರಿಕೆಯನ್ನು ಹೊರಡಿಸುತ್ತ ಪಂಚಪೀಠಗಳಿಗೆ ಒದಗಿದ ನಾನಾವಿಧವಾದ ತೊಂದರೆ ಗಳನ್ನು ದೂರಮಾಡಿ, ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರಾಂತಗಳಲ್ಲಿ ಆಚಾರ್ಯರ ಧ್ವಜವನ್ನು ನೆಲಸಿದಂದಿ ನಿಂದ ಜಗದ್ಗುರುಗಳವರ ಸಂಚಾರವು ಆರಂಭವಾಗಿ ಸರ್ವಜನರಲ್ಲಿ ಭಕ್ತಿವಿಶ್ವಾಸಗಳು ಬೆಳೆಯತೊಡಗಿದವು. ಪಂಡಿತರು ವೀರಶೈವಧರ್ಮತತ್ವಗಳನ್ನು ಆಚಾರ್ಯರ ಲೀಲೆಗಳೊಂದಿಗೆ ಮುದ್ರಿಸಿ ಪ್ರಸಿದ್ಧಮಾಡಿದರು ತಾವು ಮಾಡಿದ ಭಾಷಣಗಳನ್ನು ಕನ್ನಡ, ಮರಾಠಾಸ್ಯ, ಆಂಧ್ರ, ಇಂಗ್ಲೀಷ್ ಭಾಷೆಗಳಲ್ಲಿ ಗ್ರಂಥರೂಪವಾಗಿ ಬರೆದು, ಆಯಾಯ ಪ್ರಾಂತಗಳಲ್ಲಿ ಪ್ರಚಾರಪಡಿಸಿದರು. ಇಂಗ್ಲಿಷ್ ಭಾಷೆಯ ಪುಸ್ತಕಗಳನ್ನು ಯೂರೋಪ್, ಆಫ್ರಿಕಾ, ಅಮೇರಿಕಾ ಖಂಡಗಳಲ್ಲಿಯ ಮುಖ್ಯ ಮುಖ್ಯ ಸ್ಥಳಗಳಿಗೂ ಲೈಬ್ರರಿಗಳಿಗೂ ಕಳಿಸಿಕೊಟ್ಟರು. ಮೈಸೂರಿನಲ್ಲಿರುವ ವಿಶ್ವವ್ಯಾಪಿ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳವರ ಹಸ್ತದಿಂದ, ಮೂಲಾಚಾ ರ್ಯರ ಲಿಂಗೋದ್ಭವ ಮೂರ್ತಿಗಳನ್ನು ಕೆತ್ತಿಸಿ ಅಲ್ಲಲ್ಲಿ ಪ್ರತಿಷ್ಠೆಗೊಳಿಸಿದರು. ಸರಸವಾದ ಸಂಗೀತದಿಂದೊಡ ಗೂಡಿದ ಆಚಾರ್ಯರ ಪದ್ಯಗಳನ್ನು ಗ್ರಾಮಾಫೋನ್ ಗಳಲ್ಲಿ ಹಾಡಿಸಿದರು. ರೇಡಿಯೋ ಭಾಷಣಗಳ ಮೂಲಕ ಆಚಾರ್ಯರ ಮಹಿಮೆಯನ್ನೂ ವೀರಶೈವ ಧರ್ಮದ ಪ್ರಾಚೀನತೆಯನ್ನೂ ವ್ಯಕ್ತಗೊಳಿಸಿದರು. ಆಚಾರ್ಯರ ಮೇಲಿದ್ದ ಅವರ ಪ್ರೇಮಕ್ಕೆ ಸಾರಂಚೇ ಇದ್ದಿಲ್ಲ. ೧೯೧೮ ನೆಯ ಇಸವಿಯಲ್ಲಿ ಪಂಚಾಚಾರ್ಯರ ಸಮ್ಮೇಲನವನ್ನು ಕಾಶಿಯಲ್ಲಿ ತಾವೇ ಕಾರ್ಯದರ್ಶಿಗಳಾಗಿ ನೆರವೇರಿ ಸಿದರು. ಈ ಪ್ರಕಾರ ಜಗದ್ಗುರು ಪಂಚಾಚಾರ್ಯ ಭಗವತ್ಪಾದರಲ್ಲಿ ತನುಮನಧನಗಳನ್ನರ್ಪಿಸಿ ಬ್ರಹ್ಮಚರ್ಯ ವ್ರತದಿಂದ ಶರೀರವನ್ನೇ ಧಾರೆಯೆರೆದು ಅದ್ಭುತ ಪಾಂಡಿತ್ಯವನ್ನು ಸಂಪಾದಿಸಿ, ಸ್ವತಂತ್ರತೆ, ಏಕನಿಷ್ಠತೆ ಇತ್ಯಾದಿ ಸದ್ಗುಣಗಳಿಂದೊಡಗೂಡಿ ರತ್ನವೆನಿಸಿ ಶಿವನ ಅಪ್ಪಣೆಯ ಮೇರೆಗೆ ಚಿರ್ಮಚಕ್ಷುಗಳಿಗೆ ಕಾಣದಂ ತಾದರು. ಪಂಡಿತರು ತೋರ್ಪಡಿಸಿರುವ ಗೃತಿಗಳು ಪ್ರತಿಯೊಬ್ಬ ಲಿಂಗಧಾರಿಯ ಹೃದಯದಲ್ಲಿ ವ್ಯಾಪಿಸು ವಂದವಾಗಿವೆ

ಪ್ರಸ್ತುತ ಶ್ರೀಮಜ್ಜಗದ್ಗುರು ರಂಭಾಪುರೀ ಪ್ರಸನ್ನ ರೇಣುಕ ವೀರಗಂಗಾಧರಶಿವಾಚಾರ್ಯ ಮಹಾಸನ್ನಿಧಿ ಯವರು ಕರ್ನಾಟಕದೊಳಗೆ ಪವಿತ್ರಸ್ಥಾನವಾದ ಗುರು ಕುಲವಾಸ ನುತ್ತಿನುಂದಿರದಲ್ಲಿ ಚತುರಾಚಾರ್ಯರ ಸಮ್ಮೇ ಲನವನ್ನು ಕರೆದುದು ದಕ್ಷಿಣ ಭಾರತದ ವೀರಶೈವರ, ಆರ್ಥಾತ್ ಹಿಂದುಗಳ ಪುಣ್ಯವೆಂದೇ ಹೇಳಬಹುದು. ಈ ಸಭೆಯಲ್ಲಿ ನಿರ್ಣಯಿಸಿದ ವಿಷಯಗಳನ್ನು ಹೋದ ವಾರದ ಪ್ರಭಾ ಸಂಚಿಕೆಯಿಂದ ವಾಚಕರು ಅರಿತಿರು ವುದು ಸರಿಯಷ್ಟೆ ಇಂತಹ ಮಹತ್ಕಾರ್ಯವನ್ನು ಒಡ್ಡಿದ ಶ್ರೀ ರಂಭಾಪುರಿ ಸನ್ನಿಧಿಯವರಿಗೂ, ಇವರ ಆಮಂತ್ರಣವನ್ನು ಮನ್ನಿಸಿ ಬಹುದೂರದಿಂದ ಆಗಮಿಸಿ ದಂಥ ಕಾಶಿ, ಶ್ರೀಶೈಲ, ಉಜ್ಜಯಿನಿ ಜಗದ್ಗುರುಗಳವ ರಿಗೂ ವೀರಶೈವರು ಚಿರಋಣಿಯಾಗಿರುವರು ಆದರೆ ಪಟ್ಟಚಿರಾಧಿಕಾರಿಗಳಿಂದಲೂ, ನಿಧ್ವನ್ಮೌಢಿಗಳಿಂದಲೂ, ಶ್ರೀಮಂತರಿಂದಲೂ, ಭಕ್ತಾದಿಗಳಿಂದಲೂ ಬಹು ವಿಜೃಂಭಣೆಯಿಂದ ನೆರವೇರಿದ ಈ ಚತುರಾಚಾರ್ಯರ ಸಮ್ಮೇಲನವಲ್ಲಿ ಪಂಡಿತರ ಹೆಸರು ಇಲ್ಲದ ಮಾತ್ರಕ್ಕೆ ಕುಂಕುಮವಿಲ್ಲದ ಮುತ್ತೈದೆಯಂತೆ ಸಭೆಗೆ ಹೆಚ್ಚಿನ ಶೋಭೆ ಇಲ್ಲವಾಗಿ ತೋರುತ್ತದೆ. ಆಗಲಿ ಅದೆಲ್ಲಾ ಈಶ್ವರ ಸಂಕಲ್ಪ.

ಓರ್ವ ಪ್ರಭಾವಾಚಕ

ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ನಿಧನದ ಬಗ್ಗೆ ದುಃಖಸೂಚಕ ಸಭೆಗಳು—ಲೇಖನಗಳು

ಹಾವೇರಿ

—

ದಿನಾಂಕ ೪-೪-೫೦ ಮಂಗಳವಾರ ಸಾಯಂಕಾಲ ೬ ಘಂಟೆಗೆ ಬನ್ನದ ಮಠದಲ್ಲಿ ಶ್ರೀಶೈಲ ಜಗದ್ಗುರು ವಾಗೀಶಪಂಡಿತಾರಾಧ್ಯಶಿವಾಚಾರ್ಯ ಮಹಾಸ್ವಾಮಿಗಳ ಸಮ್ಮುಖದಲ್ಲಿ ಪಂ॥ ಕಾಶೀನಾಥಶಾಸ್ತ್ರಿಗಳವರು ದಿನಾಂಕ ೨೭-೩-೫೦ ನೇ ದಿವಸ ಆಕಸ್ಮಿಕವಾಗಿ ಶಿವೈಕ್ಯರಾದ ಬಗ್ಗೆ ದುಃಖವನ್ನು ಪ್ರಕಟಿಸಲಾಯಿತು. ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಮಹಾ ವಿದ್ವಾಂಸರಿದ್ದು ವೀರಶೈವ ಧರ್ಮೋನ್ನತಿಯ ಬಗ್ಗೆ ಅನೇಕ ದಿವ್ಯ ಗ್ರಂಥಗಳನ್ನು ರಚಿಸಿ ಮಹೋಪಕಾರವನ್ನು ಮಾಡಿ ದ್ದಾರೆ. ಪಂಚಪೀಠಗಳ ಪ್ರಕಾಶಕ್ಕಾಗಿ ತಮ್ಮ ಇಡೀ ಆಯುಸ್ಯವನ್ನೇ ಧಾರೆವೆರೆದಿದ್ದಾರೆ. ಇಲ್ಲದೆ ಮುಂದೆಯೂ ಜಗದ್ಗುರು ಪಂಚಾಚಾರ್ಯರ ಮುಖಾಂತರ ಪ್ರಪಂಚ ದಲ್ಲಿ ವೀರಶೈವ ಸಿದ್ಧಾಂತದ ಪ್ರಚಾರವನ್ನು ಹರಡು ವದಕ್ಕಾಗಿ ಪಂಚಾಚಾರ್ಯ ಸ್ತುತಿಯೆಂಬ ಸತ್ಪ್ರತಿಕೆಯನ್ನು ಮತ್ತು ಒಂದು ಪ್ರಿಂಟಿಂಗ್ ಪ್ರೆಸ್ಸನ್ನು ವೀರಶೈವ ಸಾಹಿತ್ಯೋದ್ಧಾರಕ್ಕಾಗಿ ನಮ್ಮ ಸಮಾಜದವರ ಮುಂದೆ ಕೊಟ್ಟು, ತೋಗಿದ್ದಾರೆ ಈ ಘನವಾದ ಕಾರ್ಯಗಳನ್ನು ಪ್ರತಿ ಮನುಷ್ಯನು ಎಷ್ಟು ಕೊಂಡಾಡಿದರೂ ತೀರದಾಗಿವೆ. ಇಂತಹ ಅಖಂಡ ಧೈರ್ಯಶಾಲಿಗಳಾದ ಮತ್ತು ಹಿಡಿದ ಕಾರ್ಯವನ್ನು ಬಿಡದೇ ಸಾಧಿಸಬಲ್ಲ ಸತ್ಯಮಾರ್ಗದ ಪಂಡಿತರು ಪುನಃ ಹುಟ್ಟುವದು ಅಸಂಭವನೇ ಸರಿ ಜಗದ್ಗುರು ಪಂಚಾಚಾರ್ಯರ ಹೆಸರಿನಿಂದ ಪ್ರಕಟವಾಗಿರುವ ಪ್ರಭೆಯು ಚಿರಂಜೀವಿ ಯಾಗಿ ಬಾಳಿ ಪಂಡಿತರ ಸತ್ಸಂಕಲ್ಪವನ್ನು ಸಫಲ ಗೊಳಿಸಬೇಕಾಗಿಯೂ ಪಂಡಿತರ ಆತ್ಮಕ್ಕೆ ಜಗದಾ ಚಾರ್ಯರು ಚಿರಶಾಂತಿಯನ್ನು ಕರುಣಿಸಬೇಕಾಗಿಯೂ ಹಾರೈಸಲಾಯಿತು

ಜಗದಾಚಾರ್ಯರಸೇವಾನಿರತ ಚೇಟಪಸ್ಪ, ಯರೇಶೀಮು

ಮೊರಬ

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಪರಾಬ್ಜಸೇವಾನಿರತರೂ. ವೀರಶೈವ ಗುರುವಂಶ ಸುಧಾಬುಧಿಸುಧಾಕರರೂ, ಸನಾತನ ವೀರಶೈವ ಸಿದ್ಧಾಂತಪ್ರತಿಪಾದಿತ ಸಿದ್ಧಾಂತ ಶಿಖಾಮಣಿ, ಶ್ರೀಕರ ಭಾಷ್ಯ, ಏವಾಸ್ಪ್ರತಮಂಜರಿ, ಶಿವಾಗಮಸಂಗ್ರಹ ದ್ಯನೇಕ ಪ್ರಾಚೀನ ಗ್ರಂಥಪ್ರಕಾರಕರೂ, ಸರ್ವಧರ್ಮ ಬೋಧಕರೂ ಆದ ನಾಗನೂರು ಬೃಹನ್ಮಠಾಧ್ಯಕ್ಷ ರಾದ ನೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಜಯಂತರು ಶಿವಾಧೀನ ರಾದದ್ದು ಇಡೀ ವೀರಶೈವ ಜನಾಂಗಕ್ಕೆ ಪರಮ ಸಂತಾಪಕರವಾದುದು

ಪಂಚಪೀಠಗಳನ್ನು ಪ್ರಕಾಶಕ್ಕೆ ತಂದ ಪಿತಾಮಹನು ಪ್ರಸಂಚವನ್ನೇ ತೊರೆದು ಅನಿನಾಶಿಯಾದ ಯಶಶ್ಶರೀರ ದಿಂದ ರಾರಾಜಿಸುತ್ತಿರುವನು.

ಸನಾತನ ವೀರಶೈವರ ವಿಜಯದ ಬಾವುಟವನ್ನು ಅಸಾಧಾರಣ ಕರ್ತೃತ್ವಶಕ್ತಿಯಿಂದ ಎಲ್ಲೆಡೆಯಲ್ಲಿಯೂ ನಿರಾಯಾಸವಾಗಿ ಹಾರಾಡಿಸಿದ ಪಂಡಿತ ಕಂಠೀರವನು ತನ್ನದೇ ಆದ ಕ್ರಾಂತಿಯಿಂದ ಮುಂದಿನ ಜನತೆಗೆ ಮಾರ್ಗದರ್ಶಕನಾಗಿರುವನು. ಆತನ ಅಖಂಡ ಧೈರ್ಯ, ದೂರದರ್ಶಿತ್ವ, ನಿಷ್ಕಾಮಕರ್ಮ ತತ್ಪರತೆ, ಅಚ್ಚುಕಟ್ಟು ತನ, ಧೀರೋದಾತ್ತಹೃದಯ ಇವು ಸರ್ವಾದರಣೀಯ ವಾಗಿದ್ದವು. ಇಂದು ಈ ಮಹಾಪುರುಷನು ಕಣ್ಮರೆ ಯಾಗಿದ್ದರೂ ಲಕ್ಷಾಂತರ ಜನರ ಹೃದಯದರ್ಪಣದಲ್ಲಿ ಸರ್ವದಾ ವಿರಾಜಿಸುತ್ತಿದ್ದಾನೆ. ವೀರಶೈವರ ಉಚ್ಚ ಶ್ರೇಣಿಯಲ್ಲಿ ನಿಂತಹೇಳನನ್ನಡರಿದ ಈ ವಿಬುಧವರೇಣ್ಯನ ಅಂತರಾತ್ಮನು ನಮ್ಮೆಲ್ಲರಿಗೂ ಬಾಳಿನಲ್ಲಿ ಬೆಳಕನ್ನು ಅನುಗ್ರಹಿಸಲಿ.

ಶ್ರೀ॥ ಪಸಿ ಬೃ॥ ಗಂಗಾಧರಶಿವಾಚಾರ್ಯಸ್ವಾಮಿಗಳು
ಜಡೆಮಠ ಮೊರಬ

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮನಕ್ಷತ್ರಿ ವೈಶಾಖ ಶು||ಸಂಜಯಿಗೆ ೨೩ ವರ್ಷಗಳು ತುಂಬಿ ೨೪ ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ ವಿ ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಾಗಿ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂಪಾಯಿಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹೆಸರನ್ನೆಲ್ಲ ಒಟ್ಟುಕೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನೆಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕು

—ಮ್ಯಾ

ಪಂಚಾಚಾರ್ಯಪ್ರಭಾ

೧೯೫೦ನೆಯ ಏಪ್ರಿಲ್ ತಾ|| ೨೪ ನೆಯ ಸೋಮವಾರ

೨೪ ನೆಯ ವರ್ಷದ ಪ್ರಾರಂಭ

ನಮ್ಮೀ ಭರತಖಂಡವು ಮೊದಲಗ ಸ್ವದೇಶದ ಆರಸರ ಆಳಕೆಗೆ ಒಳಪಟ್ಟಿದ್ದಾಗ, ಧನ ಧಾನ್ಯ ಕನಕಾದಿ ಗಳಿಂದ ಸಮೃದ್ಧಿಯಿಂದಿ ಪರರಾಷ್ಟ್ರಗಳಲ್ಲಿ ಹೆಸರು ವಾಸಿಯಾಗಿ ಮೆರೆಯುತ್ತಿರುವಸಮಯದಲ್ಲಿ ವಿಶ್ಯತೆಯು ಸಡಿಲವಾದ ಕಾರಣ ಸಾರ್ವಾತ್ಮರ ಅಧೀನದಲ್ಲಿ ಸಿಲುಕಿ ೩೦೦ ವರ್ಷಗಳ ಪರ್ಯಂತ ರಾಕ್ಷಸ್ವೃತ್ತಿಯನ್ನನುಭವಿಸಿ ನಿವಜಂತರ ಶಾಂತಿಯಂತರೂ ಸ್ವಾರ್ಥತ್ಯಾಗಿಗಳೂ ಆದ ಮಹಾತ್ಮಾ ಗಾಂಧಿ ಸಂ| ಜವಾಹಿರಲಾಲ ನೆಹರೂ ಪಟೇಲ್ ಮೊದಲಾದ ನಖಂಡರುಗಳ ಉಪದೇಶ ದಿಂದಲೂ ಸಾಹಸದಿಂದಲೂ ಇದೀಗ ಸ್ವಾತಂತ್ರ್ಯವನ್ನು ಪಡೆದು ಜೀತರಸುತ್ತಿರುವದು ಸರಿಯ ಸ್ವೆ? ಸ್ವತಂತ್ರ ಸೂರ್ಯೋದಯದ ಪ್ರಕಾಶದಲ್ಲಿ ಅಲೆಯುತ್ತಿರುವ ಧರ್ಮಭೂಮಿಯಾದ ನಮ್ಮೀ ಭರತವು ಈ ಸ್ವತಂತ್ರತೆ ಯನ್ನು ನೈದಿಗೊಳಿಸಿಕೊಂಡು ಬಾಳಿ ಬೆಳಗಬೇಕಾದರೆ, ಪ್ರತಿಯೊಬ್ಬ ಭಾರತೀಯ ನಾಗರೀಕನೂ ಒತ್ತು ಜಾಗ್ರತೆ ಯಿಂದ ನಡೆದುಕೊಂಡು ಹೋಗಬೇಕಾಗಿದೆ ಈ ಜಾಗ್ರತ್ತೆಯು ಲಭಿಸಬೇಕಾದರೆ ದೇಶದ ಒಂದರ್ಧರಷ್ಟು ಪ್ರತಿಯೊಂದು ಸಮಾಜದ ಮಠಾಚಾರ್ಯರು ಸತತ ಕೈಗೆ ದ್ಯಮಿಗಳು ಸಹಾಯಕರಾಗಿದ್ದಾರೆ ತದನುಸಾರವಾಗಿ ಈ ಮಹನೀಯರುಗಳು ಸಮಾಜವಪ್ಪಯಂ ಸಂಸ್ಥಗಳಲ್ಲಿಯೂ ದೇಶ ವ್ಯಾಪ್ತ ರಾಷ್ಟ್ರಗಳಲ್ಲಿಯೂ ಶಾಂತಿ ಸೌಹಾರ್ದ ಸಹಯೋಗಾದಿ ಸದ್ಗುಣಗಳನ್ನು ವೃದ್ಧಿಗೊಳಿಸಿ ಲೋಕವನ್ನು ಪ್ರೇಮ ದಿಂದ ಆಳ್ವಿಕೊಂಡು ಬಂದ ತೆಯನ್ನು ಹಚ್ಚಿಸಲು ಪ್ರಯತ್ನಿಸಬೇಕು ಅದರಂತೆ ಇಲ್ಲಿಯ ವರೆಗೆ ವೀರಶೈವರ ಆದರ್ಶ ಸಂಸ್ಕೃತಿ ಸಭ್ಯತೆ ಮೊದಲಾದವುಗಳನ್ನು ಭದ್ರವಾಗಿ ಕಾಯ್ದುಕೊಂಡು ಬಂದ ಶ್ರೇಯಸ್ಸು ಸಂಪೂರ್ಣವಾಗಿ ಈ ಪ್ರಭಾ ಪತ್ರಿಕೆಗೇ ಸಲ್ಲತಕ್ಕದ್ದಾಗಿದೆ

ಲೋಕಮಾನ್ಯರಾದ ನಾಗಪುರದ ಬ್ರ ಪಂ| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಸ್ಥಾಪಿತವಾದ ಈ ಪ್ರಭೆಯು ಜನ್ಮತಾಳಿದಲಾಗಾಯಿತು ಜಗದಾ ಚಾರ್ಯರ ಸೇವೆಯನ್ನು ಮಾಡಿ ಕೀರ್ತಿಗಳಿಸಿದ ವಿಷಯವು ಪ್ರಭಾ ವಾಚಕರಿಗೆಲ್ಲಾ ತಿಳಿದಿರುವುದು ಸರಿಯಷ್ಟೆ ದುರ್ದೈವದಿಂದ ತಾ|| ೨೭ ೩ ೧೦ ನೆಯ ದಿವಸ ಪಂಡಿತರು ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿಕೊಂಡು ಶಿವಸಾನ್ನಿಧಿಯನ್ನೈದುವರ ನಿಮಿತ್ತ ಪಂಡಿತರ ಧರ್ಮಪತ್ನಿಯಾದ ಶ್ರೀಯು ಕಳೆಗುಂದಿ ಪತಿಯನ್ನು ಕಳೆದುಕೊಂಡ ಸಹಿಯಂತೆ ಹೆಚ್ಚಾದ ದುಃಖದಿಂದ ತಾ|| ೨೭-೩ ೫೦ ರ ವರೆಗೆ ನಾಲ್ಕು



ವಾರ ಮೌನಾವ್ರತವನ್ನು ಪಾಲಿಸಿ ಬಂದರು ಇದಿಂದ ಮೊಟಾದ ಕಂಬನಿಗಳನ್ನು ಸ್ಮರಣೆ ಮಾಡಿಸಿ ಬೆಳೆಯ ತೆರಿದಿ ತಾ|| ೨೭ ೩ ೫೦ ರಿಂದ ನಾಲ್ಕು ವಾರಗಳ ಪರ್ಯಂತ ಪೋಗಿದ್ದಾರದ ಲೇಖನಗಳನ್ನು ಬೀರುತ್ತಿ ಇದ್ದ ಸಂಸ್ಥಾನಮಸಂತರ್ಪಣದ ವೈಶಾಖ ಶು|| ಗೆ ತನ್ನ ನವ್ವರ್ವನ್ನು ಪೂರ್ತಿ ಗೊಳಿಸಿ ಇದೀಗ ೨೪ ನವ ವಲ್ಲಿ ಕಾಲಿಟ್ಟಿದೆ ಪಂಡಿತರನ್ನಗಲಿದ ದಿ ಖದಿ ದ ಒಳಿತನ ಪ್ರಭಾದೇವಿಗೆ ಸುಜ್ಞಾನದ ಲೇಖಕರು ನಿರಿಮಿಸಿವಂತೆ ಗದ್ಯಪದ್ಯ ಗಳನ್ನು ಸಾಹಿತ್ಯ ಸಮಾಜಕ್ಕೆ ಾವ ರಸ್ಯವು ಜನಿಸು ವಂತೆ ಪ್ರಸಾದಿಸಿದ್ದ ಪ ನವಾ ವಧಿಯನ್ನು ಕೆಂಚಿತ್ಕಾಲ ವಿರಲಿ ಸಲಸದ ವೀರತೆವ ಮತಕ್ಕೆ ಮಹೋಪಕಾರವನ ನಾಂತರ ಪ್ರಭಾಮಾತೆಗೆ ದನ್ಯವಾದ ಸ್ಸ ಪೂರ್ವಾ ತೀರದಾಗಿದೆ ಅಲ್ಲದೆ ಪ್ರತಿವಾರ ವ ಗ ಒದು ಬೋಧಿಸುತ್ತಿರುವ ಗುರುರೂಪವಾದೀ ಪತ್ರಿಗೆ ಚ ದಾದಾರರಾಗಿ ನದೂಡ ಶುಭಾಶುಭ ಕಾರ್ಯಗ್ಳ ಂದರ ಪೋಷಣಕಾಗಿ ಧನಸಹಾಯ ಮಾಡ ವದಂ ಪತಿಯೊಬ್ಬ ವೀರಶೈವನ ಆದ್ಯತಕ ವ್ಯಸಾಗಿರುತ ದೆ

ಪಂಚಾಚಾರ್ಯ ಪ್ರಭೆಯು ಎಂದೆಂದೆ ಸರ್ವತ್ರ ಬೆಳಗುತ್ತಿರಲಿ

ಲೇ —ಮಲ್ಲಿಕಾರ್ಜುನಾರಾಧ್ಯ ರಾಣಿವಿಸ್ಸೂರು ಮಳಿಸುರ, ಮುಡಿ ಸೂರು

ಸಾರಾಸಾರ ವಿಚಾರಶೀಲರೇ ಈರ್ಷಾಸೂಯೆ ಧರ್ಮ ವಿಸ್ಸವಗಳಿಂದ ಪೂರ್ಣವಾದ ಜಗತ್ತಿನ ಈಗಿನ ಪರಿಸ್ಥಿತಿ ಯಲ್ಲಿ ಪ್ರಭೆಯು ರಕ್ಷಸ್ಪದ ಚ ದ್ರನಂತೆ ದಿನೇ ದಿನೇ ವೃದ್ಧಿಯನ್ನೈದುತ್ತ ಒಂದಿರುವುದಕ್ಕೆ ಜಗದಾಚಾರ್ಯರ ಕೃಪಾಶೀರ್ವಾದವೂ, ಪ್ರಜಾ ಜನ್ಮದಾತರೂ, ಸಂಜಾ ಚಾರ್ಯರ ಜಿತ್ಯಶಾಸ್ತ್ರೋಪಸರೂ ಧರ್ಮಾಚಾರಾಗಿರುವ, ಗರುಕುಲತಿಲಕರೂ, ವಿದ್ವನ್ಮಣಿಗಳೂ, ನಾಗಪೂರು ಬೃಹನ್ಗಾದ್ಯಕ್ಷರೂ ಆದ ಕೈ|| ವೇ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳಿಯವರ ಆತ್ಮಶಕ್ತಿಯ ತೇಜಸ್ಸಿನ ಪ್ರಜಾವವೂ ಮತ್ತು ಲೇಖಕರ ಗ್ರಾಹಕರ ಚಭಿಮಾನಾ ದಾರ್ಢ್ಯಗಳೂ ಕಾರಣಗಳೆಂದು ಹೇಳಿದರೆ ಅತಿಶಯೋಕ್ತಿ ಯೆನಿಸದು ಆಸ್ತು!

ಸನಾತನಧರ್ಮಕ್ಕೆ ಉಗಮಸ್ಥಾನದಂತಿರುವ ಈ ಆರ್ಯಾವರ್ತದಲ್ಲಿ ಸನಾತನ ವೈದಿಕ ಮತಗಳಲ್ಲಿ ಒಂಬಾಡ ನಮ್ಮೀ ವೀರಶೈವಮತವು ಪರಮ ಶ್ರೇಷ್ಠವೂ ಮೋಕ್ಷದಾಯಕವೂ ಆಗಿರುವುದು ಇಂತಹ ಮತಕ್ಕೆ ಕಂಠೀಮಣಿಯಂತಿರುವ ಆಧರ್ಮದ ಸೇರಿಂಕು ವೆಜ್ರ ಲೇಪದಂತೆ ಒಲವಾಗಿ ಅಂಟಿಕೊಂಡು ಒಂದಿತ್ತು ಜನ ಗಳಾದರೂ ನಿಜತತ್ವವನ್ನು ಮರೆತು ಗಾಢಾಂಧಕಾರದಲ್ಲಿ ಮುಳುಗಿ ಗಾಢನಿದ್ರೆಯಲ್ಲಿದ್ದರು ಜನಸಂಖ್ಯೆಯಲ್ಲಿ ಆ ವಿಧವಾದ ಜನರೇ ಬಹಳವಾಗಿದ್ದರು ನಿಜತತ್ವವನ್ನರಿತ ಒಬ್ಬಿಬ್ಬರು ನಿಜತತ್ವವನ್ನು ಬೋಧಿಸಲು ಅಸಮರ್ಥ ರಾಗಿದ್ದರು ಆದರೆ ಧರ್ಮದ ಅವನತಿಯೂ ಅಧರ್ಮದ ಉನ್ನತಿಯೂ ಆದಕಾಲದಲ್ಲಿ ಮಹಾಪುರುಷರ, ಅವತಾ ರವು ಈಶ್ವರಸಂಕೇತವಾಗಿರುವಂತೆ ಅಂತಹ ವಿಷಮಕಾಲ

ದಲ್ಲಿ ಶ್ರೀಕಾಶೀನಾಥಪಂಡಿತಮಹೋದಯರು ಅವತರಿ ಪ್ರಭಾದೇವಿಯ ಮೂಲಕ ಜಗತ್ತಿಗೆ ನಿಜತತ್ವಾನು ಜ್ಞಾನವಂ ಮಾಡಿಸಿ ಎಚ್ಚರಗೊಳಿಸಿದರು ಪ್ರಭಾ ದೇವಿಯು ಈ ಮೆತದ ಪ್ರಾಚೀನತೆಯನ್ನೂ ಶ್ರೇಷ್ಠ ಯನ್ನೂ ಮತಸ್ಥಾಪನಾಚಾರ್ಯರ ಅಗಾಧಮಹಿ ಗಳನ್ನೂ ಬೋಧಿಸುತ್ತ ಬಂದದ್ದರಿಂದ ಸೂರ್ಯೋದಯ ದಿಂದ ಅಂದಕಾರವು ಮರೆಯಾಗುವಂತೆ ದುರ್ಮಾರ್ಗ ಮೆಲ್ಲನೆಮ್ಮೆನೆ ಮರೆಯಾಗುತ್ತ ಬಂದಿತು ಈ ರೀತಿಯ ವೀರಶೈವಮತಕ್ಕೆ ಅದರಲ್ಲಿಯೂ ಗುರುವರ್ಗಕ್ಕೆ ಮಹಿ ಪಕಾರವೇ ಮಾಡಿರುವ ಮಾಡುತ್ತಿರುವ ಪ್ರಭಾಮಾತೆ ಎನ್ನು ಧನ್ಯವಾದಗಳನ್ನು ಅರ್ಪಿಸಿದರೂ ಎಷ್ಟು ಕ್ಷ ಜ್ಞತೆಯನ್ನ ತೋರಿಸಿದರೂ ತೀರದಾಗಿದೆ

ಜಯವಾಗಲಿ ಜಯವಾಗಲಿ ಜಗದಾಚಾರ್ಯ ಪವಿತ್ರನಾದಿಂ ನೆಲೆವ ಪ್ರಭೆಗೆ ಜಯವಾಗ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಘನೋದ್ದ ಶ್ಯವು ಸಾರೋದ್ಧಾರ ನಡೆಯಲಿ ವರ್ಣಾಶ್ರಮಧರ್ಮ ಗಳು ಸರ್ವತ್ರ ಪ್ರಕಾಶಿಲಿ ಗುರುವರ್ಗದವ ಸ್ವಕರ್ತವ್ಯ ನಿಷ್ಠರಾಗಲ ಮಳೆಗಳು ಸುರಿಯಲಿ ಭೂವಿ ಗಳು ಬೆಳೆಯಲಿ ಲೋಕದ ಜಡತನವು ಬಲಾಗಲಿ ಸಿರಿತವು ಪಿರಿದಾಗಲಿ ಸರ್ವತ್ರ ಸು ಶಾಂತಿಗಳು ನೆಲಸಲಿ ಜಗದಾಚಾರ್ಯರ ನಿನಾದ ಸರ್ವತ್ರ ಮೊಳಗಲಿ

ಲೋಕಾ ಸಮಸ್ತಾಸ್ಸುಖಿನೋಭವಂತು

ಸ್ವೀಕಾರ

ರಾ| ರಾ| ಚನ್ನಬಸಪ್ಪ ಸಿದ್ಧಪ್ಪ ಗಡ್ಡಿ ಇವ ಬೆಳಗಾಂವ ಕಶಪುರದೊಳಗೆ ಗಣೇಶಪುರಗಲ್ಲಿಯ ೧೫ನೇ ೧ ನಂಬರಿನ ಮನೆಯೊಳಗೆ ರೇಷ್ಮೆ ಲಿಂಗ ಸ್ಥಾಪನ ಮಾಡಿದ ಒಳ್ಳೆ ಸದರಿಯವರಿಂದ ತಾರೀ ೨೦ ೩ ೫೦ ರಲ್ಲಿ ರೂ 1-4-0 ಹಾಗೂ ರಾ|| ರ ಒಸವಂಣಪ್ಪ ಕಂಠಪ್ಪ ಮುತಕೇಕರ ಸಾ|| ಶಹಪು ಇವರಿಗೆ ರಾ|| ರಾ|| ಮಹಾದೇವಪ್ಪ ಮಲ್ಲಪ್ಪ ಬಸ್ಸಾಪ ಇವರ ಸುಪುತ್ರಿ ಕುಂ| ಸೌ| ಸುಶೀಲಾಕಾಯಿ ಉಭಯ ಬಸನಂಣೆವ್ವಾ ಎಂಬವರೆನ್ನು ಕೊಟ್ಟು ಬೆಳಗಾಂವ ವೆಂಟಮುರಿ ಮುಕ್ಯಾಮಿನಲ್ಲಿ ನೆರವೇರಿದ ವಿವಾ ಸಮಯ ಕ್ಕೆ ತಾ|| ೬ ೩ ೫೦ ರಲ್ಲಿ ವರನ ಕಡೆಯಿಂ ರೂ 1 4 0 ವಧುವಿನ ಕಡೆಯಿಂದ ರೂ 1-4-0 ಮತ್ತು ವೇ|| ಮುಂಡಯ್ಯ ವಿರುಪಾಕ್ಷಯ್ಯ ಕೊಮಕಾ ಮಠ ಇವರ ಇಬ್ಬರು ಸುಪುತ್ರಿಯರು ಅಂ ೧ ಕುಂ| ಸೌ| ಆನ್ನ ಪೂರ್ಣಾತಾಯಿಯನ್ನು ವೆ ಗುರುಸಾದಯ್ಯ ಹಿಸಮಠ ಮುಕ್ಯಾಂ ಬಾಗಲಕೋಟ ಇವರಿಗೆ ೨ ಕುಂ| ಸೌ| ಬಸವಂಣೆವ್ವನ್ನು ವೆ ಗುರುವಿಜ್ಯಯ್ಯ ಮುಂಡಯ್ಯ ನಂದಿಕೋಲಮಠ ಶಾ ಪೂರ ಪಾಲಿವಸ್ತಿ ಶಕಪುರ ಗಣೇಶಪುರಗಲ್ಲಿ ಕೊಮಕ ಮಠ ಇವರಿಗೆ ಕೊಟ್ಟು ನಿಶ್ಚಯಕಾರ್ಯವನ್ನು ನೆರವೆ ಸಿದ ಸಮಯದಲ್ಲಿ ಮೇಲಕೆಂಡ ಪ್ರತಿ ವಧುವಿ ಕಡೆಯಿಂದ ರೂ 1 4 0 ಯಂತೆ ವಿರೋಧಿನಾ ಸಂವತ್ಸರದ ಪಾಲ್ಗುಣ ವಧಿ ೨ ಸೋಮವಾರ ತೆನೆ ಸಿದ 5 ರೂಪಾಯಿಗಳು ಒಟ್ಟು 8 12 0 ಆ ಗಳು ಮಿ|| ರಾ| ಚನ್ನಬಸಪ್ಪ ಕುರಬೆಟ್ಟಿ ಸಜ್ಜ ಕೋರಗಲ್ಲಿ ಶಪಪೂರ ಇವರ ವ್ಯಾರಾ ಶಲ್ಪಿರುತ್ತನೆ

ಬಳ್ಳಾರಿ ಡಿ ಘೂವಿನಹಡಗಲಿ ತಾಲ್ಲೂಕು ಬನ್ನಿ ಕ ಗ್ರಾಮದ ಹಿರೇಮಠದ ಭಾಯೆಯಂಕಯ್ಯನವರು ನೂತ ಜಿನ್ನಂಗಸ್ಥಾಕ್ಷರಿ ಸಮಾರಂಭದಲ್ಲಿ ಪ್ರಭಾಪೋಷ ಕ್ಯೋಕ್ಷರ ತೆಗೆಯಿಸಿದ 2 ರೂಪಾಯಿಗಳು ತಾ ತಾ| ೧೩ ೩ ೫೦ ರಲ್ಲಿ ಬನ್ನಿಕಲ್ಲು ಗ್ರಾಮ ಪುರಪ್ರಮುಖರೆಲ್ಲಾ ಪಂ| ಕಾಶೀನಾಥಶಾಸ್ತ್ರಿಗಳ ನಿಧನದ ಒಗ್ಗೆ ದುಃಖೋದ್ಗಾರವ ಸಭೆಸೇರಿ ಪ್ರ ಪೋಷಣಕ್ಕೋಸ್ಕರ ಸದರಿ ಗುರುಲಿಂಗಯ್ಯನವರಿಂ ತೆಗೆಯಿಸಿದ 3 ರೂ ಗಳು ಒಟ್ಟು 5 ರೂಪಾಯಿಗ ಹೊಳಗುಂದಿ ಶಾನಭೋಗ ಸಿದ್ಧಲಿಂಗಪ್ಪನವರ ವ್ಯಾ ಶಲ್ಪಿರುತ್ತನೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗು ಸಂಜಾಚಾರ್ಯರು ನಿಶ್ಕ್ಯಮಂಗಲವನ್ನೀಯಲಿಂ ಹಾಕ್ಕೆಸುತ್ತೀನೆ

ನಾಗೆನೂರು ಬ್ರ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು
ವಿದ್ಯಾಭ್ಯಾಸದೆಶೆಯಲ್ಲಿದ್ದಾಗ್ಗೆ ತೆಗೆದ ಭಾವಚಿತ್ರ

ನಾಗೆನೂರು ಬ್ರ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು
ಮೈಸೂರಿನಲ್ಲಿದ್ದಾಗ್ಗೆ ತೆಗೆದ ಭಾವಚಿತ್ರ

ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಜೀವನಚರಿತ್ರ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬಾರ್ಸಿಪಟ್ಟಣದಲ್ಲಿರುವ ಮಹಾಶ್ರೀಮಂತರೂ ಗುರುಭಕ್ತಶಿರೋಮಣಿಗಳೂ ಶ್ರೀಮಂ॥ ರಾ॥ ಅಣ್ಣಾಸಾಹೇಬರು ಕಥಲೆ ಈ ಮಹಾಶಯರು ಪಂಡಿತರ ಅಭಿಪ್ರಾಯದಂತೆ ಶ್ರೀಜಗದ್ಗುರುಗಳವರನ್ನು ಅಸಾಧಾರಣವೈಭವದಿಂದ ತಮ್ಮಲ್ಲಿಗೆ ಬಿಜಯಂಗೈಸಿಕೊಳ್ಳಲು ಸಿದ್ಧರಾಗಿ ಸಕಲ ಸಿದ್ಧತೆಗಳನ್ನು ಮಾಡಿದರು ಇದಕ್ಕಾಗಿ ಪಂಡಿತರು ೧ ತಿಂಗಳು ಮೊದಲೇ ಬಾರ್ಸಿಗೆ ಪ್ರಯಾಣಮಾಡಿ ತಮ್ಮ ಸದುಪದೇಶ ಪ್ರಭಾವದಿಂದ, ಆ ಪಟ್ಟಣದಲ್ಲಿರುವ ಸರ್ವಜನಾಂಗದಲ್ಲಿಯೂ ನವಚೈತನ್ಯವನ್ನುಂ ಮಾಡಿದ್ದರು ಪಂಡಿತರ ಅಭಿಪ್ರಾಯದಂತೆ ಜಗದ್ಗುರುಗಳವರು (ತಾ॥ ೨೫ ೯ ೩೨) ನೆಯ ದಿನವು ಬಾರ್ಸಿ ಪಟ್ಟಣಕ್ಕೆ ಬಿಜಯಮಾಡಿದರು ಅಡ್ಡಪಲ್ಲಕ್ಕಿ, ಪಂಚಿಕ, ನಂದಿಧ್ವಜ ಮೊದಲಾದ ೭೫ ಬಿರುದಾವಳಿಗಳೊಡನೆ ಮಹೋತ್ಸವವು ಜನಸ್ತೋಮದಲ್ಲಿ ಅಭೂತಪೂರ್ವವಾಗಿ ನೆರವೇರಿತು ಉತ್ಸವದದಿನ ಬಾರ್ಸಿಪಟ್ಟಣವು ಇಂದ್ರನ ರಾಜಧಾನಿಯನ್ನು ತಿರಸ್ಕರಿಸುವಂತಿತ್ತು ಸ್ವಾರ್ತ ಸಿದ್ಧನ ಶ್ರೀಜಗದಾಚಾರ್ಯರ ವಿಷಯದಲ್ಲಿ ತೋರ್ಪಡಿಸಿದ ಭಕ್ತಿಭಾವವು ವರ್ಣಾತೀತವಾಗಿತ್ತು ಪಂಡಿತರು ಜಗದ್ಗುರುಗಳವರನ್ನು ಈ ರೀತಿಯಾಗಿ ಅದ್ಭುತ ವೈಭವದೊಡನೆ ಮತ್ತಾರಾಷ್ಟ್ರದೇಶದಲ್ಲಿ ಪ್ರವೇಶಮಾಡಿಸಿ, ಮಹಾರಾಷ್ಟ್ರದ ವೀರಶೈವರ ಕೃತಜ್ಞತೆಗೆ ಪಾತ್ರರಾದರು ಬಳಿಕ ಉಜ್ಜಯಿನೀ ಜಗದ್ಗುರುಗಳವರು ಮಹಾರಾಷ್ಟ್ರದೇಶದ ನಾನಾಭಾಗಗಳಲ್ಲಿ ಸಂಚರಿಸಿ ಮಹಾರಾಷ್ಟ್ರದೇಶವೆಲ್ಲಾ ಪುನೀತವನ್ನಾಗಿಮಾಡಿದರು ಶ್ರೀಜಗದ್ಗುರುಗಳವರ ತಪಃಪ್ರಭಾವದಿಂದ ಸಾರ್ವತ್ರಿಕ ಸ್ವರೂಪವು ಮಹಾರಾಷ್ಟ್ರದೇಶವನ್ನೆಲ್ಲಾ ವ್ಯಾಪಿಸಿ ಆ ದೇಶವನ್ನು ಗುರುಮಯವನ್ನಾಗಿ ಮಾಡಿತು ಈ ರೀತಿಯಾಗಿ ಜಗದ್ಗುರುಗಳು ನಾನಾದೇಶಗಳಲ್ಲಿ ಚರಿಸಿ, ತಮ್ಮ ಪವಿತ್ರವಾದನಿಶ್ವಾಸದಿಂದ ತಯಾ ದೇಶಗಳನ್ನು ಪಾವನಗೊಳಿಸಿ, ಪ್ರದ್ಯುಮ್ನಾದಿವನ ವೀರಶೈವಸಿಮಾಜವನ್ನು ಕೈಬಿಟ್ಟು ಶಿವನಲ್ಲಿ ಸಮರಸವನ್ನು ಹೊಂದಿತು ಈ ನಿಮಿತ್ತವೂ ಪಾರಮಾರ್ಥಿಕವಾಗಿ ಸಂತೋಷಪಡತಕ್ಕುದೂ, ಲೌಕಿಕರೀತಿಯಿಂದ ಸಮಸ್ತಗುರುಭಕ್ತರ ಹೃದಯವನ್ನು ಸಂತಾಪಗೊಳಿಸಿತ್ತಾಗಿದೆ

ಶ್ರೀಜಗದ್ಗುರುಗಳವರು ಚಿತ್ರದುರ್ಗವಿಷಯಕ್ಕಿನಲ್ಲಿ ಗುರುಪೀಠದ ಕಾಣಿಕೆಗಾಗಿ ತಶರುತ್ತ " ತುರುವನೂರು ಎಂಬ ಗ್ರಾಮದಲ್ಲಿ ವಸತಿಮಾಡಿದ್ದರು ಅಲ್ಲಿಯೇ ಜಗದ್ಗುರುಗಳವರಿಗೆ ಶೀತದಿಂದ ಕಾಯಿಲೆಯು ಪ್ರಾಪ್ತವಾಯಿತು ಆ ಸಮಯ ಪಂಡಿತರು ಮದ್ರಾಸಿನಲ್ಲಿದ್ದರು ಶ್ರೀಸನ್ನಿಧಿಯವರ ಪ್ರೇರಣಪೂರಿತವಾದ ಆಜ್ಞೆ ದಪ್ರಕಾರತ್ವ ಅಲ್ಲಿಗೆ ಹೋಯಿತು ಕೂಡಲೇ ಪಂಡಿತರು ಮದ್ರಾಸಿನಿಂದ ಸೂರಿಗೆ ಬಂದು, ಆರೋಗ್ಯವಿಚಾರದಲ್ಲಿ ಸನ್ನಿಧಿಗೆ ಈ ಊರೀತಿಯಾಗಿರಬೇಕೆಂದು ವನ್ನು ಬಿನ್ನವಿಸಿಕೊಂಡರು ೨೩ ದಿವಸಗಳಲ್ಲಿಯೇ ಸನ್ನಿಧಿಯವರಿಗೆ ಕಾಯಿ ಹೆಚ್ಚಾಗಿದೆಯೆಂದು ಟೆಲಿಗ್ರಾಂ ಬಂದಿತು ಪಂಡಿತರು ಕೂಡಲೇ ರಾಜಧಾನಿಯಲ್ಲಿರುವ ಸುಪ್ರಸಿದ್ಧ ಡಾಕ್ಟರರನ್ನು ಕರೆದುಕೊಂಡು ಸ್ಪಷಲ್‌ಕಾರಿನಿಂದ ೩೦೦ ಮೈಲು ದೂರದಲ್ಲಿ ಸನ್ನಿಧಿಯವರು ವಾಸಮಾಡಿದ ಸ್ಥಳಕ್ಕೆ ಹೋದರು ಅಷ್ಟರಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರೂ ಸಹ ಅಲ್ಲಿಗೆ ಆಗಮಿಸಿದ್ದರು ಡಾಕ್ಟರರ ರೊಡನೆ ಸರ್ವವನ್ನೂ ಯೋಚಿಸಿದರು ಡಾಕ್ಟರು ಫೈರ್ಯೊನ್ನು ಕೊಡಿದ್ದುದರಿಂದ, ಶ್ರೀಸನ್ನಿಧಿಯವರನ್ನು ಉಜ್ಜಯಿನೀ ಧರ್ಮಪೀಠಕ್ಕೆ ಕರೆದುಕೊಂಡು ಹೋದುದಾಯಿತು ಅಂದೇ ಜಗದ್ಗುರುಗಳವರು ತಮ್ಮ ಶಿಷ್ಯಕೋಟಿಯನ್ನೆಲ್ಲಾ ತ್ಯಜಿಸಿ, ಪರಶಿವನಲ್ಲಿ ಸಮರಸಭಾವವನ್ನು ಹೊಂದಿದರು. ಶ್ರೀಜಗದ್ಗುರುಗಳವರ ವಿಯೋಗದಿಂದ ಪಂಡಿತರ ವ್ಯಸನವು ಮೇರೆದಪ್ಪಿತು ಆವರ ಕಣ್ಣಾಗಳಿಂದ ಅವಿಚ್ಛಿನ್ನವಾಗಿ ಹರಿಯುತ್ತಿದ್ದ ಅಶ್ರುಧಾರೆಯು, ಅಲ್ಲಿ ನೆರೆದಿದ್ದ ಅಪಾರಜ್ಞನರ ಹೃದಯವನ್ನು ತಲ್ಲಣಗೊಳಿಸಿತು ಅಂದಿನ ದೃಶ್ಯವು ಕಲ್ಲುಹೃದಯವನ್ನೂ ಸಹ ಕರಗಿಸುವಂಥದಾಗಿತ್ತು ಇಂತಹ ಸಂತಾಪಮಯಸಮಯದಲ್ಲಿ ಪಂಡಿತರು ತಮ್ಮ ದುಃಖೋದ್ಗಾರವನ್ನು ಅಂತರಂಗದಲ್ಲಿಯೇ ತಡೆಯುತ್ತ ಮುಂದಿನ ಪೀಠಾಭಿವೃದ್ಧಿ ಕಾರ್ಯದ ಕಡೆಗೆ ದೃಷ್ಟಿಯನ್ನಿಟ್ಟು, ಮರುದಿವಸ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಒಂದು ಸಭೆಯನ್ನು ಕೂಡಿಸಿ, ಅನಾಯಕವಾಗಿದ್ದ ಧರ್ಮಪೀಠವು ಅದಷ್ಟು ಶೀಘ್ರವಾಗಿ ಸನಾಯಕವಾಗುವಂತೆ ಮಾಡಬೇಕೆಂದು ಪೀಠಾಭಿವೃದ್ಧಿಗಳಲ್ಲಿ ತಿಳುಹಿಸಿದರು ಅದಕ್ಕೆ ಸರ್ವರೂ ಸಂತೋಷದಿಂದ ಒಪ್ಪಿ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು ಪಂಡಿತರೂ ರಂಭಾಪುರೀಜಗದ್ಗುರುಗಳೂ ಧೀರದಲ್ಲಿಯೇ ಉಳಿದುಕೊಂಡರು ಈ ಸಮಯದಲ್ಲಿ ಪೀಠವನ್ನು ಹಾಗೆಯೇ ಬಿಟ್ಟುಹೋದರೆ, ದೊಡ್ಡ ಪೀಠವು ಕೆಟ್ಟುಹೋಗುವುದೆಂದು ಉಭಯರೂ ಯೋಚಿಸಿ ಯಾರಾದರೊಬ್ಬ ಸಮರ್ಥರನ್ನು ಅಧಿಕಾರಿಗಳನ್ನಾಗಿ ಮಾಡಿಯೇ ಪ್ರಯಾಣಮಾಡಬೇಕೆಂದು ನಿಶ್ಚಯಿಸಿಕೊಂಡರು ಅದರಂತೆ ದೇಶಮಧ್ಯದಲ್ಲಿ ಜಗದ್ಗುರುಪೀಠದಿಂದ ಶ್ರೀಮುಖಗಳನ್ನು ಕಳುಹಿಸಿ, ವಟುಪರಿಯಮನಕ್ಕಾಗಿ ಒಂದು ದೊಡ್ಡ ಸಭೆಯನ್ನು ಕೂಡಿಸಿದರು ಅಗ್ಗೆ ವಟುಗಳನ್ನು ಆರಿಸುವುದರಲ್ಲಿ ಅನೇಕವಿಘ್ನಾದ ತೊಂದರೆಗಳು ಸಂಭವಿಸಿದುವು ಆದರೂ ಪಂಡಿತರು ಆವುಗಳಿಗೆಲ್ಲಾ ಗಮನಕೊಡದೆ, ತಮ್ಮ ಬುದ್ಧಿ ಪ್ರತಿಭೆಯಿಂದ ಆ ತೊಂದರೆಗಳನ್ನೆಲ್ಲಾ ಸ್ವಲ್ಪದರಲ್ಲಿಯೇ ದೂರಮಾಡಿ, ಸದ್ಗುರುವನ್ನು ಏಕಾಭಿಪ್ರಾಯಸುಪ್ರತಿಷ್ಠನ್ನಾಗಿ ಮಾಡಿದರು ಆ ದಿನೆ ಮಹಾಸಭೆಯಲ್ಲಿ ಆನೆಸಿದ್ದಾ ಪುರಾಣಮುಮುಕ್ಷುಭಕ್ತಾಗ್ರಣಿಯಾದ ಶ್ರೀಕ್ಷೇತ್ರೋಜಜನಾಚಾರ್ಯರೆಂಬುವರು ಉತ್ತರಾದಿ ಕಾರಕ್ಕೋಸ್ಕರ ಸರ್ವ ಸಮ್ಮತಿಯಿಂದ ಅರಿಸಲ್ಪಟ್ಟರು ಪೀಠಿತರು ಸಂಸ್ಥಾನದ ಸಮಸ್ತಸೂತ್ರಗಳನ್ನೆಲ್ಲಾ ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ೫೬ ದಿನಸಗಳಲ್ಲಿಯೇ ಸಕಲಸಾನ ಗ್ರಿಗಳನ್ನೂ ಸಿದ್ಧಪಡಿಸಿ, ಯುವನಸಾಮಶಂವತ್ಸರದ ಮಾಘ ಶು॥ ೧೦ (ತಾ॥ ೨೨ ೧೯೩೬) ಗುರುವಾರದಿನ ಪಟ್ಟಾಧಿಕಾರಮಹೋತ್ಸವವನ್ನು ಅಸಾಧಾರಣವೈಭವದಿಂದ ನೆರವೇರಿಸಿದರು ಶ್ರೀರಂಭಾಪುರೀಜಗದ್ಗುರುಗಳವರು ಉತ್ತರಾಧಿಕಾರಿಗಳಿಗೆ ಸಕಲಸಂಸ್ಥಾರಗಳನ್ನೆಸಗಿ ಸುವರ್ಣಕಿರೀಟಧಾರಣವನ್ನು ಮಾಡಿ ಅವರಿಗೆ **" ಶ್ರೀಜಗದ್ಗುರು ಸಿದ್ಧೇಶ್ವರಶಿವಾಚಾರ್ಯ "** ಎಂಬ ಪವಿತ್ರಾಭಿಧಾನವನ್ನಿಟ್ಟರು. ಅಧಿಕಾರಸಮಯದಲ್ಲಿ ಭರತಖಂಡದ ನಾನಾಭಾಗಗಳಿಂದ ೨೫ ಸಾವಿರದ ವರೆಗೆ ಜನರು ಸಮ್ಮಿಲಿತರಾಗಿದ್ದರು ಅಧಿಕಾರವ್ಯಸ್ಥೆಗಾಗಿ ಬಳ್ಳಾರಿ ಡಿ॥ ಕೂಡ್ಲಿಗಿ ತಾಲ್ಲೂಕಿನ ಎಲ್ಲ ಸರಕಾರಿ ಅಧಿಕಾರಿಗಳೂ ಆಗಮಿಸಿದ್ದರು ಎಲ್ಲಿನೋಡಿದೊತಲ್ಲಿ ಆನಂದವೇ ಆನಂದವಾಗಿ ಹೋಗಿದ್ದಿತು ಎತ್ತ ನೋಡಿದರೂ ಈ ವೈಭವಕ್ಕೆಲ್ಲಾ ಮೂಲಕಾರಣೀ ಭೂತರಾದ ಪಂಡಿತರ ಪವಿತ್ರನಾಮಸ್ಮರಣೆಯೇ ಸ್ಮರಣವಾಗಿತ್ತು ಪಂಡಿತರ ಪ್ರಯತ್ನ ವಿಶೇಷದಿಂದ ಶ್ರೀಜಗದ್ಗುರು ಪಟ್ಟಾಧಿಕಾರಮಹೋತ್ಸವವು ಅಭೂತಪೂರ್ವವಾಗಿ ನೆರವೇರಿ, ತಿಷ್ಯಕೋಟಿಗೆಲ್ಲಾ ಪರಮಾನಂದವನ್ನುಂಟುಮಾಡಿತು, ಪಂಡಿತರು

ಶ್ರೀಜಗದ್ಗುರು ಸಿದ್ಧೇಶ್ವರಾಚಾರ್ಯಮಹಾಸ್ವಾಮಿಗಳವರು

ಒಮ್ಮಿಂದೊಮ್ಮೆಲೆ ಅನಾಯಕವಾಗಿದ್ದ ಉಜ್ಜಯಿನೀ ಧರ್ಮಪೀಠವನ್ನು ಸನಾಯಕ ವನ್ನಾಗಿಮಾಡಿ ಪ್ರೀದಾರುಕನ ಪೂರ್ಣಾನುಗ್ರಹಕ್ಕೆ ಪಾತ್ರರಾದರು

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯವರ್ಯ [illegible] ನೆಯ ಇಷ್ಟಲಿಂಗ ಪೂಜಾನಿರತರಾಗಿ ಪಂಡಿತರು ಬಚ್ಚಿಟ್ಟಿರುವ ಸಿದ್ಧೇಶ್ವರಾಚಾರ್ಯರ ಪೂರ್ವಾಶ್ರಮದ ಚರಿತ್ರೆಯನ್ನು ನಿರೂಪಿಸಿದರು. ಈ ಪಟ್ಟಿಗೆ [illegible] ಸರಿಸಮ ಸರಸ್ಕೃತಿಕರಾಗಿದ್ದರು ಸಭಾಕಾರ್ಯವು ಅತ್ಯಂತ ಶ್ರದ್ಧಾಪೂರ್ವಕವಾಗಿ ನಡೆಯುತ್ತಿರುವಾಗ ಸಮಯದಲ್ಲಿ ಪಂಡಿತರು, ಶ್ರೀಮಜ್ಜಗದ್ಗುರುಸಂಜೀವಾಚಾರ್ಯರ ತಕ್ಷಣದ ಪ್ರೇರಣೆಯಿಂದ ಸ್ವಾಮಿಗಳ ಮತ್ತು ವರ್ತಮಾನಸಂಸ್ಥಿತಿಯ ಅವಶ್ಯಕತೆಯ ಬಗ್ಗೆ ಸವಿಸ್ತಾರವಾಗಿ ಪ್ರವಚನ ಮಾಡಿದರಂದು. ಈ ಮಹಾಕಾರ್ಯಕ್ಕೆ ಸರ್ವರೂ ಸಹಾಯಮಾಡಬೇಕೆಂದು ಕರೆಕೊಟ್ಟ ಅವ್ಯವಹಿತ ಪೂರ್ವಾಚಾರ್ಯರ ಪಟ್ಟಾಭಿಷೇಕದ ಸಂದರ್ಭದಲ್ಲಿ ಸಂಗ್ರಹವಾದ ಹಣವನ್ನು ಸಮರ್ಪಿಸಿದರು. ಆನಂತರ ಶ್ರೀಜಗದ್ಗುರು ಸಂಜೀವಾಚಾರ್ಯರು ಪ್ರಾಸ್ತಾವಿಕವಾಗಿ ಮಾತನಾಡಿ ಸಭೆಯ ಉದ್ದೇಶವನ್ನು ವಿವರಿಸಿದರು. ಆನಂತರ ಶ್ರೀ ಸಿದ್ಧೇಶ್ವರಾಚಾರ್ಯರು ಪವಿತ್ರಾಭಿಷೇಕದಿಂದ ಪವಿತ್ರವಾದ ಸಿದ್ಧಲಿಂಗ ಪಟ್ಟಣದಲ್ಲಿ ಮೈಸೂರು ರಾಜ್ಯಸಂಸ್ಥಾಪಕರಾದ ಪ್ರಾತಃಸ್ಮರಣೀಯರಾದ ಶ್ರೀಮದ್ವೀರಪಂಚಾಕ್ಷರಿ ಮಹಾಸ್ವಾಮಿಗಳವರ ಪುಣ್ಯಸ್ಮರಣೆಯಲ್ಲಿ ಪ್ರಾರಂಭವಾಗಿರುವ ಶ್ರೀ ಪಂಚಾಚಾರ್ಯ ಸಂಸ್ಕೃತ ಪಾಠಶಾಲೆಯ ಪ್ರಗತಿಯ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು. ಶ್ರೀಮಜ್ಜಗದ್ಗುರು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾರ್ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವತಪಂಚಶಾತಜನಿಕರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಧಾಯಿಪಂಚಮುಖರ್ ಪರಿಲಸತ್ಪಂಚಾಕ್ಷರೀಮೋದಿಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಪತ್ಸ್ವರಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಮ್ಮೆಳದವರಿಗೆ ೩ ರೂ ಸಂಪಾದಕರು—ನಾಗನೂರು ಬೃ॥ ಮಹಾದೇವಶಾಸ್ತ್ರಿಗಳವರು ವಿ. ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೨೪ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಮೇ ೧೯೫೦ [ಸಂಚಿಕೆ ೨

ಜಗದಾಚಾರ್ಯರ ಜಯಂತೀಮಹೋತ್ಸವಗಳು ಹೋಟಗಿ

ಸೊಲ್ಲಾಪುರ ಡಿಸ್ಟ್ರಿಕ್ಟ್ ಹೋಟಗಿ ಗ್ರಾಮದಲ್ಲಿ ಪರಮಪೂಜ್ಯ ಬಾಲವೀರಕಪಸ್ವಿ ಶ್ರೀ॥ ಷ॥ ಬ್ರ॥ ಜನ್ನ ವೀರಶಿವಾಚಾರ್ಯಸ್ವಾಮಿಗಳವರ ದಿವ್ಯ ನೇತೃತ್ವದಲ್ಲಿ ಉಭಯ ಜಗದ್ಗುರುಗಳ ಜಯಂತಿಯು ಒಳ್ಳೆಯ ಸಡಗರದಿಂದ ಕೊನೆಗೊಂಡಿತು. ಈ ಕಾರ್ಯಕ್ರಮವು ಆರು ದಿವಸಗಳ ವರೆಗೆ ನಡೆಯಿತು. ನಿತ್ಯವಲ್ಲಿಯೂ ಶಿವಲಿಂಗರುದ್ರಾಭಿಷೇಕ ಗಣಾರಾಧನೆ ಹಾಗೂ ಪೂಜ್ಯ ಶ್ರೀಗಳವರ ಸದುಪದೇಶವಾಗುತ್ತಿತ್ತು.

ದಿನಾಂಕ ೩೦ ಕ್ಕೆ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯ ದಿವಸ ಪೂಜ್ಯ ಶ್ರೀ ವೇ॥ ಪಂ॥ ಸಾಹಿತ್ಯ ರತ್ನ ಜಗದೀಶಶಾಸ್ತ್ರಿಗಳವರು ಅಧ್ಯಕ್ಷರಾಗಿದ್ದರು ಆ ಸಮಯದಲ್ಲಿ ಶ್ರೀ ಪೋತದಾರ, ನಿಂಬರ್ಗಿ, ಕಲ್ಯಾಣಿ, ಶ್ರೀ ಪಿ. ಈ. ಪಾಟೀಲ ಮೊದಲಾದವರ ಭಾಷಣಗಳಾದ ಮೇಲೆ ಶ್ರೀ ಕಲ್ಲಪ್ಪ ಕಡಣಿ ಇವರ ಸಂಗೀತ ಕಛೇರಿ ನೆರವೇರಿತು. ನಂತರ ಸಂಜೆಯ ೧೦ ಗಂಟೆಗೆ ಸರಿಯಾಗಿ 'ಶ್ರೀ ಜಗದ್ಗುರು ಪಂಚಾಚಾರ್ಯ' ನಾಟಕ ಮಂಡಳಿ ನಾಯಿವಾಡಿ' ಇವರು ಪೂಜ್ಯ ಶ್ರೀಗಳವರು ಬರೆದಿರ ತಕ್ಕಂತಹ 'ಬಂಗಾರ ಒಟ್ಟಲು ಆರ್ಚಾತ ತಿರುಪೀಲಕ-ಕೆ' ಎಂಬ ನಾಟಕವನ್ನು ಒಳ್ಳೆಯ ಪರಿಣಾಮಕಾರಿಯಾಗಿ ಆಡಿ ತೋರಿಸಿದರು. ಮರುದಿವಸ ದಿನಾಂಕ ೩೧ ಕ್ಕೆ ಶ್ರೀ ಕಲ್ಲಪ್ಪ ಕಡಣಿ ಹಾಗೂ ಶ್ರೀ ಹಣಮಂತಪ್ಪ ದೇಗಾಂವ ಇವರ ಗಾಯನವು ಜನರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡಿದವು ಮತ್ತು ಸಾಯಂಕಾಲ ಶ್ರೀಗಳವರ ಉಪದೇಶ. ದಿನಾಂಕ ೨೨ ಕ್ಕೆ ಜಗದ್ಗುರು ಮರುಳಾರಾಧ್ಯರ ಜಯಂತಿ ಹಾಗು ಸದರಿ ಮಹಾಮಹಿಮಾಪುರುಷರಿಗಳಾದ ಪೂಜ್ಯ ಚನ್ನವೃಷಭಸ್ವಾಮಿಗಳವರ ಪುಣ್ಯತಿಥಿ ಸಮಾರಂಭ ನೆರವೇರಿಸಲಾಯ್ತು. ನಿತ್ಯ ಪದ್ಧತಿಯಂತೆ ಶಿವಲಿಂಗ ಗಳಿಗೆ ರುದ್ರಾಭಿಷೇಕ ಗಣಾರಾಧನೆಯಾದವಂತರ ಜಗದಾಚಾರ್ಯರ ಮೂರ್ತಿಯ ಅದ್ಧೂರಿಪಲ್ಲಕ್ಕಿ ಮಹೋತ್ಸವವು ಒಳ್ಳೆಯ ಅಭೂತಪೂರ್ವತಾಗಿ ನೆರವೇರಿಸಲಾಯ್ತು ಸಂಜೆ ೩ ಗಂಟೆಗೆ ಶ್ರೀ ಸದಾಚಾರ ಶ್ರೀ ಸಮಾಜದ ಸರವಾಗಿ ಮಹಿಳಾ ಪರಿಷತ್ತು ನೆರವೇರಿಸಲಾಯ್ತು. ಸಭೆಗೆ ಶ್ರೀಮತಿ ವಂ॥ ಇಾವ್ಯತೀರ್ಥ ಸುಮತಿಬಾಯಿ ಶಹಾ ಇವರು ಅಧ್ಯಕ್ಷಸ್ಥಾನ ಸ್ವೀಕರಿಸಿದಾಗ್ಗೆ ಸೌ॥ ಅಮಮ್ಮಾಬಾಯಿ ಸಂದಿಮಠ, ಸೌ॥ ಧಾನಮ್ಮಾಬಾಯಿ ಹಿರೇಮಠ, ಶ್ರೀ ಆರ್ ಕೆ. ಮುಲಂಗೆ ವಕೀಲರು, ಶ್ರೀ ವೇ॥ ಪಂ॥ ಜಗದೀಶಶಾಸ್ತ್ರಿಗಳವರು, ಶ್ರೀ ವೇ॥ ಪಂ॥ ವೀರಂತಯ್ಯಶಾಸ್ತ್ರಿಗಳವರು, ಶ್ರೀ ಚಿಡಚಣಗೌಡರು, ಶ್ರೀಮತಿ ತಾರಾಬಾಯಿ ಮೊದಲಾದವರ ಭಾಷಣ ದೊಂದಿಗೆ ಕುಮಾರಿ ಕಮಲಾ, ವಿಮಲಾ, ಮಹಾದೇವಿ ಮೊದಲಾದವರ ಸಂತಾಪದಪದ್ಯಂಕಳ ಅಧ್ಯಕ್ಷಣೆಯವರು ಭಾಷಣಮಾಡಿದರು. ಸಂದರ ಸೌ॥ ಬಸಮ್ಮಾಬಾಯಿ ಸಂದಿಮಠ ಇವರು ಪರಮಪೂಜ್ಯ ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಆಕಾಲ ನಿಧನದ ಬಗ್ಗೆ ಒಂದು ಗೊತ್ತುವಳಿ ತಂದರು. ಅದಕ್ಕೆ ಸೌ॥ ದಾನಮ್ಮಾಬಾಯಿ ಹಿರೇಮಠ ಇವರು ಅನುಮೋದನವಿತ್ತರು ಸರ್ವಾನು ಮತದಿಂದ ಅಂಗೀಕಾರವಾಯಿತು ನಂತರ ಪೂಜ್ಯ ಶ್ರೀಗಳವರ ಭಾಷಣವು ನಡೆದು ಜಗದಾಚಾರ್ಯರ ಜಯಘೋಷಡೊಡನೆ ಸಭೆಯು ಮುಕ್ತಾಯಗೊಂಡಿ ಆಯಿತು ಸಾಯಂಕಾಲ ಸರಿಯಾಗಿ ೧೦ ಗಂಟೆಗೆ ಸದರಿ ಶ್ರೀಗಳವರೇ ಬರೆದ 'ಗುರುಲೀಲಾ' ಎಂಬ ನಾಟಕ ವನ್ನು 'ಶ್ರೀ ಜನ್ನ ಬಸವ ನಾಟಕ ಮಂಡಳಿ' ಹೋಟಗಿ ಇವರು ಆಡಿ ತೋರಿಸಿದರು ಸದರ ಕಾರ್ಯಕ್ರಮದಲ್ಲಿ ಸಹಕಾರವಿತ್ತ ಮಹಾನುಭಾವರಿಗೆಲ್ಲ ಆ ಜಗದಾಚಾರ್ಯರು ಆಯುರಾರೋಗ್ಯಸಂಪತ್ಸಮೃದ್ಧಿಯನ್ನೀಯಲಿ ಎಂದು ಪ್ರಾರ್ಥಿಸುವ,

ಪಿ ಈ ಪಟೇಲ ಜೇವೂರ್ಗಿ, ಸೊಲ್ಲಾಪುರ.

ಹಾರನಹಳ್ಳಿ

ಶಿವಮೊಗ್ಗಾ ಡಿ॥ ಹಾರನಹಳ್ಳಿಯಲ್ಲಿರುವ ವೇ॥ ಗುಬ್ಬೀ ಶಿವಕ್ಷಾಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ಸಾಸ್ಯಹದಲ್ಲಿ ಇದೇ ವೈಶಾಖ ಶುದ್ಧ॥ ೩ ಗುರುವಾರ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತೀ ಮಹೋತ್ಸವನನ್ನೂ, ಇದೇ ವೈಶಾಖ ಶುದ್ಧ॥ ೫ ಶನಿವಾರ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವನನ್ನೂ ವಿಶೇಷ ವೈಭವದಿಂದ ನೆರವೇರಿ ಸಿದರು ಆಯಾಯ ದಿವಸ ಪ್ರಾತಃಕಾಲ ಶ್ರೀ ಭಗವ ತ್ಪಾದರವರ ಭಾವಚಿತ್ರವನ್ನು ತಳರುತೋರಣ ಪುಷ್ಪ ಗುಚ್ಛಗಳಿಂದಲಂಕೃತವಾದ ಭವ್ಯ ಮಂಟಪದಲ್ಲಿ ಮೂರ್ತಗೊಳಿ ವಿಧ್ಯುಕ್ತವಾಗಿ ಪೂಜಿಸಿ, ವಂದಿಸಿ, ಮತಿಸಿ, ಸ್ತುತಿಸಿ, ಸ್ವವಿರಚಿತ ಮಹಾಜಾರ್ಯರ ಮಂಗಳ ಪದ್ಯವು ಪಾಡಿ, ಕೊಂಡಾಡಿ, ಬೇಡಿ ಪ್ರಸಾದವನ್ನು ವಿನಿಯೋಗಿಸಿದ ಬಳಿಕ ಮಧ್ಯಾಹ್ನ ಸಂತರ್ಪಣೆಯು ನಡೆದು, ಸಾಯಂಕಾಲ ಗುರುಸರ್ವೋತ್ಕರ್ಷಕೆ ಎಂಬ ವಿಷಯಕವಾಗಿ ವಿಚಾರಪೂರಿತ ಭಾಷಣವನ್ನು ಮಾಡಿ ನೆರೆದ ಗುರುಭಕ್ತಮಂಡಲಿಯವರನ್ನು ಧನ್ಯರನ್ನಾಗಿ ಮಾಡಿದರು ಓರ್ವ ಗುರುಸೇವಕ

ಗಂಗಾವತಿ

ಶ್ರೀ ವಿಕೃತಿ ಸಂ॥ ವೈಶಾಖ ಶು॥ ೩ ಗುರುವಾರ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯು ಮತ್ತು ವೈಶಾಖ ಶು॥ ೫ ಶನಿವಾರ ದಾರುಕಾಚಾರ್ಯರ ಜಯಂತಿಯು ಶ್ರೀಮದ್ವೀರಶೈವ ಪಂಚಾಚಾರ್ಯ ಧರ್ಮಾರ್ಥ ಕ್ರೈವಿಧ್ಯ ಪಾಠಶಾಲಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಬೂರುಗುಂಟ ಶರಣಶ್ಯಾಕ್ಷ ರುದ್ರಮುನಿ ವಿಶಾಚಾರ್ಯರ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಆಯಾಯ ದಿವಸ ಉದಯ ಬ್ರಾಹ್ಮಿ ಮುಹೂರ್ತ ದಲ್ಲಿ ಶಾಸ್ತ್ರಿಗಳಿಂದಲೂ ಮತ್ತು ಷ॥ ಬ್ರ॥ ಮಲ್ಲಿಕಾರ್ಜುನ ಶಿವಾಚಾರ್ಯರಿಂದಲೂ ವಿದ್ಯಾರ್ಥಿಗಳಿಂದಲೂ ಶ್ರೀಜಗದ್ಗುರು ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆ, ಕೊಟ್ಟೂರು ಬಸವೇಶ್ವರ ಗುಡಿಯಿಂದ ವೇದಿ ಬಸವೇಶ್ವರ ದೇವಸ್ಥಾನದ ವರೆಗೂ ವೇದಾ ಧ್ಯಯನ ಭಜನ ಪೂರ್ವಕ ಪಲ್ಲಕ್ಕಿ ಮಹೋತ್ಸವವು ಅವಸಾನದ ಗಣಾಸಂತರ್ಪಣವು ನಡೆಯಿತು

ಸಾಯಂಕಾಲ ಶ್ರೀ ಸಂಗೀತಸುಧಾಕರ ವಿದ್ವತ್ತಾಮಪ್ಪ ಗವಾಯಿ ಜಂಬಲದಿನ್ನೆ ಇವರಿಂದ ಶ್ರೀ ಜಗದಾಚಾರ್ಯರ ಸಂಗೀತವಾದಮೇಲೆ ವೇ॥ ಪಂ॥ ಗುರುಲಿಕ್ಷೇಶ್ವರ ವಕೀಲ ರಿಂದ ಪ್ರವಚನವು ನಡೆದು ಜಗದಾಚಾರ್ಯರ ಮಂಗಲ ಜಯಘೋಷಡೊಡನೆ ಸಭೆಯು ಮುಕ್ತಾಯವಾಯಿತು.

ಓರ್ವ ಉತ್ಸವಭಾಗಿ

ಪ್ರಭಾದೇವಿಗೆ ವಿಜಯವಾಗಲಿ

ಶ್ರೀ ಜಗದ್ಗುರು ಪಂಚಾಚಾರ್ಯರ ಚಿತ್ಪಕಲಾ ಸ್ವರೂಪದಂತಿರುವ ಪ್ರಭಾ ಪತ್ರಿಕೆಯು ಉದ್ಭವಿಸಿ ಇದೇ ವಿಕೃತಿನಾಮ ಸಂವತ್ಸರದ ವೈಶಾಖ ಶು॥ ೫ ಕ್ಕೆ ೨೩ ವರ್ಷಗಳು ತುಂಬಿ ೨೪ ನೇ ವರ್ಷವು ಪ್ರಾಪ್ತ ವಾದ ಆನಂದಾಯಕ ವಿಷಯವನ್ನು ತಿಳಿಸುವುದಕ್ಕೆ ಬಹು ಸಂತೋಷವೆನಿಸುತ್ತದೆ ಪ್ರಭಾದೇವಿಯು ತನ್ನ ಲ್ಲಿ ಪ್ರಕಟವಾಗುತ್ತಿರುವ ಅತ್ಯುಜ್ವಲ ಲೇಖನಗಳಿಂದ ನಾನಿಸಲ ಮನಸ್ಸನ್ನು ಸಹ ಆಕರ್ಷಣ ಮಾಡುತ್ತಿರುವದು. ಪ್ರಭಾ ಪತ್ರಿಕೆಯ ಜನ್ಮದಾತರೂ ಪಂಚಪೀಠೋದ್ಧಾರ ಕರೂ ಶ್ರೀ ಜಗದ್ಗುರು ರೇಣುಕರ ಅವತಾವತಾರಿಗಳೂ ಪಂಡಿತ ಮಂಡಲಿಯವರಿಗೂ ಗುರುವರ್ಗದವರಿಗೂ ಮನೆಮಕುಟದಂತೊಪ್ಪುವ ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರ ಅಮೃತಹಸ್ತದಿಂದಲೂ ಮತ್ತು ಮಹಾ ತಪೋನಿಧಿಗಳು ಯೋಗಸಿದ್ಧರು ಸ್ವಧರ್ಮನಿಷ್ಠಾಸಕ್ತ ಪರಾಪಾಲಕರಾದ ವೀರತಪಸ್ವಿಗಳಾದ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಶುಭಾ ಶೀರ್ವಾದದಿಂದ ಸಂಸ್ಥಾಪಿತವಾದ ಈ ಪತ್ರಿಕೆಯು ಇಂದಿಗೆ ವಾಸಾವರ್ಷದಲ್ಲಿಯು ಕುಂಭಾ ಯೋನಿ ಜ್ಯುತಿ ಇಲ್ಲದೆ ತನ್ನ ಅದ್ವೈತವನ್ನೇ ಬೀರುತ್ತಿರುವದು. ಹೂವಿಳ ಮೊಗ್ಗು ಸೂರ್ಯಕಿರಣಗಳಿಂದಲೂ ಮಂದನಾಯುತ ವಿಂದಲೂ ಹೇಗೆ ವಿಕಸಿತವಾಗಿ ತನ್ನ ಸುಗಂಧವನ್ನು ಬೀರುತ್ತಿರುವದೋ ಹಾಗೆಯೇ ಉಭಯರ ಆಶೀರ್ವಾದ ಬಲದಿಂದ ಶುಕ್ಲಪಕ್ಷದ ಚಂದ್ರಂತೆ ಅಭಿವೃದ್ಧಿ ಹೊಂದುತ್ತ ಜಗದಾಚಾರ್ಯರ ಜಯಪ್ರತಾಪವು ದಶ ದಿಕ್ಕುಗಳಲ್ಲಿ ಪಸರಿಸಲಿಂದೂ, ವಿದ್ಯೆಬುದ್ಧಿ ಜಗದ್ವಿಖ್ಯಾತ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಜ್ಞಾಪಕೆ ನಿಕೃತಾಂಶವನ್ನಿಯಲಿಂದೂ ಶ್ರೀ ಜಗದ್ಗುರು ಪಂಚಾ ಚಾರ್ಯರನ್ನು ಪ್ರಾರ್ಥಿಸುತ್ತೇವೆ.

ಶಿವಯೋಗಪ್ಪ ಸ್ವಾದಿ, ಗುಲ್ಬರ್ಗಾ

ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಜೀವನಚರಿತ್ರ

(೬ನೆಯ ಸಂಚಿಕೆಯಿಂದ ಮುಂದುವರಿದುದು)

ಅನಂತರ ಪಂಡಿತರು ವೀರಶೈವಮತದ ಪ್ರಾಚೀನ ಮತ್ತು ಅರ್ವಾಚೀನ ಗ್ರಂಥಗಳನ್ನು ಮುದ್ರಿಸಿ ವೀರಶೈವಜಗತ್ತಿಗೆಲ್ಲಾ ಮಹೋಪಕಾರವನ್ನು ಮಾಡ ಬೇಕೆಂದು ನೆನೆದು, ೧೯೨೯ ನೆಯ ಇಸ್ವಿಯಲ್ಲಿ 'ಶ್ರೀಕಾಶೀನಾಥಗ್ರಂಥ ಮಾಲಾ" ಎಂಬ ಹೆಸರಿನಿಂದ ಗ್ರಂಥಮಾಲೆಯೊಂದನ್ನು ಏರ್ಪಡಿಸಿದರು ಈ ಗ್ರಂಥಮಾಲೆಯಲ್ಲಿ ಇಂದಿನವರೆಗೆ ೫೦ ಮತಗ್ರಂಥಗಳು ಮುದ್ರಿತಗಳಾಗಿದ್ದು ಇನ್ನೂ ಅನೇಕ ಮಹಾಮಹಾಮತಗ್ರಂಥಗಳು ಮುದ್ರಣವಾಗುತ್ತಿರುವಷ್ಟರಲ್ಲಿಯೇ ಶಿವಸನ್ನಿಧಿಯನ್ನೈದಿದರು ಶ್ರೀಕಾಶೀನಾಥಗ್ರಂಥಮಾಲೆಯಲ್ಲಿ ಶಿವಾದ್ವೈತ ಮಂಜರಿ ' ಎಂಬ ಮಹಾಗ್ರಂಥವು ಪ್ರಕಟವಾಗಿರುವುದು ಇದರಲ್ಲಿ ೧೩೪೦ ಪುಟುಗಳಿರುವುವು ಇಂತಹ ದೊಡ್ಡಗ್ರಂಥವು ಕನ್ನಡಭಾಷೆಯಲ್ಲಿ ಈ ವರೆಗೆ ಎಲ್ಲಿಯೂ ಮುದ್ರಿತವಾಗಿಲ್ಲವೆಂದರೆ ಅತಿಶಯೋಕ್ತಿಯಿಲ್ಲವೆನಿಸಿಲಾರದು ಪಂಡಿತರು ಈ ಮಹಾ ಗ್ರಂಥಮುದ್ರಣಕ್ಕಾಗಿ ವಿಶೇಷದ್ರವ್ಯವನ್ನು ವ್ಯಯ ಮಾಡಿರುವರು ಶ್ರೀಮನ್ಮಹಾರಾಜಾದಿರಾಜ ಶ್ರೀಕೃಷ್ಣ ರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಈ ಮಹಾಗ್ರಂಥದ ಯೋಗ್ಯತೆಯನ್ನು ಕಂಡು ಡಿಡಿ ಕೇಷನ್ಸಿಗೆ ಅಪ್ಪಣೆಯನ್ನಿತ್ತುದಲ್ಲದೆ ಈ ಮಹಾಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿ, ಪಂಡಿತರ ಮನಸ್ಸಿಗೆ ಪರಮಾನಂದವನ್ನುಂಟುಮಾಡಿದರು ಇದೇ ರೀತಿಯಾಗಿ ಈ ಗ್ರಂಥಮಾಲೆಯಲ್ಲಿ ಅನೇಕಸಮೃದ್ಧ ಮತ್ತಮ ಗ್ರಂಥಗಳು ಪಂಡಿತರ ಪ್ರಯತ್ನವಿಶೇಷದಿಂದ ಪ್ರಕಟವಾಗಿವೆ ಪಂಡಿತರು ಈ ಗ್ರಂಥಪ್ರಸಾರಕಾರ್ಯಕ್ಕಾಗಿ ಕೆಲಜನ ಸ್ವಮತಪರಮತಪಂಡಿತರನ್ನಿಟ್ಟು ಈ ಮಹಾ ಕಾರ್ಯವನ್ನು ಅವಿಚ್ಛಿನ್ನವಾಗಿ ನಡೆಯುತ್ತಿದ್ದರು ಪಂಡಿತರು ಮೊದಲಿನಿಂದಲೂ ಧರ್ಮಸುಧಾರಣೆಗಾಗಿ ಅನೇಕ ಸಂಸ್ಕೃತ ಮತ್ತು ಕನ್ನಡಗ್ರಂಥಗಳನ್ನು ರಚಿಸಿದ್ದರು ಇವರು ವಿಶೇಷವಾಗಿ ಗ್ರಂಥರೋಪಣೆಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದರು ಪಂಡಿತರು 'ಸಿದ್ಧಾಂತ ಶಿಖಾಮಣಿ" ಎಂಬ ಗ್ರಂಥರತ್ನವನ್ನು ಚನ್ನಾಗಿ ಪರಿಶೋಧಿಸಿ ಈ ಗ್ರಂಥರತ್ನಕ್ಕೆ ಸರ್ವೋತ್ತಮವಾದ ಕನ್ನಡಟೀಕೆಯನ್ನು ಬರೆದು ಮುದ್ರಿಸಿ ಪ್ರಸಿದ್ಧ ಮಾಡಿದರು ಈ ರೀತಿಯಾಗಿ ಪಂಡಿತರು ತಮ್ಮ ಆಯುಸ್ಸಿನೆಲ್ಲಾ ಕೇವಲ ಧರ್ಮಸುಧಾರಣೆಗಾಗಿಯೇ ವೆಚ್ಚಮಾಡುತ್ತಿದ್ದರು

ಪ್ರಾಚೀನಕಾಲದಲ್ಲಿ ವಿಶೇಷವೈಭವದಿಂದ ಮೆರೆದು ಚಕ್ರವರ್ತಿಗಳಿಂದಲೂ ಮಹಾರಾಜಾಧಿರಾಜರಿಂದಲೂ ಪೂಜೆಗೊಂಡಿದ್ದ ಪಂಚಪೀಠರಗಳು ಕಾಲಮಹಿಮೆಯಿಂದ ಪ್ರಭಲಿಗುಂಪಾಗಿದ್ದುದನ್ನು ಕಂಡು ಪಂಡಿತರು ಈ ಧರ್ಮಪೀಠಗಳ ವೈಭವಜ್ಯೋತಿಯು ದಶದಿಕ್ಕುಗಳನ್ನು ವ್ಯಾಪಿಸುವಂತೆ ಮಾಡಬೇಕೆಂದು ಸಂಕಲ್ಪಿಸಿ ಈ ಕಾಯ್ಯ ದೆಸ್ಸಿಗೆ ತಮ್ಮ ಶರೀರವನ್ನು ಸವಿದ್ದರು ಪಂಡಿತರು ಈ ವರೆಗೆ ಮಾಡಿದ ಪ್ರಯತ್ನ ವಿಶೇಷದಿಂದ ಆಚಾರ್ಯರ ಪಟ್ಟಾಭಿಷೇಕ ಸನಿತ್ರ ಪ್ರಕಾಂಶಕ್ಕೆ ಒಂದನ್ನು ಆಜಾರ್ಯರ ಸ್ವಪ್ನಿಗಳು ಪ್ರಪಂಚವನ್ನೆಲ್ಲಾ ವ್ಯಾಪಿಸಿದುವು ಬಹ್ಯಚಿಕ್ಕ ಹಳ್ಳಿಗಳಲ್ಲಿಯೂ, ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ ಆಚಾರ್ಯರ ಹೆಸರಿನಿಂದ ಭಜನಾಸಂಘಗಳೂ ವಾಚನಾಲಯಗಳೂ, ಪಾಠಶಾಲೆಗಳೂ, ಗ್ರಂಥಮಾಲೆಗಳೂ ಸ್ಥಾಪಿಲ್ಪಟ್ಟವು ಆಚಾರ್ಯರ ಬಾಲಜಪ್ಪಗಳು ಪ್ರತಿಯೊಬ್ಬರ ಮನೆಯಲ್ಲಿಯೂ ವಿರಾಜಿಸುತ್ತಿದ್ದವು ನೇತುಶೀತಾಚಲಸರು ಅಂತಾಗಿ ಸಕಲನಗರ ಗ್ರಾಮ ಗಳಲ್ಲಿಯೂ ಆಚಾರ್ಯರ ಜಯಂತಿಗಳು ಒಂದು ಅಭೂತಪೂರ್ವವಾದ ಪವಿತ್ರಸಮಾರಂಭವಾಗಿ ಪರಿಣಮಿಸಿದುವು ಕುಳತರೂ, ನಿಂತರೂ, ಮಲಗಿದರೂ ಎತ್ತನೋಡಿದೊಡತ್ತ ಜಗತ್ತಿನೆಲ್ಲ ಆಚಾರ್ಯರ ನಾಮಸಂಕೀರ್ತನವೇ ಕೇಳಿಸ ಹತ್ತಿತು ಆಚಾರ್ಯ ಪೀಠಗಳ ಪ್ರಾಚೀನತ್ವವು ಹೊರಹೊರಟು ಇಡೀ ಜಗತ್ತನ್ನೇ ದಂಗುಬಡಿಸಿತು ಆಚಾರ್ಯಪೀಠಗಳಲ್ಲಿದ್ದ ಪ್ರಾಚೀನಶಾಸನಗಳು ಬೆಳಕಿಬಿದ್ದವು ಪಂಚಪೀಠಾಧಿಪತಿಗಳ ಸಂಚಾರವು ಜಗತ್ತಿನಲ್ಲಿ ಅತ್ಯಂತ ವೈಭವದೊಡನೆ ಸುಲಲಿತವಾಗಿ ಸಾಗಹತ್ತಿತು ರಾಜಾಧಿರಾಜರೂ ಸಹ ಆಚಾರ್ಯಪೀಠಗಳನ್ನು ಸಂದರ್ಶಿಸಿ ಧನ್ಯರಾಗುವ ಪ್ರಸಂಗವು ಪ್ರಾಪ್ತವಾಯಿತು ಪರಮೇಶ್ವರಿಗೂ ಸಹ ಈ ಧರ್ಮಪೀಠಗಳಲ್ಲಿ ಭಕ್ತಿಯನ್ನಿಟ್ಟು ವರ್ತಿಸುವ ಸಮಯವೊದಗಿತು ಇಷ್ಟಕ್ಕೆಲ್ಲಾ ಆಚಾರ್ಯರ ಅಪರಾನತಾಂಗಿಗಳೆಂದು ಲೋಕವಿಖ್ಯಾತರಾಗಿದ್ದ ಪಂಡಿತರ ಅಭ್ಯತ ಪ್ರಯತ್ನವೇ ಮೂಲಕಾರಣವಾಗಿರುವುದೆಂಬ ಜಗತ್ಪ್ರಸಿದ್ಧವಿಷಯವನ್ನು ಬರೆಯಲು ಯಾವ ಗುರುಭಕ್ತನಿಗೆ ಸಂತೋಷವೆನಿಸಲಿಕ್ಕಿಲ್ಲ ?

ಪಂಡಿತರು ಭೂಕೈಲಾಸ ರೇವಗಿ ಕ್ಷೇತ್ರಕ್ಕೆ ದಯಮಾಡಿಸಿದ್ದು

ತಾರೀಕು ೧೭ ೩ ೧೯೪೧ ನೆಯ ದಿವಸ ಗುಲಬುರ್ಗಾ ಡಿ॥ ಭೂಕೈಲಾಸ ರೇವಗಿ ಕ್ಷೇತ್ರದಲ್ಲಿರುವ ಶ್ರೀರೇವಣಸಿದ್ಧೇಶ್ವರ ದೇವಾಲಯದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಮಹಾವೈಭವದಿಂದ ನೆರವೇರಿದ ಸಮಯದಲ್ಲಿ ಅಲ್ಲಿಯ ಭಕ್ತಮಂಡಳಿಯವರು ಪ್ರಾರ್ಥನೆ ಮಾಡಿಕೊಂಡ ಪ್ರಕಾರ ವೇ॥ ಪಂ॥ ಕಾಶೀನಾಥಶಾಸ್ತ್ರಿಗಳವರು ಮೈಸೂರಿನಿಂದ ರೇವಗಿ ಕ್ಷೇತ್ರಕ್ಕೆ ಹೊರಟರು. ಮಾರ್ಗದಲ್ಲಿ ಸೊಲ್ಲಾಪುರದ ವೀರಶೈವ ಪ್ರಮುಖ ಮಹನೀಯರು ತಾರೀಖು ೧೭ ೩ ೧೯೪೧ ನೆಯ ಸಾಯಂಕಾಲ ಸಿಕಂದರಾಬಾದಿಗೆ ತಲ್ಪಿದರು ಅಲ್ಲಿಯ ವೀರಶೈವ ಗುರುಕುಲವನ್ನೂ ಕೈ॥ ಕಾಶೀಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರಿಂದ ಮೊದಲಿಗೆ ಸ್ಥಾಪಿತವಾದ " ಶೈವಭಾರತೀಭವನ " ವೆಂಬ ಮಹಾಗ್ರಂಥಾಲಯವನ್ನು ನೋಡಿ ತಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸಿದರು ಬುಲಗುಂಡಿಯ ಶ್ರೀಮಂತ ಧರ್ಮವೀರ ಶರಣಪ್ಪನವರು ಪತ್ನೀಪುರಿ

ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು ರೇವಗಿ ಕ್ಷೇತ್ರಕ್ಕೆ ದಯಮಾಡಿಸಿದ ಸಂದರ್ಭದಲ್ಲಿ ಸೊಲ್ಲಾಪುರದ ಸ್ಟೇಷನ್ನಿನಲ್ಲಿ ಇಳದಾಗ್ಗೆ ಅಲ್ಲಿಯ ವೀರಶೈವ ಪ್ರಮುಖರು ಸ್ವಾಗತಿಸಿದ ದೃಶ್ಯ

ದೊರೆಗಳ ಮೋಟರಿನಲ್ಲಿ ಹೆದಾಣಿದ ಸಂನ್ಯಾಸದ ಮುಖ್ಯ ಮುಖ್ಯ ಸ್ಥಳಗಳನ್ನು ನೋಡಿ ಪುಷ್ಪ ಸಾಲ್ಯಾರ್ಪಣದ ಕಡೆಗೆ ಪ್ರಯಾಣ ಬೆಳಿಸಿದರು ಆಗ್ಗೆ ದುಃಖಗುಂಡಿಯ ದೂರಿಗಳು ಪಂಡಿತರಿಗೆ ಪುಷ್ಪಮಾಲೆಗಳನ್ನು ಸನುಷಿಸಿ ಬೀಳ್ಕೊಂಡರು ಈ ಸನ ಯದ್ದುಂಯೇ ಪಂಡಿತರು ಮಹಾರಾಷ್ಟ್ರ, ಆಂಧ್ರ ಪ್ರಾಂತಗಳ ನಾನಾಭಾಗ ಗಳಲ್ಲಿ ಸಂಚರಿಸಿ ಧರ್ಮ ಪ್ರಚಾರಕಾರ್ಯ ನಿಜತತ್ವ ವೆನ್ನು ಬೋಧಿಸುತ್ತ ಆನಂದದಿಂದ ನೆಲೆ ರಾಜಧಾನಿಗೆ ತಲುಪಿದರು

ಪಂಡಿತರ ಕೀರ್ತಿಯನ್ನು ಇದೇ ಪತ್ರಿಕೆಯಲ್ಲಿ ಹಿಂದೆ ತಿಳಿಸಲಾಗಿದೆ ತ್ಯಾಗ ಕೇಷಾರಿ ಧರಿಸಿರುವ ಪೂಜ್ಯ ಶ್ರೀಲಿಂಗಸ್ವಾಮಿ ಸೀಲಕ ರಲಿಂಗನ ಜಾಮಾ ಮಠಾಸ್ವಾಮಿಗಳು ತನ್ನೊಕ್ಕಲರದಲ್ಲಿ ಉಷ್ಟೂರಾ ದಿಕಾರದ ಒಳ್ಳೆ ವಿನೂ ಪ್ರವಚನಮಾಡಿದ ಶಿವಾಧಿಷ್ಠಾನದ ವಮಲಳ ವೀರವು ಅನಾಯಕವಾಯಿತು ತದನಿಷಿ ರಿ ಜಿ ಧಿಕಾರ ವಹಿಸಲಿಕ್ಕೆ ಪ್ರಯತ್ನ ಪಡಬೇಕು ಈ ಆನಾಚಾರ್ಯತೆಯನ್ನ ನಿಗಾದಿ ಸಹಿಸಲಾರದೆ ಪಂಡಿತರು ಅದಿಯಂದಲೂ ಪಂಚಪೀಠರಗಳಿಗೆ ಗುರು ವಗ ಪ ಜಂಗಮರೇ ಅಧಿಕಾರಿಗಳಾಗುತ್ತ ಬಂದಿದ್ದು, ಈಗ ಆಧಾರಪೀಠವು ಅನಧಿಕಾರಿಗ ಸಿ ಒಂಗಿರಬಾರದು ಗುರುವಿರದ ಪ್ರಶ್ನಚಾರಿ ಜಂಗಮರು ಮೆ ಬಿಂಬರ ಸೌ ಜೆನ್ನಲ್ಲ ಕೆಲಸ ನಡಿದು ಪರಂಪರಪ್ರಕ್ಕೆ ಈ ವ್ಯತ್ಯಾಸವು ಬಾಗೂ ಹಿ ಗೂ ಗಾ ವಸ ಗಳಿಂದ ನಲೆಗೆಟ್ಟುಬಂದುಬಾಯಿತು ಈ ಮಹತ್ಕಾರ್ಯ ಅವಶ್ಯಾಗಿ ಸಾಧಿರ ಬೇ ಪಡಿಸು ವೆಚ್ಚಮಾಡಿದರು ಅಂತ್ಯಕ್ಕೆ ಅಂದರೆ ೫ ವಿಕರು ವಿಶೇಷ ಶಿಬಿರಗಳಾಗುವ ಮೊದಲು ೩ ಳ ವಾರಗಳ ಒಂದೆ ತಮ್ಮ ಮನೋಭಿನ್ನದಂತ ಅಧಾರಾಗಿ ಗಮಿಟಿಯವರು ಪ್ರಖ್ಯಾತಿಗಾರಿ ಗುರು ವಂಶದ ಜಂಗಮರಾದ ಧಾರವಾಡ ಡಿ॥ ಹಾನೇರಿ ಗ್ರಾಮದ ಶ್ರೀ ನಿಜಿನಾದಲಿಂಗತಿವಾಚಾರ್ಯ ರನ್ನು ಕೇದಾರಪೀಠದ ರಾವಲರನ್ನಾಗಿ ನೇಮಿಸಲರೆಂಬ ವಿಷಯವು ತಿಳಿದೊಡನೆ ಅತ್ಯಾನಂದದಿಂದ ಪ್ರಭಾವಪ್ರತಿಕ್ರಿಯೆಯಲ್ಲಿ " ಕೇದಾರಪೀಠದ ಏಲಯ " ಎಂಬ ಲೇಖನ ವನ್ನು ಪ್ರಕಟಿಸಿ ಪ್ರಸಿದ್ಧಪಡಿಸಿದರು ಸತ್ಯನಿಷ್ಠರಾದ ಇವರು ಹರಿಶ್ಚಂದ್ರ ಮಹಾ ರಾಜನಂತೆ ತಮ್ಮ ನಿಷ್ಠೆಗೆ ಕಲಂಕತಂದುಕೊಳ್ಳದೆ ಅಂತ್ಯದ ವರೆಗೂ ಶ್ರೀಜಗದ್ಗುರು ಸಿಂಹಾಚಾರ್ಯರ ಸೇವೆಯನ್ನು ಮಾಡಿ ಮಮಿಂಡೊಮ್ಮೆಯೇ ಸಾಯುವಾಗಬಿಟ್ಟರು ಭಗವದ್ಭಕ್ತರಾದ ಮಾರುತಿಗೆ ರೋಮರೋಮಗಳಲ್ಲಿ ರಿಂಗನೂ ರಾಮನಾಮೋಚ್ಚಾ ರಣೆಯೂ ಹೇಗೆ ತುಂಬಿತುಳುಕುತ್ತಿದ್ದವೋ ಆದರಂತೆ ಇವರ ದೇಹದಲ್ಲಿಯೂ, ಮನಸ್ಸಿನಲ್ಲಿಯೂ ಆತ್ಮದಲ್ಲಿಯೂ ಶ್ರೀಜಗದ್ಗುರು ಪಂಚಾಚಾರ್ಯರು ಮೂರ್ತಿ

ಮತ್ತಾಗಿ ನೆಲಸಿದ್ದರು ವಟ್ಟಿನಲ್ಲಿ ಪಂಚಾಚಾರ್ಯರ ಸ್ವರೂಪವೇ ಇವರಾಗಿದ್ದರು.

ಇವೇ ಮೊದಲಾದ ಇನ್ನೂ ಅನೇಕಾನೇಕ ಮಹಾ ಕಾರ್ಯಗಳು ಪಂಡಿತರ ಜೀವಮಾನದಲ್ಲಿ ತೆರವೇರಿವೆ ಅವುಗಳನ್ನೆಲ್ಲಾ ಇಲ್ಲಿ ವಿಸ್ತರಿಸುತ್ತ ಹೋದರೆ ಲೇಖವು ಬೆಳೆಯುತ್ತಹೋಗುವುದೆಂಬ ಭಾವನೆಯಿಂದ ಇಲ್ಲಿಗೆ ಈ ವಿಷಯವನ್ನು ವಿರಮಿಸುವುದಾಗುತ್ತದೆ

ಇಲ್ಲಿಯವರೆಗೆ ನಾವು ಸಂಕ್ಷೇಪವಾಗಿ ವಿವರಿಸಿದ ಪಂಡಿತರ ಪವಿತ್ರ ಜೀವನ ಚರಿತ್ರೆಯನ್ನು ಓದಿನೋಡಿ ವಾಚಕರು ಪರಮಾನಂದಭರಿತರಾಗದಿರಲಾರರು, ಪಂಡಿತರ ಭಾಷಣಗಳನ್ನೆಲ್ಲಾ ಪೂರ್ತಿಯಾಗಿ ಓದಿದಮೇಲಂತೂ, ವಾಚಕರಿಗಾಗುವ ಆನಂದವನ್ನು ವರ್ಣಿಸಲು ಈ ಲೇಖನಿಯು ಸಮರ್ಥವಾಗಲಾರದು ಪಂಡಿತರ ಜೀವನಚರಿತ್ರೆ ಹಾಗೂ ಭಾಷಣಗಳಂದೊಡಗೂಡಿದ 'ವೀರಶೈವರತ್ನ" ಎಂಬ ಗ್ರಂಥವು ಬಹು ಅಂದವಾಗಿ ಮುದ್ರಿತವಾಗಿದೆ ಲಿಂಗಧಾರಣಾಗಾದ ಪ್ರತಿಯೊಬ್ಬರೂ ಈ ಗ್ರಂಥವನ್ನು ತಂಡಿಕೆಂಡು ಸಮಗ್ರವಾಗಿ ಓದಿ ನೋಡಿ ಧನ್ಯರಾಗಬೇಕೆಂದಾಶಿಸುತ್ತೇನೆ

ಧರ್ಮಪ್ರಕಾಶ ಎಸ್. ರುದ್ರಯ್ಯ ನವರಿಂದ ನಿರ್ಮಿತವಾದ ಲೇಬರ್ ವಾರ್ಡಿನ ಸ್ಥಾರಂಭೋತ್ಸವ

ಈ ಮಹನೀಯರು ಬೆಂಗಳೂರು ಡಿ॥ ನಂದಿಗುಡಿ ಗ್ರಾಮದಲ್ಲಿ ಹುಟ್ಟಿ ಬೆಳೆದು ಧರ್ಮವ್ಯವಹಾರದಿಂದ ಉನ್ನತಪದವಿಗೇರಿ ಬೆಂಗಳೂರಿಲ್ಲಿ ವಾಸಮಾಡಿಕೊಂಡು ದೊಡ್ಡ ವ್ಯಾಪಾರಸ್ಥರಾಗಿದ್ದಾರೆ ದೇಶದಲ್ಲಿ ವ್ಯವಸಾಯ, ಕೈಗಾರಿಕೆ, ವ್ಯಾಪಾರ ಹೆಚ್ಚಾಗಿ ಬೆಳೆದು ಜನರು ಸ್ವಾವಲಂಬಿಗಳಾಗಿ ಸಂಪತ್ಸಮೃದ್ಧಿಯಿಂದ ಮೆರೆಯ ಲೆಂಬುದೇ ಇವರ ಹೆಬ್ಬಯಕೆ ಸತ್ಕಾರ್ಯದಲ್ಲಿ ಧರ್ಮಂ ಚಿರ ಎಂಬ ವೇದಸಮ್ಮತವಾದ ನೀತಿವಾಕ್ಯಗಳು ಇವರಲ್ಲಿ ಮನೆಮಾಡಿವೆ ಅಂತೆಯೇ ಇವರು ನಂದಿ ಗುಡಿಯಲ್ಲಿ ಅಂಬೈಂಡ್ ಆಸ್ಪತ್ರೆಯನ್ನು ಕಟ್ಟಿಸಿರುವ ರಲ್ಲದೆ ತುಮಕೂರಿನಲ್ಲಿ ಒಂದು ಧರ್ಮಶಾಲೆಯನ್ನು ಕಟ್ಟಿಸಿದವರು ಮತ್ತು ಬೆಂಗಳೂರು ಬಸವ್ಸ ಕಾಲೇಜು, ರಾಷ್ಟ್ರೀಯ ವಿದ್ಯಾಲಯ, ಬಾಳೇಹೊನ್ನೂರು ಶ್ರೀ ರಂಭಾಪುರೀಜಗದ್ಗುರು ಮಠ, ಡಾವಣಗೆರೆ ಶ್ರೀ ರೇಣುಕಾಶ್ರಮ, ಮಂಡ್ಯದ ವೀರಶೈವ ವಿದ್ಯಾರ್ಥಿನಿಲಯ ಮೊದಲಾದವುಗಳಿಗೂ, ಒನ್ನೂರು ನರಸಿಪುರ ಹೈಸ್ಕೂಲು, ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಇನ್ನಿತರ ಸಂಸ್ಥೆಗಳಿಗೂ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸಿದ್ದಾರೆ "ದೇಶಸೇವೆಯೇ ಒಕಸೇವೆ' ಎಂಬ ನಾಣ್ಣುಡಿಗನುಸಾರವಾಗಿ ಯಾವಾಗಲೂ ಜನಸೇವೆ ಯನ್ನೇ ಮಾಡುತ್ತ ಒಂದಿದ್ದು ಈಗ ಮೈಸೂರು ಡಿ॥ ಬನ್ನೂರಿನಲ್ಲಿ ತಮ್ಮ ಧರ್ಮಪತ್ನಿಯವರಾದ ಶ್ರೀಮತಿ ನೌ॥ ರುದ್ರಮ್ಮನವರ ನಾಮಾಂಕಿತವಾಗಿ ಕಟ್ಟಿಸಿರುವ ಹಿರಿ ಆಸ್ಪತ್ರೆಯಲ್ಲಿ ಲೇಬರ್ ವಾರ್ಡನ್ನೊಂದು ಕಟ್ಟಿಸಿ ಮೈಸೂರಿನ ಮುಖ್ಯಮಂತ್ರಿಗಳಾದ ವಂ॥ ಶ್ರೀ ಕೆ ಚಂಗಲರಾಯರೆಡ್ಡಿಯವರು ಹಾಗೂ ವಿದ್ಯಾಮಂತ್ರಿ ಗಳಾದ ಶ್ರೀ ಓ ನಿಜ್ಜಲಿಂಗಯ್ಯನವರುಗಳ ಮುಖಾಂತರ ತಾ॥ ೩೦-೪-೧೯೩೦ ನೇ ಭಾನುವಾರ ೯ ೩೦ ಘಂಟೆಗೆ ಸ್ಥಾರಂಭೋತ್ಸವನ್ನು ಅತಿ ವೈಭವದಿಂದ ನೆರವೇರಿ ಸಿದರು ಈ ಉತ್ಸವಕ್ಕೆ ಮೈಸೂರು ಜಿಲ್ಲಾಧಿಕಾರಿಗಳು ಆಗಮಿಸಿದ್ದರಲ್ಲದೆ ಇನ್ನಿತರ ಅಧಿಕಾರಿಸ್ಥರೂ ದೊಡ್ಡ ವ್ಯಾಪಾರಿಸ್ಥರೂ ಪುರಪ್ರಮುಖರೂ ಸಮ್ಮಿಲಿತರಾಗಿದ್ದರು ಈ ಸಮಾರಂಭದಲ್ಲಿ ಉಭಯ ಮಂತ್ರಿಗಳವರು ಧರ್ಮಪ್ರಕಾಶ ಎಸ್ ರುದ್ರಯ್ಯನವರ ಗುಣಗಾನ ಮಾಡಿದ್ದಲ್ಲದೆ ವೈಷಾಯದ ವಾಮುಖ್ಯತೆಯನ್ನು ಅದು ಧರ್ಮಮಾರ್ಗದಿಂದ ನಡೆಯಬೇಕೆಂಬ ನೀತಿ ಯನ್ನೂ ಬಹು ಸುಗಮವಾಗಿ ಬೋಧಿಸಿದುದಲ್ಲದೆ ಪ್ರಜೆಗಳ ನಾನಾ ತರದ ಬೇಡಿಕೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟು ಶಾಂತರೀತಿಯಿಂದ ಸಭೆಯ ಕೆಲಸವನ್ನು ಮುಕ್ತಾಯಗೊಳಿಸಿದರು.

ಇದೇ ಪ್ರಕಾರ ಧರ್ಮಪ್ರಕಾಶ ಎಸ್ ರುದ್ರಯ್ಯ ನವರೆ ಧರ್ಮಬುದ್ಧಿಯು ಉತ್ತರೋತ್ತರ ಅಭಿವೃದ್ಧಿ ಯನ್ನು ಹೊಂದಿ ಶೀಘ್ರಾಯುಷ್ಯವನ್ನು ಧರ್ಮಕಾರ್ಯ ದಲ್ಲಿ ಕಳೆಯಲೆಂದೂ, ಭಗವಂತನು ಇವರಿಗೆ ಅಪ್ಪೈ ಶ್ವರ್ಯವನ್ನು ಕೊಟ್ಟು ಉದ್ದಂಡಾಯುಷ್ಯವನ್ನೂ ಟು ಮಾಡಲೆಂದೂ ಪ್ರಾರ್ಥಿಸುತ್ತೇನೆ

ವರ್ತಮಾನಸಂಗ್ರಹ

ಕನ್ನಂಬಾಡಿಕಟ್ಟೆಯಲ್ಲಿ ನೀರಿನ ಮಟ್ಟ

ಕೃಷ್ಣರಾಜಸಾಗರದ ನೀರಿನ ಮಟ್ಟ ೨೪ ಅಡಿಗಳ ನಿಂತ ಕೆಳಗೆ ಇಳಿದುಬಿಟ್ಟಿದೆ ಈಗ ಇರುವ ನೀರನ್ನು ಈನಿನಂತೆಯೇ ಉಪಯೋಗಿಸಿಬಿಟ್ಟರೆ ಇನ್ನು ಹತ್ತು ಹದಿನೈದು ದಿನಗಳೊಳಗಾಗಿ ಕನ್ನಂಬಾಡಿಕಟ್ಟೆಯು ನಿರುಪ್ಪಿ ಯೋಗ್ಯವಿಬಿಡುತ್ತದೆ ಈ ಸಂಒಂಧವಾಗಿ ವಿದ್ಯುಚ್ಛಕ್ತಿ ನೀರಾವರಿ ಮತ್ತು ವಿಶೇಷ ಇಂಜನೀಯರುಗಳು ಪರಿ ಶೀಲನೆ ನಡೆಸುವರೆಂದು ತಿಳಿದುಬಂದಿದೆ

ನೀರಿಲ್ಲದೆ ಮಂಡ್ಯಜಿಲ್ಲೆಯಲ್ಲಿ ೬೦ ಲಕ್ಷ ರೂಪಾಯಿ ನಷ್ಟ.

ಮಂಡ್ಯಜಿಲ್ಲೆಯ ೩೫ ಸಾವಿರ ಎಕರೆಯಷ್ಟು ಜಮೀನುಗಳಲ್ಲಿ ಕಾರುರಾಗಿ ಬಿತ್ತಲಾಗಿತ್ತು ನೀರಿನ ಅಭಾವ ಉಂಟಾಗಿ ಅದಕ್ಕೆ ವಿಪರೀತ ನಷ್ಟವಾಗಿದೆ ಕಬ್ಬಿನ ಬೆಳೆಯೂ ನಾಶವಾಗಿರುವುದರಿಂದ ರೈತರಿಗೂ, ಸಕ್ಕರೆ ಕಾರ್ಖಾನೆಗೂ ಒಟ್ಟು ಸುಮಾರು ೬೦ ಲಕ್ಷ ರೂಪಾಯಿ ನಷ್ಟ ಉಂಟಾಗಿದ ಎಂದು ಗೃಹಸಚಿವರಾದ ಶ್ರೀ ಟಿ ಮರಿಯಪ್ಪನವರು ತಿಳಿಸಿದ್ದಾರೆ

ಬೆಂಗಳೂರಿಗೆ ಜೋಗ್ ನಿಂದ ವಿದ್ಯುಚ್ಛಕ್ತಿ

ಬೆಂಗಳೂರಿಗೆ ಈಗ ಜೋಗ್ ಪವರ್ ಶಕ್ತಿ ಕೇಂದ್ರ ದಿಂದ ೧೫೫ ಸಾವಿರ ಕೆಲೋವಾಟ್‌ಗಳ ವಿದ್ಯುಚ್ಛಕ್ತಿ ಯನ್ನು ತೆಗೆದುಕೊಳ್ಳಲಾಗಿದೆಯೆಂದೂ ಈ ವಾರದೊಳ ಗೇನಾದರೂ ಮಳೆ ಬೀಳದಿದ್ದರೆ ವಿದ್ಯುಚ್ಛಕ್ತಿ ಸರಬರಾಜು ವಲ್ಲಿ ಶೇಕಡ ೫೦ ಭಾಗದಷ್ಟಷ್ಟು ಕಡಿಮೆ ಮಾಡಬೇಕಾ ಗುವುದೆಂದೂ ಮೈಸೂರು ಸರ್ಕಾರದ ನ್ಯಾಯಾಂಗಸಚಿವ ರಾದ ಶ್ರೀ ಕೆ ಟಿ ಭಾಷ್ಯಂರವರು ತಿಳಿಸಿದ್ದಾರೆ

ಜೋಗ್ ಕೇಂದ್ರದಿಂದ ಪವರ್ ಒದಗಿಸುವ ವಿಷ ಯದಲ್ಲಿ ಚೀಫ್ ಇಂಜನಿಯರ್‌ರವರು ಪ್ರಯತ್ನಪಡು ತ್ತಿದ್ದಾರೆ ಜೋಗ್‌ನಿಂದ ನೇರವಾಗಿ ಬೆಂಗಳೂರಿಗೆ ಪವರ್ ಒದಗಿಸುವುದು ಅಸಾಧ್ಯ ಜೋಗ್‌ನಿಂದ ವಿದ್ಯು ಚ್ಛಕ್ತಿಯು ಸೈಸೂರಿಗೆ ಹೋಗಿ ಮೈಸೂರಿನಿಂದ ಕಾಪ ಕಾನಳ್ಳಿಗೆ ಹೋಗಿ ಅಲ್ಲಿಂದ ಬೆಂಗಳೂರಿಗೆ ಬರಬೇಕು ಇಷ್ಟು ಸುತ್ತಿ ಬರುವುದರಿಂದಲೇ ಪ್ರೊಟೆಜ್ ಬಹಳ ಕಡಿಮೆಯಾಗಿ ಯಂತ್ರಗಳಿಗೆ ಸಾಕಾಗುವಷ್ಟು ಶಕ್ತಿಯು ತವಾದ ವಿದ್ಯುಚ್ಛಕ್ತಿ ದೊರೆಯುವೆಂದು ಚೀಫ್ ಇಂಜನಿ ಯರ್ ತಿಳಿಸಿದ್ದಾರೆ

ಕಬ್ಬು ಬೆಳೆದಿರುವ ರೈತರ ಗೋಳು

ಇರ್ವಿನ್ ನಾಲಾ ಪ್ರದೇಶದಲ್ಲಿ ಕಬ್ಬು ಬೆಳೆದಿರುವ ರೈತರಿಗೆ ವಿಪರೀತ ನಷ್ಟವಾಗಿದೆ ನೀರಿನ ಸರಬರಾಜಿಲ್ಲದೆ ಕಬ್ಬು ಬೆಳೆ ಒಣಗಿಹೋಗುತ್ತಿದೆ, ಅವರ ಗೋಳಂತೂ ಹೇಳತೀರದು

ಬೃಂದಾವನ ಒಣಗಿಹೋಗಿದೆ

ಹಸಿರುಗಿಡಗಳ ಹಚ್ಚನೆಯ ಹುಲ್ಲಿನಿಂದ ನಯನ ಮನೋಹರವಾಗಿ ಶೋಭಿಸುತ್ತಿದ್ದ ಬೃಂದಾವನದ ಉದ್ಯಾನವನವೆಲ್ಲಾ ಒಣಗಿ ಬರಿಯ ಕೂಳೆಕಡ್ಡಿಗಳಿಂದ ಕಾಣುತ್ತಿದೆ ಇಂತಹ ಪರಿಸ್ಥಿತಿಯು ಎಂಡೂ ಒದಗಿರ ಲಿಲ್ಲವೆಂದು ಅಲ್ಲಿಗೆ ಭೇಟಿಕೊಟ್ಟವರೆಲ್ಲಾ ಕಾವೇರಿಮಾತೆ ಪಾದದರ್ಶನಕ್ಕಾಗಿ ನಿತ್ಯವು ಸಾವಿರಾರು ಜನರು ಹೋಗುತ್ತಿದ್ದಾರೆ. ಅಲ್ಲದೆ ಮಳೆಗೆ ಸೊರೆಯಿಡುತ್ತಿದ್ದಾರೆ.

ಮೈಸೂರಿನ ಪರಿಸ್ಥಿತಿ

ಮೈಸೂರಿಗೆ ನೀರಿನಾಗಿ ಜೋಗ್‌ನಿಂದ ವಿದ್ಯುಚ್ಛಕ್ತಿ ಸರಬರಾಜಾಗುತ್ತಿರುವುದರಿಂದ ಬೆಂಗಳೂರಿನಷ್ಟು ಹೊಡೆ ರೆಯಾಗಲಾರದೆಂದು ನಂಬಲಾಗಿದೆ.

ಮೈಸೂರುಸರ್ಕಾರಕ್ಕೆ ಕೇಂದ್ರ ಸರ್ಕಾರದ ಸಹಾಯ

ಭಾರತಸರ್ಕಾರದ ವೈಸಾಯ ಇಲಾಖೆಯವರು ಅಧಿಕ ಆಹಾರಬೆಳೆವನಿಗೆಯ ಯೋಜನೆಯನ್ನು ಮೈಸೂರಿನಲ್ಲಿ ಅಭಿವೃದ್ಧಿಗೊಳಿಸುವುದಕ್ಕೋಸ್ಕರ ಮೈಸೂರು ಸರ್ಕಾರಕ್ಕೆ ೨೯॥ ಲಕ್ಷ ರೂಗಳನ್ನು ಸಾಲವಾಗಿ ಕೊಟ್ಟ ದ್ದಾರೆಂದು ಅಧಿಕೃತವರ್ತಕಟನೆ ಹೊರಬಿದ್ದಿದೆ. ಈ ಹಣ ವನ್ನು ವೈಸಾಯಕ್ಕೆ ಉಪಯುಕ್ತವಾದ ಕೆರೆಗಳ ಮತ್ತು ಬಾವಿಗಳ ನಿರ್ಮಾಣ, ಪಂಪುಗಳನ್ನು ಹಾಕುವುದು ಮುಂತಾದ ಕಾರ್ಯಗಳಿಗೆ ಉಪಯೋಗಿಸಲಾಗುವುದು

ಭಾರತ ಪಾಕೀಸ್ತಾನ್ ವ್ಯಾಪಾರ ಒಪ್ಪಂದ

ಭಾರತಕ್ಕೂ ಪಾಕೀಸ್ತಾನಕ್ಕೂ ನಡೆಯುತ್ತಿದ್ದ ವ್ಯಾಪಾರ ಹಲವು ದಿನಗಳಿಂದ ನಿಂತುಹೋಗಿತ್ತು ಈಗ ಆ ಎರಡುರಾಷ್ಟ್ರಗಳಿಗೂ ಒಂದು ಹಂಗಾಮಿ ಒಪ್ಪಂದ ಆಗಿದೆ ಅದರ ಪ್ರಕಾರ ಪಾಕೀಸ್ತಾನವು ಭಾರತಕ್ಕೆ ೮ ಲಕ್ಷ ಪೌಲು ಸೆಣಬನ್ನು ಕೊಡುತ್ತದೆ ಆದಕ್ಕೆ ಪ್ರತಿ ಯಾಗಿ ಭಾರತ ಪಾಕೀಸ್ತಾನಕ್ಕೆ ಸೆಣಬಿನಿಂದ ತಯಾ ರಾದ ವಸ್ತುಗಳನ್ನೂ, ಹತ್ತಿಯಬಟ್ಟೆ ಮತ್ತು ಉಣ್ಣೆಯನ್ನೂ ಕೊಡುತ್ತದೆ

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮನೆತ್ತಿ ನೈಶಾಖ ಶು॥ಪಂಚಮಿಗೆ ೨೩ ವರ್ಷಗಳು ತುಂಬಿ ೨೪ ನೆಯ ವರ್ಷವು ಪ್ರಾರಂಭ ವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿ ರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ನಾಡಬೇಕಾಗುತ್ತದೆ ವಿ. ಪಿ. ನಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾ ದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂಪಾಯಿಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮ ದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟುಗೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸ ಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತ ಸಾಗುತ್ತದೆ ಮನಿಯಾರ್ಡರ್ ಮಾಡಿವ ಚಂದಾ ದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನೂ ಮಾತ್ರ ದಯವಿಟ್ಟು ಮರೆಯದೆ ತಿಳಿಸಬೇಕು

—ಮ್ಯಾ

ಸ್ವೀಕಾರ

ಮಃ॥ ರಾ॥ ವೀರಭದ್ರಯ್ಯನವರು ಗೆಂಜಗಟ್ಟೆಮಠ ಇವರ ಧರ್ಮಪತ್ನಿ ದುಂಡಮ್ಮನವರು ತಾ॥ ೨೦ ೧೦ ೨೦ ನೆಯ ದಿವಸ ಶಿವಾರೋಹಣದ ಸಮಯದಲ್ಲಿ ಪ್ರಭಾ ವೋಪಣಕ್ಕೋಸ್ಕರ ತೆಗೆಯಿಸಿದ 5 ರೂ ಗಳು ವೇ॥ ವಿರುಪಾಕ್ಷಯ್ಯನವರು ನೆಂದಿರೆಡ್ಡರಮಲೆ ಮು॥ ಹುಲ್ಲಳ್ಳಿ ಇವರ ದ್ವಾರಾ ಕಳ್ಳಿರುತ್ತವೆ

ನೈಜಾಂಸ್ಟೇಟ್ ಕಲಬುರ್ಗಿಯಲ್ಲಿರುವ ಮಃ॥ ರಾ॥ ತಿವಯೋಗಪ್ಪಾ ಸ್ವಾದಿ ಇವರು ನೂತನ ವರ್ಷದಲ್ಲಿ ಪ್ರಭಾಪತ್ರಿಕೆಯನ್ನು ಅಭಿವಂದಿಸಿ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

॥ ಶ್ರೀಮಜ್ಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥

"ಲೋಕಮಾನ್ಯ ಪಂ|| ಕಾಶೀನಾಥ ಶಾಸ್ತ್ರಿಗಳವರ ಕೀರ್ತಿಪಥಾಕೆಯು ಪ್ರಕಾಶಿಸಲಿ"

ಸನಾತನ ಧರ್ಮಾಭಿಮಾನಿಗಳೇ

ಧರ್ಮೋ ರಕ್ಷತಿ ರಕ್ಷಿತಃ) ಎಂಬ ಶಾಸ್ತ್ರವಚನಾನುಸಾರವಾಗಿ ಯಾರು ಧರ್ಮವನ್ನು ಕಾಪಾಡುವರೋ ಅವರನ್ನು ಧರ್ಮವು ರಕ್ಷಿಸುವುದು ಈ ಜಗತ್ತಿನ ಜನ ಜೀವನ ವ್ಯಾಪಾರದಲ್ಲಿ ಅತಿ ಮುಖ್ಯವಾದುದು ಧರ್ಮೋದ್ಧರಣೆಯೇ ಆಲ್ಲದ ಬೇರಾವುದಿಲ್ಲವೆಂಬುದನ್ನು ಮನಗಂಡು ಅದರ ಉದ್ಧಾರಕ್ಕಾಗಿಯೇ ತಮ್ಮ ಜೀವನ ಸರ್ವಸ್ವವನ್ನೂ ಧಾರೆಯೆರೆದು ದಿಗಂತಕೀರ್ತಿಸಾಧಿಗಳಾದ ವೇ|| ಪಂಡಿತವರ್ಯ ಲೋಕಮಾನ್ಯ ಕಾಶೀನಾಥ ಶಾಸ್ತ್ರಿಗಳವರು ಈ ಧರ್ಮೋದ್ಧಾರಕಾರ್ಯದಲ್ಲಿ ಜೀವನವಾಗಿದ್ದ ತಮ್ಮ ಪಂಚಭೂತಾತ್ಮಕ ಕಳೇಬರವನ್ನು ತ್ಯಜಿಸಿ ಪಂಚಮಿಜ್ಞಾನಂದ ಪ್ರಕಾಶಿಸುವ ಪರಮಪದವನ್ನೆಲ್ಲಿ ತಾ|| ೨೭-೨-೫೦ ರಲ್ಲಿ ಸಮರಸವಾದ ವಿಜಾರವು ಸರ್ವಶಃ ತಪ್ಪಾಗಿದೆ ಈ ಮಹಾಪುರುಷರ ವಿಚಾರವಾಗಿ ಲೇಖನವನ್ನು ಬರೆಯಲು ಅವರ ಜಗಲುವಿಕೆಯಿಂದುಂಟಾದ ಆಘಾತ ನೈಸರ್ಗಿಕವಾಗಿ ಕಾಲವಿಳಂಬಕ್ಕೆ ಕಾರಣವೆಂದು ಹೇಳಬೇಕಾದುದಿಲ್ಲ ಈಗ ದರ್ಮದ ದುರ್ಧ್ಯದ ಕಾಲವಾದ್ದರಿಂದ ಇಂಥ ಕಾಲದಲ್ಲಿ ಧರ್ಮದ ವೇಷಗಳನ್ನು ವರ್ಷಿಸುತ್ತಿದ್ದ ದೇವೇಂದ್ರನು ಅದೃಶ್ಯನಾದುದು ಇಡೀ ಜಗತ್ತಿಗೇ ಒಂದು ಆಘಾತವೇ ಆಗಿದೆ ಯೋಕ್ತಿಯಾಗಲಾರದು ದೇವೇಂದ್ರನು ದೃಶ್ಯೋಚರನಾಗದಿದ್ದರೂ ಅವನ ಆಜ್ಞಾವರ್ತಿಗಳಾದ ಕಾಲಮೇಘಗಳು ತಮ್ಮ ಸರ್ವಧಾರೆಯಿಂದ ಧರಣಿಯನ್ನು ದ್ಧರಿಸುತ್ತಿರುವಂತೆ ಪಂ|| ಕಾಶೀನಾಥಶಾಸ್ತ್ರಿಗಳವರು ನಮಗೆ ಅಗೋಚರವಾದರೂ ಅವರ ಪ್ರಭಾವವಿಶೇಷವಾದ ಸಂಚಾರಾಚಾರ್ಯ ಪ್ರಭಾಸಪ್ತಿಕೆಯು ದಶದಿಕ್ಕುಗಳಲ್ಲಿಯೂ ತನ್ನ ಪ್ರಭೆಯನ್ನು ಬೀರುತ್ತಿರುವುದು ಜಗತ್ತಿನ ಅಲ್ಯಾಣಕ್ಕೆ ಕಾರಣವಾಗಿದೆ ಈ ಪ್ರಭಾಪತ್ರಿಕೆಯು ತನ್ನ ೨೪ ನೇ ವರ್ಷದಲ್ಲಿ ಈಗಲೀಗ ಸಾರ್ವಾಜನಿಮಂತಿ ಪಂಡಿತವರ್ಯರ ಧರ್ಮ ವರ್ಸದ ಅಮೃತಧಾರೆಯನ್ನು ಸುರಿಸುತ್ತಿದ ಈ ಧರ್ಮ ವರ್ಸಧಾರೆಯು ಅವಿಚ್ಛಿನ್ನವಾಗಿ ಸುರಿದು ಧರಣಿಯ ಮಾನವರು ಪಾವನಮಾಡಿ ಅಮಿತಾನಂದ ತುಂದಿಲಮಾನಸರಾಗಲೆಂದೂ ಕೀರ್ತಿಶೇಷರಾದ ಕಾಶೀನಾಥಶಾಸ್ತ್ರಿಗಳವರು ತಮ್ಮ ಘನೋದ್ದೇಶ ಸಾಸಲ್ಯತೆಯ ಸಂತೋಷದ ಬೆರಕಾಂತತೆಯ ಪಡೆಯಲೆಂದೂ ದಯಾಮಯರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇನೆ ಸನಾತನ ಧರ್ಮಾಭಿಮಾನಿಗಳಾದ ವಾಚಕಮಹಾಶಯರು ವೀರಶೈವಮತದ ಏಕೈಕ ಶ್ರೇಷ್ಠ ಧರ್ಮಬೋಧಕವಾದ ಪ್ರಭಾಪತ್ರಿಕೆಯ ಅಂದಾದಾರರಾಗಿ ಸರ್ವತ್ರ ಪ್ರೋತ್ಸಾಹಿಸಬೇಕಾಗಿ ಕೋರಿ ಈ ಲೇಖನವನ್ನು ವಿರಮಿಸುತ್ತೇನೆ.

ಆಚಾರ್ಯತತ್ಪರ್ಯಶಾಕಿಕ
ಬ ಸಿ ರೇವಣಸಾಸ್ತ್ರಿ ಬಿಡದಿ,
ಬೆಂಗಳೂರು ಡಿ||

ಭಾವಿಹಳ್ಳಿ

ತಾ|| ೬-೨ ೫೦ನೇ ಸೋಮವಾರ ದಿವಸ ವೇ|| ಜೋಳಿಲ್ಲ. ಮಳೆ ಚೆನ್ನಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಮಜಾಸೂಚಕ ಸಭೆಸೇರಿ ಪುರಪ್ರಮುಖರೆಲ್ಲಾ ಅಗಮಿಸಿ ಪತನಂತರ ಶಿವೈಕ್ಯರಾದ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಪಾಂಡಿತ್ಯ, ಅವರು ಇಲ್ಲಿಯವರೆಗೆ ವೀರಶೈವ ಸಮಾಜಕ್ಕೆ ಸಲ್ಲಿಸಿದ ಸೇವೆ, ಸಹಿಸಿದ ಕಷ್ಟ, ಅವಿಶ್ರಾಂತ ಶ್ರಮದಿಂದಲೇ ಕರ್ತೃತ್ವಶಕ್ತಿಯಿಂದಲೇ ಮಾಡಿದ ತ್ಯಾಗ ಮುಂತಾದವುಗಳ ಬಗ್ಗೆ ಸಾಕಷ್ಟು ಭಾಷಣಗಳಾಯಿಂದ ಮೇಲೆ ಎರಡುನಿಮಿಷ ಮೌನಾಚರಣೆಮಾಡಿ ಪಂ|| ರ ಆತ್ಮಕ್ಕೂ ಅವರ ಮಾತೃಶ್ರೀ ಪಾರ್ವತಮ್ಮನವರಿಗೂ ಹಾಗೂ ಬಂಧುಗಳಿಗೂ ಚರಣಾಂತಿಯನ್ನಿಯಲೆಂದು ಆಗಮಾಚಾರ್ಯರನ್ನು ಸ್ತುತಿಸಿ ಸಭೆಯು ಮುಕ್ತಾಯವಾಯಿತು.

ಓರ್ವ ದರ್ಶನಭಾಗಿ

ಹೊಳಗುಂದಿ

ತಾ ೬.೩.೫೦ನೆಯ ಸೋಮವಾರದ ದಿವಸ ಶಾನುಭೋಗ್ ಸಿದ್ದಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ದುಃಖ ಸೂಚಕ ಸಭೆ ಸೇರಿತ್ತು ಆದರಲ್ಲಿ ಅಧ್ಯಕ್ಷರು ಅತಿದುಃಖದಿಂದ ನೇ| ನಾಗಸೂರು ಬ್ಯಾ|| ಗುರುಕುಲ ಸಾಮ್ರಾಟ ಶ್ರೀ ಪಂಡಿತ ಕಾಶೀನಾಥಶಾಸ್ತ್ರಿಗಳವರು ಕಣ್ಮರೆಯಾದ ರೀಜ ವಿಸಯವನ್ನು ಸಬೆಗೆ ತಿಳಿಸಲು ಅತಿ ದುಃಖವೆನಿಸುತ್ತದೆಂದು ನುಡಿದರು ಮತ್ತು ಇವರು ಹೇಳಿದ್ದು? ಅನ್ಯಮುಖ್ಯಾಗಿ ವಿವಿಧರೂಪದಲ್ಲಿ ತಪಸ್ಸನ್ನಾಚರಿಸುವ ಮಹರ್ಷಿಗಳು ಆನೇಕರಿರಬಹುದು ಜಗತ್ಪಲ್ಲೇ ಖ್ಯಾತಿ ಸಂಪಾದಿಸಿದ ಮೇಧಾವಿಗಳು ತಮ್ಮ ವಚಸ್ಸನ್ನು ಹರಿದಿರಬಹುದು ಆದರೆ ಆರೇತುಮಿಮಾಚಲಪರಿಯಂತರಿರುವ ವೀರಶೈವಜಗತ್ತಿನ ಕಲ್ಯಾಣಕ್ಕಾಗಿ ಸದಾಕಾಲಕ್ಕೂ ನಡುಕಟ್ಟಿ ನಿಂತಿರುವವರು ನೀವೇ ಸಂ| ಜೀ ಒಬ್ಬರೇ ಎಂದು ಅಚ್ಚುನಾದ ನಾನು ಇಂದು ಈ ಸಭೆಯ ಲ್ಲಿ ವ್ಯಕ್ತಪಡಿಸಿ ಒಪ್ಪಿಸಿಕೊಡುತ್ತೇನೆ ಪಂ ಜಂಯವರ ಜೀವನದ ಮಟ್ಟಿನ್ನು ವೀರಶೈವ ಜಗತ್ತಿನ ಪ್ರಮುಖರು ಸಾಕಷ್ಟು ರೀತಿಯಿಂದ ಒಳಿಯದ ಇವ್ವ ಮೂಲಕ ಸ್ಫಲ್ಪನುಟ್ಟಿಗೆ ಹೇಳಲಯಸುತ್ತೇನೆ ಈ ಮಹಾನೀಯರು ಸಿತ್ಯವಲ್ಲೂ ಶಿವಸ್ಮರಣೆ ಗ್ರಂಥಾವಲೋಕನ ವಿರಕ್ತಿಮಮತೋದ್ಭಾರಕತ್ವ ಇವೇ ಮೊದಲಾದ ಸತ್ಕಾಲಕ್ಷೇಪಗಳೆಂಡಿನೆ ಸಂತೋಸದಿಂದಲೂ ಆನಂದದಿಂದಲೂ ಪೂರ್ತಿಗೊಳಿಸಿದರು ಶ್ರೀ ಜಗದ್ಗುರು ಪಂಚಾಚಾರ್ಯ ಭಗವತ್ಪಾದರ ಪರಿಚಯವನ್ನು ಮಾಡಿ ತೋರಿಸಿಕೊಟ್ಟ ವಿದ್ವತ್ ಸಾರ್ವಭೌಮರೂ ಅನೂಚೀನವಾದ ಬಂದ ವೀರಶೈವ ಜಗತ್ತಿಗೆ ತಮ್ಮ ಪಾಂಡಿತ್ಯಪ್ರಭಾವದಿಂದ ತಯಾರಿಸಿರುವ ವೀರಶೈವರತ್ನ ದುರಾದ ದೂರದೇಶಗಳ ಇತ್ಯಾದ್ಯನೇಕ ಗ್ರಂಥಗಳನ್ನು ರಚಿಸಿದ ಧೀರೋದಾತ್ತರೂ ಶ್ರೀ ಜಗದ್ಗುರು ಪಂಚಾಚಾರ್ಯರ ಅನುಗ್ರಹದಿಂದ ವೀರಶೈವ ಜನಾಂಗದ ಜಾಗೃತಿಗಾಗಿ ಶ್ರೀ ಕಾಶೀನಾಥ ಗ್ರಂಥಮಾಲೆಯನ್ನು ಸ್ಥಾಪಿಸಿದವರೂ ತನೇಕ ಪರಿಷತ್ತುಗಳನ್ನೇ ಪ್ರಪಿಸಿ ಕನ್ನಡ ಟಿಕ, ಆಂಧ್ರ ಮಹಾರಾಷ್ಟ್ರದೇಶಗಳಲ್ಲಿ ಪಂಚಾಚಾರ್ಯರ ಬೋಧಾಮೃತವನ್ನು ಪಾನಮಾಡಿಸಿದವರೂ ಕರ್ನಾಟಕರತ್ನ, ಗಾಂಭೀರ್ಯಗುಣಾಂಬರೂ, ನೈಷ್ಠಿಕಬ್ರಹ್ಮಚಾರಿಗಳೂ, ಆದ ಪಂ|| ಶ್ರೀ ಕಾಶೀನಾಥ ಶಾಸ್ತ್ರಿಗಳವರು ತಮ್ಮ ನಿವಾಸಸ್ಥಾನವಾದ ಮೈಸೂರು ನಗರದಲ್ಲಿ ತಾ|| ೨೭-೨-೫೦ನೇ ಸೋಮವಾರ ದಿನಾಂಕ ವೆಲ್ಲಿ ಶಿವೈಕ್ಯರಾದ ಮೂಲಕ ಇಡೀ ವೀರಶೈವಜನಾಂಗಕ್ಕೆ ಹೇಳಲಾರದವ್ವ ದುಃಖವುಂಟಾಗಿನೆ ತನ್ನೂಲಿಕ ಸಮಾಜಕ್ಕೂ ಅವರ ಒಂಧುವರ್ಗಕ್ಕೂ ಮಾತ್ಶಶ್ರೀ ಯವರಿಗೂ ಉಂಟಾಗಿದ್ದ ಮ ಖವನ್ನು ಶಮನಮಾಡಿ ಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಸ್ತುತಿಸಿ ಐದು ನಿಮಿಷದವರೆಗೆ ಭಗವಧ್ಧ್ಯಾನಪರರಾಗಿ ಕ್ಳೆಗುಂದಿದ ಪಂ|| ಜಯವರ ಆತ್ಮಕ್ಕೆ ಚಿರಶಾಂತಿಯನ್ನು ಬೇಡಿ ಶಾಂತಿಪಾರಮೋದಿಗೆ ಸಭೆಯು ವಿಸರ್ಜಸಲ್ಪಟ್ಟಿತು

ಓರ್ವ ಪ್ರೇಕ್ಷಕ ಹೊಳಗುಂದಿ

ಬನ್ನಿಕಲ್ಲು

ತಾ|| ೧೩.೩-೫೦ರಲ್ಲಿ ನಾಗನೂರು ಬ್ಯಾ|| ಪಂ|| ಕಾಶೀನಾಥ ಶಾಸ್ತ್ರಿಗಳವರ ನಿಧನದ ಬಗ್ಗೆ ವೇ|| ಹಿರೇಮಠದ ಗುರುಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ದುಃಖ ಸಭೆ ಜರುಗಿದ್ದು ವೇ|| ಹಿರೇಮಠದ ಗುರುಲಿಂಗಯ್ಯನವರು ಪಾಟೀಲ ವೀರಭದ್ರಗೌಡರು ಪಾಟೀಲ ಬಸವನ ಗೌಡರು ಹೊಳಗುಂದಿಯಿಂದ ಶ್ರೀ ಹೆಮಣ್ಣಿನವರೂ ತಾನೀಳೋಗ ಸಿದ್ಧಲಿಂಗಪ್ಪನವರೂ ಇನ್ನೂ ಅನೇಕ ಮಹಾನೀಯರುಗಳಿಂದ ಪಂ||ರ ಗುಣಾನಾದದ ಭಾಷಣ ಗಳಾದ ಮೇಲೆ ಶಿವೈಕ್ಯರ ಆತ್ಮಕ್ಕೆ ಶಾಂತಿಯನ್ನು ಕೋರಿ ಸಭೆಯು ಮುಕ್ತಗೊಳಿಸಲ್ಪಟ್ಟಿತು

ಓರ್ವ ಪ್ರತ್ಯಕ್ಷದರ್ಶಿ

ಹೂವಿನ ಹಡಗಲಿ

ತಾ|| ೨೭-೨-೫೦ರಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಶಿವೈಕ್ಯರಾದ ಬಗ್ಗೆ ರಿಪಸ್ಮಿಕ್ಕಾ ಇಂಸ್ಪೆಕ್ಟರ್ ವೇ|| ವಿರುಪಾಕ್ಷಯ್ಯನವರ ಅಧ್ಯಕ್ಷತೆಯಲ್ಲಿ ದುಃಖಸೂಚಕ ಸಭೆಸೇರಿ ಪಂ|| ಜೀಯವರ ಗುಣಗಾನದ ಭಾಷಣ ಗಳಾದ ಮೇಲೆ ಸಭಕರೆಲ್ಲಾ ಎದ್ದುನಿಂತು ಈ ಮಹಪೀಯರ ಅಗಲುವಿಕೆಯಿಂದ ಇಡೀ ವೀರಶೈವಜನಾಂಗಕ್ಕೆ ತುಂಬಾ ನುಬುವುಂಟಾಗಿದೆ ಆದ್ದರಿಂದ ಪರಮಾತ್ಮನು ತಿನ್ಯೈರ್ಯರ ಆತ್ಮಕ್ಕೆ ಶಾಂತಿಯನ್ನು ನೀಡಿ ಮಃಬಘಾಗಿರ ದುಃಖ ತಮುನಮಾಡಲೆಂದು ಸ್ತುತಿ ಸಭೆಯು ವಿಸರ್ಜಿಸಲ್ಪಟ್ಟಿತು

ಓರ್ವ ಪ್ರತ್ಯಕ್ಷದರ್ಶಿ

ಕುಂದಗೋಳ ಪಂಚಗೃಹ ಹಿರೇಮಠದ ಪಟ್ಟಾಧ್ಯಕ್ಷ ಶ್ರೀ|| ಷ|| ಬ್ರ|| ಗುರುಪಾದ ಸ್ವಾಮಿಗಳ ಲಿಂಗೈಕ್ಯ

ಶ್ರೀ|| ಷ|| ಬ್ರ|| ಗುರುಪಾದಶಿವಾಚಾರ್ಯ ಗುರು ಚೆನ್ನ ಮಲ್ಲಿಕಾರ್ಜುನಾಚಾರ್ಯ ಪಟ್ಟಾಧ್ಯಕ್ಷ ಹಿರೇಮಠ ಕುಂದಗೋಳ ಇವರು ಈಗ ಕಳೆದ ೧೩ದಿಂಗಳು ಕಾಯಿಲೆಯಿಂದ ಜಾಸಿಗೆ ಹಿಡಿದು ಮಲಗಿಕೊಂಡು ತಾರೀಖು ೨೬-೪-೧೯೫೦ ನೇ ಬುಧವಾರ ಸಾಯಂಕಾಲ ೬ ಘಂಟೆಗೆ ಲಿಂಗೈಕ್ಯರಾದರು ಲಿಂಗೈಕ್ಯಸ್ವಾಮಿಗಳು ಬಹಳೇ ಉದಾರಗುಣ ಮತ್ತು ಶಾಂತಸ್ವಭಾವದವರೂ ಆಗಿದ್ದರು ಗುರುವರ್ಗದ ಸುಧಾರಣೆಗಾಗಿ ಮತ್ತು ವೀರಶೈವಸಮಾಜದ ಉದ್ಧಾರಕ್ಕಾಗಿ ಅನೇಕ ಕಾರ್ಯ ಕ್ರಮಗಳನ್ನು ಕೈಗೆಂಡಿದ್ದರು "ಪಂಚಾಚಾರ್ಯ ಪ್ರಭಾ" ಪತ್ರಿಕೆಯ (ಟ್ರಸ್ಟಿ) ಕಮೀಟಿಯ ಮೆಂಬರರಲ್ಲಿ ಒಬ್ಬರಾಗಿದ್ದು ಪಂಚಾಚಾರ್ಯಪ್ರಭೆಯು ಪುನಃ ತನ್ನ ಸನಾತನ ತತ್ವಗಳ ಬೆಳಕಿನಲ್ಲಿ ಉಳಿಯುವಂತೆ ಬಹಳ ಪ್ರಯತ್ನ ಮಾಡಿ ಧರ್ಮಪ್ರಕಾಶ ಎನ್ ರುದ್ರಯ್ಯನವರು ಬೆಂಗಳೂರು ಇವರ ಸಹಾಯದಿಂದ ಪುನಃ ಚಿರಕಾಲ ಉಳಿಯುವಂತೆ ಮಾಡಿದರು. ಕರ್ನಾಟಕವ್ಯಾಂತದಲ್ಲಿ ಕುಂದಗೋಳ ಹಿರೇಮಠವು ಪ್ರಸಿದ್ಧವಾದ್ದು ಈ ಮಠದ ಅಧಿಕಾರಿಗಳ ಸಿಹಾಯ, ಸಹಾನುಭೂತಿಯಿಂದ ಅನೇಕ ಸಮಾಜ ಹಿತದ ಕಾರ್ಯಗಳು ಜರಗಿರುತ್ತವೆ

ಸ್ವಾಮಿಗಳು ಈಗ ಸುಮಾರು ೩ ವರ್ಷಗಳ ಹಿಂದೆ ತಮ್ಮ ಮೇಠದ ಅಭಿವೃದ್ಧಿಗಾಗಿ ಲಿಂಗೈಕ್ಯರಾದ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳು ಮೈಸೂರು ಇವರ ಸಲಹೆ ಮತ್ತು ಸೂಚನೆಯ ಮೇರೆಗೆ ವೇ|| ತಿಗ್ಗಾಲಿ ತಾಲ್ಲೂಕಿನ ಹಿರೇ ಹರಕುಣಿ ಹಿರೇಮಠದ ಶಿದ್ಧಲಿಂಗದೇವರನ್ನು ತಮ್ಮ ಮರದ ಪಡ್ಡತಿಯ ಮೇರೆಗೆ ಶಿಷ್ಯರನ್ನಾಗಿ ಮಾಡಿ ಕೊಂಡು ಉತ್ತರಾಧಿಕಾರಿಯನ್ನಾಗಿ ನೇಮಿಸಿ ಕಾಗದ ವನ್ನು ನೋಂದಣಿ ಮಾಡಿಸಿಕೊಟ್ಟಿದ್ದರು ಆ ಮೇರೆಗೆ ಶ್ರೀಮಜ್ಜಗದ್ಗುರು ವಾರಾಣಸೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ವಿಶ್ವೇಶ್ವರಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಾನಂಗಳಲ್ಲಿ ತಾರೀಖು ೧-೫-೧೯೫೦ ನೇ ಸೋಮವಾರ ದಿವಸ ಸರಿ ಶಿದ್ಧಲಿಂಗೇಶ್ವರನು ದೇನರಿಗೆ ಗುರುಪಟ್ಟಾಭಿಷೇಕವನ್ನು ಮಾಡಿಸಬೇಕೆಂದು ಸಂಕಲ್ಪಮಾಡಿ ಸಿದ್ಧತೆಯ ಕಾರ್ಯಗಳನ್ನು ಹೂಡಿದ್ದರು ಆದರೆ ದೈವವು ತಾನೊಂದುಬಗೆಯಿತು ಎನ್ನುವಂತೆ ಇಶ್ವರಲಿಯೇ ಶ್ರೀಸ್ವಾಮಿಗಳವರು ತಿನನ್ನಿಧಿಯನ್ನು ಹೊಂದಿದ್ದು ಆದರೂ ಗ್ರಾಮವ ಭಕ್ತಮಂಡಳಿಯವರು ಎದೆಗುಂದದೆ ಲಿಂಗೈಕ್ಯಸ್ವಾಮಿಗಳ ಸದಿಚ್ಛೆಯನ್ನು ಈಡೇರಿಸಬೇಕೆಂದು ಅದೇ ಕುಭಮುಹೂರ್ತದಲ್ಲಿ ಕುಂದಗೋಳ ಹಿರೇಮಠದ ಗುರುಪಟ್ಟಾಭಿಷೇಕ ಕಾರ್ಯವನ್ನು ನೆರವೇರಿಸಬೇಕೆಂದು ನಿರ್ಧರಿಸಿ ಮಠದ ತಿಶ್ಯರಿಗೆ ಮತ್ತು ಪ್ರತಿನಿಧಿಕ ಇನರಿಗೆ ಆಮಂತ್ರಿಸಿದ್ದಾಗಿದೆ

ಜಗದ್ಗುರು ಪಂಚಾಚಾರ್ಯರು ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನಿಯಲೆಂದು ಪ್ರಾರ್ಥಿಸುವ,

ಮಹಾದೇವಪ್ಪ, ಕೆಂಚಪ್ಪ, ಕೋಳವಾಡ,
ಮುಃ ಕುಂದಗೋಳ

ಭಾರತಕ್ಕೆ ಬರ್ಮಾದಿಂದ ಅಕ್ಕಿ

ಭಾರತಕ್ಕೆ ಬರ್ಮಾದಿಂದ ಅಕ್ಕಿ ಒದಗಿಸುವ ಬಗ್ಗೆ ರಂಗೂನಿನಲ್ಲಿ ಮಾತುಕತೆ ಪ್ರಡೆಯುತ್ತಿತ್ತು. ಕಳೆದ ೨೩ ನೆಯ ತಾರೀಖು ಈ ಮಾತುಕತೆ ಮುಗಿದು ಎರಡು ಸರ್ಕಾರಗಳೂ ಒಂದು ಒಪ್ಪಂದಕ್ಕೆ ಬಂದುನೆಂದು ತಿಳಿದು ಬಂದಿದೆ

Edited, Printed and Published by Brubanmath Mahadevaiah at Shri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಗ್ರಣಿ ಪ್ರಸೀದಂತು ॥ REGISTERED No M 2266

ಪಂಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನವಪಂಕೇಜಾತಜನಿಕರ್ ಪಂಚಾಸ್ಯಕೀಜಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮತಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಧಾರವಾಡ

ಬಸವನಗೌಡಾ ದೇ ಪಾಟೀಲ ವಕೀಲ ನಾಗನೂರು ಇವರು ಒರೆದ ದುಃಖೋದ್ಗಾರದ ಲೇಖನವು ಕೆಳಗೆ ಪ್ರಕಾಣಿಸಿದ ಪ್ರಕಾರ ಇದೆ—

ವೇ॥ ಪಂ॥ ಕಾಶೀನಾಥಶಾಸ್ತ್ರಿಗಳವರು ತಾರೀಖು ೨೭-೩-೩೦ ನೇ ದಿವಸ ಪರಂಧಾಮವನ್ನೈದಿದ್ದನ್ನು ಕೇಳಿದು ನನಗೆ ಒಹಳೇ ವಿಷಾದವನ್ನೆನಿಸಿತು ಶಾಶ್ವತ್ತಲಾಗಿ ಇವರ ದೇಹಾವಿಗಾಗ್ಯವು ಸುಧಾರಣೆಯಲ್ಲರಿವುದೆಂದು ವೇ॥ ಪಂ॥ ಹರಿಕಾಶೀನಾಥಶಾಸ್ತ್ರಿಗಳಿಗಿವರ ಪಂಡಿತರು ಆಕಸ್ಮಿಕವಾಗಿ ಇನ್ನಾರಿಯಾದದೆಂಬ ವಾರ್ತೆಯನ್ನು ಕೇಳಿ ಸಿಡಿಲು ಬಡಿದಂತಾಯಿತು ಧರ್ಮಾಭಿಮಾನಿಗಳೂ ವಕ್ತೃತ್ವ ಶಾಲಿಗಳೂ, ಬ್ರಹ್ಮಚಾರಿಗಳೂ, ರಾಜಾಧಿರಾಜರಿಂದ ಸಾರವ ಪಡೆದವರೂ, ನೇಧಾವಿಗಳೂ ಆದ ಇವರ ಅಗಲುವಿಕೆಯಿಂದ ವೀರಶೈವ ಸಮಾಜದ ನುಕುಟನೇ ಳಿಬಿದಂತಾಗಿದೆ ಇವರು ಸಾಮಾನ್ಯ ವ್ಯಕ್ತಿಗಳಲ್ಲ ಂಡಿದ ಹರವನ್ನು ಅಜನ್ಮಪರ್ಯಂತ ನಡಸಿ ಜಗದ್ವಿಖ್ಯಾ ರಿಂದಾ ಸಂಸಾರದ ಬಲೆಗೆ ಸಿಲುಕದೆ ಪುಣ್ಯಮಯ ರೀರವನ್ನು ಗಲಿ ಪರಮಾತ್ಮನಲ್ಲಿ ಲೀನರಾದ ಮಹಾತ್ಮರೇ ನೇದೇ ಧನ್ಯರು, ಲೋಕಮಾನ್ಯರಾದ ನಿವುಗೆ ಎಸ್ಟು ವ್ಯಕ್ತವಾದಗಳನ್ನರ್ಪಿಸಿದರೂ ತೀರದು.

ಬಾಲ್ಯದಲ್ಲಿ ನಾನೂ ನನ್ನ ಮಿತ್ರರಾದ ರಾಮನಗೌಡಾ ಜಾಗನೂರ ಡಿ ವಾಯ್ ಎಸ್ ಪಿ ಎಂಬವರೂ ನಿವ್ಮ ಹಿತೈಷಿಯಲ್ಲಿಯೇ ಸಹಪಾಠಿಗಳಾಗಿ ಕನ್ನಡ ಅಭ್ಯಾಸ ಮಾಡಿದ ನಂತರ ನಾವು ಉಭಯರು ಇಂಗ್ಲಿಸ್ ಅಭ್ಯಾ ಸಕ್ಕೆ ತೆರಳಿದೆವು ತಾವು ಗೀರ್ವಾಣ ಭಾಷೆಯ ಅಭ್ಯಾ ಸಕ್ಕೆ ತೆರಳಿದರಿ ಮುಂದೆ ಕೆಲವು ದಿನಗಳನಂತರ ಮುಂಬೈಯಲ್ಲಿ ಸ್ವರ್ಗತುಲ್ಯವಾಗಿರುವ ಮಲಬಾರ ಹಿಲಿನ ಹೊಗಾದುವೆ ವೆದೆಲ್ಲಿ ಅಕ್ಸಿಕವಾಗಿ ನಿವ್ಮ ವಿಯೋಗವಾಯಿತು ಆಗ್ಗೆ ನಿನ್ನು ಮುಖದ ತೇಜಸ್ಸು ಪ್ರತಿಭಾಸಂಪನ್ನವಾದ ಕಣ್ಣಿನ ಒಜಸ್ಸು ಸುವರ್ಣ ಮಯವಾದ ಮೈಬಣ್ಣ ವಾಕ್ಚಾತುರ್ಯ ಇವೆಲ್ಲವನ್ನು ನೋಡಿ ಬೆರಗಾದನು ನಂತರ ಮುಂಬೈಯ ಕುಶಲ ಪ್ರಶ್ನೆಗಳಾನಿ ಸಂತೋಷದಿಂದ ಆಗಲಿದೆವು ಆಗ್ಗೆ ನಾನು ಬಿ ಎ ಪರೀಕ್ಷೆಯ ಅಭ್ಯಾಸಮಾಡುತ್ತಿದ್ದೆನು ಅದನ್ನು ಮುಗಿಸಿ ಎಲ್ ಎಲ್ ಬಿ, ಪರೀಕ್ಷೆಯಲ್ಲಿ ತೀರ್ಗಡೆ ಹೊಂದಿ ವಕೀಲ ಉದ್ಯೋಗವನ್ನು ಕೈಕೊಂಡನಂತರ ಪ್ರಾಗ್ತನವಾದ ನಾಗನೂರಿನ ಬೃಹನ್ಮಠದಲ್ಲಿ ತಮ್ಮ ಕರ್ತವ್ಯನಿವಾಯಿತು ಆಗಂತೂ ತಮ್ಮಲ್ಲಿ ಧೈರ್ಯ, ಸ್ಥೈರ್ಯ, ಸಮಾಜಸೇವೆ ಮೊದಲಾದ ಗುಣಗಳು ಪ್ರಜ್ವಲಿಸುತ್ತಿದ್ದುವು ಕುಟುಂಬದವರ ಯಾವ ಕ್ಷೇಮ ಕಾರ್ತೀಗಳ ಕಡೆಗೆ ಧಾವಿಸದೆ ಧೈರ್ಯಸಾಧನೆಯನ್ನೇ ಪ್ರಾಮುಖ್ಯವಾಗಿಟ್ಟುಕೊಂಡು ಅಂಕ್ಯದವರೆಗೂ ಅದರಂತೆ ನಡೆಸಿದಿರಿ ಈ ನಿವ್ಮ ಗುಣಗಳನ್ನು ನೀಕ್ಷಿಸುತ್ತಿದ್ದೆನು ನಿವ್ಮಂತೆಯೇ ವರ್ತಿಸಬೇಕೆಂಬ ಆಕಾಂಕ್ಷೆ ಯುಳ್ಳವನಾಗಿದ್ದರೂ ದೈನಂದಿನವು ಹಿಂದೂಡಿತು ಇತ್ತೀಚ್ಯದಲ್ಲಿ ಅಂದರೆ ೧೪ ನೇ ವರ್ಷ ವಯಸ್ಸಿನಲ್ಲಿ ಪತ್ನಿ ವಿವಾಹವಾದುದೇ ಇದಕ್ಕೆ ಕಾರಣ ಅಂದನೇಲೆ ಜೀವನು ಈ ಶರೀರವನ್ನು ಧರಿಸಿ ಒರುವಾಗಲೇ ತನ್ನ ಆಗುಹೋಗುಗಳನ್ನು ಸಿದ್ಧಪಡಿಸಿಕೊಂಡು ಬಂದಿರುತ್ತಾನೆಂದು ಅಸಂದಿಗ್ಧವಾಗಿ ಹೇಳಬಹುದು ಜನನ ಮರಣಗಳ ನಿಯಮಗಳನ್ನು ಯಥಾರ್ಥವಾಗಿ ಪಾಲಿಸಿ ಈ ನೆರಜನ್ಮವನ್ನು ಪರಸೇವಾಗಿ ಸವಿಸಿ ಜನ್ಮದವತಾರವನ್ನು ಮುಗಿಸಿದ ತಮ್ಮ ಅತ್ಯಕ್ಕೆ ಭಗವಂತನು ಪರಿಪೂರ್ಣ ಶಾಂತಿಯನ್ನೀಯಲೆಂದು ಹಾರೈಸುತ್ತೇನೆ

ಬಿ ಡಿ ಪಾಟೀಲ ಬಿ ಎ, ಎಲ್ ಎಲ್ ಬಿ
ವಕೀಲ ಧಾರವಾಡ

ವೇ॥ ಪಂ॥ ಪಂಡಿತರಾಜ ಶ್ರೀ ಕಾಶೀನಾಥಶಾಸ್ತ್ರಿಗಳ ಅವರಿಗೆ ಶ್ರದ್ಧಾಂಜಲಿ, ತಿಳಿಳ್ಳಿ

ಶ್ರೀಪಂಚಾಚಾರ್ಯ ಪ್ರಭಾ ಪತ್ರಿಕೆಯ ಸಂಸ್ಥಾಪಕರೂ, ಸನಾತನ ವೀರಶೈವ ಧರ್ಮೋದ್ಧಾರಕರೂ, ಶ್ರೀ ವೀರಶೈವ ಸಿದ್ಧಾಂತ ಗ್ರಂಥ ಪ್ರಕಾಶಕರೂ, ನಾಗನೂರು ಬೃಹನ್ಮಠಾಧೀಶರೂ ಆದ ವೇ॥ ಪಂ॥ ಶ್ರೀ ಕಾಶೀನಾಥ ಶಾಸ್ತ್ರಿಗಳಿಯವರು ತಾ॥ ೨೭-೩-೩೦ ನೇ ದಿವಸ ಮಹಾ ಲಿಂಗೈಕ್ಯರಾದ ವಿಷಯವು ಸನಾತನವೈದಿಕಮತಾವಲಂಬಿ ಗಳಿಗೆ ಅತೀವ ದುಃಖವನ್ನುಂಟುಮಾಡಿದೆ ಈ ಸಮಯ ದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರು ಹಾಗೂ ಪಾವನೀಪರವೇಶ್ವರರೂ ಶ್ರೀಶಾಸ್ತ್ರಿಗಳವರ ಆತ್ಮಕ್ಕೆ ಚಿರಶಾಂತಿಯನ್ನೂ, ಇವರ ಒಂಧುವರ್ಗಕ್ಕೆ ದುಃಖವಿಮೆನ ಶಕ್ತಿಯನ್ನೂ ಹಾಗೂ 'ಶ್ರೀ ಸನಾತನಾಚಾರ್ಯ ಪ್ರಭೆ ಯು ವೈಭವೀದಿಕೆಯಲ್ಲಿ ವಾರಂಪ್ರತಿ ಹೊರಡುವಂತೆ ಅನು ಗ್ರಹವನ್ನೂ ದಯಾಸಾಲಿಸಲೆಂದು ಶ್ರೀಜಗದ್ಗುರು ಅಭಿನವರೇಣುಕ ವಾಚನಾಲಯದ ವತಿಯಿಂದ ಪ್ರಾರ್ಥಿಸಲಾಯಿತು

ವೀರಭದ್ರಯ್ಯ ರುದ್ರಯ್ಯ ಹೊಸಮಠ
ಪ್ರೆಸಿಡೆಂಟ್
ಶ್ರೀಜಗದ್ಗುರು ಅಭಿನವರೇಣುಕ ವಾಚನಾಲಯ

ಅದರ್ಶಗುರುವು ಕಣ್ಮರೆಯಾದನೇ!

ನಾಗನೂರು ಬೃಹನ್ಮಠಾಧ್ಯಕ್ಷರೂ, ಈಶ್ವರಾಂಶೀ ಭೂತರೂ, ಸಕಲಶಾಸ್ತ್ರಪಾರಂಗತರೂ, ಪಂಚಾಚಾರ್ಯ ಪ್ರಭಾಪತ್ರಿಕಾ ಸಂಪಾದಕರೂ ಆದ ವೇ॥ ಬ್ರ॥ ಶ್ರೀ ಪಂಡಿತವರ್ಯ ಕಾಶೀನಾಥಶಾಸ್ತ್ರಿಗಳವರು ತಿಪ್ಪೈಕ್ಯರಾದುದು ನಮ್ಮಿ ವೀರಶೈವಸಮಾಜದ ದೌರ್ಭಾಗ್ಯವೇ ಸರಿ

ಚಿರಪರಿಚಿತರಾದವರ ವಿಯೋಗ ದುಃಖವನ್ನು ಸಾನಂತಂ ಸಹಿಸಲಸಮರ್ಥನಾಗಿರುವೆನು ಹಾರ್ಯ! ಹಾರ್ಯ!

೧. ಗುರುಶಿಷ್ಯಕ್ರಿಯಾಕಂಡದಲ್ಲಿ ಧಾರ್ಮಿಕಸಂಬಂಧವು ಪಡೆಗಿಟ್ಟಿರುವಾಗ ನಿನ್ನ್ಸ್ಥೈರ್ಯದಿಂದ ಎಳ್ಳಷ್ಟು ಧರ್ಮ ಬೋಧನೆಯನ್ನು ಪತ್ರಿಕಾಮುಖಾಂತರವಾಗಿಯೂ, ಪ್ರವಚನ ಮೂಲಕವಾಗಿಯೂ, ಸದ್ಗ್ರಂಥಗಳ ರಚನಾಮೂಲಕ ವಾಗಿಯೂ ಮಾಡಿ ಶಾಶ್ವತಕೀರ್ತಿಯನ್ನು ಗುರುವರ್ಗಕ್ಕೇ ಮಾರ್ಗದರ್ಶಕರಾದ ನ ಹಾತ್ಮರಿವರು

೨ ಧರ್ಮೋದ್ಧಾರ್ತಾಗಿ ಅಖಂಡ ಬ್ರಹ್ಮಚರ್ಯಾಂದಿಂದ ಜೀವನವನ್ನು ಸಾಗಿಸಿ, ಆಪೂರ್ವವೂ, ಅನುಪಮವೂ ಆದ ಒಂದು ಆತ್ಯುತ್ಕೃಷ್ಟ ಜೀವನಚರಿತ್ರೆವನ್ನು ನೆಲೆಗೊಳಿಸಿದ ಸುಪ್ರತಿಭಾಸಂಪನ್ನರಿವರು

೩ ಪಂಚಪೀಠೋದ್ಧಾರಕ್ಕಾಗಿ ಅಹೋರಾತ್ರಿಯೂ ಚಿಂತಿಸುತ್ತಾ ತಮ್ಮ ತನುಮನಧನಗಳನ್ನೆಲ್ಲಾ ಸೂರೆ ಮಾಡಿ ಧರ್ಮದ ಕೀರ್ತಿಧ್ವಜವು ನಿರಂಕುಶವಾಗಿ ಆಗಸದಲ್ಲಿ ಹಾರಾಡುವಂತೆ ಮಾಡಿದ ಪುಣ್ಯಪುರುಷರಿವರು

೪ ಸ್ವಯಂ ಪಂಡಿತರುಗಳವರಾಗಿದ್ದರೂ ಪಂಡಿತ ಮಂಡಲಿಯ ಮೇಲೆ ಪರಮ ಪ್ರೇಮವನ್ನು ತೋರಿಸಿದ ವಿಶ್ವಪ್ರಿಯರುಗಳಿವರು

೫ ಒದಗಿಬಿಡರುತೊಡರುಗಳನ್ನು ಧೈರ್ಯಸ್ಥೈರ್ಯಗಳಿಂದ ಎದುರಿಸಿ ದಿಗ್ವಿಜಯವಂ ಪಡೆದ ಅಪ್ರತಿಮ ಸಾಹಸಿಗಳವರು

ಇಂತಹ ಧರ್ಮಮೂರ್ತಿಯನ್ನು ಮರೆಯುವದದೆಂತು!
ಸಾಧ್ಯವಿಲ್ಲ ಸಾಧ್ಯವಿಲ್ಲ
ಪುನರಾವೃತ್ತಿ ಆವತಿರಿಸುವನೇ? ಸಂದೇಹ, ಸಂದೇಹ
ಶ್ರೀವಿಶ್ವಸಾಹನು ಇವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ

ಕೀರ್ತನಕೇಸರಿ ಕವಿಭೂಷಣ,
ಗುಬ್ಬಿ ತಿನಕರಾಪಂಡಿತ ಶಿವರುದ್ರಶಾಸ್ತ್ರಿ,
ಗಂಟೇದೇವರಮಠ ತುಮಕೂರು

ಧಾರವಾಡ

ಇಲ್ಲಿಯ ಮಂಗಳವಾರವೇಟೆಯಲ್ಲಿರುವ ಕಟ್ಟೀನುಕ ದಲ್ಲಿ ತಾ। ೩೦ ೪-೩೦ ಗುರುವಾರ ಶ್ರೀಮಜ್ಜಗದ್ಗುರು ವಿಕೋರಾಮಾರಾಧ್ಯರ ಹಾಗೂ ಬಸವಣ್ಣನವರ ಜಯಂತಿ ಉತ್ಸವಗಳು ಒಳ್ಳೇ ವಿಜೃಂಭಣೆಯಿಂದ ನೆರವೇರಿದವು

ಈಗ ೩೪ ತಿಂಗಳಿಂದ ಈ ಮತದಲ್ಲಿ "ನೀಲಮ್ಮನ ನೆಲಯ' ನೆಂಬ ಮಹಿಳಾಸಂಸ್ಥೆಯು ಸ್ಥಾಪಿತವಾಗಿದ್ದು ಇಲ್ಲಿ ಪ್ರತಿದಿವಸ ಸಾಯಂಕಾಲ ೫ ರಿಂದ ೭ ರ ವರೆಗೆ ಶಿವರೇರ್ತನೆ ಶಿವಶರಣರ ಕಥೆಗಳು, ಭಾರತಪುರಾಣವು ಇನ್ನೂ ಅನೇಕ ವಿಷಯಗಳ ಮೇಲೆ ಚರ್ಚೆಗಳು ನಡೆಯುತ್ತಿರುವವು ಇದಲ್ಲದೆ ಸ್ತ್ರೀಯರಿಗೆ ಅವಶ್ಯವಿರುವ ಪಾಕಶಾಸ್ತ್ರ, ಕಸೂತಿ, ಶಿಶುಸಂಗೋಪನ ಮೊದಲಾದ ಸಂಸಾರಕ್ಕೆ ಅತ್ಯವಶ್ಯವಿರುವ ವಿದ್ಯೆಗಳನ್ನು ಉಚಿತವಾಗಿ ಶಿಕ್ಷಣಕೊಡುವ ವ್ಯವಸ್ಥೆ ಇದೆ ಪ್ರತಿದಿನ ೪೦-೫೦ ಮಹಿಳೆಯರು ಕೂಡುತ್ತಿರುವರು

ಈ ಸಂಸ್ಥೆಯು ಪರವಾಗಿ ತಾ॥ ೩೦-೪-೩೦ ರಂದು

[ಶೇಷ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮನೆತ್ತಿ ನೈಕಾಖ ಶುಕ್ಲಪಂಚಮಿಗೆ ೩೩ ವರ್ಷಗಳು ತುಂಬಿ ೩೪ ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಡಿರೆಂದೂ ವಿ. ಪಿ. ಮಾಡುವುದರಿಂದ ಕಮಿಷನ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೭ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೬ ರೂಪಾಯಿಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದವಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟುಗೂಡಿಸಿ ಒಂದೇ ಸಾರ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ಹೇಳಬೇಕು

—ಮ್ಯಾ

ಪಂಚಾಚಾರ್ಯಪ್ರಭಾ

೧೯೫೦ನೆಯ ಮೇ ತಾ ೧೫ನೆಯ ಸೋಮವಾರ

ಭಕ್ತರ ಉದ್ಧಾರಕ್ಕಾಗಿ ಗುರುಗಳ ಸಂಚಾರವು ಅವಶ್ಯ

ವೀರಶೈವಧರ್ಮದ ಪಾಲನಪೋಷಣೆಗಳಲ್ಲಿ ಶ್ರೀಜಗದ್ಗುರು ಸಂಚಾರ್ಯರಲ್ಲೇ ಆನಲಂಬಿಸಿರುವುದರಿಂದ ಆ ಮಹಾಸ್ವಾಮಿಗಳ ತಮ್ಮ ದಿನ್ಯ ಸರ್ವೀಟಿನೆಂಗಿಂದಿಗೆ ಈಗ ಉಲ್ಲಾಸ ಸಂಚಾರವನ್ನು ಪ್ರತಿವರುಷವು ಆವಶ್ಯವೆಂದು ಗ್ರಾಮಗಳಿಗೆ ಹೋಗಿ ಅಲ್ಲಿನ ಪಟ್ಟಣಾಧಿಕಾರಿಗಳಿಗೂ ಸಹ ಸಂಚಾರವನ್ನು ಇಚ್ಛಾಪೂರ್ಣವಾಗಿ ಮಾಡಿಸಬೇಕು ಅಂಥವರೇ ಆನರು ಭಕ್ತರ ಭಕ್ತಿನಿಶ್ಚಾಸಗಳಿಗೆ ಆರ್ಹರಾಗುವಲ್ಲದೆ ಎಲ್ಲ ಸಮಾಜಗಳವರಿಂದಲೂ ಪೂಜಿಸೊಂಡು ಗುರು ನಗರದ ಗೌರವವನ್ನು ಕಾಪಾಡುವರು

ಕರ್ನಾಟಕದಲ್ಲಿ ವಾಸಿಸುವ ಜನರಲ್ಲಿ ಬಹುಶಃ ಮುಕ್ಕಾಲುಭಾಗ ವೀರಶೈವರಿಂದಲೇ ತುಂಬಿದೆ ಇದಲ್ಲದೆ ಆಂಧ್ರ ಮಹಾರಾಷ್ಟ್ರ ಪ್ರಾಂತಗಳಲ್ಲಿಯೂ ಕೂಡಾ ವೀರಶೈವರ ವಾಸವಿದ್ದು ಈ ಜನರಲ್ಲಿ ಧರ್ಮದ ನಿಜಾಂಶವನ್ನು ಆರಿತವರು ಕಡಿಮೆ. ಇತ್ತೀಚೆಗೆ ಸರಭಾಸೆಯಲ್ಲಿ ಮುಂದುವರಿದು ಸಮಾಜದ ಮುಂದಾಳುಗಳಾದವರು ಅನೇಕ ಜನರಿದ್ದರೂ ಅವರು ತಮ್ಮ ಸ್ವಂತ ಉದ್ಧಾರಕ್ಕೇ ಪ್ರಯತ್ನಪಟ್ಟರಲ್ಲದೆ ಸಮಾಜೋದ್ಧಾರಕ್ಕಾಗಿ ಗಮನಿಸಲಿಲ್ಲ ಆದರೂ ಕೈಲಾಸವಾಸಿಗಳಾದ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಪ್ರಯತ್ನವಿತೀಷದಿಂದ ಧರ್ಮದಲ್ಲಿ ನವಚೈತನ್ಯವುಂಟಾಗಿ ಗುರುವರ್ಗವು ಜಾಗೃತವಾಗಿದೆ. ಆದುದರಿಂದ ಪಟ್ಟಚಾರಾಧಿಕಾರಿಗಳು ಸಂಚಾರದಲ್ಲಿ ತಾವು ಆಗಮಿಸಿದ ಗ್ರಾಮದ ಸ್ಥಿತಿಗತಿಗಳನ್ನು ಸರ್ವಾರೋಚಿಸಿ ಆ ಗ್ರಾಮದ ಮುಂದಾಳುಗಳೊಡನೆ ಸಮಾಜದಲ್ಲಿ ಐಕ್ಯತೆಯನ್ನುಂಟುಮಾಡಲು ಪ್ರಯತ್ನಿಸಬೇಕು. ನಂತರ ದರ್ಮದ ರಹಸ್ಯವನ್ನು ಸುಲಲಿತವಾಗಿ ಪ್ರತಿಯೊಬ್ಬರಿಗೂ ತಿಳಿಯುವಂತೆ ಆಯಾ ಭಾಷೆಗಳಲ್ಲಿ ಉಪದೇಶಮಾಡಿದರೆ ಹಸಮಾಡಿದ ಭೂಮಿಯಲ್ಲಿ ನೆಟ್ಟ ಸಸಿಯು ಹೇಗೆ ಪ್ರಫುಲ್ಲಿತವಾಗಿ ಬೆಳೆಯುವುದೋ ಆದರಂತೆ ನಮ್ಮಿ ವೀರಶೈವಧರ್ಮವು ಅಭಿವೃದ್ಧಿಯನ್ನು ಹೊಂದಿ ಪ್ರಕಾಶಕ್ಕೆ ಬರುವದು ದೊಡ್ಡ ಪಟ್ಟಣಗಳಲ್ಲಿ ವಾಸಿಸುವ ವೀರಶೈವರು ಸ್ವಲ್ಪ ಅರಿತವರಿದ್ದರೂ ಇರಬಹುದು ಆವರೆ ಹಳ್ಳಿಗಳಲ್ಲಿ ವಾಸಿಸುವ ಜಸರು ಆಶಿಕ್ಷಿತರಾದವರೇ ಹೆಚ್ಚಾಗಿದ್ದು ಸಾರಾಸಾರವಿಚಾರಶಕ್ತಿಯು ಇಲ್ಲದೆ ಇರುವುದರಿಂದ ಅಲ್ಪ ವಿಷಯಗಳ ಸಲುವಾಗಿ ಅನೇಕ ಪಕ್ಷಪಂಗಡಗಳನ್ನು ನಾಡಿಕೊಂಡು ಬಹು ದಿನಗಳಿಂದ ದುಡಿದು ಸಂಪಾದಿಸಿದ ಹಣವನ್ನೆಲ್ಲಾ ಕೋರ್ಟು ಕಚೇರಿಗಳಿಗೆ ಖರ್ಚುಮಾಡಿಬಿಡುತ್ತಾರೆ ಇದಲ್ಲದೆ ಲಿಕ್ಕೂ ತಿಳಿಯದೆ ಅನೇಕ ಅನಾವಶ್ಯಕಾರಣಗಳಿಗೆ ಅವರಿಂದ ಗ್ರಾಮಗಳು ಕುಂದಾವ ಕಾಲವಲ್ಲಿ ಪ್ರತಿಯೊಂದು ಸನಯ ಯಿಜಮಾನರು ತಮ್ಮ ನುಕ್ಕಿಗೆ ಸರಿಯಾಗಿ ವಿದ್ಯಾಭ್ಯಾಸಮಾಡಿಸುವಂತೆ ಸರ್ಕಾರದವರಿಂದಲೂ ಅವಶ್ಯಹೃದಯದಲ್ಲಿ ಬೆಂಬಿಸಬೇಕು

ಅಜ್ಞಾನರಿಗೆ ಉಪದೇಶವು ಒಮ್ಮೆ ಮಡಗುಡಿತೆಂದು ಗ್ರಹಿಸಿದಲ್ಲಿ ಅಲಲಿಸಿದಂತೆ ಆನರು ಸ್ವಲ್ಪ ಕಾಲದಲ್ಲಿ ಅಜ್ಞಾನಿಗಳಾಗುತ್ತಾರೆ ಆದರ್ಶ ಮೇದಾವಿಗಳು ಕೊಟ್ಟ ಸ್ಫೂರ್ತಿಗಳನ್ನು ಸಮರಿಸಲೇಕು ಅಂಥವರೇ ಜಾಗೃತ್ತವಾಗಿರುವುದು ಆನೇಕ ಸಲ ಇವರ ಜ್ಞಾನಗಳಲ್ಲಿ ಕೃತ್ರಿಮೆಗಳಿವೆಯೆಂದಿದ್ದರೆ ಆನವುಂಟಾಗಲಿಕ್ಕಿಲ್ಲ ಆದರೆ ಶಾಸ್ತ್ರ ವಿಷಯಗಳನ್ನು ಸಮರಿಸಲೇಕು ಆ

ಪಾಕ್ ಸರ್ಕಾರದ ಪ್ರಕಟಣೆ

ಪಶ್ಚಿಮ ಪಾಕೀಸ್ತಾನದಲ್ಲಿನ ಗೋಧಿಯಮೇಲಿನ ಕಂಟ್ರೋಲನ್ನು ಇಂದಿನಿಂದ ತೆಗೆಯಬೇಕೆಂದು ಪಾಕೀಸ್ತಾನ ಸರ್ಕಾರ ನಿರ್ಧರಿಸಿದೆ

ಪೂರ್ವ ಪಾಕೀಸ್ತಾನದಲ್ಲಿನ ಆಹಾರ ಧಾನ್ಯಗಳ ಮೇಲಿನ ಕಂಟ್ರೋಲ್ ಮುಂದುವರಿಸಲಾಗುವುದೆಂದು ಪಾಕ್ ಸರ್ಕಾರ ಪ್ರಕಟಿಸಿದೆ

ಪಾಕ್ ಪತ್ರಿಕೆಗಳ ಮೇಲೆ ನಿರ್ಬಂಧಾಜ್ಞೆ ಹೋಯಿತು

ಪಾಕೀಸ್ತಾನ ಪತ್ರಿಕೆಗಳ ಮೇಲೆ ಹಾಕಿದ್ದ ಎಲ್ಲಾ ನಿರ್ಬಂಧಾಜ್ಞೆಗಳನ್ನು ಭಾರತ ಸರ್ಕಾರ ತೆಗೆದಿದೆ ಎಲ್ಲಾ ಪ್ರಾಂತೀಯ ಸರ್ಕಾರಗಳು ಪಾಕೀಸ್ತಾನ ಪತ್ರಿಕೆಗಳ ಮೇಲೆ ಹಾಕಿದ್ದ ನಿರ್ಬಂಧಾಜ್ಞೆಗಳನ್ನು ತೆಗೆಯ ಬೇಕೆಂದು ಸಹ ಕೇಂದ್ರ ಸರ್ಕಾರ ಸೂಚಿಸಿದೆ

ಮದರಾಸಿನಲ್ಲಿ ಆಹಾರ ಪರಿಸ್ಥಿತಿ ಉತ್ತಮ

ನುಂದಿನ ಜುಲೈ ಮೊಸದ ಹೊತ್ತಿಗೆ ಮದರಾಸ್ ಪ್ರಾಂತದಲ್ಲಿ ಆಹಾರಪರಿಸ್ಥಿತಿಯು ಉತ್ತಮವಾಗಿರುವುದಾಗಿ ಆಹಾರಪರಿಸ್ಥಿತಿಯ ಉಸ್ತುವಾರಿ ಮಂತ್ರಿಗಳಾದ ಶ್ರೀ ಸುಬ್ರಹ್ಮಣ್ಯಂ ಅವರು ಹೇಳಿದ್ದಾರೆ. ಈಗಿರುವ ೩ ಲಕ್ಷ ಟನ್‌ಗಳ ಆಹಾರ ಧಾನ್ಯಗಳು ಜೂನ್ ವೇಳೆಗೆಲ್ಲಾ ಮುಗಿದುಹೋಗುವುದು ಅನಂತರ ಹೊರಗಿನಿಂದ ಸರಬರಾಜಾಗಲಿದ್ದರೆ ತೊಂದರೆಯಾಗುವುದು ಎಂದು ಆಹಾರಶಾಖಾ ಮಂತ್ರಿಗಳಾದ ವಿಕ್ಕೈರೇಡಿಯಾರವರು ತಿಳಿಸಿದ್ದಾರೆ

ಭಾರತ-ಪಾಕೀಸ್ತಾನಗಳಲ್ಲಿ ಸೌಹಾರ್ದ ಯುತ ವಾತಾವರಣವನ್ನು ಕಲ್ಪಿಸಬೇಕು

ಶ್ರೀ ಜೈ ಪ್ರಕಾಶ್ ನಾರಾಯಣ್‌ರವರ ಸಲಹೆ

ಭಾರತವನ್ನು ಬಿಟ್ಟುಹೋದ ಮುಸ್ಲಿಮರಿಲ್ಲಿರೂ ಮತ್ತೆ ಭಾರತಕ್ಕೆ ಹಿಂದಿರುಗಿ ಶಾಶ್ವತವಾಗಿ ನೆಲೆಸಲು ಪ್ರಯತ್ನಿಸಬೇಕೆಂದು ಪ್ರಜಾಸೋಷಲಿಸ್ಟ್ ಪಕ್ಷದ ಅಧ್ಯಕ್ಷರಾದ ಶ್ರೀ ಜೈ ಪ್ರಕಾಶನಾರಾಯಣ್‌ರವರು ಭಾರತ ಪ್ರಜೆಗಳಿಗೆ ಮನವಿಮಾಡಿದರು ಪಾಕೀಸ್ತಾನವನ್ನು ಬಿಟ್ಟುಬಂದು ಭಾರತದಲ್ಲಿ ನೆಲೆಸಿರುವವರು ಪಾಕೀಸ್ತಾನಕ್ಕೆ ಹಿಂತಿರುಗಿ ತಮ್ಮ ಸ್ವಸ್ಥಾನಗಳನ್ನು ಸೇರಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕೆಂದರು

ಭಾರತ-ಪಾಕೀಸ್ತಾನ್ ಒಪ್ಪಂದವನ್ನು ಕಾರ್ಯರೂಪಕ್ಕೆ ತರಲು ಭಾರತವೇ ಮುಂಚೆ ಪ್ರಯತ್ನಿಸಬೇಕೆಂದರು ಹೃದಯಪರಿವರ್ತನೆಯಿಂದಲ್ಲದೆ ಬಲಪ್ರಯೋಗದಿಂದ ಭಾರತ-ಪಾಕೀಸ್ತಾನ್ ನುತ್ತೆ ಒಂದಾಗಿಲಾರದೆಂದರು

ಭಾರತ-ಪಾಕಿಸ್ತಾನ್ ವಿದೇಶಾಂಗ ನೀತಿ ಮೊದಲಾದವುಗಳ ಒಗ್ಗೆ ಒಮ್ಮತಕಿಂದ ನರ್ತಿಸಲು ಭಾರತ-ಪಾಕಿಸ್ತಾನ್ ಒಪ್ಪಂದ ನಾಂದಿಯಾಗಿದೆ ಎಂದರು ಪಾಕಿಸ್ತಾನದ ಪ್ರಾಮಾಣಿಕತೆಯ ಬಗ್ಗೆ ಅನುಮಾನಪಡಬಾರದೆಂದರು ದ್ವಿರಾಷ್ಟ್ರ ಸಿದ್ಧಾಂತ ನಿಷ್ಪ್ರಯೋಜನಕರವಾದುದೆಂದರು ದೇಶ ವಿಭಜನೆಯಿಂದ ಯಾವ ಸಮಸ್ಯೆಯೂ ಪರಿಹಾರವಾಗಿಲ್ಲವೆಂದರು. ಉಭಯರಾಷ್ಟ್ರಗಳೂ ಜಾಕ್ಕ್ಯತೀಕ ಪ್ರಜಾಕ್ರಭುತ್ವ ನೀತಿಯನ್ನು ಅನುಸರಿಸುವುದು ಲೇಸೆಂದರು

೧೪೦೦ ಪತ್ರಿಕೆಗಳು ಮತ್ತು ೨೦ ಹಾವುಗಳ ರವಾನೆ

ಕಳ್ಳತ್ರಿಂದ ತಕ್ಷಿವಾರ ಕೆ. ಎಲ್. ಎಂ. ವಿಮಾನದಲ್ಲಿ ೧೪೦೦ ಪತ್ರಿಕೆಗಳೂ, ೨೦ ಹಾವುಗಳೂ ಯೂರೋಪಿಗೆ ರವಾನೆಯಾಯಿತು ಈ ೧೪೦೦ ಪತ್ರಿಕೆಗಳನ್ನು ಬ್ರಸೆಲ್ಸ್‌ನಿಂದ ಒಯ್ಯಲಾಗುವುದು ಹಾವುಗಳನ್ನು ಸ್ವಿಟ್ಜ್‌ರ್ಲೆಂಡಿಗೆ ರವಾನಿಸಲಾಗುವುದು.

ದೆಹಲಿಯ ೫೦೦ ಮಂದಿ ಪ್ರಮುಖ ಮಹನೀಯರ ಪ್ರತಿಜ್ಞಾವಚನ

ಭಾರತದ ಇತಿಹಾಸದಲ್ಲೇ ಅದ್ವಿತೀಯವಾದ ಅಕ್ಷರಶಃ ಪ್ರಕರಣವೊಂದು ನಿನ್ನೆ ದೆಹಲಿಯಲ್ಲಿ ನಡೆಯಿತು ದೆಹಲಿಯ ಪ್ರಮುಖ ವರ್ತಕರೇ ಆದಿಯಾಗಿ ಸುಮಾರು ೫೦೦ ಮಂದಿ ಪ್ರಮುಖ ಮತಪ್ರತಿನಿಧಿಗಳು ನಿನ್ನೆ ಜೈನ ಗುರುಗಳಾದ ಆಚಾರ್ಯ ತುಳಸಿಜಿಯವರ ಸಮ್ಮುಖದಲ್ಲಿ ೮ ಅಂಶಗಳನ್ನೊಳಗೊಂಡ "ಅತ್ಯಪರಿಶುದ್ಧತೆಯ" ಪ್ರತಿಜ್ಞಾವಚನ ಕೈಗೊಂಡಿರುತ್ತಾರೆ ಆ ಪ್ರತಿಜ್ಞೆಯ ವಿವರ ಈ ರೀತಿ ಇದೆ

ಇನ್ನು ಮುಂದೆ ಬ್ಲಾಕ್‌ಮಾರ್ಕೆಟ್ ವ್ಯಾಪಾರಕ್ಕೆ ಕೈ ಹಾಕುವುದಿಲ್ಲ

ಆಕ್ರಮ ರೇಷನ್ ಕಾರ್ಡುಗಳನ್ನು ಪಡೆಯುವುದಿಲ್ಲ

ಲಂಚ ಪುಮುವತ್ತುಗಳಿಗೆ ಕೈಯೊಡ್ಡುವುದಿಲ್ಲ

ಟಿಕೆಟ್ ಇಲ್ಲದ ಪ್ರಯಾಣಮಾಡುವುದಿಲ್ಲ

ಮನುಷ್ಯನಿಂದ ಎಳೆಯಲ್ಪಡುವ ರಿಕ್ಷಾ ಉಪಯೋಗಿಸುವುದಿಲ್ಲ

ಅಕ್ಕಹಚ್ಚೆ ಮಾಡಿಕೊಳ್ಳುವುದಿಲ್ಲ

ಜೂಜು ಮುಂತಾದವುಗಳಿಗೆ ಹೋಗುವುದಿಲ್ಲ

ಆಹಾರ ಪದಾರ್ಥಗಳನ್ನು ಕೆಡಿಸುವುದಿಲ್ಲ

ಈ ಪ್ರತಿಜ್ಞಾವಚನದ ಅವಧಿ ಒಂದು ವರ್ಷ

ಮೈಸೂರು ಕಾಂಗ್ರೆಸ್ಸಿಗೆ ಪ್ರಾಂತೀಯ ಸ್ಥಾನಮಾನ

ಅಖಿಲಭಾರತ ಕಾಂಗ್ರೆಸ್ ದೃಷ್ಟಿಯಿಂದ ಮೈಸೂರು ಕಾಂಗ್ರೆಸ್ ಇದುವರೆಗೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿಗೆ ಅಧೀನವಾಗಿತ್ತು ಈ ಅಧೀನತೆ ತಪ್ಪಿಸಿ ಮೈಸೂರು ಕಾಂಗ್ರೆಸ್ಸಿಗೆ ಪ್ರಾಂತೀಯ ಸ್ಥಾನಮಾನ ಕೊಡಬೇಕೆಂದು ಬಹಳ ದಿನಗಳಿಂದ ನಿವೇದಿಸಿಕೊಳ್ಳ ಲಾಗಿತ್ತು ಇದಕ್ಕಾಗಿ ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಟಿ. ನಿಜಲಿಂಗಯ್ಯನವರು ಕಾರ್ಯ ಸಮಿತಿಯ ಪರವಾಗಿ ಬಹಳ ಪ್ರಯತ್ನಪಟ್ಟಿದ್ದರು ಅವರ ಪ್ರಯತ್ನ ಈಗ ಫಲಿಸಿತು ಕೇಂದ್ರ ಕಾಂಗ್ರೆಸ್ ಕಾರ್ಯ ಸಮಿತಿಯವರು ಮೈಸೂರು ಕಾಂಗ್ರೆಸ್ಸಿಗೆ ಪ್ರಾಂತೀಯ ಸ್ಥಾನಮಾನಕೊಡಲು ನಿರ್ಧರಿಸಿರುವರು

ಕಾಂಗ್ರೆಸ್ ಸಂಸ್ಥೆಯು ಮೊದಲಿನಿಂದಲೂ ಭಾಷಾವಾರು ಪ್ರಾಂತ ತತ್ವಾಧಾರದ ಪ್ರದೇಶಗಳನ್ನು ರಚಿಸಿ ಪ್ರಾಂತೀಯ ಸ್ಥಾನಮಾನಗಳನ್ನು ಕಾಂಗ್ರೆಸ್ ಕಮಿಟಿಗಳಿಗೆ ಕೊಡುತ್ತಿದ್ದರು ಈ ಕಾರಣದಿಂದಲೇ ಇದುವರೆಗೂ ಮೈಸೂರು ಕಾಂಗ್ರೆಸ್ಸಿಗೆ ಆ ಅಂತಸ್ತು ಕೊಡಲು ಒಪ್ಪಿರಲಿಲ್ಲ ಈಗ ನಮ್ಮ ಸಂಸ್ಥಾನದ ಕಾಂಗ್ರೆಸ್ಸಿಗ ಪ್ರಾಂತೀಯ ಸ್ಥಾನಮಾನ ಕೊಟ್ಟಿದ್ದರಿಂದ 'ಭಾಷಾವಾರು ಪ್ರಾಂತ' ತತ್ವವನ್ನು ಬಿಟ್ಟುಂತಾಯಿತೇ?— ಎಂಬ ಕೆಲವರು ಶಂಕಿಸಬಹುದು ನಮ್ಮ ಅಭಿಪ್ರಾಯದಲ್ಲಿ ಅಂತಹ ಶಂಕೆಗೆ ಅವಕಾಶವಿಲ್ಲ ಈಗ ಮಾಡಿರುವ ನಿರ್ಧಾರವು ಹಿಂದಿನ ತತ್ವಗಳಗಾಗಲಿ ಮುಂದಿನ ಬೆಳವಣಿಗೆಗಳಗಾಗಲಿ ಆತಂಕಪ್ರಾಯವಾಗಿಲ್ಲ ಪ್ರಕೃತ ಪರಿಸ್ಥಿತಿಯನ್ನು ಅನುಸರಿಸಿ ಅನುಕೂಲಕ್ಕಾಗಿ "ಯಥಾ ಸ್ಥಿತಿ" ಯನ್ನು ಅಂಗೀಕರಿಸಿದಂತಾಗಿದೆ

ಪ್ರೇಮಿಸಿದ ತರುಣಿಯನ್ನು ಕೊಲ್ಲುವ ಪ್ರಯತ್ನ !

ಆದರೆ ಆಕೆಯ ತಂಗಿಗೆ ಪಿಸ್ತೂಲಿಂದ ಹೊಡೆದ

ಜೋಗೇಂದ್ರಸಿಂಗ್ ಎಂಬ ದರ್ಜಿಯವನೊಬ್ಬನು ತಾನು ಪ್ರೇಮಿಸುತ್ತಿದ್ದ ತರುಣಿಯು ತನಗೆ ಮೋಸ ಮಾಡಿದೆಂದು ಕುಪಿತನಾಗಿ ಬೆಳಗಿನಜಾವ ಆ ತರುಣಿ ವಾಸವಾಗಿದ್ದ ಮನೆಗೆ ಹುಗ್ಗಿ ಕಾದಿದ್ದು ತರುಣಿಯು ಮೇಲೇಳುತ್ತಲೇ ಪಿಸ್ತೂಲಿಂದ ಗುಂಡುಹಾರಿಸಿದ. ಆ ಗುಂಡು ಆಕೆಯ ಹೊಟ್ಟೆಗೆ ಬಿತ್ತು. ಘಾತುಕನು ಓಡಿಹೋದ ಆದರೆ ಅವನು ಗುಂಡಿನೇಟು ಹೊಡೆದ ಹುಡುಗಿ ಅವನು ಪ್ರೇಮಿಸಿದ ತರುಣಿಯ ತಂಗಿಯಾಗಿದ್ದಳು. ಪೋಲೀಸರು ಆವಪನ್ನು ಪತ್ತೆಹಚ್ಚಲು ತನಿಖೆ ಪ್ರಚಿಸುತ್ತಿದ್ದಾರೆ.

ಪುಣ್ಯತಿಥಿಮಹೋತ್ಸವ

ಮಂಗಳೂರ (ಜಿ ಕೊಪ್ಪಳ) ಪದ್ಮತಿಯ ಪ್ರಕಾರ ಈ ವರ್ಷ ಜ್ಯೈ॥ ಶು॥ ಪ್ರತಿಪದೆಯಿಂದ ೫ ದಿನಗಳವರೆಗೆ ಶ್ರೀ॥ ಶ್ರೀಪಟ್ಟದಸ್ವಾಮಿಗಳು ಅರಲೆಲೆಮಠ ಇವರ ಪುಣ್ಯತಿಥಿಯು ಶ್ರೀ॥ ಷ॥ ಬ್ರ॥ ಚರಪಟ್ಟಾಧ್ಯಕ್ಷ ಶಿದ್ಧಲಿಂಗ ಶಿವಾಚಾರ್ಯರು ಹಿರೇಮಠ ಬೆದವಟ್ಟಿ ಇವರ ನೇತೃತ್ವ ದಲ್ಲಿ ಈಗಿನ ಶ್ರೀ॥ ಷ॥ ಬ್ರ॥ ಹಡಪದ್ಧರ ಶಿವಾಚಾರ್ಯ ಸ್ವಾಮಿಗಳು ಮಂಗಳೂರು ಇವರು ಸಂಭ್ರಮದಿಂದ ನೆರವೇರಿಸಿದರು ಆ ಕಾಲಕ್ಕೆ ಪುರಾಣಪಟು ಶ್ರೀ ಶಿದ್ಧಲಿಂಗದೇವರು ಕುಂದಗೋಳ ಇವರಿಂದ ೫ ದಿನಗಳವರೆಗೆ ಶ್ರೀ ಜಗದ್ಗುರು ರೇಣುಕರ ಪುರಾಣವು ಅತ್ಯಂತ ವೈಭವ ದಿಂದ ನಡೆಯಿತು ಪುರಾಣಶ್ರವಣಮಾಡಲು ಸುತ್ತಲಿನ ಹಳ್ಳಿಯ ಜನರು ತಂಡೋಪತಂಡವಾಗಿ ಕಿಕ್ಕಿರಿದು ಬರುತ್ತಿದ್ದರು ಕೊನೆಯ ದಿನ ಪ್ರಾತಃಕಾಲ ಮಹಾಗಣ್ಡಿಗೆ ರುದ್ರಾಭಿಷೇಕ ಗಣಪಾರಾಧನೆಯಾದನಂತರ ಸಾಯಂಕಾಲ ೧೦೧ ಎತ್ತುಗಳನ್ನು ಹೂಡಿದ ರಥದಲ್ಲಿ ಶ್ರೀ॥ ಸ್ವಾಮಿಗಳ ಭಾವಚಿತ್ರವನ್ನು ಕುಂಡಿಸಿ 'ಉತ್ಸವವು ನಭೂತೋ ನಭವಿಷ್ಯತಿ' ಎಂಬಂತೆ ಪುರದ ರಾಜಬೀದಿಗಳಲ್ಲಿ ನಾನಾ ವಾದ್ಯಗಳೊಡನೆ ಸಾಗಿ ಮರಳಿ ಮಠಕ್ಕೆ ಬಂದನಂತರ ದಿನಂಗಣ ವೇಗಿ ಸಂ॥ ಶ್ರೀ ಚಾಕಿನಾಥಶಾಸ್ತ್ರಿಗಳು ಬೃಹತ್ಸ್ವ ನಾಗನೂರು ಇವರ ಗುಣಗಾನಗಳು ಹಾಡಿ ಹರಿಸ ಲ್ಪಟ್ಟವು ನಂತರ ಪ್ರಸಾದವು ಸಮಾಪ್ತಿಗೊಂಡಿತು ಈ ಕಾರ್ಯವನ್ನು ಶ್ರೀ ವೀರಭದ್ರಪ್ಪ ಸುಂದ, ಶ್ರೀ ಬಸಪ್ಪಾ ಎಮ್ಮಿ ರಾಗೂ ಪುರಪ್ರಮುಖ ಸದ್ಭಕ್ತಮಂಡಳಿ ತರುಣಸಂಘೆದವರು ಒಮ್ಮನಸ್ಸಿನಿಂದ ಒಳ್ಳೆ ಸ್ಪರ್ಧೆ ಯಾಗಿ ಮಾಡಿದರು ಅವರೆಲ್ಲರಿಗೂ ಆ ಗುರುಗಳು ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲೆಂದು ಬೇಡುವೆನು

ಸಂಗನಗೌಡಾ ಪೋಲೀಸ ಪಾಟೀಲ

ಸ್ವೀಕಾರ

ಧಾರವಾಡ ಡಿ॥ ಗದಗ ಗ್ರಾಮವಾಸಿಗಳಾದ ವೀರಪ್ಪ ವೀರಭದ್ರಪ್ಪ ಬಳಿಗಾರ ಇವರು ತಮ್ಮ ಗೃಹಪ್ರವೇಶದಲ್ಲಿ ಇದೇ ವಿಳ್ಯತಿನಾಮ ಸಂನತ್ಸರದ ವೈಶಾಖ ಶು॥ ೩ ಗುರುವಾರ ದಿವಸ ಏಕೋದಾನಮಾರಾಧ್ಯರ ಜಯಂತಿಯನ್ನೂ ವೈಶಾಖ ಶು॥ ೫ ಶನಿವಾರ ದಿವಸ ದಾರುಕಾಚಾರ್ಯರ ಜಯಂತಿಯನ್ನೂ ಚನ್ನಮಲ್ಲಯ್ಯ ಅಕ್ಕರಸ್ತಾಮಿ ಗುಡ್ಡದ ಹಿರೇಮಠ ಇವರ ವೈದಿಕತ್ವದಲ್ಲಿ ಒಳ್ಳೇ ನೈಳ ವಂದಿಲೂ ಚಿಕ್ಕಿಯಿಂದಲೂ ನೆರವೇರಿಸಿದ ಸಮಯ ದಲ್ಲಿ ಪ್ರಭಾಪೋಷಣಕ್ಯೋಸ್ಕರ ತೆಗೆದ 4 ರೂ. ಗಳು ಸದರಿ ವೀರಪ್ಪನವರಿಂದ ತಲುಪಿಸುತ್ತವೆ

ಶಿವಮೊಗ್ಗಾ ಡಿ॥ ಸೊರಬ ತಾಲ್ಲೂಕು ಜಡೆಹೋಬಳಿ ತೆಲಗುಂದ ಗ್ರಾಮದ ಚನ್ನಬಸವಯ್ಯನವರ ಧರ್ಮಪತ್ನಿ ಗಿರಿಜಮ್ಮಾ ಎಂಬವರು ಆರೇ ತೆಲಗಡ್ಡಿ ಗ್ರಾಮದಲ್ಲಿ ಶಿವಾಧೀನರಾದ ಪ್ರಯುಕ್ತ ಆವರ ಆತ್ಮತೃಪ್ತಿಗಾಗಿ ಪ್ರಭಾಪೋಷಣಕ್ಯೋಸ್ಕರ ಸದರಿ ಚನ್ನಬಸವಯ್ಯನವರು 2 ರೂ ಗಳನ್ನು ಸಮರ್ಪಿಸಿ ಳಿಸಿದ್ದಾರೆ

ಸೈಜಾಂ ಸ್ಟೇಟ್ ಗಂಗಾವತಿ ಪಂಚಾಚಾರ್ಯ ಪಾಠ ಶಾಲಾಧ್ಯಕ್ಷರಾದ ಶ್ರೀ ರುದ್ರಮುನಿ ಶಿವಾಚಾರ್ಯರು ಹೊಸ ವರಪದಲ್ಲಿ ಪಂಚಾಚಾರ್ಯ ಪ್ರಭಾ ಪೋಷಣ ಕ್ಯೋಸ್ಕರ 2 ರೂ. ಗಳನ್ನು ಸಮರ್ಪಿಸಿ ಳಿಸಿದ್ದಾರೆ.

ಶಹಪೂರ ಗ್ರಾಮವಾಸಿಗಳಾದ ಕೊಟ್ರಪ್ಪ-ಮಲ್ಲಪ್ಪ ಭೋಜ ಇವರ ಮಾತೃಶ್ರೀಗಳಾದ ಗಂಗಾಬಾಯಿ ಇವರು ಇದೇ ವೈಶಾಖ ಶು॥ ೧೪ ಸೋಮವಾರ (ಶಾ॥ ೧-೫-೫೦) ದಿವಸ ಸಾಯಂಕಾಲದ ೮ ಘಂಟೆಗೆ ಶಿವೈಕ್ಯರಾದ ಮೊಲಕ ಪ್ರಭಾಪೋಷಣಕಕ್ಯೋಸ್ಕರ ತೆಗೆಯು ನಿದ 1-4-0 ರೂಪಾಯಿ ಆ-ಗು-ಶುರಪ್ಪಿಪ್ಪತಪುರ ಇವರ ದ್ವಾರಾ ತಲುಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೧ ನೆಯ ಪುಟದಿಂದ ಮುಂದುವರಿದುದು]

ಬಾ ರಹಯಂತಿಯ ನಿಮಿತ್ತ ವಿಶೇಷಕಾರ್ಯಕ್ರಮಗಳಾದ ; ಅಂದು ೩ ಘಂಟೆಗೆ ಆಲೂರ ಮುನ್ಸೀಫರ ತಾಮಿ-ನವಾದ ಶ್ರೀಮತಿ ಕಾಶವ್ಮವರ ಅಧ್ಯಕ್ಷತೆಯಲ್ಲಿ ಕೇಗಿ ಸಭೆ ಸೇರಿ ಅನೇಕ ಅಕ್ಕತೆಗಳಿಂದಲೂ ಭಾಷಣ, ವಚನ ಸಂಗೀತಗಳಿಂದಲೂ ವಿಶೇಷವಾಗಿ, ಶ್ರೀಮತಿ ಜಾನಕಿಯಮ್ಮ ಕಟ್ಟಿಮನಿ ಇವರು ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಪಂಚಪೀಠಗಳ ಮಹತ್ವವನ್ನೂ, ನಾವು ಆಯಾ ಪೀಠಗಳಿಗೆ ಸಲ್ಲಿಸಬೇಕಾದ ಸೇವೆಯನ್ನೂ ಒಳ್ಳೇ ಉತ್ತಮರೀತಿಯಿಂದ ೩ ಗಂಟೆಯಿಂದ ೪ ಗಂಟೆಯವರೆಗೆ ಅಳವಡಿಸಿ ಹೇಳಿದರು. ಅನಂತರ ಶ್ರೀ ಕಾಶೀನಾಥಶಾಸ್ತ್ರಿಗಳ ಪರಿಚಯ ಮಾಡಿಕೊಟ್ಟು, ಅವರು ತಮ್ಮ ಜೀವನವನ್ನೇ ಧಾರೆಯೆರೆದು ನಮ್ಮ ವೀರಶೈವ ಮತಕ್ಕೆ ಮಾಡಿದ ಉಪಕಾರವನ್ನು ಬಣ್ಣಿಸಿ ಅವರ ಸಲುವಾಗಿ ಎಲ್ಲರೂ ೩ ನಿಮಿಷ ಮೌನವನ್ನಾಚರಿಸಿ ದುಃಖಸೂಚಕವನ್ನು ತೋರಿಸಿದರು. ಭಕ್ತಭಾಜನ ಪೆದ್ದಿ ಒಸವಣ್ಣ, ಬಸವೇಶ್ವರ ದೇವ, ನೀಲಮ್ಮನವರ ಸಂಕ್ಷಿಪ್ತಚರಿತ್ರೆ ಯಾಗಿ ಲೀಲೆಗಳನ್ನು ಹೇಳಿ ಅವರೆಲ್ಲರ ಮಧ್ಯ ಒಂತೆ ನಾವು ನಡೆದುಬಂದಾದರೆ ಧರ್ಮ, ಸಂಸ್ಕಾರವೆಲ್ಲಾ ತೊಡಕುಗಳನ್ನು ಹೇಗೆ ಸವಜವಾಗಿ ಬಿಡಿಸಿ ಬೆಳೆಸಿ ಒಂದನ್ನೂ 'ಜಯಂತಿ' ಯು ಮಹತ್ವವನ್ನೂ ಒಳ್ಳೇ ಉತ್ತಾಪದಿಂದ ಎಲ್ಲರ ಮನಸ್ಸಿನ ಮೇಲೆ ಸರಿಣಾವ ಗಾಗುವಂತೆ ಒಷಣ ಮಾಡಿದರು ಅನಂತರ ಶ್ರೀಮಜ್ಜಗದ್ಗುರು ಪಂಚಾಚಾರ್ಯರ, ಒಸವಣ್ಣನವರ, ಅಕ್ಕನ ಪಾವಿತ್ರಮಯ ಸೀಲಾಮ್ಮನವರ ಜೀವಚಿತ್ರಗಳಿಗೆ ದಿವ್ಯ ಬ್ಯಾಂಡು ಭಜನೆ ಪರತಿಗಳನ್ನಾಳಿಗೊಂಡು ಸಾಮೂಹಿಕ ಪೂಜೆ ಮಾಡಿಸಿ ಪಂಚಿಗೆ ನಮೋಷ್ಕಾರವು ಹೊರಟು ಒಳ್ಳೇ ಪಲ್ಲಂಬಣಿಯಿಂದ ಜವಳಣೀಟಿ ಕಾವುನಕಟ್ಟೆಗಳಲ್ಲಿ ಪಾಯ್ಯು ಒಯಿಪ್ರಿಯಾಗಿ ಜನರು ಉತ್ತಾಹದಿಂದ ನೋಡುತಿದ್ದರು ಕಾಯಿ, ಕರ್ಪೂರ ತಾರಿ, ತೂರಾಯಿಗಳಿಂದ ಪೂಜಿಸಿ ಪ್ರಿದ್ದರು ಈ ಪ್ರಕಾರ ವೈಭವಯುತವಾದ ಜಗದ್ಗುರುಗಳ ತಾರಿ ಒಸವಣ್ಣನವರ ಜಯಂತಿ ಮಹೋತ್ಸವವು ಎಲ್ಲ ಜನರ ಪ್ರೇಮಾದರಗಳಿಂದಿಗೆ ರಾತ್ರಿ ೭ ಘಂಟೆಗೆ ಮರಳೆ ಮಳಕ್ಕೆ ತಲುಪಿತು ಎಲ್ಲರೂ ಪ್ರಸಾದ ಸ್ವೀಕರಿಸಿದನಂತರ ಈ ದಿನದ ಕಾರ್ಯಕ್ರಮವು ಮುಕ್ತಾಯವಾಯಿತು

ನಿ॥ ಶಾಂತಾಬಾಯಿ ಕಟ್ಟಿಮನಿ,
ಕಾರ್ಯದರ್ಶಿನಿ
ನೀಲಮ್ಮನ ನಿಲಯ

ಶ್ರೀ ಜಗದ್ಗುರು ವಿಶ್ವಾರಾಧ್ಯಗುರುಕುಲ, ಕಾಶಿ

ಪ್ರತಿವರ್ಷ ಪದ್ಧತಿಯಂತೆ ಮಿತಿ ಕಾ ಶ ೧೮೭೨ ವೈಶಾಖ ಶುಕ್ಲ ಅಕ್ಷಯ ತೃತೀಯಾ (ತಾ॥೩೦ ೪ ೫೦) ಗುರುವಾರ ಕಾಶೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹ (ಗುರುಕುಲ)ದಲ್ಲಿ ಕೇದಾರ ವೈರಾಗ್ಯ ವೀರಾಧೀಶ್ವರ ಶ್ರೀಜಗದ್ಗುರು ವಿಶ್ವೇಶ್ವರಿಮಹಾರಾಧ್ಯ ಮಹಾಚಾರ್ಯರ ಜಯಂತ್ಯುತ್ಸವವು ವೈಶಾಖ ಶುಕ್ಲ ಸಂಚಮಿಯಲ್ಲಿ (ತಾ॥ ೩೨ ೪-೫೦) ಶುಕ್ರವಾರದಿಂದ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವವೂ ವಿಜೃಂಭಣೆಯಿಂದ ಜರುಗಿದವು ಇವೆರಡು ಸುದಿನಗಳಲ್ಲಿ ಪ್ರಾತಃಕಾಲ ಪುಣ್ಯಕರ ಗಂಗಾಸ್ನಾನಾದಿಗಳಿಂದಿಗೆ ಶ್ರೀಕೇದಾರನಾಥ ಶಿವಲಿಂಗಕ್ಕೂ, ಶ್ರೀವಿಶ್ವನಾಥ ಶಿವಲಿಂಗಕ್ಕೂ ವೈದಿಕರ ವೇದಮೋಷಗಳಿಂದಿಗೆ ವಿಧ್ಯುಕ್ತವಾಗಿ ರುದ್ರಾಭಿಷೇಕಾದಿಗಳಿಂದ ಪೂಜೆಯು ನಡೆಯಿತು ಮಧ್ಯಾಹ್ನ ಗಣಸಂತರ್ಪಣೆಯಾದ ನಂತರ ಸಂಜೆ ೪-೩೦ ಘಂಟೆಗೆ ಎಶ್ವಾರಾಧ್ಯ ಜ್ಞಾನಮಂದಿರದಲ್ಲಿ ಪಂ॥ ಬ್ರಾ॥ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಕೂಡ್ಲಿಗಿ ಮತ್ತು ಪಂ॥ ಬ್ರಾ॥ ಚಂದ್ರಶೇಖರಶಿವಾಚಾರ್ಯ ಕೊಪ್ಪಳ ಇವರ ಅಧ್ಯಕ್ಷತೆಯಲ್ಲಿ ಯಶ್ಲಿಲ ಸಭೆಗಳು ನಡೆದು ಎನೇಕ ವಿದ್ವಾಂಸರ ಭಾಷಣಗಳಾದ ನಂತರ ರಾತ್ರಿ, ಹರಗುರುಭಜನೆಗಳು ಬಹು ಮನೋಹರವಾಗಿ ಪೂರ್ತಿಗೊಂಡವು

ತಾ॥ ೩೩ ೪ ೫೦ ನೆಯ ರವಿವಾರ ಸಂಜೆ ೪-೩೦ ಘಂಟೆಗೆ ವಿದ್ವತ್ಸಭೆಯದ್ದು ನೇ॥ ಪಂ॥ ಸೋಮಶೇಖರ ಶಾಸ್ತ್ರಿಗಳು ರಾಯಚೂರು ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಸಕುಟುಂಬ ಸಹರಿವಾರದೂಡನೆ ಕಾಶೀಯಾತ್ರೆಗಾಗಿ ಬಂದ ಮಾತ್ತಶ್ರೀ ಸೌ॥ ಪಾರ್ವತಮ್ಮನವರು ಕೆಗೆಗಿ ಬಾಗಲಕೋಟೆ ಇವರ ಭಾಷಣವು ಸ್ತ್ರೀಶಿಕ್ಷಣ ಮೊದಲಾದವರ ಬಗ್ಗೆ ಮನೋಹರವಾಗಿ ಜರುಗಿತು ಅವರ ಮೊಮ್ಮಕ್ಕಳು ಕು॥ ಶ್ರೀ ಸುವರ್ಣಾಮ್ಮ ಮೊದಲಾದ ಬಾಲೆಯರು ಸಮ ನೀತಿಭರಿತವಾದ ಸುಂದರ ಪದಿಗಳಿಂದ ಸಾಮಿಕಿಯವಾಗಿ ಹೇಳಿ ಸರ್ವರಿಗೂ ಸಂತೋಷವನ್ನು ಆನಂದಗೊಳಿಸಿದರು. ಅನಂತರ ಅಧ್ಯಕ್ಷ ಶಾಸ್ತ್ರಿಗಳು ಸಂಸ್ಕಾರವೂ ಸಮಾಜೋಪಕಾರ ಭಾಷಣವಾದ ಒಂದು ಸುದರಿ ಮಾತ್ರದಲ್ಲಿಯವರಿಗೆ ಸಂಪಾದಿಂದ ಸಜ್ಜಾರ ಸಮಾರಂಭವು ಜರುಗಿತ್ತು ಸರ್ವಸಭ್ಯರಿಗೂ ಪ್ರಸಾದ ಸಿನಿಯೋಗವಾದಮೇಲೆ ಕಡೆಗೆ ಮಾತೃಶ್ರೀ ಸೌ॥ ಅನ್ನಪೂರ್ಣಮ್ಮನವರು ಕೆಗೆಗಿ ಇವರು ಒಳ್ಳೆ ಮಂಜುಳವಾಗಿ ಸಂಗೀತವನ್ನು ಸೇವಾಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯರ ಜಯೋತ್ಸವವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು

ಓರ್ವ ಕಾರ್ಯಭಾಗಿ

ಸೂಚನೆ

ಕಾಶೀಕ್ಷೇತ್ರದಲ್ಲಿ ಶಾಸ್ತ್ರಾಧ್ಯಯನಕ್ಕೆಂದು ಬಂದಿದ್ದ ತೆಲುಗುದಾಪ್ರಾಂತಕ್ಕೆ ಸೇರಿದ ಬೀದರ ಜಿಲ್ಲೆಯ ಜಿದರೆ ಗ್ರಾಮದ ಲಿಂಷಸ್ಥಾನದ ಸ್ಥಳದ ಶ್ರೀ ಷ॥ ಬ್ರ॥ ಮಡಿವಾಳ ವಿರಾಪಾರ್ಯರೆನ್ನುವ ವಿದ್ಯಾರ್ಥಿಗಳು ಸೈಲೇ ಬೇನೆಯಿಂದ ಜೈತ್ರ ಕೃ॥ ದಶಮೀ ಬುಧವಾರ (ತಾ॥ ೨೨ ೪ ೫೦) ರಿಂದ ೫೦ ಘಂಟೆಗೆ ಅಕಸ್ಮಾತ್ತಾಗಿ ಶಿವೈಕ್ಯರಾದರೆಂದು ಒರೆಯಲು ಮುಖಾವಿಸಾದ ವೆನಿಸುತಿದೆ ಇವರ ಇಗೆ ಬಂದು ಶ್ರೀಜಗದ್ಗುರು ವಿಶ್ವಾರಾಧ್ಯಗುರುಕುಲದ ಎಲ್ಲ ವಿದ್ಯಾರ್ಥಿಗಳಿಗೆ ಬದುವರ್ಷಗಳಿಂದಲೂ ಇದ್ದುಕೊಂದು ಎಲ್ಲ ವಿದ್ಯಾರ್ಥಿಗಳಿಗೆ ಅನ್ನವಸ್ತ್ರಾದಿಗಳನ್ನು ಕೊಟ್ಟು ಅವರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಮಾಡಿದ್ದರು ಇವರ ಅಗಲುವಿಕೆಯಿಂದ ವಿರಶೈವ ಸಮಾಜಕ್ಕೂ ವಿಶೇಷವಾಗಿ ಅವರ ಆಪ್ತಮಿತ್ರರಾದ ಶಿವ್ಯನರಿಗೂ ಉಂಟಾಗಿರುವ ದುಃಖವನ್ನೋಷಣೆಗಾಗಿ ತಾ॥ ೧೪ ೫ ೫೦ ನೆಯ ದಿನ ಸಾಯಂಕಾಲ ಕಾಶೀ ವೀರಶೈವ ವಿದ್ವತ್ಸಂಘದಲ್ಲಿ ಕೂಡ್ಡಿಗಿ ಷ॥ ಬ್ರ॥ ಗುರುಪಾದೇಶ್ವರ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಶೋಕಸ್ತಾಸಭೆಯು ಜರುಗಿತು ಅನೇಕ ಪಂಡಿತರು ದುಖರ ಬಾದ ಭಾಷಣಗಳನ್ನು ಮಾಡಿದರು ಕಡೆಗೆ ಶಿವೈಕ್ಯರ ಆತ್ಮಕ್ಕೆ ಶಾಂತಿಯನ್ನು ಕೋರಿ ಮೌನದಿಂದ ಭಗವದ್ಧ್ಯಾನವೂ ಗೈದು ಶ್ರೀಜಗದ್ಗುರು ಪಂಚಾಚಾರ್ಯರ ನಾಮಸ್ಮರಣೆಯೊಂದಿಗೆ ಸಭೆಯು ವಿಸರ್ಜಸಲ್ಪಟ್ಟಿತು

ಕಾರ್ಯ ದರ್ಶಿ
ಕಾಶೀ ವೀರಶೈವ ವಿದ್ವತ್ಸಂಘ

ಎಮ್ಮಿಗನೂರು

ಶ್ರೀಮದ್ವಿದ್ಯಾನಗರ ಹಂಪಿ ಖಾನಿರದೇವರು ಎಮ್ಮಿಗನೂರು ಮಹಂತಿನ ಮರದ ಶ್ರೀ ಸದ್ಗುರು ಬಾಲತಪಸ್ವಿ ಗುರುಸಿದ್ಧದೇಶಿಕೇಂದ್ರಶಿವಾಚಾರ್ಯಸ್ವಾಮಿಗಳವರಿಗೆ ಬಹಳ ಕಾಯಿಲೆಯಾಗಿತ್ತು ನಾವು ಈ ವಿಷಯವನ್ನು ಕೇಳಿ ನಿತ್ಯದಲ್ಲಿಯೂ ದಯಾಘನನಾದ ಮೃತ್ಯುಂಜಯ ನನ್ನು ಪ್ರಾರ್ಥಿಸಿ ಬೇಡುತ್ತಿದ್ದೆವೆ ಹೊನ್ನೆ ಗುರುವಾರದೆ ಯೆಂದು ಶ್ರೀಗಳವರ ಆಶೀರ್ವಾದ ಪತ್ರ ನೋಡಿದೊಡ ನೆಯೇ ಆನಂದವೆಂಬ ಸಾಗರದಲ್ಲಿ ಈತಾಡಿದಂತಾಯಿತು ಅನುಷ್ಠಾನಿರತರೂ, ಬಾಲಕಸನ್ಯಾಸಿಗಳೂ, ಶಾಂಭಿತವರೂಪರಾದವರೂ, ಭೀಷ್ಮಬ್ರಹ್ಮಚಾರಿಗಳೂ, ಪಂಡಿತ ಜನ ಶ್ರೇಷ್ಠರೂ, ಬಡವಿದ್ಯಾರ್ಥಿಗಳಲ್ಲಿ ಸಹಾಯ ಶ್ರೇಷ್ಠರೂ, ಬಡವನಲ್ಲಿಯೂ ಬಲ್ಲಿದನಲ್ಲಿಯೂ ಸದಾ ಶ್ರೇಷ್ಠಮಧ್ಯಸ್ಥಿಯುಳ್ಳವರೂ, ಸಚ್ಚವಾದಿಗಳೂ, ಕಾರ್ಯ ಕರ್ತರೂ, ಕನ್ನಡಿಗರೂ, ಕಾಯಿದೆ ಕತ್ತರಿಯೆಯನ್ನು ಳಿಯುವ ಉತ್ತಮ ಲೇಖನ ಕಾರಿಗಳೂ ಆಗಿರುವ ಈ ಮಹಸ್ಥಾನಿಯರಿಗೆ ನೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು 'ಕವಿಕಲಾನಿಧಿ' ಎಂಬ ಪ್ರಶಸ್ತಿಯನ್ನು ಕೊಟ್ಟಿದ್ದರು ಇವರಿಂದ ಪಂಚಾಚಾರ್ಯ ಪ್ರಭಾ ಪತ್ರಿಕೆಯಲ್ಲಿಯೂ, ಅಮರವಾಣಿ ಪತ್ರಿಕೆಯಲ್ಲಿಯೂ, ಶರಣ ಸಾಹಿತ್ಯ ಪತ್ರಿಕೆಯಲ್ಲಿಯೂ ಬರಿತ್ತಿರುವ ಅತಿ ಸುಲಭವಾದ ಕನ್ನಡ ಕವಿತೆಗಳೂ ಲೇಖನಗಳೂ ಎಷ್ಟು ಮನೋಹರವಾಗಿವೆ ಮತ್ತು ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಲಿಂಗೈಕ್ಯ ಲಾವಣೆ ಎಂಬ ಚಿಕ್ಕ ಪುಸ್ತಕವನ್ನು ಬರೆದಿರುವರು ಇದರಲ್ಲಿಯ ಪದ್ಯಗಳು ಎಷ್ಟು ಸಂಸವಾಗಿವೆ ಗಾಳಿ ಬೆಟ್ಟಾಗಲೇ ತೂರಿಕೊಳ್ಳಬೇಕೆಂಬ ಗಾದೆಯ ನಾಡಿನಂತೆ ಒಟ್ಟಾಗಿ ಅವರು ಲೇಖನಗಳನ್ನೂ, ಕವನಗಳನ್ನೂ ಅವಶ್ಯವಾಗಿ ತಿಳಿದುಕೊಳ್ಳತಕ್ಕದ್ದು ಮತ್ತು ಸರ್ವಧಾರಿ ಸಂವತ್ಸರ ಶ್ರಾವಣ ಮಾಸದಲ್ಲಿ ಹೊಸಪೇಟೆ ತಾಲ್ಲೂಕು ಒಟ್ಟಿಗೆ ಶ್ರೀ ಸಂಗಮೇಶ್ವರಸ್ವಲ್ಲಿ ೪೨ ದಿವಸಗಳ ವರೆಗೆ ಇವರು ಉಗ್ರವಾದ ತಪಸ್ಸನ್ನಾ ಚರಿಸಿದರು ಇವರ ಸೇವೆಗೆ ಸಿದ್ಧರಾದ ಒಟ್ಟಿಗೆ ಸಾಹುಕಾರ ಬಸವಲಿಂಗನ ಗೌಡರೂ ವೀರನಗೌಡರೂ ಅತ್ಯಂತ ಭಕ್ತಿಪರಿಷೆ ವಿಶೇಷವಾಗಿ ಅನ್ನ ಸಂತರ್ಪಣೆಯಿತ್ತು ಶ್ರೀಗಳವರ ಆಡ್ಡಪಲ್ಲಕ್ಕಿ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು

ಎನ್ ಎಸ್ ಪಟೇಲ ಗುತ್ತೇದಾರ ರಾಯಚೂರು

ಹುಲಿಯು ಮಾಯುವಾಯಿತೆ ?

ಭಾರಕದಲಿ ಜನ್ಮತಳೆದು
ಭಾರತಕ್ಕೆ ದುಡಿದು ಸತತ |
ಸಾರಸಗ್ಗನಂರಿ ಹುಲಿಯು ಮಾಯುವಾಯಿತೆ ||೧||

ಪಂಚವರ್ಣ ದ್ವಜವ ಸಿಡಿದು
ಹಂಚುತಿರ್ದ ಸಂದೇಶವರು |
ಮಿಂಚಿನಂತೆ ಬೆಳಗಿ ಹುಲಿಯು ಮಾಯುವಾಯಿತೆ ||೨||

ದೇಶಸೇವೆಗಾಗಿ ತನುವ
ನಿಸಾಲಾಗಿ ಇಟ್ಟುಕೊಂಡು |
ಈಶನನ್ನು ಭಜಿಸಿ ಹುಲಿಯು ಮಾಯುವಾಯಿತೆ ||೩||

ಸಿದ್ಧಲಿಂಗಸ್ವಾಮೀವರ್ಯಾದ
ಸಿದ್ಧಿಸಿತ್ತು ನೀನೆಧನ್ಯ |
ಶುದ್ಧ ಕಾಶೀನಾಥ ಹುಲಿಯು ಮಾಯುವಾಯಿತೆ ||೪||

ಸಿದ್ಧಲಿಂಗನ ಸಿದ್ಧಿಯೋಗ
ತಿನಾನಂದನ ರಾಜಯೋಗ |
ವೀರಭದ್ರನ ಕರ್ಮಯೋಗ
ಕಾಶೀನಾಥನ ಭಕ್ತಿಯೋಗ ಬೆಳಗುತಿರುವವು ||೫||

ಕವಿಕಲಾನಿಧಿ ಶ್ರೀ ತಿನಯೋಗಿಯ ತಿಶಿ,
ಮಹಂತಿನಮರ ಎಮ್ಮಿಗನೂರು.

ಲಿಯಾಕತ್-ವಿಜಯಲಕ್ಷ್ಮಿ ಭೇಟಿ

ಅಮೆರಿಕಾದಲ್ಲಿ ಭಾರತದ ರಾಯಭಾರಿಗಳಾದ ಶ್ರೀ॥ ವಿಜಯಲಕ್ಷ್ಮಿಪಂಡಿತರನು ಲಿಯಾಕತ್ ಅಲಿಖಾನ್ ರವರನ್ನು ಭೇಟಿಮಾಡಿದರೆಂದು ತಿಳಿದುಬಂದಿದೆ

ಲಿಯಾಕತ್‌ರವರಿಗೆ ಪಾಕ್ ರಾಯಭಾರಿಗಳ ಸತ್ಕಾರ

ಅಧ್ಯಕ್ಷ ಟ್ರೂಮನ್‌ರವರು ಬಂದಿದ್ದರು

ಲಿಯಾಕತ್ ಅಲಿಖಾನ್ ದಂಪತಿಗಳ ಗೌರವಾರ್ಥ ಅಮೆರಿಕಾದಲ್ಲಿ ಪಾಕಿಸ್ತಾನದ ರಾಯಭಾರಿಗಳಾದ ಇಸ್ಪಹಾನಿ ಮತ್ತು ಅವರ ಪತ್ನಿ ಸ್ವಾಗತ ಸಮಾರಂಭ ವನ್ನೇರ್ಪಡಿಸಿದ್ದರು ಈ ಸಮಾರಂಭಕ್ಕೆ ಅಧ್ಯಕ್ಷ ಟ್ರೂಮನ್, ಅವರ ಮಂತ್ರಿಮಂಡಲದ ಸದಸ್ಯರು, ಶ್ರೀಮತಿ ರೂಸ್‌ವೆಲ್ಟ್, ಸರ್ ಓವನ್ ಡಿಕ್ಸನ್, ಶ್ರೀಮತಿ ವಿಜಯಲಕ್ಷ್ಮಿಪಂಡಿತ್—ಮೊದಲಾದ ಒಟ್ಟು ೧೫೦೦ ಮಂದಿ ಅತಿಥಿಗಳು ಆಗಮಿಸಿದ್ದರು.

Edited, Printed and Published by Brubanmath Mahadevaah at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನವಂಶಜಾತಪಟ್ಟಶಿಕರ ಪಂಚಾಸ್ಯಸಿಂಹಾಧಿಪರ್ । ಪಂಚಕ್ಲೇಶವಿನಾಶಕರ ಪರತರಶ್ರೀಪಂಚಲಿಂಗೇಶ್ವರ್ಯವರ್ । ಪಂಚಾಚಾರಧಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಸಾಲಿಶ್ಚಿದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಶಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ. ಸಂವಾದಕರು—ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೨೪ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ ನೇ ಮೇ ೧೯೫೦ | ಸಂಚಿಕೆ ೪

ಚಿಕ್ಕಮಣ್ಣೂರು

ಲೇಖಕರು—ಶ್ರೀ॥ ಪಂ॥ ಬ್ರ॥ ರೇವಣಸಿದ್ಧ ಶಿವಾಚಾರ್ಯರು,

ಭರತಖಂಡದಲ್ಲೆಲ್ಲಾ ಹೆಸರುವಾಸಿಗಳಾಗಿ ವೀರಶೈವ ಧರ್ಮದ ನಿಜತತ್ವಗಳನ್ನು ಪ್ರಕಾಶಪಡಿಸಿದ ನಾಗನೂರು ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು ಶಿವೈಕ್ಯರಾದರೆಂಬ ವಿಷಯವನ್ನು ಕೇಳಿ ಉಂಬಾದ ದುಃಖೋದ್ಗಾರವನ್ನು ಅವರ ಗುಣಾಗಾನಗಳಿಂದ ಕಡಿಮೆಮಾಡಲೋಸುಗ ಕಣ್ಣೀರಿಂದ ಈ ಲೇಖನವನ್ನು ಒರೆಯಲಾಗಿದೆ

ಮಹನೀಯರೇ, ಸಂಸ್ಕೃತದಲ್ಲಿ ಸಾಂಡಿತ್ಯವನ್ನು ಸಂಪಾದಿಸಿ ಕೇವಲ ಉದರಪೋಷಣೆಗಾಗಿ ಕಾಲಕಳೆಯದ ಭಿಕ್ಷುಬ್ರಹ್ಮಚಾರಿಗಳಾಗಿ ಕಗ್ಗತ್ತಲೆಯಲ್ಲಿದ್ದ ಶ್ರೀಜಗದ್ಗುರು ಪಂಚಪೀಠಗಳನ್ನು ಪ್ರಕಾಶಕ್ಕೆ ತಂದು ವೀರಶೈವ ಧರ್ಮವನ್ನು ಉದ್ಧಾರಮಾಡಿದ ಚಿಜಲ ಕೀರ್ತಿವಂತರು ನೀನೆಯಲ್ಲವೆ

ವಿದ್ಯಾಭಿಮಾನಿಗಳೇ ಜನತೆಗೆ ಇನ್ನು ಮಹೋಪಕಾರ ಸಮ್ಮೋಧರ್ಮಾದರೂ ಇವರು ಸುಧಾರಣೆಗೆ ಬರಲಿಲ್ಲ ವೆಂದೂ ಇಹಲೋಕದಲ್ಲಿ ಅನಾಚಾರಪ್ರವೃತ್ತಿಯ ಜನಗಳೇ ವಿಶೇಷವಿದ್ದು ಬಹು ಕರ್ಮಭೂಮಿಯಲ್ಲಿರುವ ಈ ಜನಾಂಗವೇ ವೇದೆಂದೂ ಕಣ್ಣಾರೆಯಾದಿರಾ ! ಧರ್ಮಧುರಂಧರರೇ ? ತಾವು ದಿವ್ಯದೇಹದಿಂದ ಮರೆಯಾದರೂ ಗ್ರಹವನ್ನು ನೀರಿನಂತೆ ಸೂರೆಮಾಡಿ ಸಾಲ್ಗು ಭಾವೆಗಳಲ್ಲಿ ವೀರಶೈವರತ್ನ, ಸಿದ್ಧಾಂತಶಿಖಾಮಣಿ, ಪಂಚಾಚಾರ್ಯ ಪ್ರಾಚೀನತ್ವ ಇವೇ ಮೊದಲಾದ ೫೦ ಉತ್ತಮ ಗ್ರಂಥಗಳನ್ನು ಪ್ರಕಟಿಸಿ ವೀರಶೈವ ಧರ್ಮದ ನಿಜತತ್ವಗಳನ್ನು ಪ್ರಕಾಶಕ್ಕೆ ತಂದವರು ನೀನೆಯಲ್ಲವೆ ?

ಬಹು ಕೀರ್ತಿಶಾಲಿಗಳಾದ ಪಂಡಿತರೇ—ಜಗತ್ತಿನಲ್ಲಿ ಸೂರ್ಯಚಂದ್ರಾದಿಗಳು ಎಲ್ಲಿಯವರೆಗೆ ಬೆಳಗುತ್ತಿರೋ, ಅಲ್ಲಿಯ ವರೆಗೆ ತಮ್ಮ ಪವಿತ್ರ ನಾಮವನ್ನು ಕೇಳಿದಿರು ವವರೇ ಇಡಿಮೆ. ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ಸೋಮವಾರ ಪ್ರಾಚೀಶಾಲಾಲಿಂಗೈಕ್ಯರಾದರೆಂದು ರೇಡಿಯೋದಂತೆ ಗ್ರಾಮಗ್ರಾಮಕ್ಕೆ ತಾರುಗಳು ಬಂದಾ ಕ್ಷಣವೇ ಅಸ್ತಿಕ್ಯರು ಹಡಿದ ತಾಯಿತಂದೆಗಳು ಮರಣ ಹೊಂದಿದರೂ ದುಃಖವಾಡಿರಲಿಕ್ಕಿಲ್ಲ ಅಂತೆಯೇ ಎಲ್ಲಿ ನೋಡಿದರೂ ಸ್ತ್ರೀಪುರುಷರು ಗೋಡೆಯಮೇಲೆ ಬರೆದ ಗೊಂಬೆಯಂತೆ ವಿಸ್ಮಯವುಳ್ಳವರಾಗಿ ಕಣ್ಣೀರಿನ ಸುರಿ ಮಳೆಯನ್ನು ಸುರಿದರು. ತಾವು ಲಿಂಗೈಕ್ಯರಾದ ತಾ॥ ೨೭-೨-೫೦ ನೇ ಸೋಮವಾರ ತಮ್ಮ ಪೋಟೋಗೆ ಹೂಮಾಲೆಗಳನ್ನು ಹಾಕಿ ಪೂಜಗೊಳಿಸಿ ಈ ಪುಣ್ಯ ತಿಥಿಯನ್ನು ಪ್ರತಿವರ್ಷಗಳಲ್ಲಿಯೂ ತಪ್ಪದೇ ಮಾಡ ಬೇಕೆಂದು ನಿರ್ಧರಿಸಿ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿರಿಸಿ ಬ್ಯಾಂಡು, ಭಜಂತ್ರಿ ಕಹಳೆ ಮೊದಲಾದ ವಾದ್ಯಗ ಳೊಡನೆ ಮಹೋತ್ಸವಮಾಡಿ ನೀವು ಜೀವಮಾನದಲ್ಲಿ ಮಾಡಿದ ಸ್ಮಮಹತ್ಕಾರ್ಯ ಹಾಗೂ ನಿಮ್ಮಲ್ಲಿರುವ ಶಿಸ್ತು, ಸತ್ಯತನ ಸ್ವಾಮಾನಿಕತನ ಧರ್ಮಭೀತಗಳಲ್ಲಿದ್ದ ಶ್ರದ್ಧೆ ಇವೇ ಮೊದಲಾದ ಗುಣಾತಿಶಯಗಳನ್ನು ಸಭೆ ಯಲ್ಲಿ ವ್ಯಾಖ್ಯಾನಮಾಡಿದ್ದಲ್ಲದೆ ಪಂಚಾಕ್ಷರೀಮಂತ್ರ ದಿಂತೆ ಜಪಿಸಲೋಸುಗ ಎಷ್ಟೋ ಜನರು ನಿಮ್ಮ ಸಮ್ಮುಣಗಳನ್ನು ಬರೆದುಕೊಂಡು ಇಟ್ಟುಕೊಂಡಿರುವರು ದೇವಾ

ಕವಿರತ್ನ ಭೂಷಣರೇ, "ಸುಕ್ಕುತೀಗತಾಯುಃ" ಎಂಬಂತೆ ತಾವು ಕೆವಿಗಳು ಕೇಳಸದಂತೆ, ಕೈತಾಲಿಗಳು ಒಂದೇಸರುತ್ತೆ ನಡಗುತ್ತ, ಕಾಗಲಹಣ್ಣಿನಂತೆ ಬಹು ವೃದ್ಧರಾಗಿ ಹೋಗಿದ್ದರೆ ಜನತೆಗೆ ಇನ್ನು ಸಂತಾಪ ಆಗುತ್ತಿರಲಿಲ್ಲಾ. ಪ್ರಜ್ಞಾತ್ಮರಾದ ನೀವು ೨೫ ನೆಯ ವರ್ಷಗಳಲ್ಲಿಯೇ ಆಗಲಿದ್ದರಿಂದ ಸಮಾಜಕ್ಕೆ ಈ ಪರಿವ್ಯಸನವುಂಟಾಗಿದೆ ಯಾಸಿಗೆ ಹಿಡಿದು ಸಂಡಿಕರು ಉಳಿಯುವಂತೆ ಇಲ್ಲ, ಈ ಪ್ರಸಂಗವಲ್ಲಿ ಉಳಿದರೆ ಹುಟ್ಟಿಸಿಂವಂತೆ ಎಂದು ಪಂಚಾಚಾರ್ಯ ಪ್ರಭೆಯಲ್ಲಿ ಒಂದು ಲೇಖವು ಮೊರೆಟ್ಟಿದರೆ ಸಾಕು ಶ್ರೀ ಜಗದ್ಗುರು ಸಿಂಹಾಸನಾಧೀಶ್ವರರು, ಪಟ್ಟಚಂದ್ರಿಕಾದಿಗಳು, ಹಾಗೂ ಗುರುಭಕ್ತರು ಭೆಟ್ಟಿಯಾಗಿ ಪರಸ್ಪರ ಹೇಳುವದು ಕೇಳುವದು ನಡೆದು ಮೈಸೂರು ದೈಲ್ಕೆ ಗಾಡಿಗಳು ಹಿಡಿಸದಷ್ಟು ಜನಗಳು ಒಂದು ಅಂತ್ಯದರ್ಶನ ಪಡೆಯು ತ್ತಿದ್ದರು ಯಾವ ಮಹತ್ಕರ ರೋಗವಿಲ್ಲದೆ ಶ್ರೀ ಲೋಕ ಮೌನ್ಯ ಮಹಾತ್ಮರಾದ ಗಾಂಧಿಮಹಿಮರಿಗೆ ಹಾಪಿಯಾದ ಗೋಡ್ಸೆ ಗುಂಡುಹಾಕಿದಂತೆ ತಮಗೆ ಆಕಸ್ಮಿಕ ಮರಣವು ಪ್ರಾಪ್ತವಾಯಿತು ರಾಷ್ಟ್ರದಲ್ಲಿ ಮಹಾತ್ಮರ ಕೀರ್ತಿ ಪ್ರಜ್ವಲಿಕವಾಗಿಯೇ ಉಳ್ಳು

ನಾಚಿಕಮಹಾಶಯರೇ ಇಂಥ ಪುತ್ರರತ್ನ ಜನಿಸಿದ ನಾಗನೂರು ಗ್ರಾಮವು ಹಾಗೂ ಪಿತೃಮಾತಾದಿಗಳಾದ ಶ್ರೀ ವೇ॥ ಸಿದ್ಧೇಶ್ವರಯ್ಯನವರ ಶ್ರೀ ನಾಗವ್ವನವರ ಜನ್ಮನೇ ಸಾವನ್ನವಾದದ್ದು ಇವರೇ ಧನ್ಯರು. ಶ್ರೀ ಮಾರ್ಕಂಡೇಶ್ವರನು ಅಲ್ಪವಯಸ್ಸಿನಲ್ಲಿ ತನಗೆ ಪ್ರಾಪ್ತವಾದ ಯಮಶಾಸನವನ್ನು ತಿವಳಕ್ತಿಪ್ರಭಾವದಿಂದ ಮೀರಿ ತಂದೆಯಾದ ಮೃಕಂಡುವಿನ ಹೆಸರು ಲೋಕದಲ್ಲಿ ಪ್ರಜ್ವಾತಿಗೆ ಹೇಗೆ ಕಾರಣವಾಯಿತೋ, ಹಾಗೆಯೇ ಪಂಡಿತ ಯತಿಕುಲತಿಲಕರು ಜನ್ಮತಾಳ ಪಂಡಿತರಂಗಿ ಕೀರ್ತಿಶಾಲಿಗಳಾದ ಮಾತ್ರದಿಂದಲೇ ತಂದೆತಾಯಿ ಯರ ಹೆಸರು ಇಡೀ ಭಾರತೀಯರಿಗೆ ಗೊತ್ತಾಯಿತು ಇಂತಹ ಪಂಡಿತರಿಗೆ ಶ್ರೀಜಗದ್ಗುರು ಪಂಚಾಚಾರ್ಯರ ಅಮಗ್ರಹದಿಂದ ಪರಿಚಿನು ಮೋಕ್ಷವನ್ನೀಯಲೆಂದೂ ಹಾಗೂ ಯಾವತ್ತೂ ಅಪ್ತಬಂಧುಗಳಿಗೆ ದುಃಖ ಹೋಗಲಾಡಿಸಿ ಸುಖಶಾಂತಿ ಕೊಡಲೆಂದೂ ಈ ಕಣ್ಣೀ ರೆಂಬ ಲೇಖಕ್ಕೆ ವಿರಾಮಕೊಡುತ್ತೇನೆ.

ತಪಾಪುರ

ಬೆಳಗಾಂವ ಶಹಪುರ ಗ್ರಾಮವಿನಾಸಿಗಳಾದ ಚ-ಗು-ಉರಬೆಟ್ಟಿ ಸಜ್ಜನ ಇವರು ತೆಲರು-ತೋರಣಗಳಿಂದಲಂ ಕೃತವಾದ ತಮ್ಮ ಗೃಹದಲ್ಲಿ ಇದೇ ವೈ॥ ಶು॥ ೩ ಗುರು ವಾರ ದಿವಸ ಶ್ರೀ ವಿಶೇಷಾಮಾಹೇಶ್ವರ ಜಯಂತಿ ಯನ್ನೂ ಶು॥ ೫ ಶನಿವಾರ ಶ್ರೀ ವಿರುಕಾಚಾರ್ಯರ ಜಯಂತಿಯನ್ನೂ ನೈಷನದಿಂದ ನೆರವೇರಿಸಿದರು ವೇ॥ ಚೆನ್ನಯ್ಯಸ್ವಾಮಿ ಚೆಂಗೋಳಿಮಠ ಇವರ ವೈದಿಕತ್ವ ದಲ್ಲಿ ಆಯಾಯ ದಿವಸ ಪ್ರಾತಃಕಾಲದಲ ೪ ಘಂಟೆಗೆ ಲಿಂಗೋದ್ಭವಮೂರ್ತಿಯ ಛಾಯಚಿತ್ರಕ್ಕೆ ಅಭ್ಯಂಜ ಪಾದ್ಯಾದಿ ಷೋಡೋಪಚಾರಂಗಳಿಂದ ಪೂಜಿಸಿ ಸಹಸ್ರ ಬಿಲ್ವಾರ್ಚನೆಯಾನಂತರ ಸುಮಂಗಲೆಯರಿಂದ ಜಗವಾ ಚಾರ್ಯರ ಮಂಗಲವನ್ನು ಪಾಡಿ ಆಲ್ಲಿ ಆಗುಮಿಸಿದ್ದ ಯಾವತ್ತೂ ಜನರಿಗೆ ಪ್ರಸಾದನನ್ನೂ ಮುತ್ತೈದಿಯರಿಗೆ ಉಡಿಕಿಣ, ಕುಂಕುಮಗಳನ್ನೂ ಏರ್ಪಾಟಾಗಿತ್ತು ನಂತರ ಮಧ್ಯಾಹ್ನ ೧೫ ಘಂಟೆಗೆ ತಮ್ಮ ಒಂಭಬಳಗದೊಡನೆ ಜಂಗಮರಿಗೆ ಅನ್ನಸಂತರ್ಪಣೆಯನ್ನು ಮಾಡಿ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಜಯಂತಿಯ ಹಬ್ಬವನ್ನು ನೆರವೇರಿಸಿದರು

ಓರ್ವ ದರ್ಶನಭಾಗಿ

ಸನಾತನ ಧರ್ಮಬೋಧ ಸರ್ಕೀಟಿನ ಶುಭಾಗಮನ ಪ್ರೋಣಿ

ಧಾರವಾಡ ಜಿಲ್ಲಾ ಗದಗ ತಾಲ್ಲೂಕ ಪೈಕಿ ಪ್ರೋಣಿ ಗ್ರಾಮಕ್ಕೆ ಗದಗ ಶ್ರೀಜಗದ್ಗುರು ರೇಣುಕಾಚಾರ್ಯ ಮಂದಿರ ಗುರುಕುಲಪ್ರಾಚಕರೂ, ಧರ್ಮಬೋಧ ಶಿರೋಮಣಿ ಪದವೀಭೂಷಿತರೂ ಆದ ಶ್ರೀ॥ ಪೆ॥ ಬ್ರ॥ ಪಂಡಿತ ರೇವಣಸಿದ್ಧಶಿವಾಚಾರ್ಯಸ್ವಾಮಿಗಳು ಗುರು ಸಂಸ್ಥಾನ ಬೃಹನ್ಮಠ ಚಿಕ್ಕಮಣ್ಣೂರು ಇವರು ಸಕಲ ಸಿಬ್ಬಂದಿ ಸಮೇತರಾಗಿ ದಯಮಾಡಿಸಿದರು ಗ್ರಾಮದ ಪ್ರಮುಖರಾದ ಶ್ರೀಮಾನ್ ವಿರೂಪಾಕ್ಷಗೌಡರು ಪಾಟೀಲ ಇವರ ಮನೆಯ ಮುಂಭಾಗದ ಬೈಲಿನಲ್ಲಿ ತಾ॥ ೧೧ ೪ ೫೦ ನೇ ದಿವಸ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ಕನ್ನಡ ಶಾಲೆಯ ಅಸಿಸ್ಟೆಂಟ್ ಡೆಪ್ಯುಟಿ ಸಾಹೇಬರು ಆಗಮಿಸಿದ್ದರು ಸ್ವಾಮಿಗಳವರು ಸಂಗೀತ ಸಾಹಿತ್ಯದೊಡನೆ ಶ್ರೀಜಗದ್ಗುರು ಪಂಚಾ ಚಾರ್ಯರು ವೀರಶೈವ ಧರ್ಮಪ್ರಸಾರ ಮಾಡಿದ ಬಗ್ಗೆ ಎಲ್ಲ ಜನರಿಗೆ ತಿಳಿಯುವಂತೆ ಸರಳ ಭಾಷೆಯಲ್ಲಿ ಹೇಳಿ ದರು ಮಧ್ಯಪಾನಮಾಡಿ ತರೀರಧರ್ಮವನ್ನು ಕೆಡಿಸಿ ಕೊಳ್ಳಬಾರದೆಂದೂ ಹೀನಕರವಾದ ಬೀಡಿ, ಸಿಗರೇಟು, ಬಕ್ಕಿ, ವಗೈರೆ ಸೇದಲಾಗದೆಂದೂ, ವಕ್ಕಲಿಗರಾದ ನೀವು ಗಳು ತುಪ್ಪ, ಹಾಲು, ಗೋಧಿ, ಜೋಳದ ಪದಾರ್ಥ ಗಳನ್ನೇ ಸೇವಿಸಿ ಇಂದ್ರಿಯಸಾರ್ಮರ್ಥ್ಯವೃದ್ಧರಾಗಿರ ಬೇಕೆಂದೂ ಒಳ್ಳೆ ಪರಿಣಾಮಕಾರಿಯಾಗುವಂತೆ ಬೋಧ ಮಾಡಿದ್ದಲ್ಲದೆ ಕನ್ನಡಿಗರಾದ ನಾವೆಲ್ಲರೂ ಕರ್ನಾಟಕ ವಿಶೇಷಣ ಹಾಗೂ ರಾಷ್ಟ್ರೀಯತ್ವ ಇವುಗಳನ್ನು ಮುಖ್ಯ ಧೇಯವನ್ನಾಗಿಟ್ಟುಕೊಂಡು ಯಾವತ್ತೂ ತಮ್ಮ ತಮ್ಮ ಧರ್ಮಕ್ಷೇತ್ರಗಳನ್ನು ಕಾಪಾಡಿಕೊಳ್ಳಬೇಕೆಂದು ಬೋಧ ಮಾಡಿದನಂತರ ಮಂಗಲದೊಡನೆ ಸಭೆಯು ಸಮಾಪ್ತ ವಾಯಿತು.

ಶಿಷ್ಯ, ಪೋಸ್ಟ್‌ಮಾಸ್ತರ ಪ್ರೋಣಿ.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮತಳೆದು ೧೯೫೫ ಏಪ್ರಿಲ್ ೧೫ ನೆಯ ತಾರೀಖಿಗೆ ೩೩ ವರ್ಷಗಳು ತುಂಬಿ ೩೪ ನೆಯ ವರ್ಷವು ಪ್ರಾರಂಭವಾಗಿರುವುದು. ವರ್ಷಾರಂಭದಿಂದ ಈ ಪತ್ರಿಕೆಯನ್ನು ಚಂದಾದಾರರಿಗೆ ಕಳುಹಿಸಲಾಗುತ್ತಿರುವ ವಿಷಯವನ್ನು ತಿಳಿಸಿ, ಚಂದಾ ಹಣವನ್ನು ಕಳುಹಿಸಿಕೊಡಬೇಕೆಂದು ಕೋರಿ ಪತ್ರಗಳನ್ನು ಬರೆಯಲಾಗಿತ್ತು. ಆದರೆ ಇದುವರೆಗೂ ಸುಮಾರು ೧೫೦ ಜನ ಚಂದಾದಾರರು ಚಂದಾ ಹಣವನ್ನು ಕಳುಹಿಸಿಕೊಟ್ಟಿರುವುದಿಲ್ಲ. ಆದ್ದರಿಂದ ಈ ಪತ್ರಿಕೆಯನ್ನು ಮುಂದಕ್ಕೆ ಕಳುಹಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ. ಆದ್ದರಿಂದ ಚಂದಾದಾರರೆಲ್ಲರೂ ತಕ್ಷಣವೇ ಚಂದಾ ಹಣವನ್ನು ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

ಚಂದಾದಾರರಲ್ಲಿ ಕೆಲವರು ತಮ್ಮ ವಿಳಾಸವನ್ನು ಬದಲಾಯಿಸಿರುವುದರಿಂದ ಪತ್ರಿಕೆಯು ಸರಿಯಾಗಿ ತಲುಪುತ್ತಿಲ್ಲವೆಂದು ತಿಳಿದುಬಂದಿದೆ. ಆದ್ದರಿಂದ ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸಿದಾಗ ಕೂಡಲೇ ತಿಳಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

ಚಂದಾದಾರರಲ್ಲಿ ಕೆಲವರು ಪತ್ರಿಕೆಯು ಸರಿಯಾಗಿ ತಲುಪುತ್ತಿಲ್ಲವೆಂದು ಪತ್ರಗಳನ್ನು ಬರೆದಿರುತ್ತಾರೆ. ಆದ್ದರಿಂದ ಪತ್ರಿಕೆಯನ್ನು ಕಳುಹಿಸಿಕೊಡುವ ವಿಷಯವಾಗಿ ಪತ್ರಿಕಾ ಕಛೇರಿಯಲ್ಲಿ ಒಂದು ಪುಸ್ತಕವನ್ನು ಇಟ್ಟಿರುತ್ತೇವೆ. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸಿದಾಗ ಕೂಡಲೇ ಈ ಪುಸ್ತಕದಲ್ಲಿ ಬದಲಾಯಿಸಿದ ವಿಳಾಸವನ್ನು ಬರೆಯಿಸಿಕೊಳ್ಳುತ್ತೇವೆ. ಆದ್ದರಿಂದ ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸಿದಾಗ ಕೂಡಲೇ ಕಛೇರಿಗೆ ತಿಳಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

ಚಂದಾದಾರರಲ್ಲಿ ಕೆಲವರು ಪತ್ರಿಕೆಯ ಚಂದಾ ಹಣವನ್ನು ಕಳುಹಿಸಿಕೊಟ್ಟಿರುವುದಿಲ್ಲ. ಆದ್ದರಿಂದ ಚಂದಾ ಹಣವನ್ನು ಕಳುಹಿಸಿಕೊಡಬೇಕು. ಚಂದಾ ಹಣವನ್ನು ಕಳುಹಿಸಿಕೊಡಲು ಅನುಕೂಲವಾಗುವಂತೆ ಪತ್ರಿಕೆಯ ಮುಖಪುಟದಲ್ಲಿ ಒಂದು ಮನಿಯಾರ್ಡರ್ ಫಾರಂ ಅನ್ನು ಮುದ್ರಿಸಲಾಗಿದೆ. ಆದ್ದರಿಂದ ಚಂದಾದಾರರೆಲ್ಲರೂ ಕೂಡಲೇ ಈ ಫಾರಂ ಅನ್ನು ಉಪಯೋಗಿಸಿಕೊಂಡು ಚಂದಾ ಹಣವನ್ನು ಮನಿಯಾರ್ಡರ್ ಮಾಡಿಸಿ ಕಳುಹಿಸಬೇಕು. ಚಂದಾ ಹಣವನ್ನು ಕಳುಹಿಸಲು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಂಚೆಯಾಫೀಸಿನಲ್ಲಿ ಚಂದಾದಾರರ ಹಣವನ್ನೆಲ್ಲಾ ಒಟ್ಟುಮಾಡಿ ಒಂದೇ ಸಾರಿಗೆ ಪ್ರಭಾಕರ ಕಛೇರಿಗೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡಿಸುವುದರಿಂದ ಪತ್ರಿಕಾ ಕಛೇರಿಯ ಕೆಲಸಗಾರರಿಗೂ ಚಂದಾದಾರರಿಗೂ ಅನುಕೂಲವಾಗುವುದು. ಆದ್ದರಿಂದ ಚಂದಾದಾರರೆಲ್ಲರೂ ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಚಂದಾ ಹಣವನ್ನು ಕಳುಹಿಸಿಕೊಡ

ಸಚಿವಮಂಡಲಿ

ಪಂಡಿತ್ ನೆಹರೂರವರು ಮಹಾಪ್ರಧಾನರು

೧ ಸರ್ದಾರ್ ವಲ್ಲಭಭಾಯಿಪಟೇಲ್
೨ ಮೌ|| ಅಬುಲ್ ಕಲಂ ಆಜಾದ್
೩ ಡಾ|| ಜಾನ್ ಮ್ಯಾಥೈ
೪ ಸರ್ದಾರ್ ಬಲದೇವಸಿಂಗ್
೫ ಶ್ರೀ ಜಗಜೀವನ್‌ರಾಮ್
೬ ಶ್ರೀ ರಫಿ ಅಹಮ್ಮದ್ ಕಿದ್ವಾಯಿ
೭ ರಾಜಕುಮಾರಿ ಅಮೃತ್‌ಕೌರ್
೮ ಡಾ|| ಅಂಬೇಡ್ಕರ್
೯ ಶ್ರೀ ಎಸ್ ವಿ ಗಾಡ್ಗಿಲ್
೧೦ ಶ್ರೀ ಎನ್ ಗೋಪಾಲಸ್ವಾಮಿ ಅಯ್ಯಂಗಾರ್
೧೧ ಶ್ರೀ ಜೈರಾಂದಾಸ್ ದೌಲತ್‌ರಾಂ
೧೨ ಶ್ರೀ ಕಿದಿಕ್ಕಸ್ವಾಮಿಹಾಬ್
೧೩ ಶ್ರೀ ಕೆ ಎಂ ಮುನ್ಷಿ

ಮಿನಿಸ್ಟರ್ಸ್ ಆಫ್ ಸ್ಟೇಟ್

ಶ್ರೀ ಸಿ ಸಿ ಬಿಸ್ವಾಸ್
ಶ್ರೀ ಮೋಹನ್‌ಲಾಲ್ ಸಾಕ್ಸೇನಾ
ಶ್ರೀ ಕೆ ಸಂತಾನಂ
ಶ್ರೀ ಆರ್ ಆರ್ ದಿವಾಕರ್
ಶ್ರೀ ಸತ್ಯನಾರಾಯಣಸಿಂಹ

ಡೆಪ್ಯುಟಿ ಸಚಿವರು

ಶ್ರೀ ಕುರ್ಷಿದ್‌ಲಾಲ್ ಮತ್ತು ಡಾ|| ಬಿ ವಿ ಕೇಸ್ಕರ್ ರವರನ್ನು ಡೆಪ್ಯುಟಿ ಸಚಿವರನ್ನಾಗಿ ನೇಮಿಸಲಾಗಿದೆ

ವಿಶ್ವದಲ್ಲೆ ಅತಿ ದೊಡ್ಡ ಚುನಾವಣೆ

ಮುಂದಿನ ನೋ ಒಳಗೆ ಮುಗಿಯುವ ನಿರೀಕ್ಷೆ

ಭಾರತ ಪಾರ್ಲಿಮೆಂಟ್ಗೂ, ಸಂಸ್ಥಾನಗಳ ಶಾಸನ ಸಭೆಗಳಿಗೂ ನಡೆಯಲಿರುವ ಮಹಾ ಚುನಾವಣೆಗಳಲ್ಲಿ ೧೭೦ ಮಿಲಿಯನ್ ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸುವರು ಈ ಚುನಾವಣೆಯು ವಿಶ್ವದಲ್ಲೇ ಅತಿ ದೊಡ್ಡದು ಆರಿಂಕ್ಷಿತ ಫಲಿತಗಳೇನೂ ಜರುಗದಿದ್ದರೆ ೧೯೫೧ ನೇ ಮೇ ತಿಂಗಳ ಅಂತ್ಯದ ವೇಳೆಗೆ ಮಹಾಚುನಾವಣೆಗಳು ಮುಕ್ತಾಯಗೊಳ್ಳುವುವು ಎಂಬುದಾಗಿ ಭಾರತದ ಚೀಫ್ ಎಲೆಕ್ಷನ್ ಕಮಿಷನರಾಗಿರುವ ಶ್ರೀ ಎಸ್ ನೆನ್ಸೆರವರು ಪತ್ರಿಕಾ ಸಮ್ಮೇಳನದಲ್ಲಿ ಹೇಳಿದ್ದಾರೆ

ಅನೇಕ ಸಂಸ್ಥಾನಗಳಲ್ಲಿ ಈಗಾಗಲೇ ಚುನಾವಣೆಗೆ ಪಟ್ಟಿಗಳು ಸಿದ್ಧವಾಗಿವೆ ಇಪ್ಪತ್ತೊಂದೆ ಪಾರ್ಲಿಮೆಂಟಿನಲ್ಲಿ ಅಂಗೀಕಾರವಾದ ಪೀಪಲ್ಸ್ ಆಕ್ಟಿನ ಪ್ರಕಾರ ಮತದಾನದ ಹಕ್ಕುಗಳನ್ನು ಇನ್ನೂ ಸಡಿಲಿಸಿರುವುದರಿಂದ ಮತ್ತೆ ೬೭ ಮಿಲಿಯನ್ ಜನರು ಮತದಾನದ ಹಕ್ಕು ಪಡೆಯುವರ ಎಂದು ಸಹ ಶ್ರೀ ಸೇನ್ ತಿಳಿಸಿದ್ದಾರೆ

ಮೂರನೇ ಮಹಾಯುದ್ಧ

ಅಧ್ಯಕ್ಷ ಟ್ರೂಮನ್ನರ ಹೇಳಿಕೆ

ಪ್ರಪಂಚದ ಇತರ ರಾಷ್ಟ್ರಗಳೊಡನೆ ಅಮೆರಿಕವು ಯಾವರೀತಿ ಸಂಬಂಧಮಿಟ್ಟುಕೊಂಡಿರಬೇಕೆಂಬ ನೀತಿಯು ಇನ್ನು ಕೆಲವು ತಿಂಗಳಲ್ಲಿ ನಿರ್ಧಾರವಾಗಲಿದೆ ಮೂರನೇ ಮಹಾಯುದ್ಧವಾಗುವುದೇ ಇಲ್ಲವೇ ಎಂಬುದು ಆನೆರಿಕದ ಈ ನಿರ್ಧಾರವನ್ನ ವಲಂಬಿಸಿದೆ ಎಂದು ಹೇಳಿದರು

ಜಗತ್ತಿನ ಶಾಂತಿಸ್ಥಾಪನೆಗಾಗಿ ಆಟಂಬಾಂಬಿನ ಪ್ರಯೋಗ

ಅಮೆರಿಕದ ಅಧ್ಯಕ್ಷ ಟ್ರೂಮನ್ನರ ಘೋಷಣೆ

ಪಶ್ಚಿಮ ಪೆಸಿಫಿಕ್ ತಾಳದಲ್ಲಿರುವ ಬಿಕಿನಿ ದ್ವೀಪದಲ್ಲಿ ೧೯೪೬ ರಲ್ಲಿ ಜಪಾನಿನ ಹಿರೋಷಿಮಾ ನಗರದ ಮೇಲೆ ಪ್ರಥಮಬಾರಿ ಆಟಂಬಾಂಬ್ ಹಾಕಲು ಆಜ್ಞೆಮಾಡಿದ್ದೆನು. ಅಂತಹ ಪರಿಸ್ಥಿತಿಯೇ ಮತ್ತೆ ಕರೆದೋಡಿದರೆ, ಆಟಂಬಾಂಬನ್ನು ಮತ್ತೆ ಪ್ರಯೋಗಿಸಲು ಆಜ್ಞೆಮಾಡುತ್ತೇನೆ—ಎಂಬುದಾಗಿ ಫ್ಲೋರಿಡ್ಸೋದಲ್ಲಿ ಸಚಿವರ ಭಾರಿ ಬಹಿರಂಗಸಭೆಯಲ್ಲಿ ಭಾಷಣಮಾಡಿತ್ತಾ ಅಧ್ಯಕ್ಷ ಟ್ರೂಮನ್‌ರವರು ಹೇಳಿದರು

ಜಗತ್‌ಕಾಂತಿಗಾಗಿ ಆಟಂಬಾಂಬಿನ ಉಪಯೋಗ

ನ್ಯೂಮೆಕ್ಸಿಕೋದಲ್ಲಿ ೧೯೪೫ ನೆಯ ಜುಲೈ ತಿಂಗಳಲ್ಲಿ ಆಟಂಬಾಂಬಿನ ಪರೀಕ್ಷಾ ಪ್ರಯೋಗ ನಡೆದಾಗ ಈ ಹೊಸ ಸಂಶೋಧನೆಯನ್ನು ಜಗತ್ತಿನ ಶಾಂತಿಸ್ಥಾಪನೆ ಮಾಡುವ ಉದ್ದೇಶಕ್ಕೆ ಉಪಯೋಗಿಸಬೇಕೆಂದು ನಿರ್ದಾರಿಸಿದ್ದೆನು ಈ ಮಹೋನ್ನತ ಪ್ರಬಲ ಶಕ್ತಿಯನ್ನು ಜಗತ್‌ಶಾಂತಿಗಾಗಿ ಉಪಯೋಗಿಸಬೇಕೆಂಬ ನನ್ನ ಅಂದಿನ ನಿರ್ಧಾರವನ್ನು ಬದಲಾಯಿಸುವಂತಹ ಯಾವ ಘಟನೆಗಳೂ ಇದುವರೆಗೆ ನಡೆದಿಲ್ಲ

ಇತ್ತೀಚಿನ ಶಂಶೋಧನಾ ಪ್ರಯೋಗಗಳಿಂದ ಅಣು ಶಕ್ತಿಯನ್ನು ಹಿಡಿಗು ವಿಮಾನ ಮತ್ತು ಬಾರಿ ಭಾರಿ ಯಂತ್ರಗಳನ್ನು ನಡೆಸಲಿಕ್ಕೆ ಈ ಮಹಾಶಕ್ತಿಯನ್ನು ಉಪಯೋಗಿಸಬಹುದು ಅಮೆರಿಕಾದಲ್ಲಿ ಅಣುಶಕ್ತಿ ಯಿರುವುದರಿಂದ ಅಮೆರಿಕವು ಜಗತ್-ಶಾಂತಿಗಾಗಿ ಪ್ರಯತ್ನಿಸಲು ವಿಶೇಷ ಸಹಕಾರಿಯಾಗಿದೆ ಎಂದು ಹೇಳಿದರು

ಮೋಟಾರಿನೊಡನೆ 'ವಾಸದ ಮನೆ'ಯನ್ನೂ ಕೊಂಡೊಯ್ಯುವರು

ವಸಂತ ಮತ್ತು ಗ್ರೀಷ್ಮಋತುಗಳಲ್ಲಿ ಅಮೆರಿಕಾದಲ್ಲಿ ಮೋಟಾರ್‌ಕಾರ್ ಹೊಂದಿರುವಂತಹ ಸಾವಿರಾರು ಮಂದಿ ದೇಶದ ಎಲ್ಲ ಕಡೆಗಳಲ್ಲಿಯೂ ವಿಹಾರಾರ್ಥವಾಗಿ ಪ್ರವಾಸ ನಡೆಸುವರು ಹಾಗೆ ಮೋಟಾರಿನಲ್ಲಿ ಆನು ಹೋಗು ವಾಗ, ತಮ್ಮ ಪ್ರವಾಸದಲ್ಲಿ ತಮಗೆ ಮಲಗಲು, ಊಟ ಉಪಚಾರ ಹೊಂದಲು ಮತ್ತು ಇತರ ಎಲ್ಲ ಸೌಲಭ್ಯ ಹೊಂದಲು ತಮ್ಮ ಮೋಟಾರಿನ ಹಿಂದೆ ಉದ್ದವಾದ "ಟ್ರೈಲರ್" ಕಾರನ್ನು ಜೋಡಿಸಿಕೊಂಡು ಹೋಗು ವರು ಈ ಕಾರಿನಲ್ಲಿ ಸಾಲು ಕೋಡಿಗಳೆದ್ದು, ಒಳ ಆಡಿ ಉದ್ದವಿರುವಂತೆ ಅದರಲ್ಲಿ ಅಡಿಗೆ, ಊಟ, ಮಲಗುವದು, ಆರಾಮಪಡೆಯುವದು ಇತಕೆಲ್ಲಿ ಸೌಲಭ್ಯವಿದೆ

ಎರಡು ವರ್ಷಗಳಲ್ಲಿ ೧೨೦೦ ಕೊಲೆಗಳು

ಹೈದರಾಬಾದಿನಲ್ಲಿ ನಡೆದ ದುರಂತ

ಕಾಸಿಂ ರಜ್ವಿ ಮತ್ತು ಲಾಯಕ್ ಅಲಿ ಮಂತ್ರಿಮಂಡಲದ ಒಟ್ಟು ೧೭ ಜನರ ಮೇಲೆ ತೂಡಿದ್ದ ಸೂಕ ದ್ದಮೆಯು ಮೇ ೮ ರಲ್ಲಿ ವಿಶೇಷ ನ್ಯಾಯಾಸ್ಥಾನದಲ್ಲಿ ವಿಚಾರಣೆಗೆ ಒಂದು ವಿಚಾರಣೆಯನ್ನು ಮೇ ೫೨ ಕ್ಕೆ ಮುಂದಕ್ಕೆ ಹಾಕಲಾಯಿತು ಇವರ ಮೇಲಿನ ಆಪಾದನೆಯು ಸಂಬಂಧಪಟ್ಟದ್ದೆಂದು ತೀರ್ಮಾನಿಸಿ ಅವರುಗಳ ಮೇಲೆ ಚಾರ್ಜ್‌ಷೀಟ್ ಹಾಕಲಾಗಿದೆ

೧೯೪೬ ರಿಂದ ೧೯೪೮ ರ ಕೊಲೆ ಗಳು, ೪೦೦೦ ಧಕಾಯಿತಿಗಳು, ೩೬೦೦ ಲೂಟಿ ಪ್ರಕರಣಗಳೂ ನಡೆದಿವೆಯೆಂದು ಕೋರ್ಟ್ ಸರ್ಕ್ಯುಲರ್ ತಿಳಿಸುತ್ತದೆ

ಪಂಜಾಬ್‌ಮೇಲ್ ದುರಂತ

ಕಲ್ಯಾಣ್‌ದಿಂದ ಹೊರಟ 'ಪಂಜಾಬ್‌ಮೇಲ್' ಕಲ್ಯಾಣಿಗೆ ೩೦೬ ಮೈಲಿ ದೂರವಿರುವ ಲಘಬುರ್ ಎಂಬಲ್ಲಿ ದುರಂತಕ್ಕೀಡಾದ ಪರಿಣಾಮವಾಗಿ ಇದುವರೆಗೆ ೮೧ ಜನಗಳು ಸತ್ತಿರುವುದಾಗಿಯೂ ೧೦೦ ಜನಗಳು ಗಾಯ ಗೊಂಡಿರುವುದಾಗಿ ಅಧಿಕೃತವಾದ ವರದಿಯಾಗಿದೆ.

ಅನಧಿಕೃತ ವರದಿಗಳ ಪ್ರಕಾರ ಸಾವು, ನೋವುಗಳು ಅಧಿಕವಾಗಿರುವುದಾಗಿ ಗೊತ್ತಾಗಿದೆ ಅಪಘಾತಕ್ಕೀಡಾದ ಇದೇ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದ ಬಿಹಾರ್ ಪುನರ್‌ವ್ಯವಸ್ಥಾಪಕ ಸಚಿವರಾದ ಶ್ರೀ ಅಬ್ದುಲ್‌ಕ್ವಯೂಂ ಅನ್ಸಾರಿಯವರು ಅದೃಷ್ಟವಶಾತ್ ಯಾವ ಅಪಾಯಕ್ಕೂ ಒಳಗಾಗದೆ ಸುರಕ್ಷಿತರಾಗಿದ್ದಾರೆ. ಇವರು ಹಾಗೂ ಸ್ವತಃ ಪ್ರಯಾಣಿಕರಾಗಿದ್ದ ಕೆಲವು ಪತ್ರಿಕಾ ವರದಿಗಾರರು ಅಪಘಾತಕ್ಕೀಡಾಗಿ, ದುರವಸ್ಥೆಯಲ್ಲಿದ್ದವರ ಸಹಾಯ ನುಗಳನ್ನು ದೋಚುವುದರಲ್ಲಿ ಅನೇಕ ಜನರು ನಿರತರಾಗಿದ್ದುದನ್ನು ನೋಡಿದೆನು ಇಂಥಾ ಹೀನಕೃತ್ಯವಾಡಿದ ಬೇಡಿರೆಂದು ಕೇಳಿಕೊಂಡಾಗ್ಯೂ, ದರೋಡೆಮಾಡುವು ದನ್ನು ನಿಲ್ಲಿಸಲಿಲ್ಲ ಕೊನೆಗೆ ನನ್ನ ರಕ್ಷಣೆಗೆಂದು ನನ್ನ ಜೊತೆಯಲ್ಲಿದ್ದ ಪೋಲೀಸಿನವರಿಗೆ ಹೀನಕೃತ್ಯವನ್ನು ನಿಲ್ಲಿಸದಿದ್ದಲ್ಲಿ ಗುಂಡುಹಾರಿಸಬೇಕೆಂದು ಆಜ್ಞೆಮಾಡಿದ ಮೇಲೆ ದರೋಡೆಕಾರರು ಮೋಚುವುದನ್ನು ನಿಲ್ಲಿಸಿದರು

ದುರಂತಕ್ಕೆ ಕಾರಣ

ಮಧುಪುರದಲ್ಲಿ 'ಪಂಜಾಬ್‌ಮೇಲ್' ಹತ್ತಿದ ಮಿ|| ಅನ್ಸಾರಿಯವರು ರೈಲು ಜಸಿಂಧಿ ಸ್ಟೇಷನ್‌ನನ್ನು ಬಿಡುತ್ತಲೇ ಒಂದು ತರಹ ಶಬ್ದ ಕೇಳಿಸಿತು ಇದೇನು ಶಬ್ದ ವೆಂದು ನನ್ನ ಜೊತೆಯಲ್ಲಿದ್ದವರನ್ನು ವಿಚಾರಿಸಮಾಡು ತ್ತಿದ್ದ ಹಾಗೆಯೇ ನನ್ನ ಸೀಟಿನಿಂದ ಕೆಳಗೆ ಉರುಳಿ ದ್ದೆನು ಆನಂತರ ಕೆಟಿಕೆಯನ್ನು ಮುರಿದು ಹೊರಗೆ ಒಂದು ನೋಡಲಾಗಿ ಸ್ತ್ರೀ-ಪುರುಷರ, ಚಿಕ್ಕಮಕ್ಕಳ ಆರ್ತಧ್ವನಿ ಕೇಳಿಬಂತು ದುರಂತಕ್ಕೆ ಕಾರಣವೇನೆಂದು ನೋಡಲಾಗಿ ಎರಡುಕಡೆ 'ಫಿಷ್‌ಪ್ಲೇಟ್'ಗಳನ್ನು ತೆಗೆ ದುದು ಕಾಣಿಸಿತು ಎಂದು ಶ್ರೀ ಅನ್ಸಾರಿಯವರು ಹೇಳಿದರು

ಇತ್ತೀಚಿನ ಭಾರಿ ರೈಲ್ವೆ ಅನಾಹುತ

ಇತ್ತೀಚಿಗೆ ನಡೆದ ರೈಲ್ವೆ ದುರಂತಗಳಲ್ಲಿ ಇದು ಭಾರಿ ದುರಂತವೆಂದು ಗೊತ್ತಾಗಿದೆ ರೈಲು ಒಂದು ಸೇತುವೆಯನ್ನು ದಾಟುತ್ತಿದ್ದಾಗ ೫೦ ಅಡಿಗಳ ಎತ್ತರ ದಿಂದ ಕೆಳಕ್ಕುರುಳಿತು ಎರಡು ಬೋಗಿಗಳು ನುಚ್ಚು ನೂರಾಗಿಹೋಗಿವೆ ಇದರಲ್ಲಿ ಸ್ತ್ರೀಯರ ಬೋಗಿಯೂ ಸಹ ಇದೆ ರೈಲ್ವೆ ಇಂಜನ್ ಮತ್ತು ಇದರ ಹಿಂದಿನ ಎರಡು ಬೋಗಿಗಳು ಅನಾಹುತಕ್ಕೊಳಗಾಗಿವೆ ಡ್ರೈವರ್ ಇಂಜನ್ನಿನಿಂದ ಬಹುದೂರ ಹೊರಗೆಸೆಯಲ್ಪಟ್ಟು ಅದೃಷ್ಟದಿಂದ ಮರಣವನ್ನು ತಪ್ಪಿಸಿಕೊಂಡಿದ್ದಾನೆ. ಫೈರ್‌ಮ್ಯಾನ್ ಮತ್ತು ಕ್ಲೀನರ್ ಮರಣಕ್ಕೀಡಾಗಿದ್ದಾರೆ.

ನೊಂದವರಿಗೆ ಪರಿಹಾರ ಒದಗಿಸುವುದಕ್ಕಾಗಿ ಒಂದು ವಿಶೇಷ ರೈಲು ಡಾಕ್ಟರುಗಳು, ಸ್ವಯಂಸೇವಕರನ್ನೊಳ ಗೊಂಡು ಕೂಡಲೇ ಸ್ಥಳಕ್ಕೆ ಆಗಮಿಸಿ ಗಾಯಗೊಂಡ ವರನ್ನು ಡೋಛಾ ಆಸ್ಪತ್ರೆಗೆ ಸಾಗಿಸಲಾಯಿತು ಈ ವೇಳೆಗೆ ಸುರಕ್ಷಿತವಾಗಿದ್ದ ಪ್ರಯಾಣಿಕರನ್ನು ಕಲ್ಕತ್ತೆಗೆ ಸಾಗಿಸಲಾಯಿತು

ಸತ್ತ ಸ್ತ್ರೀಯರ ಒಡವೆಗಳನ್ನು ಪಟ್ಟಿಮಾಡಿ ಎಸ್. ಡಿ ಓ ಗಳ ವಶಕ್ಕೆ ತೊಡಲಾಗಿದೆ ದುರಂತಕ್ಕೀಡಾಗಿ ಸತ್ತವ್ಯಾಪಾರಿಗಳಿಂದ ನೆಗದು ೧೩ ಸಾವಿರ ಮತ್ತು ಬ್ಯಾಂಕ್ ಡ್ರಾಫ್ಟ್ ಆರು ಸಾವಿರ ರೂ ಗಳು ದೊರೆತಿವೆ ಎಂಬುದಾಗಿ ಈಸ್ಟ್ ಇಂಡಿಯನ್ ರೈಲ್ವೆ ಸೂಪರಿಂಟೆಂ ಡೆಂಟರು ತಿಳಿಸಿದ ಪ್ರಕಟಣೆಯಿಂದ ಗೊತ್ತಾಗಿದೆ

ಕಮ್ಯೂನಿಸ್ಟರ ದೌರ್ಜನ್ಯಕೃತ್ಯವೇ ಈ ಭೀಕರ ದುರಂತಕ್ಕೆ ಕಾರಣವೆಂದು ಊಹಿಸಲಾಗಿದೆ

ಸ್ವೀಕಾರ

ಬೆಂಗಳೂರು ಡಿ ಆನೆಕಲ್ ತಾ ಅಶ್ವಿಚೆಲೆ ನಾಡು ಕಾರ್ ಒಂಡೆಪ್ಪನವರು ತಾ|| ೩೦-೪-೧೯೫೦ ನೆಯ ದಿವಸ ರವ್ಯ ಅಣ್ಣಾಂದಿರಾದ ಶ್ರೀ ಮುದ್ದಪ್ಪನವರ ಮೊಮ್ಮಗ ಮುದ್ದಪ್ಪನವರ ದತ್ತು ಸ್ವೀಕಾರ ಮಾಡಿದ ಸಮಯದಲ್ಲಿ ಪ್ರಭಾಪೂಜಾಸಮಾರಾಧನೆಗಾಗಿ ತೆಗೆಸಿದ 5 ರೂಪಾಯಿಗಳು ಬೆಂಗಳೂರು ದೇವೆದ ಶೆಟ್ಟು ಶ್ರೀ ಬಿ. ರುದ್ರಪ್ಪಶೆಟ್ಟಿಯವರ ದ್ವಾರಾ ತಲಪಿರುತ್ತವೆ

ತಾ|| ೫-೫-೧೯೫೦ ನೆಯ ಶುಕ್ರವಾರ ದಿವಸ ಬೆಂಗಳೂರು ಶ್ರೀ ಯಜಮಾನ್ ಕೆಂಚಪ್ಪನವರ ಸಹೋದರರಾದ ಶ್ರೀ ಯಜಮಾನ್ ನಂಜುಂಡಪ್ಪನವರು ನೆಹರೂ ಪಗ್ಗರದಲ್ಲಿ ನೂತನ ಗೃಹಪ್ರವೇಶವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೂಜಾಸಮಾರಾಧನೆಗಾಗಿ ತೆಗೆಸಿದ 5 ರೂಪಾಯಿಗಳು ಅರಕೇಪೇಟೆ ಶೆಟ್ಟರು ರುದ್ರಪ್ಪಶೆಟ್ಟರ ದ್ವಾರಾ ತಲಪಿರುತ್ತವೆ.

ಈ ಮೇಲ್ಕಂಡ ಮಹಾತಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಚುನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಪಂಚಪೀಠಗಳ ಅಧ್ಯಕ್ಷರಲ್ಲಿಗೆಳಿಸಿದ ಕೂಡಲಿಪ ಫೋಟೋ ಸೈಜು ೨೦×೨೦ ಬೆಲೆ ಒಂದಕ್ಕೆ ೦—೬—೦

ಶ್ರೀರೇಣು ಕಾಚಾರ್ಯರ ಲಿಂಗಾನುಕರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ ೦—೬—೦

ಶ್ರೀಜಗದ್ಗುರು ಸೂರ ಚಾರ್ಯರು ಪಂಚಮಹರ್ಷಿಗಳಿಗೆ ಶಿಷ್ಯತ್ವವನ್ನಿತ್ತ ಅಪರೂಪದ ಫೋಟೋ ೦—೬—೦

ಶ್ರೀ ಜಗದ್ಗುರು ಸ ಚಾರ್ಯರ ಲಿಂಗಾನುಸಾರದ ಫೋಟೋ ಸೈಜು ೧೪×೧೦ ಬೆಲೆ ಒಂದಕ್ಕೆ ೦—೪—೦

" " " ಚಿಕ್ಕ ಸೈಜು ಬೆಲೆ ೦—೦—೬

ಶ್ರೀ ಜಗದ್ಗುರು ಮಧ್ಯಮುಖೇಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೧೦—೬

ಶ್ರೀ ರೇಣುಕಾಚಾರ್ಯರು ರುದ್ರಮುಖೇಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧೦—೬

ಶ್ರೀರೇಣುಕಾಚಾರ್ಯರು ಶ್ರೀಕಂಠಕಾಚಾರ್ಯರಿಗೆ ಚಂದ್ರಸೂರ್ಯೇಶ್ವರಲಿಂಗವನ್ನು ಅನುಗ್ರಹಿಸಿದ ಫೋಟೋ ೦—೧೦—೬

ಶ್ರೀರೇಣುಕಾವಾರ್ಯರು ವಿಧೇಯನಿಗೆ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧೦—೬

ಶ್ರೀ ಕಾಶೀ ಜಗದ್ಗುರು ನೀರಥನೇಶ್ವರ ಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—೦

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ತಿರುಪತಿ ರೇಣುಮಾದುವ ಫೋಟೋ ೦—೧೦—೬

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗು ವ್ಲಿ ಗಾಪ ಚಾರ್ಯರ ಫೋಟೋ ೦—೧೦—೬

ಶ್ರೀಮದ್ರಂ ೀ ಪೀಠಾಧೀಶ್ವರ ಜಗದ್ಗುರು ಶಿವಾನಂದಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧೦—೬

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸ್ನೇಹಿತರಾಗಿರುವ ಶ್ರೀ ಕಾಶೀನಾಥಶಾಸ್ತ್ರಿಗಳವರು ಕಾಶಿಯಲ್ಲಿರುವ ಫೋಟೋ ೦—೧೦—೬

ಹುಂಡಿ ಶ್ರೀ ೧೦೮ ಘಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಂದಕ್ಕೆ ೦—೩—೦

ಹುಂಡಿ ಶ್ರೀ ೧೦೮ ಘಾಸ್ತ್ರಿಗಳವರ ಫೋಟೋ (ನಾನಾ ವಿಧ ಬಣ್ಣಗಳಿಂದ ದ ದ್ರವಾದುದು) ದೊಡ್ಡಸೈಜು ಒಂದಕ್ಕೆ ೦—೪—೦

ಶ್ರೀ ಜಗದ್ಗುರು ಉಜ್ಜಯಿ ೀರೇಂದ್ರ ಮಹಾಪೀಠದ ೨೬ ಆತ್ಮಾಂಶ ಪೂ ಫೋಟೋ ಒಂದಕ್ಕೆ ೦—೧೦—೬

ಶ್ರೀ ಜಗದ್ಗುರು ಉಜ್ಜಯಿ ೀರೇಂದ್ರ ಆತ್ಮಾಂಶ ಬ್ಯಾಟರಿ ದಬ್ಬಿದ ಸುಂದರ ಫೋಟೋ ಒಂದಕ್ಕೆ ೦—೧೦—೬

ಶ್ರೀ ಜಗ ರ ಕಲ್ಲಿ ಸ ಕ ಸುಂದರ ಅಕ ಶ ಸುಂದರವಾದ ಗೋಪುರದ ಫೋಟೋ ೦—೧೦—೬

ಶ್ರೀರಂಭಾಪ ಸ್ಥಿತಿಯಲ್ಲಿ ಶ್ರೀಮನ್ಮಹಾಗಣಪತಿಯ ವಿಸರ್ಜನೆಸುತ್ತಿರುವ ಫೋಟೋ ೦—೧೦—೬

ಬೆಂಗಳೂ ಸೀ ಶ್ರೀ ರಂಭಾಪುರೀ ಜಗದ್ಗುರುಗಳ ಅದ್ದೂರಿಯ ಪಲ್ಲಕ್ಕಿ ಮಹೋತ್ಸವದ ಫೋಟೋ ೦—೧೦—೬

ಶ್ರೀಜಗದ್ಗು ಂಭಾಪುರೀ ಸೀರೆದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೩—೦

ಸಿದ್ಧಾಂತಶಿಖಾಮಣಿ

ವೀರಶೈವಸಮಾಜದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬ ನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥವನ್ನಿತ್ತ ಶ್ರೀಮದ್ಗು ರುಂಠಾಣಾಕಾಚಾರ್ಯರು ಜಗ ತ್ಪಿತ್ಯುತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿತವಾದಲ್ಲಿ ಬ್ಬರುವುದು ವೀರ ಶೈವಸಮಾಜದಲ್ಲಿ ಸದ್ಯ ದೊರೆಯುತ್ತ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಸುರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೩೫೦ವರ್ಷಗಳ ಹಿಂದೆ ಪೂಜ್ಯರಪ್ಪ ಶ್ರೀಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಸಮಾಜಕ್ಕೆ ಮೂಲಸ್ತಂಭದಂತಿರುವುದಾದ್ದರಿಂದ, ಇವತ್ತಿಗೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಅದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗಾಢಾಕ್ಷರಗಳಿಗಾಗಲಿ ಕ್ಲಿಷ್ಟಪದಗಳಿಗಾಗಲಿ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವೆ ಏನೆಂಬುದು ಕರಿಗೆ ಕೇವಲ್ಯವಾಗಿ ವುದು ಸುಕರವಾಗಿ ಅನುಷ್ಠಾನಕ್ಕಾಗಿ ಒಂದು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಕ್ಲಿಷ್ಟಪದಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೪೨೨ ಪುಟಗಳಿಂದ ಕೂಡಿದ್ದು ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಿದ್ಧಶ್ರೀಮಸಿದ್ಧಾಂತಿ ಶ್ರೀಜಗದ್ಗುರುವೀರಾಂಕಾಚಾರ್ಯರ ಲೀಲಾತ್ಮಕವಾದ ಮನೋಹರಕಾಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಸಮ್ಮಾರ್ಗತ್ಪಾದಕವಾದ ಮತಗ್ರಂಥಗಳು

ಗೋತ್ರಸೂತ್ರಸಟಿ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಿಸ್ಮರ್ಮವಿಮರ್ಷ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಸಂಚವಿಂಶತಿ ಸ್ಥಲ ಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಶತಕ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರಿಂ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಸಿಜಶತಕ್ಕದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣು-ಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಹುಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಕೈವಲ್ಯಪದಸಪ್ತಕ್ಕರ್ಯಹ (ಸಂಸ್ಕೃತ) (೨ನೆಯ ಆವೃತ್ತಿ)	೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಜ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ತ್ರಿಪಾದ್ವೈತಸರಭಾಷ್ಯ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ಯಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಅಗಮಸರಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಮೋಚಪತಿವೀರಾಚಾರ್ಯಕೃತ)	೧.೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧.೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧.೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ವಿವೇಕಮುಕ್ತಾವಳಿ	೧ ರೂ
ವಿಚಾರರತ್ನಾವಳಿ	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ತ್ರೀಯರುತ್ತರಾಧಿಯು ೨ನೆಯ ಆವೃತ್ತಿ)	೧೫ ರೂ.
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೨ ರೂ.
ವೀರಶೈವಧರ್ಮ (೩ನೆಯ ಆವೃತ್ತಿ, ೩೦ ಸುಂದರ ಫೋಟೋಗಳಿರುವುದು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹ (ಪಂಚಬ್ರಹ್ಮಾಗಮ-ಪಾರಮೇಶ್ವರಾಗಮ-ವಾತುಲಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡ ವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As.**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As.**
ಶಿವಾಚಾರಚಂದ್ರಿಕಾ (ಸಂಸ್ಕೃತ)	೩ ಆ.
ವೀರಶೈವಧರ್ಮ (ಮರಾಠಿ)	೧ ರೂ.
ಸದಾಚಾರಚಂದ್ರಿಕಾ (ವೀರಶೈವಾಚಾರ-ಸಂಸ್ಕೃತ)	೧ ರೂ.
ಶಿವಶಿಷ್ಯಾಚಾರಚಂದ್ರಿಕಾ (ಸಂಸ್ಕೃತ)	೨ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Bruhanmath Mahadevaiah at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಚಾಗನೂರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವ್ಯಪಂಕಜಾತಜನಿತರ್ ಪಂಚಾಸ್ಯಪೀಠಾಧಿಕರ್ । ಪಂಚಕ್ಲೇಶವಿಖಂಡಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರಶ್ರೀಧರೋದ್ಧರರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಶಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ಶಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೨೪ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ ನೇ ಮೇ ೧೯೩೦ | ಸಂಚಿಕೆ ೫೫

ಗುಣಗಾನ

ಈ ನೂತನ ಕಲಿಕಾಲದಲ್ಲಿ ಧರ್ಮವು ಮಾಯವಾಗು ತ್ತಿರುವ ಸಮಯದಲ್ಲಿ, ಪಂಡಿತ ಸಮೂಹಕ್ಕೆ ಮೆರೆಗಿಲ್ಲ ತಂತೆ ಇತ್ತವರೂ, ಗುರುವರ್ಗ ಚರಪಟ್ಟಾಧ್ಯಕ್ಷರನ್ನು ಎಚ್ಚರಗೊಳಿಸಿದವರೂ, ವಿರಕ್ತ ಸಮೂಹವನ್ನು ಭ್ರಾಂತಿ ಗೊಳಿಸಿದವರೂ, ವೈರ್ಯಾ ಸ್ಪೈರ್ಯ-ಸಾಹಸಗಳನ್ನು ಪಡಪಡಿಸಿಕೊಂಡವರೂ, ಬ್ರಹ್ಮಚಾರಿಗಳೂ, ಆದ ಪಂಡಿತತಿಲಕ ಶ್ರೀ ಕಾಶೀನಾಥಶಾಸ್ತ್ರಿಗಳವರ ಹೆಸರನ್ನು ಕೇಳದವರು ನಮ್ಮ ಕರ್ನಾಟಕ ಮಹಾರಾಷ್ಟ್ರ ಆಂಧ್ರ ಪ್ರಾಂತಗಳಲ್ಲಿ ಸಿಗುವದೇ ವಿರಳ ಈ ಪಂಡಿತರ ಹೆಸರಾದರೂ ಪವಿತ್ರವಾದ ಕಾಶೀನಾಥ ಎಂಬುದಾಗಿದೆ "ಕಾ" ಎಂಬುದು ಪಂಚಪೀಠಗಳಲ್ಲಿ ಒಂದು ಪೀಠ ಸ್ಥಾನವೂ, ಹಿಂದುಗಳ ಪವಿತ್ರಸ್ಥಾನವೂ, ಜೋತಿರ್ಲಿಂಗದ ಸ್ಥಾನವೂ ಆಗಿದೆ "ನಾಥ" ಎಂದರೆ ಒಡೆಯ ಎಂಬ ಅರ್ಥವಾಗುತ್ತದೆ ಇಂಥ ಪವಿತ್ರವಾದ ಕಾಶೀ ಕ್ಷೇತ್ರಕ್ಕೆ ಒಡೆಯರಾದಂಥ ಶಾಸ್ತ್ರಿಗಳವರು ವೀರಶೈವ ಧರ್ಮಪೀಠಕಾದ ವಿಶ್ವಾರಾಧ್ಯಗುರುಳರದಲ್ಲಿ ವ್ಯಾಸಂಗ ಮಾಡುತ್ತಿರುವಾಗ್ಗೆ "ಕಾಶೀಕೇಶ್ವರದತ್ತ" ನೆಂಬ ಬ್ರಾಹ್ಮಣ ಪಂಡಿತನಿಗೂ ನಮ್ಮೀ ಪಂಡಿತರಿಗೂ ಬರವಣಿ ಗೆಯ ವ್ಯವಹಾರವು ಪ್ರಾರಂಭವಾಗಿ ಆದರಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಕೃಪೆಯಿಂದ ಜಯವನ್ನು ಹೊಂದಿ "ದುರ್ವಾದ ದೂರೀಕರಣ" ಎಂಬ ಹೆಸರಿನ ಅಮೂಲ್ಯವಾದ ಗ್ರಂಥವನ್ನು ಮುದ್ರಿಸಿ ಪ್ರಾಮುಖ್ಯತೆ ಯನ್ನು ಪಡೆದರು ಕಾಶೀಕ್ಷೇತ್ರದಲ್ಲಿ ಇರುವ ಪಂಡಿತ ಜನಗಳಿಗೆ ಹಿರೀಮನಿಗೆಗಾಗಿ ಕಾಶೀನಾಥ ಎಂಬ ಹೆಸರನ್ನು ಸಾರ್ವಕಗೊಳಿಸಿ ಅಂತ್ಯದವರೆಗೂ ತಮ್ಮ ಗೌರವವನ್ನು ಕಾಪಾಡಿಕೊಂಡರು. ಈ ಪಂಡಿತರು ನಮ್ಮ ವೀರಶೈವ ಸಮಾಜಕ್ಕೆ ಮಾಡಿದ ಮಹೋನ್ನತ ಕಾರ್ಯಗಳು ಚಿರಸ್ಥರಣೀಯವಾಗಿವೆ ಇಂಥವರು ಕಣ್ಮರೆಯಾದ್ದರಿಂದ ಗುರುವರ್ಗಕ್ಕೆ ತುಂಬಾದರದ ಹಾನಿಯಾಗಿದೆ ಪ್ರಯುಕ್ತ ಪರಮಾತ್ಮನು ಇವರ ಬಂಧುಬಳಗವರವರಿಗೆ ಆದ ದುಃಖವನ್ನು ದೂರನೂಡಿ ಶ್ರೀ ಜಗದ್ಗುರುಗಳವರ ಪ್ರಮಥಗಣಾಧಿಶ್ವರರ ಸಮುದಾಯದಲ್ಲಿ ಈ ಪಂ॥ ಗೆ ಸ್ಥಾನವನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ

ರೇಣುಕಶಿವಾಚಾರ್ಯ ಬೃಹನ್ಮಠ, ಕಂಚಿಪುರ

ಮಃಖಪ್ರದರ್ಶನ ಅಣ್ಣೀಗೇರಿ

ಧಾರವಾಡ ಡಿ॥ ನವಲಗುಂದ ತಾಲ್ಲೂಕು ಅಣ್ಣೀಗೇರಿ ಗ್ರಾಮದಲ್ಲಿ ತಾರೀಖು ೧೨-೫-೧೯೩೦ ನೆಯ ದಿನಸ ಪಂ॥ ಕಾಶೀನಾಥಶಾಸ್ತ್ರಿಗಳವರು ಶಿವೈಕ್ಯರಾದ ಬಗ್ಗೆ ಸಭೆ ನೆರೆದು ಮಃಖಪ್ರದರ್ಶನ ಮಾಡಲಾಯಿತು ಈ ಸಭೆಯ ಅಧ್ಯಕ್ಷರಾದ ಹಡಗಲಿ ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷರು ವೀರಶೈವ ಸಮಾಜದ ಉದ್ಧಾರಕ್ಕಾಗಿ ಆಜನ್ಮ ದೇಹಸವಿಡದ ಶಾಸ್ತ್ರಿಗಳವರಿಗೆ ಶಿವಸಾನ್ನಿಧ್ಯದಲ್ಲಿ ಚಿರಶಾಂತಿ ದೊರೆಯಲೆಂದು ಕೋರಿದರು ಈ ಸಭೆಯಲ್ಲಿ ಪಂ॥ ಶ್ರೀಕಂಠಶಾಸ್ತ್ರಿ ನವಲಡಿ ಇವರು ಸುಪ್ತವಾಗಿದ್ದ ಗುರುಕುಲವನ್ನು ಜಾಗೃತಿಸಿ, ಪಂಚಾಚಾರ್ಯ ಪ್ರಭೆ ಯನ್ನು ಬಿತ್ತರಿಸಿ, ವೀರಶೈವ ಸಮಾಜವನ್ನು ಎಚ್ಚರಿಸಿದ ಶ್ರೇಯಸ್ಸು ಪ್ರಭಾವಶಾಲಿ ಕಾಶೀನಾಥಶಾಸ್ತ್ರಿಗಳವರಿಗೆ ಸಲ್ಲುವದೆಂದು ಶಾಸ್ತ್ರಿಗಳವರ ಧರ್ಮಪತ್ನಿಯವರನ್ನು ಮಾಡಿ ದರು ಅಜನ್ಮ ಬ್ರಹ್ಮಚಾರಿಗಳಾಗಿ ಮತಗಳಿಗೆ ಮಾಡಿದ ಶಾಸ್ತ್ರಿಗಳವರಿಗೆ ಪರದಲ್ಲಿಯೂ ಪಂಚಾಚಾರ್ಯರಿ ದಿವ್ಯ ಸಾನ್ನಿಧ್ಯ ದೊರೆಯಲೆಂದು ಪ್ರಾರ್ಥಿಸುವ,

ನಿಜಲಿಂಗಪ್ಪ ಶಿವಪ್ಪ ಹುಬ್ಬಳ್ಳಿ

ಉದಾರ ದಾನಿ

ಶ್ರೀಮಾನ್ ಪರಪ್ಪ ಬಸಲಿಂಗಪ್ಪ ಸೂರಕೋಡ ಸಾ॥ ಅಣ್ಣೀಗೇರಿ ಇವರು ತಮ್ಮ ಸುಪುತ್ರಿ ಕು॥ ಸೌ॥ ಪಾರ್ವತವ್ವನವ್ವನ್ನು ಶ್ರೀ ಉಳವಪ್ಪ ಬಸಪ್ಪಾ ಅಕ್ಕಿ ಹುಬ್ಬಳ್ಳಿ ಇವರ ಪುತ್ರ ಗಂಗಾಧರಶಾಸ್ತ್ರಿಗಳಿಗೆ ಕೊಟ್ಟು ತಾ॥ ೭-೫ ೧೦ ನೇ ದಿವಸ ಶ್ರೀ ಚಿಕ್ಕಮಣ್ಣೂರು ಸ್ವಾಮಿಗಳವರ ನೇತೃತ್ವದಲ್ಲಿ ವಿವಾಹ ಆಪಂದದಿಂದ ಜರುಗಿದ ಸಮಯದಲ್ಲಿ ಗದಗ ಮಂದಿರದಲ್ಲಿ ಶ್ರೀ ಸ್ವಾಮಿಗಳವರಿಂದ ಕಟ್ಟುನಿರುವ ಭಾವಿಗೆ ೧೦೧ ರೂಪಾಯಿ ಕೊಟ್ಟು ಧನ್ಯರಾದರು ಇವರ ಪತ್ನೀ ಪುತ್ರಾದಿಗಳಿಗೆ ಶ್ರೀ ಜಗದ್ಗುರು ರೇಣುಕಾಚಾರ್ಯರು ಸುಖಸಂಪತ್ತು ಕೊಡಲೆಂದು ಅನನ್ಯ ಭಾವದಿಂದ ಪ್ರಾರ್ಥಿಸುವ,

ಓರ್ವ ಧರ್ಮಾಭಿಮಾನಿ

ಕಾಶ್ಮೀರದ ಭವಿಷ್ಯ

ಭೌಗೋಳಿಕವಾಗಿಯೂ, ಸಾಂಸ್ಕೃತಿಕವಾಗಿಯೂ, ಆರ್ಥಿಕವಾಗಿಯೂ ಮತ್ತು ಸ್ಥಳನಿರ್ದೇಶನದ ದೃಷ್ಟಿ ಯಿಂದಲೂ ಕಾಶ್ಮೀರ ಪಾಕೀಸ್ತಾನಕ್ಕೇ ಸೇರಲೇಕಾಗಿದೆ ಭಾರತ ಪಾಕೀಸ್ತಾನಗಳಲ್ಲಿ ಸುಮಾರು ೩೦೦ ಸಂಸ್ಥಾನ ಗಳು ಪ್ರವೇಶ ಕರಾರನ್ನ ಸುಸಂಗಿ ಮಿಲನವಾಗಿವೆ ಈ ಕರಾರುಗಳಿಗನುಸಾರವಾಗಿ ಕಾಶ್ಮೀರ ಪಾಕೀಸ್ತಾನ ದಲ್ಲಿಯೇ ಸೇರಲೇಕಾಗಿತ್ತು. ಹಾಗಾಗಿದ್ದರೆ ಇಂದು ಅದರ ತಿಂದಳೇ ಇರುತ್ತಿರಲಿಲ್ಲವೆಂಬುದಾಗಿ ಪಾಕೀಸ್ತಾನ್ ಪ್ರಧಾನಿಗಳಾದ ಲಿಯಾಕತ್ ಅಲಿಖಾನರು ಕಾಮನ್ ವೆಲ್ತ್ ಕ್ಲಾಸ್ಟಿನವರು ವಿಹಂಡಿಸಿದ್ದ ಸಭ್ಯಾರಸಮಾರಂಭ ದಲ್ಲಿ ಭಾಷಣಮಾಡುತ್ತಾ ತಿಳಿಸಿದರು

ಕಾಶ್ಮೀರದ ಭವಿಷ್ಯ ಸ್ವತಂತ್ರವಾದ ಪ್ಲೆಬಿಸೈಟ್ ಮೂಲಕ ನಿರ್ಧಾರವಾಗಬೇಕೆಂದು ಭಾರತ ಪಾಕೀಸ್ತಾನ್ ಸರ್ಕಾರಗಳೆರಿವೆ. ಆದರೂ ಪ್ಲೆಬಿಸೈಟ್ ನಡೆಯು ದೇಇಂದ ತಾರೀಖು ಇನ್ನೂ ನಿರ್ಧಾರವಾಗಿಲ್ಲ ಪರಸ್ಪರ ಸಮಾಲೋಚನೆ, ಆಥವಾ ಮಧ್ಯಸ್ಥಿಕೆಯ ಮೂಲಕ ಎಲ್ಲಾ ಸಮಸ್ಯೆಗಳನ್ನೂ ಪರಿಹರಿಸಿಕೊಳ್ಳಲು ಪಾಕಿ ಸ್ತಾನ ಸಿದ್ಧವಾಗಿದೆ ಪಾಕೀಸ್ತಾನಕ್ಕೆ ದುರಾಕ್ರಮಣ ಮಾಡಬೇಕೆಂಬ ಯೋಚನೆ ಇಲ್ಲ ಇನ್ನಾಂ ಪ್ರಜಾ ಪ್ರಭುತ್ವ ನೀತಿಯಿಂದ ಸ್ವಾತಂತ್ರ್ಯವನ್ನೇಳಿಕೊಳ್ಳಬೇಕು ಎಂಬುದೇ ನನ್ನ ಇಚ್ಛೆ—ಎಂದು ವಿವರಿಸಿದರು

ಸ್ವೀಕಾರ

ಧಾರವಾಡ ಡಿ॥ ನವಲಗುಂದ ತಾಲ್ಲೂಕು ಅಣ್ಣೀಗೇರಿ ಗ್ರಾಮವಾಸಿಗಳಾದ ಶ್ರೀ॥ ಮಹಾದೇವಪ್ಪ ಶಿವಪ್ಪ ಹುಬ್ಬಳ್ಳಿ ಇವರ ಸುಪುತ್ರ ಕರಬಸಪ್ಪನಿಗೆ ಬ್ಯಾಡಗಿ ತೆಪ್ಪರು ವಾಲಿಸೂಗೀರಪ್ಪನವರ ಸುಪುತ್ರಿ ಕು॥ ಸೌ॥ ಪಾರ್ವತಮ್ಮನವ್ವನ್ನು ಕೊಟ್ಟು ತಾ॥ ೧೨-೫-೩೦ನೇ ದಿವಸ ನಡೆದ ವಿವಾಹ ಸಮಯದಲ್ಲಿ ಸದರಿ ಮಹಾ ದೇವಪ್ಪನವರು ಬೇರೆ ೩-೩ ಲಗ್ನಗಳನ್ನು ಧರ್ಮಾರ್ಥ ವಾಗಿ ನೆರವೇರಿಸಿ ಕೀರ್ತಿಪಡೆದರು. ಈ ವೈಭವಯುತ ವಾದ ಮಂಗಲಕಾರ್ಯಕ್ಕೆ ಗಾರವಾಡ ಹಡಗಲಿ ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷರೂ ಸಂಗಮೇಶ್ವರಶಿವಾಚಾರ್ಯ ಸ್ವಾಮಿಗಳು ಮತ್ತು ಅಣ್ಣೀಗೇರಿ ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷರು ಆಗಮಿಸಿದ್ದು ನವಲಡಿ ಪಂ॥ ಶ್ರೀಕಂಠ ಶಾಸ್ತ್ರಿಗಳವರ ವೈದಿಕತ್ವದಲ್ಲಿ ಕಾರ್ಯವು ನಡೆಯಿತು ಈ ಸಮಯದಲ್ಲಿ ಪ್ರಭಾಪೋಷಣಾರ್ಥಿ ತೆಗೆಸಿದ 5 ರೂಪಾಯಿಗಳು ಗಾರವಾಡ ಹಡಗಲಿ ಶ್ರೀಗಳವರ ದ್ವಾರಾ ತಲುಪಿರುತ್ತವೆ

ಧಾರವಾಡ ಡಿ॥ ರೋಣ ತಾಲ್ಲೂಕು ಕಾಜಗೇರಿ ಗ್ರಾಮದ ವೀರಭದ್ರಯ್ಯ ತಿರಕಪ್ಪಯ್ಯನ ಇವರು ತಮ್ಮ ಚಿಕ್ಕ ಸಹೋದರನಾದ ವಪ್ಪಕ್ಕಯ್ಯನ ದೀಕ್ಷಾಕಾರ್ಯದಲ್ಲಿ ಪ್ರಭಾಪೋಷಣಾರ್ಥಿ ಸಮರ್ಪಿಸಿದ 2 ರೂಪಾಯಿಗಳು ಗಾರವಾಡ ಹಡಗಲಿ ಶ್ರೀ॥ ಷ॥ ಬ್ರ॥ ಸಂಗಮೇಶ್ವರಶಿವಾಚಾರ್ಯಸ್ವಾಮಿಗಳವರ ದ್ವಾರಾ ತಲುಪಿರುತ್ತವೆ.

ಮಃ॥ ಜಾಗರೂಹಣ ಉರ್ಫ್ ಪ್ರಾಶ್ನದ ಜನ್ಮ ಸರಪ್ಪಾ ವಂಟಮೂರಿ ಮಃ॥ ಹೊಸೂರು (ಬೆಳಗಾಂವ) ಮನೆ ನಂಬರು ೫ ಇವರು ಇದೇ ನೈಕಾಖ ಬಿ॥ ೭ ಸೋಮವಾರ ದಿವಸ ಬ್ರಾಹ್ಮೀ ಮುಹೂರ್ತದಲ್ಲಿ ನೂತನ ಗೃಹಪ್ರವೇಶ ಮಾಡಿ ಕಂಬರಗಿ ಮಠದ ಶ್ರೀ ಗುರುಸಾದಶಿವಾಚಾರ್ಯರ ನೇತೃತ್ವದಲ್ಲಿ ಗಣಾಪಣ ಪೂಜೆ, ವಾಸ್ತುಶಾಂತಿ, ಏಕಾದಶರುದ್ರಾಭಿಷೇಕವಾದ ನಂತರ ಶ್ರೀ ವರದಹಂಕರ ಪೂಜೆಯು ಕಥಾಮೂಲಕ ಪೂರ್ತಿಯಾಯಿತು ಈ ಸಮಯದಲ್ಲಿ ಪ್ರಭಾಪೋಷಣ ಕ್ಕಾಗಿ ಸದರಿಯವರಿಂದ ತೆಗೆಯಿಸಿದ 1-4-0 ರೂ. ಗಳು ಸಿ ಜಿ ಕುರವಿಟ್ಟಿ ಸಜ್ಜನ ಶಕಪೂರ ಇವರ ದ್ವಾರಾ ತಲ್ಲಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪಂಚಾಚಾರ್ಯಪ್ರಭಾ

೧೯೫೦ನೆಯ ಮೇ ತಾ॥ ೧೫ ನೆಯ ಸೋಮವಾರ

ಶ್ರೀಜಗದ್ಗುರು ಶ್ರೀರೇಣಸಿದ್ಧೇಶ್ವರರು

[ಕಳೆದ ಸಂಚಿಕೆಯಿಂದ ಮುಂದುವರಿದುದು]

(೭) ಶ್ರೀ ರೇಣಸಿದ್ಧೇಶ್ವರ ದೇವಾಲಯ— ಈ ದೇವಾಲಯವು ಮುಂಬಯಿ ಇಲಾಖೆಗೆ ಸೇರಿದ ಸೊಲ್ಲಾಪುರ ನಗರದಲ್ಲಿ ಈ ಆಚಾರ್ಯರ ಹೆಸರಿನಿಂದ ಅನಾದಿಕಾಲದಿಂದ ವಿರಾಜಿಸುತ್ತಿರುವುದು ಸೊಲ್ಲಾಪುರದ ಚಕ್ರೆತ್ತು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿರುವರು ಇದು ಅತ್ಯಂತ ಮಹಿಮಾಸ್ಪಕವಾಗಿರುವುದು

(೮) ಶ್ರೀ ರೇವಣಸಿದ್ಧೇಶ್ವರ ದೇವಾಲಯ— ಈ ಮಹಾದೇವಾಲಯವು ಸೊಲ್ಲಾಪುರ ಡಿ॥ ಮಾಸನೂರು ಗ್ರಾಮದಲ್ಲಿರುವ ಭೀಮಾನದಿಯ ದಂಡೆಯ ಮೇಲೆ ಬಹು ಪುರಾತನಕಾಲದಿಂದ ವಿರಾಜಿಸುತ್ತಿರುವುದು ಈ ದೇವಾಲಯದ ಕಟ್ಟಡಕ್ಕೆ ಹತ್ತಿಪ್ಪತ್ತು ಲಕ್ಷ ರೂಪಾಯಿಗಳು ಖರ್ಚಾಗಿರಬಹುದು ಈ ಸ್ಥಳದಲ್ಲಿಯೇ ಶ್ರೀ ರೇಣುಕರು ೧೨ ಸಾವಿರ ಕನ್ಯೆಯರನ್ನು ಒಂದೆ ವಿಮುಕ್ತರನ್ನಾಗಿ ಮಾಡಿ ಖರ್ಪರ ಗರ್ವಭಂಗವನ್ನು ಮಾಡಿದರು ಯಜ್ಞಮಿಘನನವನ್ನು ತಪ್ಪ, ಪಾಲನೆಗಿದಿಂದ ಧ್ವಂಸಮಾಡಿದ ಸ್ಥಳವೂ ಇದೇ ಆಗುರುವುದು ಇದು ಅತ್ಯಂತ ಮಹಿಮಾಸ್ಪಕ ಶ್ರೀರೇಣಸಿದ್ಧೇಶ್ವರ ಪೂಜೆಗಾಗಿ ಬ್ರಿಟಿಷ್ ಸರಕಾರದವರು ಸುಮಾರು ೧೯೦೦ ರೂಪಾಯಿಗಳನ್ನು ಸಲ್ಲಿಸುತ್ತಿದ್ದರು

(೯) ಶ್ರೀ ರೇವಣಸಿದ್ಧೇಶ್ವರ ದೇವಾಲಯ— ಈ ದೇವಾಲಯವು ಸೊಲ್ಲಾಪುರ ಡಿ॥ ಸೊಂದರಪುರಕ್ಕೆ ೧೨ ಮೈಲು ದೂರದಲ್ಲಿರುವ ಮಂಗಳವೇಢೆ ಎಂಬ ಗ್ರಾಮದಲ್ಲಿ ಪುರಾತನಕಾಲದಿಂದ ವಿರಾಜಿಸುತ್ತಿರುವುದು

(೧೦) ಶ್ರೀ ರೇವಣಸಿದ್ಧೇಶ್ವರ ದೇವಾಲಯ— ಈ ದೇವಾಲಯವು ಮುಂಬೈ ಇಲಾಖಾ ಸಾತಾರಾ ಡಿ॥ ವಿಟಾ ತಾಲೂಕಿಗೆ ಸೇರಿದ 'ರೇಣಾವಿ' ಎಂಬ ಗ್ರಾಮದಲ್ಲಿ ಶೋಭಿಸುತ್ತಿರುವುದು ಇದು ಅತ್ಯಂತ ಮಹತ್ವದ ಸ್ಥಳ ಆ ಸ್ಥಾಂತದ ಜನರು ವಿಶೇಷ ಭಕ್ತಿಯಿಂದ ನಡೆದುಕೊಳ್ಳುತ್ತಿರುವರು

(೧೧) ಶ್ರೀ ರೇವಣಸಿದ್ಧನ ಗುಡ್ಡ— ಈ ಗುಡ್ಡವು ಕೊಲ್ಲಾಪುರ ರಾಜ್ಯದಲ್ಲಿ ವಿರಾಜಿಸುತ್ತಿರುವದು ಈ ಪುಣ್ಯಸ್ಥೇತ್ರವು ಬೆಳಗಾವ ಡಿ॥ ವಿಲ್ಲದ ಬಾಗೇವಾಡಿ ಸ್ಟೇಷನ್ನಿಗೆ ೧೨ ಮೈಲು ದೂರದಲ್ಲಿರುವದು ಪರ್ವತದ ಸಾಲುಪ್ರದೇಶದಲ್ಲಿ ಶ್ರೀ ರೇವಣಸಿದ್ಧೇಶ್ವರನ ದೇವಾಲಯವಿರುವದು ಅಲ್ಲಿ ಶ್ರೀ ರೇಣುಕಾಚಾರ್ಯರ ಸಾದದ ಗುರುತುಗಳಿರುವವು. ಕೊಲ್ಲಾಪುರ ಸರಕಾರದವರು ಪೂಜಾದಿಗಳಿಗಾಗಿ ಭೂಮಿಯನ್ನು ದಾನಮಾಡಿರುವರು ಇದು ಅತ್ಯಂತ ಪ್ರಾಚೀನ ದೇವಾಲಯ ಭಗವತ್ಪಾದರು ಹಿಂದಕ್ಕೆ ಕೊಲ್ಲಾಪುರದಲ್ಲಿ ಗೋರಕ್ಷನ ಗರ್ವಹರಣ ಮಾಡುವದಕ್ಕಾಗಿ ದಯಮಾಡಿಸಿದ ಕಾಲದಲ್ಲಿ ಈ ಸ್ಥಾನದಲ್ಲಿ ಆನುಷ್ಠಾನ ಮಾಡಿದರೆಂಬ ಐತಿಹ್ಯವಿದೆ.

(೧೨) ಶ್ರೀ ರೇವಣ ತಲಾನ— ಈ ಪವಿತ್ರ ತೀರ್ಥವು ಹಿಮಾಲಯದಲ್ಲಿರುವ ಶ್ರೀ ಜಗದ್ಗುರು ಏಕೋರನಾರಾಧ್ಯರ ಧರ್ಮಪೀಠಕ್ಕೆ (ಉಷಾಮಠಕ್ಕೆ) ೨ ಮೈಲು ದೂರದಲ್ಲಿ ಈ ಮಹಾಪ್ತಾರ ಪವಿತ್ರಾಧಿ ದಾನದಿಂದ ಪ್ರಸಿದ್ಧವಾಗಿರುವುದು. ಶ್ರೀ ರೇಣುಕಾಚಾರ್ಯರು ಹಿಮಾಲಯಕ್ಕೆ ದಯಮಾಡಿಸಿದಾಗ್ಗೆ ಈ ತೀರ್ಥದಲ್ಲಿ ಸ್ನಾನಮಾಡಿದ್ದರಿಂದ ಅದಕ್ಕೆ ಈ ಹೆಸರು ಪ್ರಾಪ್ತವಾಗಿರುವುದು.

(೧೩) ಮದ್ರಾಸ ಇಲಾಖಾ ನಾರ್ಥ ಆರ್ಕಾಟ್ ಡಿ॥ ತಿರುವಣ್ಣಾಮಲೆ (ಅರುಣಾಚಲ) ಕ್ಷೇತ್ರದಲ್ಲಿರುವ ಪರ್ವತದ ಮಧ್ಯಭಾಗದಲ್ಲಿ ಈ ಮಹಾಕ್ಷರ ಹೆಸರಿನ ಪ್ರಸಿದ್ಧ ದೇವಾಲಯವಿರುವುದು ದೇವಾಲಯದ ಮುಂಭಾಗದಲ್ಲಿ ಪವಿತ್ರ ತೀರ್ಥವುಂಟು. ಈ ಕ್ಷೇತ್ರದಲ್ಲಿ ಶ್ರೀ ರೇಣುಕ ಭಗವತ್ಪಾದರು ವಾಸವಾಗಿದ್ದರೆಂಬ ವಿಷಯವು ಅವರ ಪವಿತ್ರ ಚರಿತ್ರೆಗಳಿಂದ ತಿಳಿದು ಬರುತ್ತದೆ ಇದು ತಮಿಳುದೇಶ ಇಲ್ಲಿ ಅರುಣಾಚಲೇಶ್ವರನ ಮಹಾ ದೇವಾಲಯವಿರುವುದು ದಕ್ಷಿಣ ದೇಶದಲ್ಲಿ ಅತ್ಯಂತ ಪ್ರಸಿದ್ಧರಾಗಿರುವ ಶ್ರೀ ರಮಣಮಹರ್ಷಿಗಳ ಆಶ್ರಮ ವಿರುವುದು

(೧೪) ಮದ್ರಾಸ ಇಲಾಖಾ 'ವೃದ್ಧಾಚಲ' ಕ್ಷೇತ್ರದಲ್ಲಿ ಈ ಮಹಾತ್ಪರ ಹೆಸರಿನ ದೇವಾಲಯವಿರುವುದು ಇದು ತಮಿಳು ದೇಶ ದಕ್ಷಿಣ ಹಿಂದುಸ್ಥಾನದ ರೇಲ್ವೆ ಮಾರ್ಗದಲ್ಲಿರುವುದು ಈ ಕ್ಷೇತ್ರದಲ್ಲಿ ಆಚಾರ್ಯ ಭಗವತ್ಪಾದರು ಆನುಷ್ಠಾನ ಮಾಡಿರುವರೆಂಬ ವಿಷಯವು ಅವರ ಚರಿತ್ರೆಗಳಿಂದ ತಿಳಿದುಬರುತ್ತದ

(೧೫) ಪೂರ್ವಕಾಲದಲ್ಲಿ ದಕ್ಷಿಣ ದೇಶವನ್ನು ಏಕಚ್ಛತ್ರಾಧಿಪತ್ಯದಿಂದ ಆಳುತ್ತಿದ್ದ ಪಲ್ಲವ ಮತ್ತು ಚೋಳ ಚಕ್ರವರ್ತಿಗಳಿಗೆ ರಾಜಗುರುವಾಗಿದ್ದ ಕಾಂಚೀ ಕ್ಷೇತ್ರದಲ್ಲಿ ಇವರು ಬಹುಕಾಲ ವಾಸವಾಗಿದ್ದರು ಶ್ರೀ ರೇಣುಕಾಚಾರ್ಯರು ಈ ಕ್ಷೇತ್ರದಲ್ಲಿರುವ ವರದರಾಜ ನಾಮಕ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮತ್ತ್ಸಕವನ್ನು ತಮ್ಮ ಮುಷ್ಟಿಯ ಪ್ರಭಾವದಿಂದ ನಿಲ್ಲಿಸಿ ಚೋಳ ಭೂಪಾಲನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು ಶ್ರೀ ಜಗದ್ಗುರು ರುದ್ರಮುನಿಸ್ವರ ಶಿವಾಚಾರ್ಯರು ಈ ಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಏಕಾಮ್ರೇಶ್ವರ ಲಿಂಗ ಮೂರ್ತಿಯು ಮುಂಭಾಗದ ಭೂಗರ್ಭದಿಂದವತರಿಸಿ, ಶ್ರೀ ರೇಣುಕರಿಂದ ದಿವ್ಯಜ್ಞಾನವನ್ನು ಪಡೆದುಕೊಂಡರು ಈ ಮಹಾಕ್ಷೇತ್ರದಲ್ಲಿ ಈ ಆಚಾರ್ಯರ ಹೆಸರಿನ ದೇವಾಲಯವಿರುವುದಂದು ವದಂತಿಯಿರುವುದು ಅದನ್ನು ಗುರುಭಕ್ತರು ಶ್ರದ್ಧಾಪೂರ್ವಕ ಶೋಧಿಸಬೇಕಾಗಿದೆ

(೧೬) ಶ್ರೀ ರೇವಣಸಿದ್ಧೇಶ್ವರ ದೇವಾಲಯ— ಮದ್ರಾಸ ಇಲಾಖಾ ಕೊಯಿ ಮತ್ತೂರು ಡಿ॥ ಕೊಳ್ಳೆಗಾಲ ತಾಲ್ಲೂಕಿಗೆ ಹತ್ತಿರ ಗ್ರಾಮದಲ್ಲಿ ೧೫ಮೈಲು ದೂರದಲ್ಲಿರುವ ಕಾವೇರೀನದಿಯ ತೀರದಲ್ಲಿ ಶ್ರೀ ರೇವಣಸಿದ್ಧೇಶ್ವರ ದೇವಾಲಯ ವಿರುವುದೆಂದು ತಿಳಿದುಬರುತ್ತದೆ ಅನೇಕ ಜನರು ಮಂತ್ರಸಿದ್ಧಿಗಾಗಿ ಈ ವನಸ್ಥಾನದಲ್ಲಿ ಅನುಷ್ಠಾನ ಮಾಡಿ ಮಂತ್ರಸಿದ್ಧಿಯನ್ನು ಪಡೆದುಕೊಳ್ಳುವರಂತೆ!

(೧೭) ಶ್ರೀ ರೇವಣಸಿದ್ಧೇಶ್ವರ ದೇವಾಲಯ— ಗುಲಬರ್ಗಾ ಡಿ॥ ಸರಸಂಬ ಗ್ರಾಮದ ಸಮೀಪದಲ್ಲಿ ಪ್ರಶಾಂತ ಸ್ಥಾನದಲ್ಲೊಂದು ರೇಣುಕಾಚಾರ್ಯರ ದೇವಾಲಯವಿದೆ

(೧೮) ನೈಜಾಂ ಸ್ಟೇಟಿನ ಪಶಸಾಲಗಿ ಗ್ರಾಮದ ಲ್ಲೊಂದು ರೇಣುಕರ ಪವಿತ್ರ ದೇವಾಲಯವಿದ್ದು ನೋಡುವುದಕ್ಕೆ ಬಹು ರಮಣೀಯವಾಗಿದೆ

(೧೯) ಯೋಗಿಗಳ ತಪಸ್ಸಾಧನೆಗೆ ಯೋಗ್ಯಸ್ಥಾನ ವೆಂದು ಪ್ರಸಿದ್ಧಿಗೊಂಡ ಅಂಬಲಗುಂಡ (ಅಮ್ಮಕಕೊಂಡ) ಕ್ಷೇತ್ರದಲ್ಲೊಂದು ರೇವಣಸಿದ್ದರು ಶಿವಾರ್ಚನೆ ಮಾಡಿದ ಪವಿತ್ರಸ್ಥಾನವಿದೆ

(೨೦) ಜಾಲುಕ್ಯರ ರಾಜಧಾನಿಯಾದ ಕಲ್ಯಾಣ ದಲ್ಲಿಯೂ ರೇಣುಕಾಚಾರ್ಯರ ಭವ್ಯ ಮಂದಿರವಿದ

(೨೧) ಸಿದ್ಧವನಹಳ್ಳಿ— ಈ ಗ್ರಾಮವು ಮಂಗಳ ವೇಢೆಯಿಂದ ೪-೫ ಮೈಲು ಅಂತರದಲ್ಲಿರುತ್ತದೆ ಆ ಸ್ಥಾನವು ಒಳ್ಳೆ ರನ್ಯವಾಗಿರುವುದಂತೆ! ಅಲ್ಲಿ 'ಮಾಯಾವಿ' ಎಂಬುವ ಒಬ್ಬ ರಾಕ್ಷಸಳಿದ್ದಳಂತೆ! ಅವಳು ನವಸಾಥರನ್ನೂ ಸಹ ಬಂಧಿಸಿದ್ದಳಂತೆ! ಆಗ್ಗೆ ಶ್ರೀ ರೇವಣಸಿದ್ಧೇಶ್ವರರು ಅಲ್ಲಿಗೆ ದಯಮಾಡಿಸಲು ಆ ಮಾಯಾವಿಯು ನವನಾಥರನ್ನು ಪೀಡಿಸಿದಂತೆ ಇವರನ್ನೂ ಪೀಡಿಸಲಿಕ್ಕೆ ತಕ್ಷ ಇಂದ್ರಜಾಲ ವಿದ್ಯೆಯನ್ನೆಲ್ಲ ಖರ್ಚುಮಾಡಿದರೂ ಸಾಧ್ಯವಾಗಲಿಲ್ಲವಂತೆ! ಆಗ್ಗೆ ಶ್ರೀ ರೇವಣಸಿದ್ಧೇಶ್ವರರು ಇವಳು ಎಲ್ಲರನ್ನೂ ಪೀಡಿಸುತ್ತಿಹೆಂದರಿತು ಆಕೆಯದೊಂದು ಮೊರೆಯನ್ನೂ ಮೂಗನ್ನೂ ಕೊಯ್ದನಂತೆ! ಆಗ್ಗೆ ಅವಳು ಆ ಊರಲ್ಲಿ ನೀರೇ ಇರುವರೆದೆಯು ಕಡಿಸಿದಳಂತೆ. ಆ ಊರ ಜನರೆಲ್ಲ ಶ್ರೀ ರೇವಣಸಿದ್ಧೇಶ್ವರನ್ನು ಪ್ರಾರ್ಥಿಸಲು ಆ ಸಮಯದಲ್ಲಿ ಶ್ರೀ ರೇವಣಸಿದ್ಧೇಶ್ವರರು ಆ ಊರ ಕೆರೆಯಲ್ಲಿ ಪಾದವನ್ನಿಡಲು ಅವರು ಪಾದವಿಟ್ಟ ಸ್ಥಳದಲ್ಲಿಯೇ ಪಾದವು ಮೂಡಿ ಆ ಪಾದವಿಂದಲೇ ನೀರಿನ ಝರಿಯು ಕಾರಂಜಿಯಂತೆ ಪುಟಿಯುತ್ತದೆಯಂತೆ! ಆದ್ದರಿಂದಲೇ ಆ ಊರಿಗೆ 'ಸಿದ್ಧವನಹಳ್ಳಿ' ಎಂಬುವ ನಾಮವು ಪ್ರಾಪ್ತವಾಗಿದೆಯಂತೆ! ಈ ವಿಷಯಹೆಕ್ಕೆ ಬಸವಲಿಂಗಯ್ಯ ಹಿರೆಮಠ ಸುಂಗಳಕೇಡೆ ಇವರು ತಿಳಿಸಿರುತ್ತಾರೆ.

(೨೨) ಅಕ್ಕಲಕೋಟೆ ಸಂಸ್ಥಾನ ಪೈಕೆ 'ಬರ್ಗಾಣ ಪುರ' ಎಂಬುವ ಊರಲ್ಲಿ ಶ್ರೀ ಸಿದ್ಧಯ್ಯಪ್ಪನೆಂಬುವ ದೇವಾಲಯವುಂಟು ಆದೂಕಡ ಶ್ರೀ ರೇವಣಸಿದ್ಧೇಶ್ವರ ದೇವಾಲಯವೇ ಇರುತ್ತದೆ ಆ ರೇವಣಸಿದ್ಧೇಶ್ವರ ಪೂಜಾರಿಗಳು ಮುಸಲ್ಮಾನರಿದ್ದಾರೆ. ಈ ಬರ್ಗಾಣ ಪುರವು ಮುಸಲ್ಮಾನರ ಜಹಗೀರ ಗ್ರಾಮವಾಗಿರುತ್ತದೆ. ಅವರು ತಮ್ಮ ಆಮಲಿನಲ್ಲಿ ಈ ಮಹತ್ಪ್ರದೆ ದೇವಾಲಯವನ್ನು ತಮ್ಮ ಅಧೀನಮಾಡಿಕೊಂಡಿರುವಂತೆ ತೋರುತ್ತದೆ ಈ ರೇವಣಸಿದ್ಧೇಶ್ವರರಿಗೆ ವೀರಶೈವರು ಸಿದ್ಧಯ್ಯಸ್ವಾಮಿಗಳೂ, ಸ್ವಾತ್ತರು ಅನಂತ ಚೈತನ್ಯನೆಂತಲೂ, ಮುಸಲ್ಮಾನರು 'ಅಲ್ಲಾ ವುದ್ದೀನ' ನೆಂತಲೂ ಕರೆಯುತ್ತಾರೆ ಪರಂತು ಸರ್ವರೂ ಈ ದೇವರನ್ನು ಒಳ್ಳೇ ಭಕ್ತಿಯಿಂದ ಭಜಿಸುತ್ತಿರುವರು ಮುಸಲ್ಮಾನರು ತಮ್ಮಾಧೀನ ಮಾಡಿಕೊಂಡು ತಮ್ಮ ಜಾತಿಯ ಪದ್ಧತಿಯ ಪ್ರಕಾರ ಗಂದಸಿದ್ಧೇರಿ ಮತ್ತು ಗಲೀಫಹಾಕಿ ಹಾಕಿದೂಪ್ಪಣಾಗಿರಲು ಈಗ್ಗೆ ಹದಿಮೂರು-ಹದಿನಾಲ್ಕು ವರ್ಷಗಳ ಹಿಂದೆ ಆದು ಆಕಸ್ಮಾತ್ತಾಗಿ ಸುಡಲು ಆದರಲ್ಲಿ ಲಿಂಗ ಮೂರ್ತಿಯೇ ಹೊರಬಿದ್ದಿತಂತೆ! ಆ ಗುಡಿಯಲ್ಲಿ ಒಂದು ಗುಹೆಯುಂಟು ಅದರಲ್ಲಿ ದಂಡ, ಜೋಳಿಗೆ ಇತ್ಯಾದಿಗಳು ಇರುತ್ತವೆಯಂತೆ! ಈ ದೇವರಿಗೆ ಪ್ರತಿ ಯೊಬ್ಬರೂ 'ಸಿದ್ಧಯ್ಯಸ್ವಾಮಿ ದೋಸ್ತಾಂಹೋದೀನ್' ಎಂದೆನ್ನುವರು ಅಂದಮೇಲೆ ಈ ದೇವರು ವೀರ ಶೈವರದೋ ಮುಸಲ್ಮಾನರದೋ ವಾಚಕರೇ ಊಹಿಸಲಿ. ಈ ಪ್ರಕಾರ ವೀರಶೈವರ ಆಜಾಗ್ರತೆಯಿಂದ ಎಷ್ಟೋ ದೇವಾಲಯಗಳೂ, ದೇವರೂ ನಷ್ಟವಾಗಿ ಹೋಗಿವೆ. ಈಗ ಸದ್ಯ ಇಷ್ಟು ಗೊತ್ತಾಗಿವೆ ಇನ್ನೂ ವಿಶೇಷ ಸಂಶೋಧನ ಮಾಡಿದರೆ ಸಿಗಬಹುದು.

ವರ್ತಮಾನಸಂಗ್ರಹ

ಭಾರತಕ್ಕೆ ೧॥ ಲಕ್ಷ ಟ್ರ ಗೋಧಿ

ಭಾರತ ಸರ್ಕಾರವು ಪಾಕೀಸ್ತಾನದಿಂದ ೧॥ ಲಕ್ಷ ಟ್ರ ಗೋಧಿ ಕೊಳ್ಳಲು ನಿರ್ಧರಿಸಿ ಆ ಒಗ್ಗೆ ಕಾಕ್ ಅಧಿಕಾರಿಗಳೊಡನೆ ಮಾತುಕತೆ ನಡೆಸುತ್ತಿದೆ. ಪಾಕ್ ಸರ್ಕಾರವು ೧॥ ಲಕ್ಷ ಟ್ರ ಗೋಧಿ ಸರಬರಾಜು ಮಾಡಲು ಒಪ್ಪಿರುವುದಾಗಿ ತಿಳಿದುಬಂದಿದೆ

ಭಾರತಕ್ಕೆ ಜರ್ಮನ್ ಪ್ರವೀಣರು

ಬಾರತದ ನಾನಾ ಕಾರ್ಖಾನೆಗಳಲ್ಲಿ ಯಂತ್ರೋಪಕರಣಗಳನ್ನು ಜೋಡಿಸುವ ಕಾರ್ಯದಲ್ಲಿ ಸಹಾಯ ನೀಡಲು ಜರ್ಮನಿನ ತಾಂತ್ರಿಕಾಧಿಕ ನಿಪುಣರು ಭಾರತಕ್ಕೆ ಬಂದಿದ್ದಾರೆ ಈ ಬಗ್ಗೆ ಈಗ ಕೆಲಕಾಲದಿಂದ ಇಂಡಿಯಾ ಸರ್ಕಾರವು 'ಸುಪ್ತೀಂ ಕಮ್ಯಾಂಡ್ ಅಲೈಡ್ ಪವರ್ಸ್' ರೊಡನೆ ವ್ಯವಹಾರ ನಡೆಸುತ್ತಿತ್ತು.

ಗೋಲ್ಡ್ ಗುಂಬಸ್

೨೧ ಲಕ್ಷ ರೂಗಳ ಖರ್ಚಿನಲ್ಲಿ ರಿಪೇರಿ ಕಾರ್ಯ

ಬಿಜಾಪುರದಲ್ಲಿರುವ ಮುನ್ನೂರು ವರ್ಷಗಳ ಹಿಂದಿನ ವಿಶ್ವದ ಅತ್ಯಂತ ಎತ್ತರವಾದ ಕಟ್ಟಡಗಳಲ್ಲಿ ಎರಡನೆಯ ದಾದ ಪ್ರಸಿದ್ಧ 'ಗೋಲ್ ಗುಂಬಸ್' ಗೋಪುರದ ವಿಪರೀತ ರಿಪೇರಿ ಕೆಲಸಗಳು ೨೫ ಲಕ್ಷ ರೂಗಳ ಖರ್ಚಿನಲ್ಲಿ ಭಾರತ ಸರ್ಕಾರದ ಶಿಲ್ಪಶಾಲಾ ನಿಪುಣರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದೆ.

೭೧ ಅಡಿಗಳ ಎತ್ತರದ ಭಾರಿ ಭಾರಿ ಉಕ್ಕಿನ ಕಂಬಗಳ ಮೇಲೆ ನಿಂತಿರುವ ಈ ಗೋಪುರದ ರಿಪೇರಿಯನ್ನು ೧೯೫೬ ರಲ್ಲಿ ಒಂದು ಬಾರಿ ಮಾಡಿಲಾಗಿತ್ತು. ಈ ಗೋಪುರವು ವಿಜಯಪುರದ ಸೋಲಂಕಿ ರಾಜ ಮಹಿತಪದ ೧೭ ನೇ ಶತಮಾನದ ಮಹಮದ್ ಆದಿಲ್‌ಶಾ ರವರ ಅಲಬತ್ತಿ, ಕಟ್ಟಿಬ್ಬಚ್ಚಿತ್ತು.

ರಷ್ಯಬಿಟ್ಟು ವಿಶ್ವಸಂಸ್ಥೆ ರಚಿಸಬೇಕೆಂಬ ಸಲಹೆಗೆ ಪಂ॥ ನೆಹರೂರವರ ವಿರೋಧ

ರಷ್ಯಾ ಮತ್ತು ಇತರ ಕಮ್ಯೂನಿಸ್ಟ್ ದೇಶಗಳಿಗೆ ಪ್ರಾತಿನಿಧ್ಯಕೊಡದೆ ವಿಶ್ವಸಂಸ್ಥೆಯನ್ನು ರಚಿಸಬೇಕೆಂದು ಅಮೇರಿಕದ ಮಾಜಿ ಅಧ್ಯಕ್ಷ ಹರ್ಬರ್ಟ್ ಹೂವರ್‌ರವರು ಇತ್ತೀಚೆಗೆ ರಚಿಸಿರುವ ಸಲಹೆಯನ್ನು ಪ್ರತಿಭಾನ ಪಂ॥ ನೆಹರೂರವರು ತೀವ್ರವಾಗಿ ವಿರೋಧಿಸಿದ್ದಾರೆ ಪ್ರಭಾವಿಗಳು ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಾ "ಈ ರೀತಿಯ ರಚನೆಯಿಂದ ಇಡೀ ವಿಶ್ವಕ್ಕೆ ಕಾನಿಯೆಂಬುದೂ ಅಲ್ಲದೆ ವಿಶ್ವಸಂಸ್ಥೆ ಎಂಬ ಹೆಸರಿಗೆ ಧಕ್ಕೆ ಬರುವುದೆಂದೂ" ತಿಳಿಸಿದ್ದಾರೆ.

ಬಾಗ್ದಾದ್‌ಗೆ ಪ್ರವಾಹದಿಂದ ಗಂಡಾಂತರ

ಟೈಗ್ರಿಸ್‌ನಲ್ಲಿ ಬಾಗ್ದಾದ್ ನಗರವನ್ನು ಕೊಚ್ಚಿ ತೊಂಡು ಹೋಗುವಂತಹ ಭೀಕರ ಪ್ರವಾಹ ಬಂದಿದೆ ೩೦೦ ಮನೆಗಳು ಆಗಲೇ ಪ್ರವಾಹಕ್ಕೆ ಸಿಕ್ಕಿವೆ ನಗರವನ್ನು ರಕ್ಷಿಸಲು ಸಿದ್ಧತೆಗಳಾಗುತ್ತಿವೆ. ೧೮ ಮಿಲಿಯನ್ ಚೀಲ ಗಜಗಳಷ್ಟು ಸಾಗುವಳಿ ಭೂಮಿ ಪ್ರವಾಹದ ನೀರಿನಲ್ಲಿ ಮುಳುಗಿದೆ. ಸಹಸ್ರಾರು ಮಂದಿ ಪುರುಷರೂ, ಮಹಿಳೆಯರೂ, ಮಕ್ಕಳೂ ತಮ್ಮ ಪ್ರಾಣರಕ್ಷಣೆಗಾಗಿ ಸಾಹಸಪಡುತ್ತಿದ್ದಾರೆ ಸೈನಿಕರೂ, ಪೋಲೀಸರೂ ಪ್ರವಾಹವನ್ನು ತಡೆಗಟ್ಟಲು ಬಹಳ ಶ್ರಮಪಡುತ್ತಿದ್ದಾರೆ ಪ್ರವಾಹವು ಇನ್ನೂ ಹೆಚ್ಚುಬಹುದೆಂದೂ, ಸಹಸ್ರಾರು ಮನೆಗಳು ಧ್ವಂಸವಾಗಬಹುದೆಂದೂ ನೀರಾವರಿ ಎಂಜಿನಿಯರುಗಳು ಅಭಿಪ್ರಾಯಪಟ್ಟಿದ್ದಾರೆ

ಮಳೆರಾಯನಿಗೆ ಮೊರೆಯಿಡುವ ಮುನ್ನ ಒಪ್ಪಂದ

ಚಿಟಗಾಂಗ್ ನಲ್ಲಿ ಮಳೆಗಾಗಿ ಸ್ವಾರ್ಥಿಸುವ ಮುನ್ನ ನಿರಾಶ್ರಿತರಿಗೂ ರೈತರಿಗೂ ಭಿನ್ನಾಭಿಪ್ರಾಯ ಉಂಟಾಗಿತ್ತು ಜಾವಣಿ ಇಲ್ಲದ ಮನೆಯಲ್ಲಿ ವಾಸಮಾಡುವ ನಿರಾಶ್ರಿತರು ಮಳೆ ಬೇಡವೆಂದೂ ರೈತರು ಮಳೆ ಬೇಕೆಂದೂ ದೇವರ ಪ್ರಾರ್ಥನೆ ನಡೆಸಿದರು ಆದರೂ ಮಳೆ ಬರಲಿಲ್ಲ ರೈತರು ನಿರಾಶ್ರಿತರ ಬಳಿ ಹೋಗಿ ಒಂದು ರೀತಿ ಒಪ್ಪಂದ ಮಾಡಿಕೊಂಡರು ರೈತರು ನಿರಾಶ್ರಿತರ ಮನೆಗಳಿಗೆ ಜಾವಣಿ ಹಾಕಿಸಿಕೊಡಬೇಕೆಂದೂ ನಿರಾಶ್ರಿತರು ಮಳೆಯಾನ ಪ್ರಾರ್ಥನೆಗೆ ರೈತರೊಡನೆ ಸೇರಬೇಕೆಂದು ತಿರ್ಮಾನವಾಯಿತು

ಭಾರಿಕೊಲೆಗಾರರಿಗೆ ಮರಣದಂಡನೆ

ಪಂಜಾಬಿನ ಮೂವತ್ತೈದು ವರ್ಷ ವಯಸ್ಸಿನ ಯುನಕ ಬರ್ ಮಹಮದ್ ಸಾಯಿದ್ ಎಂಬಾತನು ಮಂತ್ರ ಶಕ್ತಿಯಿಂದ ದೇವರ ದರ್ಶನ ಮಾಡಿಸುವುದಾಗಿ ಹೇಳಿ ಅನೇಕರಿಂದ ಹಣ ಸುಲಿದು ಅವರನ್ನು ಕಾಡಿನ ಪ್ರದೇಶಕ್ಕೆ ಉಪಾಯದಲ್ಲಿ ಕರೆದುಕೊಂಡು ಹೋಗಿ ಕೊಲೆಮಾಡಿ ಅವರ ಒಡವೆ ವಸ್ತುಗಳನ್ನು ಅಪಹರಿಸುತ್ತಿದ್ದ ಪ್ರಕರಣವೊಂದು ವರದಿಯಾಗಿದೆ ಇವನ ಒಡಗಾಡಿಯೊಬ್ಬನು ಕೂಡಾ ಈ ಕೃತ್ಯದಲ್ಲಿ ಹೊಡಗಿದ್ದನು. ಪೋಲೀಸರು ಪತ್ತೆಹಚ್ಚಿ ಇಬ್ಬರನ್ನೂ ವಿಚಾರಣೆಗೆ ಗುರಿಪಡಿಸಿದ್ದರು. ಕರಾಚಿಯ ನ್ಯಾಯಾಧೀಶರು ವಿಚಾರಣೆ ನಡೆಸಿ ಅಪಾದಿತರಿಗೆ ಮರಣದಂಡನೆ ವಿಧಿಸಿದರು.

ಹೆಂಡ ಕುಡಿದದ್ದಕ್ಕೆ ಕತ್ತೆಯಮೇಲೆ ಸವಾರಿ

ಇಮ್ಮುನಿನ ಸಾರ್ವಜನಿಕ ಪ್ರದೇಶದಲ್ಲಿ ಹೆಂಡ ಸುಡಿಸವನೊಬ್ಬನನ್ನು ಹಿಡಿದು, ಅವನ ಮೂತಿಗೆ ಮಸಿ ಹಚ್ಚಿ ಅವನನ್ನು ಕತ್ತೆಯಮೇಲೆ ಕೂರಿಸಿ, ಗೂರಿಕರ್ಲೆಲ್ಲ ಮೆರವಣಿಗೆ ಮಾಡಲಾಯಿತು ಕುಡಿತ ಮತ್ತು ಜೂಜನ್ನು ತಪ್ಪಿಸಲು ಇಥಿಯ ಇದೂ ಒಂದು ಕ್ರಮವನ್ನು ವಧಿಸಿದ್ದಾರೆ.

ಮಲೇರಿಯಾದಿಂದ ೧೦ ಲಕ್ಷ ಮಂದಿ ಸಾಯುತ್ತಿದ್ದಾರೆ

ಭಾರತದಲ್ಲಿ ಪ್ರತಿ ವರ್ಷವೂ ಮಲೇರಿಯಾ ರೋಗದಿಂದ ಸರಾಸರಿ ೧೦ ಲಕ್ಷ ಮಂದಿ ಸಾಯುತ್ತಿದ್ದಾರಂತೆ. ಈ ವಿಷಯವನ್ನು ಭಾರತದ ಮಲೇರಿಯಾ ಇನ್‌ಸ್ಟಿಟ್ಯೂಟಿನ ಡೈರೆಕ್ಟರ್ ಆದ ಲೆಫ್ಟಿನೆಂಟ್ ಕರ್ನಲ್ ಜನಮೆಶಿಂಗ್ ಎಂಬುವವರು ತಿಳಿಸಿದ್ದಾರೆ.

ಲಂಡನ್ನಿಗೆ ಜನರಲ್ ಕಾರಿಯಪ್ಪ

ಲಂಡನ್ನಿನಲ್ಲಿ ಈ ತಿಂಗಳು ೨೩ ರಿಂದ ೨೬ ರವರೆಗೆ ನಡೆಯಲಿರುವ ಕಾಮನ್‌ವೆಲ್ತ್ ರಾಷ್ಟ್ರಗಳ ಸೈನಿಕ ಮುಖ್ಯಾಧಿಕಾರಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಭಾರತ ಸೈನ್ಯದ ಮಹಾದಂಡನಾಯಕರಾದ ಜನರಲ್ ಕಾರಿಯಪ್ಪನವರು ಇಲ್ಲಿಂದ ಲಂಡನ್‌ಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದರು ಇವರು ಭಾರತಸೈನ್ಯದ ಮಹಾದಂಡನಾಯಕರಾಗಿ ೧೯೪೯ ನೆಯ ಜನವರಿಯಲ್ಲಿ ಅಧಿಕಾರ ವಹಿಸಿಕೊಂಡಮೇಲೆ ಲಂಡನ್ನಿಗೆ ಪ್ರಯಾಣ ಬೆಳೆಸುತ್ತಿರುವುದು ಇದೇ ಪ್ರಥಮ

ಬ್ರಿಟಿಷ್ ಅಧಿಕಾರಿಗಳ ಅಭ್ಯುದಯಕ್ಕೆ ಧಕ್ಕೆ

ಬ್ರಿಟಿಷ್ ಭಾರತದಲ್ಲಿ ಉನ್ನತಾಧಿಕಾರಿಗಳಾಗಿದ್ದ ಬ್ರಿಟಿಷರ ಅಭ್ಯುದಯಕ್ಕೆ ಭಾರತ ಸ್ವಾತಂತ್ರ್ಯವಾದ ಮೇಲೆ ಧಕ್ಕೆಯುಂಟಾಗಿದೆಯೆಂದೂ, ಅದಕ್ಕಾಗಿ ಭಾರತ ಪರಿಹಾರ ಕೊಡಬೇಕೆಂದೂ ಕನ್ಸರ್ವೇಟೀವ್ ಪಕ್ಷದ ಸದಸ್ಯರು ಕೆಂದ ರೂಪವನ್ನು ಕಾಮನ್‌ವೆಲ್ತ್ ಸೆಕ್ರಟರಿ ಗಾರ್ಡನ್ನಾಕರರವರು ತಳ್ಳಿಹಾಕಿದರು

ಬ್ರಿಟನ್ನಿನಲ್ಲಿ ಆಟಂಬಾಂಬ್ ತಯಾರಿಕೆ

ಆಟಂಬಾಂಬನ್ನು ಬೇರೆಯವಾಗಿ ಸಂಗ್ರಹಿಸಿಡಲು ಬ್ರಿಟನ್ ಸರ್ಕಾರ ತೀರ್ಮಾನ ಪ್ರಯತ್ನ ನಡೆಸುತ್ತಿದೆಯೆಂದು ತಿಳಿದುಬಂದಿದೆ. ಯುದ್ಧದ ಪೂರ್ವಸಿದ್ಧತೆಗಳಲ್ಲಿ ಇದೂ ಒಂದು ಅಂಶವೆಂದು ಬ್ರಿಟನ್ ಪರಿಣತಿಸಿ ಈ ರೀತಿಯ ತೀರ್ಮಾನಕ್ಕೆ ನಡೆಸುತ್ತಿದೆಯೆಂದು ಗೊತ್ತಾಗಿದೆ

ಸ್ವೀಡನ್ನಿನಲ್ಲಿ ಮುಂಜಾಗ್ರತೆ

ಆಟೊಬಾಂಬ್ ಶೆಲ್ಟರ್‌ಗಳ ನಿರ್ಮಾಣ

ಸ್ವೀಡನ್ನಿನ ಪರ್ವತಪ್ರದೇಶದಲ್ಲಿ ೭,೫೦,೦೦೦ ಮಂದಿ ನಾಗರಿಕರಿಗೆ ರಕ್ಷಣೆಯೊದಗಿಸುವಂತೆ ಆಟಂಬಾಂಬ್ ಶೆಲ್ಟರುಗಳನ್ನು ನಿರ್ಮಿಸಬೇಕೆಂದು 'ಸಿವಿಲ್ ಡಿಫೆನ್ಸ್ ಕಮಿಟಿ' ಸಲಹೆ ಮಾಡಿದೆ

ಅಟೊಮಿಕ್ ಸಬ್‌ಮೆರಿನ್

ಅಣುಶಕ್ತಿ ಪ್ರಯೋಗದಿಂದ ನಡೆಯುವ ೨,೫೦೦ ಟ್ ತೂಕವುಳ್ಳ ೧ ಅತ್ಯಂತ ಭಾರಿ ಸಬ್‌ಮೆರಿನ್ನನ್ನು ೧,೪೨,೫೦,೦೦೦ ಪೌಂಡ್ ವೆಚ್ಚದಲ್ಲಿ ತಯಾರಿಸಿದೆ. ಅಲ್ಲದೆ ಅಣುಶಕ್ತಿಯನ್ನು ನಿರ್ವಾಸ ಸಂಚಾರಕ್ಕೂ ಉಪಯೋಗಿಸುವ ಸಾಧನಗಳನ್ನು ಅಮೆರಿಕದ ಪ್ರಸಿದ್ಧ ಅಣುಶಾಸ್ತ್ರ ಪ್ರವೀಣರು ಪ್ರಯತ್ನಿಸುತ್ತಿದ್ದಾರೆ

'ಸಿ ಎಫ್. ನೈನ್' ಎಂಬ ನೂತನ ಔಷಧ

ಲಂಡನ್ನಿನ ಹತ್ತಾರು ವಿಜ್ಞಾನಿಗಳ ಸಂಘವೊಂದು ಹೊಸ ಔಷಧಿಯೊಂದನ್ನು ಅನೇಕ ಪ್ರಯೋಗಗಳನ್ನು ನಡೆಯಿಸಿ ಕಂಡುಹಿಡಿದಿದ್ದಾರೆ. ಈ ಔಷಧಿಯು ಮಲೇರಿಯಾ, ಟೈಫಾಯಿಡ್, ನಾಯುರೋಗ, ಸಿಡುಬು, ಫ್ಲೇಗ್ ಮುಂತಾದ ಎಲ್ಲ ವಿಧವಾದ ಜಾಯಲೆಯಷ್ಟು ಗುಣಪಡಿಸುವ ಶಕ್ತಿಯುಳ್ಳದ್ದಾಗಿದೆ. ಇದಕ್ಕೆ 'C.F.9' ಎಂಬ ಹೆಸರನ್ನು ಕೊಡಲಾಗಿದೆ. ಇತ್ಯರ್ಥಲ್ಲೇ ಈ ಔಷಧಿಯನ್ನು ಹೆಚ್ಚುವರಿಯಲ್ಲಿ ತಯಾರಿಸಿ ಎಲ್ಲಿಡೆ ಎಲ್ಲ ಭಾಗಗಳಿಗೂ ಕಳುಹಿಸಲಾಗುವುದು.

'ಡಾಕ್ಟರ್ ಆಫ್ ಲಾಸ್' ಪ್ರಶಸ್ತಿ

ಶ್ರೀಮತಿ ಪಂಡಿತರಿಗೆ ೨ ವಿಶ್ವವಿದ್ಯಾನಿಲಯಗಳ ಸನ್ಮಾನ

ಅಮೇರಿಕದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್‌ರವರಿಗೆ ಕಾನ್ಸಾಸ್ ಮತ್ತು ವಾಷಿಂಗ್‌ಟನ್ನಿನ ಸೆಯಿಂಟ್ ಲೂಯಿಸ್ ವಿಶ್ವವಿದ್ಯಾನಿಲಯಗಳವರು ಮುಂದಿನ ತಿಂಗಳ ಆದಿಭಾಗದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ 'ಡಾಕ್ಟರ್ ಆಫ್ ಲಾಸ್' ಎಂಬ ಗೌರವ ಪ್ರಶಸ್ತಿಯನ್ನಿತ್ತು ಸನ್ಮಾನಿಸುವರು. ಶ್ರೀಮತಿಪಂಡಿತ್‌ರವರು ಜೂನ್ ೪ ರಂದು ಕಾನ್ಸಾಸ್‌ಗೆ ತೆರಳಿ ವಿಶ್ವವಿದ್ಯಾನಿಲಯದ ಗೌರವ ಪ್ರಶಸ್ತಿಯನ್ನು ಸ್ವೀಕರಿಸುವರು ಅನಂತರ ಜೂನ್ ೬ರಂದು ಸೆಯಿಂಟ್ ಲೂಯಿಸ್ ವಿಶ್ವವಿದ್ಯಾನಿಲಯದ ಗೌರವ ಪ್ರಶಸ್ತಿಯನ್ನು ಸ್ವೀಕರಿಸುವರು ಅದೇ ಸಂದರ್ಭದಲ್ಲಿ ವಾಷಿಂಗ್‌ಟನ್ ವಿಶ್ವವಿದ್ಯಾನಿಲಯದ ಚಾನ್ಸಲರ್ ಆಗಿರುವ ಡಾ॥ ಆರ್ಥರ್ ಕಾಂಪ್ಟನ್‌ರವರಿಗೆ ಗೌರವ ವ್ಯಕ್ತಿ ಈಯಲಾಗುವುದು

ಶಸ್ತ್ರಗಳೆನ್ನು ಕೊಂಡುಕೊಳ್ಳಲು ಅನುಮತಿ

ವಿಶ್ವಸಂಸ್ಥೆಗೆ ಇಸ್ರೇಲ್ ಮನವಿ

ವಿಶ್ವಸಂಸ್ಥೆಯಲ್ಲಿ ಇಸ್ರೇಲ್ ರಾಷ್ಟ್ರದ ಪ್ರತಿನಿಧಿಗಳಾದ ಆಬರಿ ಏಬರ್‌ರವರು ಬಹಿರಂಗವಾಗಿ ಆಯುಧಗಳನ್ನು ಕೊಂಡುಕೊಳ್ಳಲು ಇಸ್ರೇಲ್ ಸರ್ಕಾರಕ್ಕೆ ಅನುಮತಿ ಕೊಡಬೇಕೆಂಬುದಾಗಿ ವಿಶ್ವಸಂಸ್ಥೆಗೆ ಮನವಿ ಮಾಡಿದ್ದಾರೆ ಜೆರೂಸಲೆಂ ಸ್ಥಾನಮಾನದ ಬಗ್ಗೆ ಇಸ್ರೇಲ್ ಸರ್ಕಾರ ಕ್ಷಿಪ್ರದಲ್ಲೇ ಒಂದು ಪ್ಲಾನನ್ನು ವಿಶ್ವಸಂಸ್ಥೆಗೆ ಸೂಚಿಸಲಿದೆಯೆಂದು ಅವರು ತಿಳಿಸಿದರು

ರಷ್ಯ-ಚೀನಗಳಿಗೆ ರೈಲ್ವೆರಸ್ತೆ

ಚೀನದ ವಾಯವ್ಯ ಸರಹದ್ದಿನ ಪ್ರದೇಶಕ್ಕೂ ಸೋವಿಯೆಟ್ ರಷ್ಯಕ್ಕೂ ರೈಲ್ವೆ ಸಂಬಂಧ ಕಲ್ಪಿಸಲು ೨೫,೦೦೦ ಮಂದಿ ಚೀನ ಯೋಧರು ಎಡಬಿಡದೆ ದುಡಿಯುತ್ತಿದ್ದಾರೆ. ಈ ಹೊಸ ರೈಲ್ವೆ ರಸ್ತೆಯು ೧೫೦ ಮೈಲಿ ಉದ್ದವಿರುವುದು

ಅತ್ಯಂತ ದೊಡ್ಡ ಗಡಿಯಾರ

ಯೂರೋಪಿನಲ್ಲೆಲ್ಲ ಅತ್ಯಂತ ದೊಡ್ಡ ಗಡಿಯಾರ ಒಂದನ್ನು ಆಸ್ಟ್ರೋ ಎಂಬ ನಗರದ ಟವರ್‌ಹಾಲಿನಲ್ಲಿ ಇಡಲಾಗುವುದು. ಆ ಗಡಿಯಾರದ ಮುಖಭಾಗ ೨೬ ಅಡಿ ಅಗಲವಾಗಿರುವುದಂತೆ. ನಿಮಿಷ ತೋರಿಸುವ ಮುಳ್ಳು ೧೩ ಅಡಿ ಉದ್ದವಾಗಿರುವುದಂತೆ ಈ ಗಡಿಯಾರವನ್ನು ದೀಪಗಳಿಂದ ಅಲಂಕರಿಸಿ ಸಮುದ್ರದ ಆಚೆಗೂ ಇದು ಚೆನ್ನಾಗಿ ಕಾಣುವಂತೆ ಮಾಡಲಾಗುತ್ತದೆ ಈ ಭಾರಿ ಗಡಿಯಾರವನ್ನು ತಯಾರಿಸಲು ೧೫ ವರ್ಷಕಾಲ ಹಿಡಿಯುತಂತೆ.

ಮೈಸೂರಿಗೆ ಮತ್ತೆ ೬೦ ಬೇಲ್ ಮಿಲ್ ಬಟ್ಟೆ

ಮೈಸೂರು ಸರ್ಕಾರದ ಸಿವಿಲ್ ಸಪ್ಲೈ ಕಂಟ್ರೋಲರ್ ಕೋರಿಕೆಯಂತೆ ಬೊಂಬಾಯಿ ಟೆಕ್ಸ್‌ಟೈಲ್ ಕಮಿಷನರ್‌ರವರು ಮೈಸೂರು ಸಂಸ್ಥಾನಕ್ಕೆ ೬೦ ಬೇಲ್ ಮಿಲ್ ಬಟ್ಟೆ ಕಳುಹಿಸಲು ಒಪ್ಪಿದ್ದಾರೆ.

ಕ್ರೈಸ್ತ ಜನಾಂಗ ಗುರುಗಳ ನಿಧನ

ಮೈಸೂರಿನ ಬಿಷಪರಾದ ಮತ್ತು ಸಂಸ್ಥಾಪಕ ಒಬ್ಬ ಗಣ್ಯ ವ್ಯಕ್ತಿಗಳೂ ಆದ ರೈಟ್ ರೆವರೆಂಡ್ ಪಿ. ಗುರುತಾಂಕರವರು ಕಳೆದ ಶಾ॥ ೧೬ ರಲ್ಲಿ ಬೆಂಗಳೂರಿನಲ್ಲಿ ವಿಧಿವಶರಾದರು. ಇವರು ಕ್ರೈಸ್ತ ಜನಾಂಗದಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದು ಸಂಸ್ಥಾನದ ಭಾರತೀಯ ಬಿಷಪ್‌ರಲ್ಲಿ ಮೊದಲನೆಯವರಾಗಿದ್ದರು.

ಲಸನೋಹರವಾದ ಫೋಟೋಗಳು.

ಶ್ರೀಜಗದ್ಗು ರು ರೇಣುಕಾಚಾರ್ಯರ ಒಂಭತ್ತು ಆದ್ಯಪಟಲೀಲೆಗಳಿಂದ ಕೂಡಿದ ಫೋಟೋ ಸೈಜು ೨೮×೧೪ ಬೆಲೆ ೧ಕ್ಕೆ ೦—೬—೦

ಶ್ರೀರೇಣುಕಾಚಾರ್ಯ ಲಿಂಗಾವತಾರದ ಫೋಟೋ (ನಾನಾವಿಧವರ್ಣಾಲಂಕೃತ ಮಂದ್ರಿಕಾವರಣ) ಸೈಜು ೧೪×೧೦ ಬೆಲೆ ೦—೬—೦

ಶ್ರೀಜಗದ್ಗುರು ಪಾಂಡಿತ್ಯಾರ್ಯರು ಪಂಚಪೀಠಾಚಾರ್ಯರಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦

ಶ್ರೀ ಜಗದ್ಗುರು ಪಂಚಪೀಠಾಚಾರ್ಯರು ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ ೦—೩—೦

,, ,, ,, ಚಿಕ್ಕ ಸೈಜು ಬೆಲೆ ೦—೦—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಸಮ್ಯಾ ಭಿಷೇಕ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀರಂಕಣಾಚಾರ್ಯರಿಗೆ ಜಂಧ್ಯಾವಸೋತ್ಪತ್ತಿಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ವಿಘ್ನೇಶ್ವರನ ಪ್ರಾರ್ಥನೆಯಿಂದ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

೫ ಆಕರ್ಷಕ ಜಗದ್ಗುರು ವೀರಭದ್ರಶಿವಾಚಾರ್ಯರುಮಹಾಸ್ವಾಮಿಗಳವರ ಫೋಟೋ (ನಾನಾವಿಧವರ್ಣಾಲಂಕೃತ) ೦—೪—೦

ಶ್ರೀಶಾಕಾಶಗದ್ಗುರುಗಳಿಗೆ ಶ್ರೀರೇಣುಪುರದ ಜಗದ್ಗುರುಗಳು ಕಿರೀಟಧಾರಣಮಾಡಿಸಿದ ಫೋಟೋ ೦—೧—೬

ಶ್ರೀಮಜ್ಜಯಶಿಲೆ ಸಿದ್ಧಾಂತ ಶಿಖಾಮಣಿ ಶ್ರೀ ಶ್ರೀ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬

ಶ್ರೀಮದ್ರಂಭಾಪುರೀ ಕೀರ್ತಿಶಾಲಿಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ವರ್ಯರ ನಿರ್ವಾಣದ ಫೋಟೋ ೦—೧—೬

ಶ್ರೀಮದ್ಯುಧಿಷ್ಠಿರ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀ ೨೯ ಸ್ಮಿಗಳಮಠ ೯೧೦ ಕ್ಕೆ ಪಿಠದ ಫೋಟೋ ೦—೧—೬

ಪಂಡಿತ ಶ್ರೀರಾಶೀನಾಥಶಾಸ್ತ್ರಿಗಳವರ ಫೈನೋ (ನಾನಾವಿಧ ವರ್ಣಾಲಂಕೃತ ಮುದ್ರಿತ) ಚಿಕ್ಕಸೈಜು ಒಂದ್ ೦—೨—೦

ಪಂಡಿತ ಶ್ರೀಕಾಶಿ ನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ವರ್ಣಾಲಂಕೃತ ಮಂದ್ರಿಕಾವರಣದ) ದೊಡ್ಡಸೈಜು ಒಂದಕ್ಕೆ ೦—೪—೦

ಶ್ರೀ ಜಗದ್ಗು ರು ಉಜ್ಜಯಿನೀ ಪೀಠದ ಮಹಾನ್ ಸಿದ್ಧ ಆತಂತ ಸುಂದರವಾದ ಫೋಟೋ ಒಂದಕ್ಕೆ ೦—೧—೬

ಶ್ರೀ ರಂಭಾಪುರಿ ಉಜ್ಜಯಿನೀ ಪೀಠದ ಅಲಂಕಾರ ಸಿಂಹಾಸನಾರೂಢ ಸುಂದರ ಫೋಟೋ ಒಂದಕ್ಕೆ ೦—೧—೬

ಶ್ರೀ ಜಗದ್ಗುರು ಕೇದಾರಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾ ರಾಜರವರು ವಿರಾಜಿಸುತ್ತಿರುವ ಫೋಟೋ ೦—೧—೬

ಜೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಆಡ್ಡಪಲ್ಲಕ್ಕಿ ಒತೋಕಾಸದ ಫೋಟೋ ೦—೧—೬

ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು. ೦—೩—೦

ಸಿದ್ಧಾಂತ ಶಿಖಾಮಣಿ

ಈ ಅವಧಿಯೊಳವರನೇಕವಿರಚಿಸಿವೈಗ್ಯಂಧಗಳ ನೋಡಿದ ಫಲದಿಂದಾವರಿಸಿರು ಸ್ವದರ್ಮಜ್ಞಾನವು ಸದ್ಗುಣ ನಿಧಿ ಶಾಂತ । ಪೊಂದುತ ಪಾವನಪಂಚಾಚಾರ್ಯರ ಸಮಗ್ರತತ್ವದ ನೆಲೆ ಗುರುತ । ಕಾಣುತ ತವಕದಿ ಪಂಚಾಚಾರ್ಯಪೀಠಗಳ ಆಗಿನ ದುರವಸ್ಥಾ ॥ ಕೋ ನಿದಕಾಶೀನಾಥಶಾಸ್ತ್ರಿಗಳು ಭಾವಿಸಿ ನಾಗರು ನೀಗರು ಎನ್ನುವ ಭಾವವ ಕಡಿಯುವದಕೆ ಕಾಶೀಪೀಠದೊಳು ಯೋಚಿಸುತ್ತ । ಕರೆದರು ಧಾವಿಸಿ ಪಂಚಾಚಾರ್ಯರ ಸನ್ನೆಗೆಲಸ ಮಾಡಿದೆ ಸುತ್ತ ॥ಜಾಂಳ॥

ಅದರೊಳು ಸೆಕ್ಕೆ ಟರಿಯ ಕೆಲಸವನು ಮಾಡಿ ಸಕ್ಕೀ ರ್ತಿಯ ಗಳಿಸಿದರು । ಮಲ್ಲೆಮೊಳಗುಕ್ಕೇರುತ ಗುರುವರ್ಗ ಜಾಗೃತಿಯ ಗೈಯಲು ತೊಡಗಿದರು ॥ ಬಂದರು ಕರ್ಣಾ ಟಕನಾಡಿನಲಿ ವಿರಕ್ತರ ದಂಡುಗ ಕಿಲಿದರು ಪರುಠ ಯಿಂದಲಿ ಪೇಳುತ ಚರಗುರುಗಳಗೆಚ್ಚರವಿನಿಸ್ಪರಿಸಿದರು ॥ ಕರೆಯುತ ಚರಗುರುಪಟ್ಟಾಧಿಕಾರಿಗಳ ಸಮ್ಮೆಲನ ಪಂಡಿತರು । ಬಿಡಿಸುತ ದುರ್ನಡತೆಯ ಸದ್ಧರ್ಮದ ತಿರುಳನು ತಿಳಿಸುತ ಮಜ್ಜಾತ್ಮರು ॥ ಪೆಂಡಲಿಗೆ ಗುರುವರ್ಗದ ಸ್ಥಿರಬೀಜವಪ್ಪಿರೂಪವ ಸಮಯಕೆ ಮಹಪೀಯರು । ಪಟ್ಟುಧರುತರಕಸ್ಪದ ತಿರುಳ ಬಲ್ಲರಾ ರೇಣು ಕಾಚಾರ್ಯರು ॥ ಪೇಳುವದಾಗದು ಎಷ್ಟಗದ ವರ್ಣನೆ ಮಾಡಲು ಹೀಗೆ ನೀನ್ವೆಲ್ಲರು । ತಿಳಿಯಿರಿ ಸಾಗಿಸಿ ಮುಂದಿನ ಚರಿತ್ರ ಪೇಳುವೆ ಸನ್ಮಾರ್ಗತರು ॥ಕೂಡಬಲ್ಲವಿ॥

ಎನಿಸುತ ಗುರುವರ್ಗೋತ್ತೀಜಕಸಂಘದ ಸಭೆ ಕರೆಯುತ ಕುಂದಗೋಳ ಗ್ರಾಮದಲ್ಲಿ ಮುದಬೆರೆದು ನವಲ ಗುಂದ್ ಮನಗೂಳಗೂರಿಂ ಇದರಂತಪ್ಪವಿಂದ । ಪ್ರಾಂತಿಕಗುರುವರ್ಗದ ಪರಸತ್ವವ ಕರೆಯುತ ಕಲಾದರ್ಯೊ ಳೊಂದ ಬಹುಪರಿ ಮೆರೆದರು ಸತ್ಕೀರ್ತಿಯೊಳಗೆ ಕೂಡಿಸಿ ಸಭೆ ಒಹುಚೆಂದ ॥ ಶ್ರೀಗುಜ್ಜಗದ್ಗುರು ಪಂಚಾಚಾರ್ಯರ ನೇಮವ ಭದ್ರತೆಗೊಳಿಸಿದ ಪಂಡಿತ ಶ್ರೇಷ್ಠಾದರ ಶ್ರೀ ಕಾಶೀನಾಥಶಾಸ್ತ್ರಿಗಳ ಶಕ್ತಿವೃಂದ । ಸ್ವಧರ್ಮನಾಮಗಳಂಗ ನುದಿನ ಕೇಳಿ ನಡೆದರುಂಟಾಗುವಾನಂದ ॥೨॥

ಪಂಚಮುಖಿನ ಅಪರವತಾರಿಗಳು ಪಂಚಾಚಾರ್ಯರು ರಚಿಸಿದ ಸ್ವಧರ್ಮಪಂಚಪೀಠಗಳ ಜೀರ್ಣೋದ್ಧಾರಕೆ ಪೂರ್ಣಲಕ್ಷ್ಯವಿಟ್ಟು । ಅನೇಕ ಹಂಚಿಕೆ ಹಾಕುತ ಪಂಡಿತ ವರ್ಯನು ಮಡಿದು ಪಟ್ಟ ಕಸ್ಪ । ಹೇಳಲು ಸಂಚಿಯಿಸುತ ಆದೀಕ್ಷಿಸುನಿಗೆ ಆದರಾಗದೊಟ್ಟು ॥ ಮುಂಚೆ ಮಾಡಿ ಒಂದೆಂದ ಪುಣ್ಯಸ್ಥಲಸಂಚಯನೆಂತಹದಿರಬೇಕೆನ್ನುತ ವಂಚನೆಯಿಲ್ಲದ ಧರ್ಮಪ್ರೇಮಿಗಳು ಪೊಗಳುವರಿಂತಿಪ್ಪ । ತಿಳಿಯದು ಕೊಂಚಿಬುದ್ಧಿರ್ಜನರಿಗಿವರ ನಡೆಸುಯಿಯ ಮೂಲಗುರುಟ್ಟ

ಸಕಲಶಾಸ್ತ್ರವಾರೀಣರು ಈಪರಿ ಸ್ವಕುಲಸಮೂಹವ ಜ್ಞಾತಿಗೋಸುದರಕಳ ಹಾಕಿ ಬಹುಪ್ರಯತ್ನ ಮಾಡುತ ಆಸುದಿನ ಸಂತುಸ್ಟ । ಚರಿಸುತ ಸಕಲಪೀಠ ಸದ್ಧರ್ಮ ಗ್ರಂಥಗಳ ಶೋಧಿಸಿ ಎದುರಿಟ್ಟ । ಚರಗುರುಸಿಕರಪ್ರಕಾಶವ ಶಬ್ದಿಸುತ್ತ ಪ್ರತಿಯೊಬ್ಬನ ಮನಮುಟ್ಟ । ಯುಕುತಿ ಹಾಕಿ ಏನಾದರೊಂದು ಕೆಲಸ್ಕಾರ ನಡು ವಿನ ಗರಗರುಗಳು ಲೆಕ್ಕಿಸಕರಾಗುವ ಬರೆದಾವಯೆಯ ಪಿಂಡಿಸುತ ತಡೆಯನೆಸ್ಸ । ನಿಜಗುರುಶಿವರ ತೋರಿ ಸುತ ನಡೆದನು ಅಷ್ಟಾವರಣವರಮನಿಸ್ಸ ॥

ಸಮಮೆಲಚಿತ್ತನು ಕೇದಾರಪೀರದ ಹದನಗಟ್ಟು ಸಂಸ್ಥಾನಸ್ಥಿತಿಯ ತಿಳಿದಿದನು ಈವಾಟಕಭಾಗಕೆ ಕರೆ ಸುತ ಬಹುಪ್ರಯತ್ನಪಟ್ಟ । ಅವರಿಗೆ ಒದಗಿಸಿದನು ಬಹುವಿಧ ಸಲಕರಣೆಗಳನು ಸದ್ಭುಣಪಟ್ಟಿ । ಪೊಂದಲು ಪೊದಲಿನ ಶ್ರೀಗಳು ಶಿವಸಾಯುಜ್ಯವ ಆದೇಶದ ದುಷ್ಟ ಮದಾಂಧಜನರಿಗಳು ನಿಲಲಾರಂಭಭವಾಹಾರ್ಯರ ಅಧಿಕಾರದ ಕನಸ ನಡೆಸಿದರು ಕೋರ್ಟುನಲ್ಲಿ ಕೇಳುತ ಅವನು ಸ್ವಸ್ಥ ಪೋಗುತ ಚಿದುರಮತಿಯ ಚಾರಿತ್ರ ನಾಯಕನು ತಡೆಯದೆ ಎಳ್ಳೆಷ್ಟು ॥

ಚಟವಟಸುತ ಆ ವ್ಯಾಜ್ಯದ ನಿಜವನು ಬ್ರಿಟಿಷ್ ಗವರ್ನ್ಮೆಂಟಿಗೆ ಆ ಭಾಗದ ಪ್ರಭಾವಿತರ ಅರಿಕಾ ದೆ ಮಹಾರಾಜರ ಭೆಟ್ಟಿಯಾಗಿ ಸ್ವಸ್ಥ । ಪೇಳುತ ಕರಿನ ಪ್ರಸಂಗವ ಅವರಿಂ ಪರಿಹರಿಸಿ ವ್ಯಾಜ್ಯವ ಥಿಟ್ಟು ಸ್ಫಾಪಿಸಿ ವ ರೂಢಿಂ ಸಂಸ್ಕೃತವೈದಿಕಾರ್ಯವೀಗಲಿಗ ಳ ಲಶ್ರೇಷ್ಠ ॥ ಪರವ ಮಾಡುತಿ ಗುರುಗಳ ನಾಮವ ಹುಟ್ಟಿಸಿ ಇಂಗ್ಲೀಷ್ ಮಿಡಲ್‌ಸ್ಕೂಲ ವಾಕ್ಕುಟುಗಳೆ ನಿಸುತಲಿ ತನ್ನ ಹೆಸರು ಉಳಿಸವರ ಮನೋಭೀಷ್ಟ ಬಂದನು ಕುಟಿಲಾಶಕೆಂಬುವ ಕೀರ್ತಿಯ ಕೂಡಿಸಿ ಮುದದಿ ಹೃಷ್ಟ ॥ಜಾಳ॥

ಈಪರಿ ರಂಭಾಪುರಿನಂಕಾಸನದಧಿಕಾರಿಗಳಾಗಿದ್ದಂಥ । ಪರತಿವಬಿಂಬನ್ಯರೂಪ ಪಂಚಾಸ್ಪರಶ್ರೀಗಳಕಸ್ಥಾತ್ ॥ ಶಿವಸಾಯುಜ್ಯವನ್ಪೆಯಲು ಮುಂದಾಪೀರದ ಅಧಿಕಾರ ನವರತ । ವೆಂಸುದಕಂದೇ ವಿರಕ್ತಸಪ್ಪಜ್ಜರಿಂ ವ್ಯಾಜ್ಯವ ನಡೆಯಿಸಿ ತುರತ ॥ ಪಡೆಯಲು ಜಯವನು ಕಾಶೀನಾಥ ಶಾಸ್ತ್ರಿಗಳಗತಿಶಕ್ತಿಪಸಿಸುತ್ತ । ಪ್ರಯತ್ನ ಪರಿಶ್ರಮ ಹಗಲಿರುಳಲಿ ಆಹಾರ ನೀರುಸಹಿತ ಮರೆತ ॥ ಮೈಸೂರ್ ಮಹಾರಾಜರಿಗೊಂದೇ ದಿನ ಸರ್ವರ ಇಚ್ಛೆ ತಿಳಿಯಲೆಂತಾ । ಕೊಡಿಸಲು ಸಹಸ್ರತಾರುಗಳ ತ್ವರಿತ ಸರ್ವಕಡೆಯಿಂದಲಿ ಪುನೀತ ॥ ಭಾರತಧರ್ಮಮಹಾಮಂಡಲ ಸಂಸ್ಥೆಯ ಮುಖದಿಂ ಮಾಡಿದೆ ಸುತ್ತ । ಬರೆಯಿಸಿ ಮುದ್ರಿಸಿದ ಪತ್ರವ ಶೃಂಗೇರಿಯ ಮಠದೆಜಂಟಿಂಗಿಂದಕ್ಕೆ ತಿ

ಸೊಂಡೂರ್ ಪುರಮಹಾರಾಜರ ವತಿಯಿಂ ಕಾಶೀ ಮಹಾರಾಜರ ವತಿಯಿಂದನೇಕದೇಶದೊಳಿರುತಿಹ ಮಿ ಶ್ರಯಸ್ಥರ ವತಿಯಿಂ ಒರೆಯಿಸಿ ಬಂದ । ನೋಡಿದರು ಮೈಸೂರ ಮಹಾರಾಜರು ವೃತ್ತಿಯ ಬದಲಿಸಿ ಮುದ ದಿಂದ । ಕೊಟ್ಟರು ಈ ಮಹಾತ್ಮರ ಇಚ್ಛೆಯಂ ಮೇರೆಗೆ ಮುಕುಮನಃ ಭರದಿಂ ॥ ಶ್ರೀಮಜ್ಜಗದ್ಗುರುಸಂಹಾಣಾ ರ್ಯರ ನೇಮನ ಭದ್ರತೆಗೊಳಿಸಿ ಕಂಡಿತವೈಮಾದರ ಶ್ರೀಕಾಶೀನಾಥಶಾಸ್ತ್ರಿಗಳ ಶಕ್ತಿವ್ಯಂದ । ಸ್ವಧರ್ಮಗಾಮಿ ಳಿಗನುದಿನ ಕೇಳಿ ನಡೆದರುಂಟಾಗುವದಾನಂದ ॥೩॥

ಸದ್ಯಃ ಶಿವಪುರದೊಳಗಿರುತಿಹ ಸದ್ವಿಚಾರಶ್ರೀ ವಾನಂದರಾಜೇಂದ್ರ ಶಿವಾಚಾರ್ಯರನು ಮಾಡಿ ಆ ೀಕಕೆ ತತ್ಕ್ಷಣಕೆ । ಶ್ರಿಕಾಲಶುದ್ಧ ಶಿಸ್ಯೋದ್ಯಾಗರುಂ ಳೆಂಬುದನು ಈ ಜಗಕೆ । ತಿಳಿಸಿ ಸದ್ಭದ್ರಿಸ್ಥಶಾಖವ ರವಿ ಬಂದರು ಮುಂದೆ ಶ್ರೀಮಂದಕ್ಕೆ ॥ ಜಜ್ಜಡಚಿತ್ತ ಈ ಮಹಿಮರಿಗೂಡಬದ್ಧವಜೀವಿಗಳು ಗೈದ ಕಾರ್ಯ ಮುರ್ಬಿದ್ದು ನತಿಸುತಲಿ ಬಂದು ಕ್ಷಮೆಯಂ ಬೇಡಿದರು ದಾಂಬುಜಕೆ । ಆಗುವದು ಇದ್ದದ್ದೂತಾತು ಇದ್ದಂತೆ ಶೋಚಾಗ್ಯಂ ಶಿವನ ಮನೆಯೊಳಕೆ ॥

ಮತ್ತೆ ಮಹೀಶೂರ ಮಹಾರಾಜರಿಗೆ ಉತ್ತಮ ೀರದ ಚರಿತ್ರ ಸೇಳಲು ಭಕ್ತಿಯು ಜನಿಸುತ ಪೀರಕೆ ಮನುಷಿಸಿ ಸನ್ನಿಧಿಚರಣಕ್ಕೆ । ನಮಸ್ಕರಿಸುತ್ತ ಅತಿಸವ ಪಡಕೊಂಡಾಕ್ಷಣ ಪ್ರೇಗಿ ತಮ್ಮ ಪುರಕೆ । ಜಗದ್ಗುರು ತ್ಯಸ್ಥಸ್ಥಾಧಿಯ ಸವಾರಿಯುತ್ಸವದಿಂದ ಮೈಸೂರಕ್ಕೆ ॥ ತ್ಯುತ್ಸವಮಬರುದಾವಳಿಸ್ಫೋರ್ಜಕೆ ಒತ್ತರದಿಂದಲಿ ಬರ ಮಾಡಿಸಿಕೊಂಡಿತ್ತು ಕಾಣಿಕೆಯ ಕಳಸಿದ ವಾರ್ತೆಯು ಘತ್ತು ಸರ್ವಜನಕೆ । ಜಾಗರಿಕ ಕೃತ್ಯಕೆ ಕಾರೀನಾದ ಶ್ರೀಗಳ ಪ್ರಯತ್ನ ನೇ ಮುಖ್ಯ ॥

ಪರಮತವಾದಿಗಳಿವೆ ಪ್ರಕಾರ ಸರಸಸ್ವನರ್ಮಕೆ ನಿಂ ಯಿನಾಡದ ತೆರದೊಳು ಪ್ರಸ್ತಾಪಿಸಬೇಕೆಂಬುದ ಇಚ್ಛೆ ಯುಟ್ಟು ಮನಕೆ । ಶೋದಿಸಿ ಧರೆಯೊಳಗಿರುತಿಹ ಹಳೇ ಗ್ರಂಥಗಳ ಅರಕ ಹುಡಿಕಿ ಇವಕೆ । ಟೀಕೆಯ ಬರೆಯುತ ಹಿಂಪುಸ್ತಂಥಗಳನು ಸ್ವಧರ್ಮಪ್ರಚಾರಪಡಿಸುವಕೆ ॥ ಪುರ ಭರಕ್ಕೆಪೆಯಂದಲಿ ಧನವನು ಶೇಖರಿಸುತ ಮೈಸೂ ರಿಳು ಪಂಚಾಚಾರ್ಯರ ನಾಮದಿ ವಿದ್ಯುನ್ಮುದ್ರಣ ಶಾಲೆಯ ಸಮಾಜಹಿತಕೆ । ಸ್ಥಾಪಿಸಿ ತ್ಯಂತಶ್ರಮದಿಂ ಕಾರ್ಯವ ಜರಗಿಸಿ ಮೆರೆದರು ಹೆಚ್ಚಿಸಿ ದಿವ್ಯದಿನಕೆ ॥ಜಾಂ॥

ಪಂಚಾಚಾರ್ಯಪ್ರಭೆಯೆಂಬುವ ಪತ್ರಿಕೆ ಪ್ರತಿವಾರ ೊಂದು ಸತತ । ತೆಗೆಯುತ ಧರ್ಮಾಧರ್ಮದ ತಿಳಿಸುವಲಿ ಹರುವು ತೆರದಿ ತುರತ ॥ ಸೊಗಸಿ ದಿಗ್ರಂಥಮಾಲೆಯ ಸಂಖ್ಯೆಯು ಬೆಳೆಸುತ ಆಧಾರ ತ । ಭೂಮಿಬ್ಯತನು ಮುಖಾಂಶ್ಯವೇಶಜನ ನೈಕಿಗೊಸುತ್ತ ॥ ಉಜ್ಜಯಿನೀಪೀಠಾಧಿಪ ಸಿದ್ಧ ಂಗಿಪಾಚಾರ್ಯರ ಒರೆಸುತ್ತ ಬಾ ಯೋಳನೇ ೂಪ್ಸವದಿ ಆಷ್ಟಪಲ್ಲಕ್ಕಿಯ ಜರಗಿಸಿದನು ಸಿಸ್ತ ॥ ಟಿಗಿಯ ಚನ್ನವೀರಶಿವಾಚಾರ್ಯರು ಹನ್ನೊಂದು ಗಳ ಪರಿಯಂತ । ಮಾಡಲು ಧನ್ಯಪಂಚಾಕ್ಷರ ಂತಾಸ್ತುಮ್ಮಾನಕಾರಣಕಿತ್ತ ॥ ಸೊಗಯಿಸ ಸೊಲ್ಲಾ ರದೊಳು ರಂಭಾವುರಸನ್ನಿಧಿಯನು ಬರಸುತ್ತ । ಆಷ್ಟೆ ಲಕ್ಷಿಯ ಉತ್ಸವ ಜರಗಿಸುವದಕೆ ಕಾರಣೀಭೂತ ॥ ಶ್ರೀಸಾಥಶಾಸ್ತ್ರಿಗಳು ಮಾಡಿದ ಧರ್ಮೋದ್ಧಾರಕಾರ್ಯ ರುತ । ವರ್ಣಿಸಲಾಗದು ಎನ್ನಯ ಮತಿ ನೀವಿಸ್ಪ ಗಿರಿ ಸಂತೃಪ್ತ ॥ ತೂಡಬಲ್ಲವು ॥

ಮತ್ತೊಮ್ಮೆ । ಕೃಮೇಣ ಚರಿತ್ರ ವಿಸ್ತರಿಸುತ ಬಹು ಮಾನಪೂರ್ವಕ ಸೇಳುವೆ ಬಾಡಿಗಿಸಮಧಿಸ್ಥ ಗುರು ಳಕನ ಕೃಪೆಯುತ ಮನ್ನೂರ್ಭಾಯಿಕಂದ । ರಚಿಸುತ ಮವ ಪಟ್ಟು ಬಾಡುವನಿಗೆ ಕಾರ್ಯಕ್ರಮ. ನಿರ್ಬಂಧ । ರಿಸುತ ಉಮಾಪತಿಯ ಸಭಿಕರಿಗೆ ಬೇಡುವೆನು ನಾಮ ಮತಿಮಂದ ॥ ಶ್ರೀಮಜ್ಜಗದ್ಗುರುಸಂಹಾಣಾ ರ್ಯರ ನೇಮನ ಭದ್ರತೆಗೊಳಿಸಿದ ಪಂಡಿತಶ್ರೇಷ್ಠಾ ಶ್ರೀಕಾಶೀನಾಥಶಾಸ್ತ್ರಿಗಳ ಶಕ್ತಿವ್ಯಂದ । ಸ್ವಧರ್ಮ ಗಾಮಿಗಳನುದಿನ ಕೇಳಿ ನಡೆದರುಂಟಾಗುವದಾನಂದ ॥

ಕವಿ ಮನ್ನೂರಭಾಯಿಯವರ ಪುತ್ರ
ಮಲ್ಲಿಭಾಯಿ ಬಾಡಗಿ.

॥ ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥

ಅಜ್ಜರಿಕೆಯಾಗಿ ಕೈಲಾಸದಲ್ಲಿರುವ ಕಾಶೀನಾಥ ಗುರುಪುಂಗವರಿಗರ್ಪಿಸಿದ ಆತ್ಮನಿವೇದನೆ

ಓ ಧೀರಶಾತ್ಮಸ್ಥೈರತಕಗುರುಮೂರ್ತಿಯೇ, ನಿನ್ನನ್ನೇ ನಂಬಿ ಶಿಕ್ಷವನ್ನಾಗಿ ಭಾವಿಸಿದ್ದ ಭಕ್ತಬ್ಬಂದವನ್ನೆಲ್ಲಾ ತಬ್ಬಲಿಗಳನ್ನಾಗಿ ಮಾಡಿ ಕೇವಲ ನಿನ್ನೊಬ್ಬನ ಸ್ಥಾನಂದ ಕಾಲಿಗಿ ಶಿವಸ್ಥಿಧಿಗೆ ಬಿಜಮಾಡಿಸಿದೆಯೋ ? ಕಾಂತಾತ್ಮಿ ನನಗೆ ನೆರವಾಗುವೆನಂರಾರಿಯರು ? ಶಂಕೆ, ಸಂತಾಪ ಗಳನ್ನು ನಿವಾರಿಸುವರಾರುವರು.

ಓ ವೀರಕರ್ಮಯೋಗಿಯೇ, ಕುಹಕಜನಾರಣ್ಯ ದಾವಾನಲನೇ, ವಿಕಾಲಕೆ ನಮ್ಮನ್ನು ಕೈಬಿಟ್ಟೆದ್ದು ನಿನಗೆ ನ್ಯಾಯನಿಸಿಸುತ್ತದೆಯೇ ? ಹಿಂದೆ ಕೇಳದ, ಈಗ ಕಾಣದ, ಮುಂದೆ ಬಾರದ ಪ್ರಚಂಡಕಾರ್ಯಗಳಿದ್ದು, ಆ ಕಾರ್ಯಕ್ಕಾಗಿಯೇ ತನು ಮನ ಧನಗಳನ್ನು ಪೂರ್ತಾರ್ಪಣಮಾಡಿದ ನೈಷ್ಠಿಕ ಬ್ರಹ್ಮಚಾರಿಯಾದ ನಿನಗೆ ಹಗಲುಕುರುಡರಾದ ನಾವುಗಳು ಸರಿಯಾದ ರೀತಿಯಲ್ಲಿ ಸಹಾಯಸೇವೆಗಳನ್ನು ಸಲಸಲಿಲ್ಲವೆಂದು ಸನ್ನೇ ಶ್ವರನಲ್ಲಿ ಅರಿಕೆಮಾಡುತ್ತಿರುವೆಯಾ ? ಬೇಡ ! ಬೇಡ !! ಸ್ವಾಮಿ ನಿನ್ನಲ್ಲಿ ನಾವು ಅಪರಾಧವೆಸಗಿದುದು ನಿಜ ಆದರೂ ಆ ವಾರ್ತೆಯನ್ನು ಸಾವಕಾಶವನಲ್ಲಿ ಅರಿಕೆಮಾಡಬೇಡ ನಮ್ಮ ತಪ್ಪುಗಾಗಿ ಶಿಕ್ಷೆಯನ್ನು ಈಗಾಗಲೇ ಅನುಭವಿಸಿ ದ್ದೇವೆ ಮುಂದೆ ನಮ್ಮನ್ನು ನಾವು ತಿದ್ದಿಕ್ಕೊಳ್ಳು ಸಿದ್ಧರಿದ್ದೇವೆ

ಧೌತಿಕವೈಹಧಾರಣೆಮಾಡಿ ಕುಟಿಲರ ಹಾಗೂ ಕುಹಕಿಗಳ ಮೇಲೆ ನೋಡಗಳಂತೆ ಕವಿದು ಗುಡುಗಿನಂತೆ ಅರ್ಘಟಿಸಿ ಸಿಡಿಲಿನಂತೆ ಅಪ್ಪಳಿಸಿ ಆಮೇಘವಾದ ವರ್ಷ ದಂತೆ ಎರಚಿಚ್ಚಿನ್ನವಾಗಿ ವರ್ಷಿಸಿ, ಹುಚ್ಚುಹೊಳೆಯಂತೆ ಎಡಬಲಗಳನ್ನು ಕೊರೆದರೆಯು ನಿರ್ದಿಸ್ಯಕಾರ್ಯವನ್ನು ಸಾಧಿಸಿ ಅಂತ್ಯದಲ್ಲಿ ಜನಂಶಾತ್ಮಾಂಬದಿಯಲ್ಲಿ ಸಂಗಮ ವಾದ ಓ ಪುಣ್ಯಾತೀರ್ಥನೇ, ಓ ಮುಕ್ತಾತ್ಮನೇ ನಿನ್ನ ಅನುಪಮ ತೇಜೋಜ್ವಾಲೆಯು ನಮ್ಮೆಲ್ಲರ ಹೃದಯ ಮತ್ತು ಸರ್ವಾಂಗಗಳಲ್ಲಿ ಪ್ರಕಟವಾಗಿ ನೀನು ಎತ್ತಿ ನಿಲ್ಲಿಸಿ ಹೋಗಿರುವ ವಿಜಯಪತಾಕೆಯನ್ನು ಎಂದೂ ಕೆಳಗಿಳಿಸದಂತೆ ನಮ್ಮೆಲ್ಲರಿಗೆ ಶಕ್ತಿಯನ್ನು ದಯ ಪಾಲಿಸು

ಓ ನಿಷ್ಕಾಮಯೋಗಿ, ನೀನೀ ಪವಿತ್ರಭೂಮಿಯಲ್ಲಿ ಗೈಯ್ದ ಕಾರ್ಯಗಳ ಸಂಮಾಣವನ್ನು ಕಂಡುಹಿಡಿಯಲು ಜಗದೆಲ್ಲಾ ಸೇರಿ ಮಾನ, ದಂಡಗಳನ್ನು ಹುಡುಕು ತ್ತಿದ್ದಾರೆ ಅದರೆ ಈ ವಿಶ್ವನ್ಯಾಸಿಕಾರ್ಯವನ್ನು ಆಳ ಯುವ ಪ್ರಮಾಣದ ಮಾನ, ದಂಡಗಳು ಇಡೀ ಪ್ರಪ್ಯ ಸೈಶ್ವರ್ಯಲ್ಲೇ ಸಿಕ್ಕಲಾರವೆಂಬುದನ್ನು ಅವರೆಲ್ಲು ಬಲ್ಲರು ? ಅವರ ಆಗಲಿ ವಿಶ್ವದಗಲ, ಉದ್ದ ವಿಶ್ವದುದ್ದ ಇದೇ ಸರಿಯಾದ ಅಳತೆ

ಶಾರದೆಯ ಲೀಲಾವತಾರದ ಕವಿನರೇಣ್ಯನೇ, ನೀನು ಪಠಯಣಮಾಡುವಾಗ ಗುರುತಿಗಾಗಿ ಬಿಟ್ಟುಬೋದ ಗ್ರಂಥಪುಟ್ಟಗಳಲ್ಲಿ ಬಣ್ಣದಲ್ಲಿ, ವಾಸನೆಯಲ್ಲಿ, ನೋಡಿಕತೆಯಲ್ಲಿ ಶತಾಂಶ ವೈದ್ಯಿಯಾಗಿಬಿಟ್ಟಿದೆ ಅದರೆ ಉದ್ದವಲ್ಲಿ ನೀನೇ ಒಲ್ಲೆ

ಆಚಾರ್ಯರಿಂತಶಾತ್ಮನೇ ಒಂದು ದಿನ ಹಗಲು ಒಂದು ದೃಶ್ಯ ಕಣ್ಣಿಗೆ ಬಿತ್ತು ಅದನ್ನೂ ತರಿಕೆಮಾಪುತ್ತೇನೆ ಹೊಂಬರಿಯ

" ನೀನು ಮಾಡಿದ ಉಪದೇಶ, ಗುಡುಗಿದ ಗುಡುಗು ಆಕಾಶದಲ್ಲಿ ಧ್ವನಿಯೆಯ್ಯುತ್ತಿತ್ತು ಭೂಮಿಯಲ್ಲಿ ನೀನು ಎತ್ತಿ ನಿಲ್ಲಿಸಿದ್ದ ಶ್ರೀ ಜಗದಾಚಾರ್ಯರ ವಿಜಯಪತಾಕೆ ಪಂಚಕಗಳಂ ಬಾನಗಲಕ್ಕೂ ಹಾರಾಡುತ್ತಿದ್ದುವು ಅದರ ಕೆಳಗೆ ರೇಣುಕಾದಿ ಆಚಾರ್ಯರು ಮಂದರಾಸ ವದನರಾಗಿಯೂ, ಅಧಯಹಸ್ತರಾಗಿಯೂ ನಿಂತಿದ್ದರು ಆ ಪ್ರಮಥಪುಂಗವರ ಮುಂದೆ ನೀನು ನಮ್ಮನ್ನೇ ಕರುಣಾದೃಷ್ಟಿಯಿಂದ ನೋಡುತ್ತಾ ನಿಂದಿದ್ದೆ ಪ್ರಭಾ ದೇವಿಯು ದಿನವನದಲಿನಾ ಹಸುರೊಸಿಸಿಂತೆ ಅಳುತ್ತಾ, ನಿನ್ನ ಗ್ರಂಥಳುಮಾ ಮಾಲೆಯಮ್ಮ ನೀಂತಿದ್ದೆಳು ಅಳುತ್ತಾ, ನಿಂದಿದ್ದಳು ನೆರೆದ ಭಕ್ತರೆಲ್ಲರೂ ಮುಖ, ಸಂತೋಷಾ ಶ್ರುಗಳನ್ನು ಒಮ್ಮೆಯೇ ಸುರಿಸುತ್ತಾ ಪ್ರಾರ್ಥಿಸುತ್ತಿದ್ದರು ನೀನು ಪ್ರಭಾದೇವಿಯನ್ನ ಸಂತೈಸಿ, ಮಾಲೆ ಸಹಿತ ನಿನ್ನ ಸೋದರ ಶ್ರೀ ಮಹದೇವನ ಕೈಗೆ ಕೊಟ್ಟೆ ಪ್ರಭಾದೇವಿಯು ಸಂತೋಷದಿಂದ ನಿನ್ನ ಸೋದರನನ್ನು ಹಿಂಬಾಲಿಸಿದಳು ನಮ್ಮೆಲ್ಲರಿಗೆ ಒಂದು ವಿಧವಾದ ಮಹಾನಂದ ಪ್ರಾಪ್ತವಾಯಿತು ಅಪ್ಪರಲ್ಲಿ ಧೃತಿಯ ಅಗೋಚರವಾಗಿಬಿಟ್ಟಿತು "

ಈ ದೃಶ್ಯವನ್ನು ಮರೆತು ಜೀವಿಸಬಹುದೇ ದೇವಾ, ಪ್ರಮಥಪುಂಗವಾ, ನಮ್ಮ ದೇಹಿಕೆ ಏಸೆಂದರೆ, ನೀರಿರುವ ಮಂಗಳಸ್ನಾನದಂದೇ ಪ್ರತಿನಿಧಿದ ಉಷಃಕಾಲದಲ್ಲಿ ನಿನ್ನ ನವ್ಯಭಕ್ತರಿಗಾಗಿ ಅತೀರ್ವದಿಸಿ ಹರಸು ಮತ್ತು ಅದೇ ಸ್ನಾನದಲ್ಲಿ ನಿನಗಾಗಿ ನಮ್ಮ ನಮ್ಮ ನವ್ಯಮಂಗಳ ಪಂಚಪ್ರಾಣಗಳಾದ ಶ್ರೀಜಗದ್ಗುರು ಪಂಚಾಚಾರ್ಯ ಗುರುವರರು ನಮ್ಮನ್ನು ಉದ್ಧರಿಸುವಂತೆ ನಮ್ಮ ಪರ ವಾಗಿ ನೀನು ಪ್ರಾರ್ಥಿಸು ಕೊನೆಯದಾಗಿ ನಿನಗೆ ನಮ್ಮ ಮೇಲಿನ ಅನುಕಂಪವು ಅತಿಶಯವಾಗಿದ್ದು, ಜತೆಗೆ ಶ್ರೀ ಗಾಂಭಂಕರರ ಆಜ್ಞೆಯಾದಲ್ಲಿ ಮತ್ತೊಮ್ಮೆ ಈ ಭೂಮಂಡಲದಲ್ಲಿ ಉದ್ಭವಿಸು ಸ್ವಾಮಿ

ತಾ—ಗುರುವರೇಣ್ಯಾ, ಈ ಆತ್ಮನಿವೇದನೆ ಯನ್ನು ಒರೆಯಲು ಶೇಷುಣಿಗೆ ಮಸಿಯನ್ನು ಅದ್ದಿಲ್ಲ ನಮ್ಮೆಲ್ಲರಿಗೆ ನಿನ್ನ ವಿಯೋಗದಿಂದುಂಟಾದ ದುಃಖಾಶ್ರು ಜಲದಿಂದ ಅದ್ದಿ ಬರೆದಿರುವೆ ಇದರಿಂದ ನಮ್ಮ ದುಃಖದ ತೀವ್ರತೆಯನ್ನು ಅರಿತು ಸಂತೈಸು

ಹೆಜ್ ಸಿ ಚಂದ್ರಶೇಖರಾರಾಧ್ಯ,
ಹೊಸಪುರ ಕಸಬಾಹೋಬಳಿ

ಪುಣ್ಯತಿಥಿಮಹೋತ್ಸವ

ಕಲಘಟಗಿ ತಾಲೂಕ ಜೆಲಮಂತರ ಹಿರೇಮಠದ ಜಜ್ಞಬಸವೇಶ್ವರ ಶಿವಯೋಗಿಗಳವರ ೧೫೫ನೇ ಪುಣ್ಯ ತಿಥಿಮಹೋತ್ಸವವು ವಾರ್ಷಿಕ ಪದ್ಧತಿಯಂತೆ ತಾ॥ ೨೩ ೬ ೫೦ ನೇ ಮಂಗಳವಾರ ಪದರ ಮರಾಧ್ಯಸ್ಥ ರಾದ ನೆಳಿ ಸಿದ್ಧರಾಮೇಶ್ವರಸ್ವಾಮಿಗಳವರ ನೇತೃತ್ವ ದಲ್ಲಿ ಹುಬ್ಬಳ್ಳಿ ಹುಕ್ಕೇರಿಮಠ, ಶ್ರೀಗಿ ಪ॥ ಬ್ರ॥ ಗುರು ಸಿದ್ಧಸ್ವಾಮಿಯವರ ಅಧ್ಯಕ್ಷತೆಯಲ್ಲಿ ಒಳ್ಳೇ ವೈಭವದಿಂದ ನೆರವೇರಿಸಲ್ಪಟ್ಟಿತು ಆ ದಿವಸ ಪ್ರಾತಃಕಾಲ ಶಿವ ಯೋಗಿಗಳವರ ಭಾವಚಿತ್ರದ ಪಲ್ಲಕ್ಕಿ ಉತ್ಸವವನ್ನು ಭಜನೆಮೇಳದೊಂದಿಗೆ ಊರ ಜನರೆಲ್ಲರು ಉತ್ಸಾಹದಿಂದ ನೆರವೇರಿಸಿದರು ಮಧ್ಯಾಹ್ನದಿಂದ ರಾತ್ರಿ ೮ ಘಂಟೆಯ ವರೆಗೆ ಜನ್ಮಸಂತಪೇಕ್ಷೆ ನಡೆಯಿತು ೯ ರಿಂದ ೧೧ ೩ ವರೆಗೆ ಪುರಾಣಪ್ರವಚನ ಪ್ರವೀಣ ವೇ॥ ಪಂ॥ ಕಲ್ಲಿನಾಥ ಶಾಸ್ತ್ರಿಗಳು ದ್ಯಾಂಪೂರ ಇವರು ತಾವು ರಚಿಸಿದ ಶ್ರೀಗಳ ವರ ಪುರಾಣದ ಪ್ರಥಮಾಧ್ಯಾಯವನ್ನು ಪ್ರವಚನ ಮಾಡಿದರು ೧೦ ರಿಂದ ೧೧ ವರೆಗೆ ರೇಣಕಾಸ್ತವ್ಯೇನ ವೇ॥ ಇಂಗಳಗಿ ಹಿರೇಮಠದ ವಿರುಪಾಕ್ಷಶಾಸ್ತ್ರಿಗಳಿಂದ ವೇಮನಾರಾಧ್ಯರ ಕವಿಯನ್ನು ಒಳ್ಳೇ ಸುಶ್ರಾವ್ಯವಾಗಿ ಕೀರ್ತನರೂಪದಲ್ಲಿ ವಿಶದಪಡಿಸಿದರು ಮಧ್ಯಾಹ್ನ ಶಿಲಾವತಿ ಆಲದಕಟ್ಟಿ ಸಂಗನಗೌಡರು ಸಕಲೇಶಮಾದ ರಸರ ಕಥೆಯ ಕೀರ್ತನಮಾಡಿದರು ಸದರಿ ಉತ್ಸವಕ್ಕೆ ಹುಬ್ಬಳ್ಳಿ ಹಾವೇರಿ ಬ್ಯಾಡಗಿ ಲಿರ್ಲಘಟ್ಟಿ, ಹೊಸಕ್ಯಾಲ, ಕಲಘಟಗಿ, ಬೆಂಡ್ಲಾ ಹೂರೆಕೆಬ್ಬಿಕೊಪ್ಪ ಮೊದಲಾದ ಸುತ್ತಮುತ್ತಿನ ಗ್ರಾಮಗಳ ಭಕ್ತಮಾಹೇಶ್ವರರು ಆಗಮಿ ಸಿದ್ದರು ಶ್ರೀಗುರುವರ ಪುರಾಣದ ಅಜ್ಞಿನ ಕೇಸವನ್ನು ಮುಂದಿನ ತಿಥಿವರೆಗಾಗಿ ಪೂರ್ವಸಬೇಕೆಂದು ಭಕ್ತ ಮಾಹೇಶ್ವರರು ನಿರ್ಧರಿಸಿದರು ಒಂದಿನ ಎಲ್ಲ ಉತ್ಸವ ಗಳಿಗಿಂತಲೂ ಈ ವರ್ಷದ ಉತ್ಸವ ನ ಭೂತೋ ಭವಿ ಷ್ಯತಿ ಎಂಬಂತೆ ಒಳ್ಳೇ ವಿಜೃಂಭಣೆಯಿಂದ ಜರಿಗಿಸಲ್ಪ ಟ್ಟಿತು ಈ ಸಮಯದಲ್ಲಿ ಪ್ರಭಾಪೀಠಸಣಿಗಾಗಿ ೧೧ ರೂ ಸಮರ್ಪಿಸಿದ್ದಾರೆ

ಶಿವನಗೌಡ ಕತ್ತಿ ತರ್ಲಘಟ್ಟಿ.

ಮೈಸೂರಿಗೆ ೪ ಸಹಸ್ರ ಟ್ರ ಗೋದಿ

'ಎಸ್ ಎಸ್ ಮಾಡೆಲೆರಯನ್' ಹಡಗಿನಲ್ಲಿ ಮದರಾಸಿಗೆ ಬಂದಿರುವ ೮,೫೦೦ ಟನ್ ಗೋಧಿಯಲ್ಲಿ ಮೈಸೂರು ಸಂಸ್ಥಾನಕ್ಕೆ ೪ ಸಹಸ್ರ ಟನ್ ಗೋಧಿಯನ್ನು ಕೊಡಲಾಗಿದೆ.

ವರ್ತಮಾನಸಂಗ್ರಹ

'ಲೋಕಲ್' ಅಂಚೆ ಕಾರ್ಡುಗಳು

ಅರ್ಧಾಣೆಯ 'ಲೋಕಲ್' ಪೋಸ್ಟ್ ಕಾರ್ಡುಗಳು ಜುಲೈ ಒಂದರಿಂದ ಎಲ್ಲ ಅಂಚೆ ಕಛೇರಿಗಳಲ್ಲೂ ಮಾರಾಟಕ್ಕೆ ಬರುವುದು ಆ ಕಾರ್ಡಿನ ಸ್ಟಾಂಪಿನ ಮೇಲೆ 'ಕೊನಾರ್ಕ್' ಕುದುರೆಯ ತಲೆ ಇರುವುದು

ಬಂದರು ನಗರಗಳಲ್ಲಿ ಪೆಟ್ರೋಲ್ ರೇಷನ್ ರದ್ದು

ಒಂದರು ನಗರಗಳಾದ ಬೊಂಬಾಯಿ, ಮದ್ರಾಸ್, ಕಲ್ಕತ್ತಾಗಳಲ್ಲೂ ಮತ್ತು ಅವುಗಳ ಸಮೀಪ ಪ್ರದೇಶಗಳಲ್ಲೂ, ಕೊಚಿನ್, ಎನ್ನಾಕುಲಂಗಳಲ್ಲೂ ಜುಲೈ ೧ ರಿಂದ ಪೆಟ್ರೋಲ್ ರೇಷನಿಂಗನ್ನು ರದ್ದುಪಡಿಸಿರುವುದಾಗಿ ಅಧಿಕೃತ ಪ್ರಕಟಣೆ ಹೊರಟಿದೆ

ಭಾರತದ ಉಳಿದ ಪ್ರದೇಶಗಳಲ್ಲಿ ಖಾಸಗಿ ಕಾರುಗಳು ಮತ್ತು ಮೋಟಾರ್ ಸೈಕ್ಲುಗಳಿಗೆ ಕೊಡಲಾಗುತ್ತಿದ್ದ ಪೆಟ್ರೋಲ್ ಪಡಿತರವನ್ನು ಶೇಕಡ ೫೦ ರಷ್ಟು ಹೆಚ್ಚಿಸಿರುವುದಾಗಿ ಕೇಂದ್ರದ ಸಚಿವ ಶಾಖೆಯಿಂದ ಹೊರಟ ಪ್ರಕಟಣೆ ತಿಳಿಸುತ್ತದೆ

ಕಾಗದದ ಮೇಲಿದ್ದ ಹತೋಟಿ ಆಜ್ಞೆ ರದ್ದು

ಜೂನ್ ೩೪ ರಿಂದ ಕಾಗದದ ಮೇಲಿನ ಎಲ್ಲಾ ಹತೋಟಿ ಆಜ್ಞೆಗಳನ್ನು ರದ್ದುಗೊಳಿಸಿರುವುದಾಗಿ ಕೇಂದ್ರದ ಕೈಗಾರಿಕಾ ಮತ್ತು ಸರಬರಾಯಿ ಶಾಖೆಯವರ ಮಂತ್ರಿಮಂಡಿಳದ ಕಛೇರಿಯಿಂದ ಹೊರಟ ಪ್ರಕಟಣೆ ಯೊಂದು ತಿಳಿಸುತ್ತದೆ

ಇತ್ತೀಚೆಗೆ ಕಾಗದದ ಉತ್ಪನ್ನ ಭಾರತದಲ್ಲಿ ಹೆಚ್ಚಿರುವುದರಿಂದಲೂ, ಆಲ್ಲದೆ ಹೊರಗಿನಿಂದ ಇರುವ ಕಾಗದವು ಹೆಚ್ಚಾಗಿರುವುದರಿಂದಲೂ ಹತೋಟಿ ಆಜ್ಞೆಗಳನ್ನು ರದ್ದುಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ

ಕಾಗದದ ಮಿತವ್ಯಯ ಆಜ್ಞೆ, ಕಾಗದದ ಹಂಚಿಕೆ ಆಜ್ಞೆ, ಶಾಲಿ ಕಾಗದದ ಮತ್ತು ರಟ್ಟುಗಳ ಬೆಲೆ ನಿಯಂತ್ರಣ ಆಜ್ಞೆ ಇವೇ ಮೊದಲಾದ ಕಾಗದಕ್ಕೆ ಸಂಬಂಧ ಪಟ್ಟ ಎಲ್ಲಾ ಆಜ್ಞೆಗಳೂ ರದ್ದಾಗಿವೆ

ಮಡಕೇರಿಯಲ್ಲಿ ಭಾರಿ ಮಳೆ

ಕಳೆದ ೨೪ ನೇ ಶು॥ ಪ್ರಾತಃಕಾಲ ಮಡಿಕೇರಿಯಲ್ಲಿ ೨ ಅಂಗುಲಗಳಿಗಿಂತಾ ಹೆಚ್ಚಿನ ಭಾರಿ ಮಳೆಯಾಗಿದೆ ಯೆಂದು ವರದಿಯಾಗಿದೆ ಇದರಿಂದ ಕಾವೇರಿಯಲ್ಲಿ ನೀರು ಹೆಚ್ಚು ಹರಿದು ಕೃಷ್ಣರಾಜಸಾಗರದ ನೀರಿನ ಮಟ್ಟ ಏರುವ ಸಂಭವವಿದೆ

ಸರ್ ಎ ರಾಮಸ್ವಾಮಿ ಮೊದಲಿಯಾರ್‌ರನರಿಗೆ ಉನ್ನತ ಪದವಿ

ಜೂ॥ ೧೨ ರಿಂದ ೧೪ ರವರೆಗೆ ಲೇಕ್‌ಸಕ್ಸಸ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಆಧಿವೇಶನದಲ್ಲಿ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೆ ೩ ಕೋಟಿ ೧೦ಲಕ್ಷ ಡಾಲರು ಗಳನ್ನು ಟೆಕ್ನಿಕಲ್ ಸಹಾಯದ ಮೂಲಕ ಖರ್ಚು ಮಾಡಲು ನಿರ್ಧರಿಸಲಾಯಿತು

ಟೆಕ್ನಿಕಲ್ ಸಹಾಯ ಯೋಜನೆಯ ಡೈರೆಕ್ಟರ್-ಜನರಲ್ ಪದವಿಯನ್ನು ಅಂಗೀಕರಿಸಬೇಕೆಂದು ಭಾರತ ಪ್ರತಿನಿಧಿಗಳಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರನ್ನು ಕೋರಲಾಗಿದೆ ಆವರು ಆ ಪದವಿಯನ್ನು ಅಂಗೀಕರಿಸಿದರೆ ಭಾರತಕ್ಕೆ ವಿಶ್ವಸಂಸ್ಥೆಯಲ್ಲಿ ಎರಡು ಆತಿ ಮುಖ್ಯಸ್ಥಾನಗಳು ಲಭಿಸಿದಂತಾಗುತ್ತದೆ. ಈಗಾಗಲೇ ಭಾರತ ಪ್ರತಿನಿಧಿಗಳಾದ ಶ್ರೀ ಎಸ್. ಲಾಲ್ ಅವರು ಸಹಾಯ ಸೆಕ್ರೆಟರಿ-ಜನರಲ್ ಪದವಿಯಲ್ಲಿದ್ದಾರೆ.

ಆದರೆ ಇತ್ತೀಚಿನ ಸುದ್ದಿ ಪ್ರಕಾರ ಈ ಪದವಿಯನ್ನು ಅಂಗೀಕರಿಸಲು ವಿಶ್ವಸಂಸ್ಥೆಯವರು ತಮಗಿತ್ತ ಆಹ್ವಾನ ವನ್ನು ಸರ್ ಎ ರಾಮಸ್ವಾಮಿ ಮೊದಲಿಯಾರ್‌ರವರು ನಿರಾಕರಿಸಿದ್ದಾರೆಂದು ವಿಶ್ವಸಂಸ್ಥೆಯ ಸಕ್ರೆಟರಿ ಜನರಲ್ ಟ್ರಿಗ್ವಿಲೀರವರು ತಿಳಿಸಿದ್ದಾರೆ

'ನೆಹ್ರೂ ಸರ್ಕಾರ' ಉರುಳಿಸಲು ಬಂಗಾಳದಲ್ಲಿ ಸಿತೂರಿ !

'ನೆಹರೂ ಸರ್ಕಾರ' ವನ್ನು ಉರುಳಿಸುವ ಉದ್ದೇಶ ದಿಂದ ಬಂಗಾಳದಲ್ಲಿ ಕೋಮುವಾರು ವಾದಿಗಳ ಗುಂಪೊಂದು ರಹಸ್ಯವಾಗಿ ಒಳಸಂಚು ನಡೆಸುತ್ತಿದೆ ಯೆಂದು ತಿಳಿದುಬಂದಿದೆ ಬಂಗಾಳದ ಯಾವುದೋ ರಹಸ್ಯ ಪ್ರದೇಶದಲ್ಲಿರುವ ರೇಡಿಯೋಸ್ಟೇಷನ್‌ನಿಂದ ದಿನವೂ ಈ ಕೋಮುವಾರು ವಾದಿಗಳು ಪಂ॥ ನೆಹರೂ ರವರ ಮೇಲೂ ಆವರ ಸರ್ಕಾರದ ಮೇಲೂ ಭಯಂಕರ ಆಪಪ್ರಚಾರ ಮಾಡಿ ಆವರ ವಿರುದ್ಧ ಜನರಿಂದ ದಂಗೆ ಏಳುವಂತೆ ಪ್ರೇರೇಪಿಸುತ್ತಿರುವರೆಂದು ತಿಳಿದುಬಂದಿದೆ

ಈ ಅಂಡರ್ ಗ್ರೌಂಡ್ ರೇಡಿಯೋ ನಿಲಯವನ್ನು ಕಂಡ ಹಿಡಿಯಲು ಭಾರತ ಸರ್ಕಾರದ ಇಂಟೆಲಿಜೆನ್ಸ್ ಇಲಾಖೆಯವರು ಬಹಳ ಸಾಹಸಪಡುತ್ತಿರುವರೆಂದೂ, ಅವರಿಗೆ ಅಖಿಲ ಭಾರತ ರೇಡಿಯೋ ನಿಲಯದ ಟೆಕ್ನಿಕಲ್ ಪ್ರತಿನಿಧಿಗಳು ಸಾಧ್ಯವಾದ ಸಹಾಯ ನೀಡುತ್ತಿರುವರೆಂದೂ ಗೊತ್ತಾಗಿದೆ ರೇಡಿಯೋ ಟ್ರಾನ್ಸ್‌ಮಿಟರುಗಳನ್ನು ಪ್ರತಿ ದಿನವೂ ಸ್ಥಳ ಬದಲಾಯಿಸಿ ಬೇರೆ ಬೇರೆ ಸ್ಥಳಗಳಿಂದ ಬ್ರಾಡ್‌ಕಾಸ್ಟ್ ಮಾಡಲಾಗುತ್ತಿದೆಯಂತೆ!

ಬಲವಾದ ರಕ್ಷಣಾ ನೀತಿ

ರಂಗೂನಿನಿಂದ ದೆಹಲಿಗೆ ವಾಪಸು ಬರುವ ಮಾರ್ಗ ದಲ್ಲಿ ಪಂ॥ ನೆಹ್ರೂರವರು ಕಲ್ಕತ್ತದಲ್ಲಿ ತಂಗುವರೆನ್ನೆ ಆವರು ಸುರಕ್ಷತೆವಾಗಿ ಹಿಂತಿರುಗಿ ಬರುವಂತೆ ಒಳಾಡಳಿತ ಇಲಾಖೆಯವರು ಬಲವಾದ ರಕ್ಷಣಾ ವ್ಯವಸ್ಥೆಮಾಡಿದ್ದಾ ರೆಂದು ಗೊತ್ತಾಗಿದೆ

ಯುಗೋಸ್ಲಾವಿಯಾ ಗಡಿಯಲ್ಲಿ ಬಲ್ಗೇರಿಯಾ ಸೈನ್ಯ

ಬಲ್ಗೇರಿಯ ಸೈನ್ಯಸಡೆಗಳನ್ನು ಯುಗೋಸ್ಲಾವಿಯ ಗಡಿಯಲ್ಲಿ ಸಜ್ಜುಗೊಳಿಸಲಾಗುತ್ತಿದೆ ಎಂದು ಯುಗೋ ಸ್ಲಾವಿಯಾದ ಸಂಸ್ಥೆ ತಿಳಿಸಿದೆ ಸರಹದ್ದಿನಲ್ಲಿ ಘರ್ಷಣೆ ತಲೆದೋರದಂತೆ ಮಾಡುವುದೇ ಬಲ್ಗೇರಿಯಾದ ಉದ್ದೇಶವೆಂದು ಆವಾದಿಸಲಾಗಿದೆ

ಮಲಯಾದಲ್ಲಿ ಕಮ್ಯೂನಿಸ್ಟ್ ದಂಗೆಕೋರರ ಹಾವಳಿ

ಕಮ್ಯೂನಿಸ್ಟ್ ವಿರುದ್ಧ ಹೋರಾಟಕ್ಕೆ ೧೧ ಕೋಟಿ ಡಾಲರ್ ಬೇಕು

ಮಲಯಾದಲ್ಲಿ ಕಮ್ಯೂನಿಸ್ಟರ ಹಾವಳಿ ಇನ್ನೂ ಭಯಂಕರವಾಗಿಯೇ ಪರಿಣಮಿಸುತ್ತಿದೆ ಎಂದು ಸರ್ವ ಸಾಧಾರಣವಾಗಿ ಎಲ್ಲಾ ಅಧಿಕಾರಿಗಳೂ ಅಭಿಪ್ರಾಯ ಪಡುತ್ತಿದ್ದಾರೆ

ಮಲಯಾದಲ್ಲಿ ಗಂಡಾಂತರ ಪರಿಸ್ಥಿತಿ ತಲೆದೋರಿ ಎರಡು ವರ್ಷಗಳಾಯಿತು ಮಲಯಾದ ಆರಣ್ಯ ಗಳಲ್ಲಿಯೂ ಮತ್ತು ಗುಡ್ಡಗಾಡಿನ ಪ್ರದೇಶಗಳಲ್ಲಿಯೂ ಕಮ್ಯೂನಿಸ್ಟ್ ದಂಗೆಕೋರರನ್ನು ಮಟ್ಟಹಾಕಲು ಸುಮಾರು ೨೦,೦೦೦ ಬ್ರಿಟಿಷ್ ಸೈನಿಕರು ಹೋರಾಡು ತ್ತಿದ್ದಾರೆ ಇವರಿಗೆ ಸುಮಾರು ೫೦,೦೦೦ ಪೋಲೀಸು ನವರು ಸಹಾಯ ಮಾಡುತ್ತಿದ್ದಾರೆ.

ವ್ಯವಸಾಯ, ಕೈಗಾರಿಕೆ, ಗೃಹನಿರ್ಮಾಣ, ವಿದ್ಯೆ ಮತ್ತು ಕಾರ್ಮಿಕ ರಂಗಗಳಲ್ಲಿ ಕೊಮ್ಯೂಂಕೆರ ಹಾವಳಿಗಳ ವ್ಯಯದಿಂದ ಮಲಯಾ ಸರ್ಕಾರ ಪುನರ್ನಿರ್ಮಾಣ ಕಾರ್ಯಕ್ರಮಕ್ಕೆ ತೊಡಗಿದೆ, ಈ ಕಾರ್ಯಕ್ರಮ ೧೯೫೦-೫೫ ರವರೆಗೆ ಆರುವರ್ಷಗಳವರೆಗೆ ಸಾಗುತ್ತದೆ. ಇತ್ತೀಚೆಗೆ ಮಲಯಾದ ಹೈ ಕಮಿಷನರ್ ಸರ್ ಹೆನ್ರಿಯವರು ಬ್ರಿಟಿಷ್ ಕಾಲ್ಕೆನಿಗಳ ಕಾರ್ಯದರ್ಶಿ ಗಳಾದ ಜೇಮ್ಸ್ ಗ್ರಿಫಿತ್ಸ್‌ರವರಿಗೆ ಧನಸಹಾಯಕ್ಕೆ ಮನವಿ ಮಾಡಿದ್ದಾರೆ ದಂಗೆಕೋರರನ್ನು ಮಟ್ಟಹಾಕಲು ಪರ್ಸನಲ್ ೧೧ ಕೋಟಿ ಡಾಲರುಗಳು ಬೇಕಾಗುವುದೆಂದು ಲೆಕ್ಕಹಾಕಲಾಗಿದೆ

ಜೀನದ ರಹಸ್ಯ

ಅದರ ಹುಟ್ಟು ಬೆಳವಣಿಗೆಗಳ ಬಗ್ಗೆ ಸಂಶೋಧನೆ

ರಷ್ಯಾ ವಿಜ್ಞಾನಿಯೊಬ್ಬರ ಸಾಹಸ

ಜೀವದ ಮೂಲಸ್ಥಾನವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿರುವ ರಷ್ಯಾ ವಿಜ್ಞಾನಿಗಳು ಇಷ್ಟರಲ್ಲಿಯೇ ತಮ್ಮ ಕಾರ್ಯದಲ್ಲಿ ಕೃತಕೃತ್ಯರಾಗುವರೆಂದು ಒಬ್ಬಾ ಟೆಲಿಪಿನ್‌ಸ್ಕಯಾ ಎಂಬ ಮಹಿಳಾ ವಿಜ್ಞಾನಿಗೆಳೆಯಬ್ಬರು ಮಾಸ್ಕೋ ರೇಡಿಯೋ ನಿಲಯದಿಂದ ಭಾಷಣ ಮಾಡಿದರು

ಭೌತಿಕ ಶರೀರದ ಸೆಲ್ಸ್‌ಗಳಲ್ಲಲ್ಲದೆ ಬೇರೆ ಯಾವ ಭಾಗದಲ್ಲೂ ಜೀವವಿಲ್ಲವೆಂಬ ವಾದದಲ್ಲಿ ತಿರುಳಿಲ್ಲವೆಂದು ಈ ಹೊಸ ಸಿದ್ಧಾಂತ ನಿರೂಪಿಸುತ್ತದೆ ರೋಗ ಮತ್ತು ವೃದ್ಧಾಪ್ಯದ ವಿರುದ್ಧವಾಗಿ ಹೊರಾಟ ನಡೆಸಿ, ಗಾಯ ಗಳನ್ನು ವಾಸಿಯಾಗುವಂತೆ ಮಾಡಿ ಸವೆದುಹೋದ ಸೆಲ್‌ಗಳನ್ನು ಮತ್ತೆ ಚೈತನ್ಯದಿಂದ ತುಂಬಿ ಸಾಧಿಸಿರುವ ಕಾರ್ಯವೇ ಈ ಹೊಸ ವಾದಕ್ಕೆ ನಿದರ್ಶನವಾಗಿದೆ.

ಶರೀರದ ಸೂಕ್ಷ್ಮಾವಯವಗಳಲ್ಲಿ ಮಾತ್ರ ಪ್ರಾಣವಿದೆ ಎಂಬುದು ಹಳೆಯ ಸಿದ್ಧಾಂತ ಇದರಂತೆ ಸೂಕ್ಷ್ಮಾವ ಯವಗಳ ಮೇಲೆ ಪ್ರಾಣಾಶ್ರಿತ ಆಘಾತ ಔಷಧಿಯ ಪ್ರಭಾವವಿರುವುದಿಲ್ಲ ಅಂದರೆ ಸೂಕ್ಷ್ಮಾವಯವಗಳು ಮಾನವಾತೀತವಾದ ಶಕ್ತಿಯ ಆಧೀನದಲ್ಲಿರುತ್ತವೆ ಈ ಹೊಸ ಸಿದ್ಧಾಂತಕ್ಕೂ ಮೇಲ್ಕಂಡ ಹಳೆಯ ವಾದಕ್ಕೂ ವ್ಯತ್ಯಾಸವಿದೆ ಸಜೀವ ಪದಾರ್ಥಗಳಿಂದ ಸೆಲ್‌ಗಳು ವೃದ್ಧಿಯಾಗುವನೆಂಬು ಈ ಹೊಸ ಸಿದ್ಧಾಂತ ಸಾಧಿಸಿದೆ ಈ ಬಗ್ಗೆ ಸೋವಿಯೆಟ್ ವಿಜ್ಞಾನಿಗಳು ಮಾಡಿದ ನೂತನ ಪ್ರಯೋಗಗಳು ಯಶಸ್ವಿಯಾಗಿ ಕೊನೆಗೊಂಡಿವೆ

ಮೊಟ್ಟೆಯೊಳಗೆ ಏಂದಕ್ಕೆ ಆಹಾರವಾಗಿ ಉಪಯೋಗ ಪಡುವ ಸ್ಥಾನದಿಂದ ಜೀತನವಾದ ಸೆಲ್‌ಗಳನ್ನು ಯಾವ ಪ್ರಯೋಗ ಶಾಲೆಯಲ್ಲಾದರೂ ತಯಾರಿಸಬಹುದೆಂದು ಹೇಳಲಾಗಿದೆ

ಸೆಲ್‌ಗಳ ಸ್ವರೂಪವಿಲ್ಲದಿದ್ದರೂ ಪ್ರಕೃತಿಯಲ್ಲಿರುವ ಸಜೀವ ವಸ್ತುಗಳೆಲ್ಲವೂ ಸಜೀವನವಾದುವೆಂದು ಈ ಸಿದ್ಧಾಂತದಿಂದ ತಿಳಿದುಬರುತ್ತದೆ

ವಿವೇಕಮುಕ್ತಾವಳಿ
ಮತ್ತು
ವಿಚಾರಸಾರಾವಳಿ

ಈ ಗ್ರಂಥಗಳನ್ನು ಸದ್ವೈದ್ಯರತ್ನಾವಳಿ ಗ್ರಂಥಕರ್ತ ರಾದ ವೇ॥ ಆರ್ ಎಂ ಮಲ್ಲಿಕಾರ್ಜುನಾರಾಧ್ಯರು ರಚಿಸಿರು ವರು ಇವುಗಳಲ್ಲಿ ಮಾನವನ ಉದ್ಧಾರಕ್ಕೆ ಸಾಧನಗಳಾದ ನೈತಿಕ ಧರ್ಮಾಧ್ಯಾತ್ಮಿಕ ವಿಚಾರಗಳು ಬಹು ಸುಲಲಿತವಾಗಿಯೂ, ಸಪ್ರಮಾಣವಾಗಿಯೂ ಪ್ರತಿಪಾದಿ ಸಲ್ಪಟ್ಟಿರುವವು ಈ ಗ್ರಂಥರತ್ನಗಳ ಪಠನದಿಂದ ಸೂರ್ಯೋದಯದಿಂ ಅಂಧಕಾರವು ಮಾಯವಾಗುವಂತೆ ಸಕಲ ಸಂಶಯಗಳು ನಿವೃತ್ತಿಯಾಗುವುವಲ್ಲದೆ ಜಿಜ್ಞಾಸು ಬಿಜವು ಬಗ್ಗತವಾದ ನೀರನ್ನು ಸೃಷ್ಟಿಮಾಡುವಂತೆ ಬದ್ಧಾತ್ಮರು ಶುದ್ಧಾತ್ಮರಾಗಲು ಸಂಶಯವಿಲ್ಲ ಒಟ್ಟಿಗೆ ಈ ಗ್ರಂಥಗಳು ಕಲ್ಯಾಣಾಪೇಕ್ಷಿಗಳಾದ ಮಾನವರಿಗೆ ಚಿಂತಾಮಣಿಗಳಂತಿರುವುದರಿಂದ ಸಕಲರಿಂದಲೂ ಸಂಗ್ರ ಹಿಸಲು ಯೋಗ್ಯವಾಗಿವೆ ಅದ್ದರಿಂದ ಆಸ್ಥಿಕಮಹಾಶಯ ರೆಲ್ಲರೂ ತಪ್ಪಿಸಿಕೊಂಡು ಓದಿ ಮನನಮಾಡಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಬೇಕು

ಗ್ರಂಥಗಳು ದೊರೆಯುವ ವಿಳಾಸ—

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.
ಮತ್ತು
ವೇ॥ ಆರ್. ಎಂ. ಮಲ್ಲಿಕಾರ್ಜುನಾರಾಧ್ಯರು,
ಸಜ್ಜನ ಪೇಟೆ ತಿಪಟೂರು.

Edited, Printed and Published by Brahanmath Mahadevaiah at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವತಪಂಕಜಾತಜಪಿತರ ಪಂಚಾಸ್ಯಪೀಠಾಧಿಪರ । ಪಂಚಕ್ಲೇಶವಿನಾಶಕರ ಪರತತ್ವಶ್ರೀಪಂಚಲಿಂಗೋದ್ಭವರ ॥
ಪಂಚಾಚಾರನಿಯಾಮಕರ ಪರಲಸತ್ಪಂಚಾಕ್ಷರೀಮೋಧಕರ । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಹಾಧ್ಯಕ್ಷರಾದ ಪೀಠಿ ಪಂಡಿ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು— ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೪ | ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ ನೇ ಜುಲೈ ೧೯೩೦ | ಸಂಚಿಕೆ ೧೧

ಪುಣ್ಯಭಾಗಿಗಳಿಗೆ ಸುಸಂದಿ

ಹಿಮಾಲಯದ ಉತ್ತುಂಗ ಶಿಖರದಲ್ಲಿ ಶೋಭಿಸುವ ಕೇದಾರನಾಥಕ್ಷೇತ್ರವು ಶ್ರೀಜಗದ್ಗುರು ಏಕೋರಾಮಾರಾಧ್ಯರ ಪೀಠದಿಂದಲೂ ಜ್ಯೋತಿರ್ಲಿಂಗದಿಂದಲೂ ವಿರಾಜಿಸುತ್ತಿರುವದು ಪುರಾಣಪ್ರಸಿದ್ಧವಿರುವದಷ್ಟೇ ಅಲ್ಲದೆ ಪ್ರತಿವರುಷ ಕೇದಾರೇಶ್ವರನ ಪೂಜೆಯು ಅರುತಿಂಗಳು ಮಾನವರಿಂದಲೂ ಅರುತಿಂಗಳು ದೇವತೆಗಳಿಂದಲೂ ವೇದೋಕ್ತವಾಗಿ ನಡೆಸಲ್ಪಡುವದು ಮಾನವರಿಂದ ಜರುಗುವ ಅರುತಿಂಗಳ ಪೂಜೆಯು ಎಂದಿನಿಂದಲೂ ವೀರಶೈವ ಜಂಗಮರ ಅಧಿಕಾರಕ್ಕೊಳಪಟ್ಟಿದೆ ಪದ್ಧತಿಯಂತೆ ಮುಂಬರುವ ಶ್ರಾವಣಮಾಸದಿಂದ ಕೇದಾರನಾಥನಿಗೆ ರುದ್ರಾಭಿಷೇಕವು ಕಮಲ (ಬ್ರಹ್ಮಕಮಲ) ಪುಷ್ಪಾರ್ಪಣೆಯಿಂದ ವಿಧ್ಯುಕ್ತವಾಗಿ ಪ್ರತಿನಿತ್ಯ ನಡೆಯುವದು ಸಾವಿರಾರುಮೈಲಿಯ ದೂರದಲ್ಲಿದ್ದ ಈ ಸ್ಥಾನವಷ್ಟು ಸಂದರ್ಶಿಸುವದು ಬಹಳ ತೊಂದರೆಯಾಗಿದ್ದ ಮೂಲಕ ಆ ಮಹಾಲಿಂಗಪೂಜೆಯನ್ನು ಮಾಡಿಸಿ ಮಂಂಲಾಶೀರ್ವಾದವನ್ನು ಪಡೆಯಬೇಕೆಂದಿರುವ ಶಿವಭಕ್ತರು ತಮ್ಮ ಗೋತ್ರ ಪೂರ್ಣವಿಳಾಸದೊಡನೆ ದಾನದಕ್ಷಿಣೆ ಸಹಿತ ಪೋಸ್ಟಿನ ಮೂಲಕ ಕಳುಹಿಸಿದಲ್ಲಿ ಅವರ ಹೆಸರಿನಿಂದ ಪೂಜೆಯು ನಡೆಸಲ್ಪಟ್ಟು ಆಶೀರ್ವಾದವನ್ನು ಕಳುಹಿಸಲಾಗುವದು

ಪೂಜೆಯ ವಿವರಗಳು

೧೧ ರೂ ಗಳು ರುದ್ರಾಭಿಷೇಕ ೧೧ ಕಮಲಾರ್ಪಣೆ
೨೧ „ „ ೩೩ „
೫೧ „ „ ೧೦೧ „
೧೦೧ „ ಮಹಾರುದ್ರಾಭಿಷೇಕ ೧೦೦೦ „

ಕಮಲಗಳು ಶ್ರಾವಣ ಭಾದ್ರಪದ ಮಾಸಗಳಲ್ಲಿ ಮಾತ್ರ ದೊರೆಯುವವು ಇಚ್ಛೆಯುಳ್ಳವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರಮಾಡತಕ್ಕದ್ದು.

ನಿಳಾಸ

ಶ್ರೀ ಷ-ಬ್ರ-ಪಂ॥ ಶಾಂತಲಿಂಗಶಿವಾಚಾರ್ಯಜೀ

ಶ್ರೀ ಕೇದಾರನಾಥಮಂದಿರ

ಪೋ॥ ಕೇದಾರನಾಥ

ತಾ॥ ೧೭-೬-೩೦ ಡಿ॥ ಗಢವಾಲ (ಯು ಪಿ)

ಶ್ರೀ ಉಜ್ಜಯಿನಿ ಜಗದ್ಗುರುಗಳ ಸರ್ಕೀಟು

ಶ್ರೀ ಮುಕ್ತಿಮಂದಿರದ ಜಯಂತಾಚಾರ್ಯರ ಸನ್ನಿಧಿಯಲ್ಲಿ ಅಗಮಿಸಿದ ಉಜ್ಜಯಿನಿ ಶ್ರೀಮಜ್ಜಗದ್ಗುರು ಸಿಂಹಾಸನಾಧೀಶ್ವರ ಶ್ರೀಸಿದ್ಧೇಶ್ವರಶಿವಾಚಾರ್ಯರು ಸಂಸ್ಥಾನದ ಸರ್ಕೀಟು ಕುಂದಗೋಳದ ಪಕ್ಕದಲ್ಲಿರುವ ಯಲಿವಾಳಗ್ರಾಮದ ಭಕ್ತರ ಪ್ರಾರ್ಥನೆಯಮೇರೆಗೆ ತಾ॥ ೧೫-೪-೧೯೩೦ ಕ್ಕೆ ಬಿಜಯಮಾಡಿಸಿದ್ದು ಈ ಪರ್ಯಂತ ತಮ್ಮ ಪೂಜಾ ತಪೋಮಹಾನುಷ್ಠಾನದೊಂದಿಗೆ ಅಲ್ಲಿಯೇ ಇರೋಣವಾಗಿದೆ ಇನ್ನು ಮುಂದೆ ಶ್ರೀಜಗದ್ಗುರುಗಳ ದರ್ಬಾರಿನಲ್ಲಿ ಚಾತುರ್ಮಾಸಸಂಪನ್ನ ಅಂದರೆ ನಿಜಾನಾಥ ಶುದ್ಧ ೧೦ ಸೋಮವಾರ (೨೪ ೭-೩೦) ದಿಂದ ಕಾರ್ತಿಕ ಶು॥ ೧೧ ಸೋಮವಾರ(೨೦ ೧೧ ೩೦) ವರೆಗೆ ಮಹಾಸಂಸ್ಥಾನ ಶಿವಪುರಾಣಗಳಲ್ಲಿ ಯಾವದಾವ ರೊಂದು ಉಪದೇಶ ನಡೆಯಿಸಲು ಗೊತ್ತುಪಡಿಸಿದೆ ಅದನ್ನು ಕನ್ನಡದಲ್ಲಿ ಸುಲಲಿತವಾಗಿ ಬೋಧಿಸುವ ಸಂಸ್ಕೃತ ಮಾಹೇಶ್ವರಪಂಡಿತರು ಗೃಹಸ್ಥರಾಗಿರಲಿ ಅಧಿಕಾರವರ್ಗದವರಾಗಿರಲಿ ಚರಲಪೇಕ್ಷೆಯುಳ್ಳವರು ಅಧಿಕ ಆಪ್ತಾಷ್ಟ ಬ॥ ೩೦ (೧೫ ೭ ೩೦ ರ) ವಳಗಾಗಿ ಕೆಳಗಿನ ಅಡ್ರೆಸ್ಸಿಗೆ ವ್ಯವಹರಿಸಿ ಗೊತ್ತುಪಡಿಸಿಕೊಳ್ಳಬೇಕು ಮತ್ತು ಆ ಸಮಯಕ್ಕೆ ಶ್ರೀಜಗದ್ಗುರುಗಳ ಸನ್ನಿಧಿಯಲ್ಲಿ ನಡೆಯುವ ಬೃಹತ್ತಾದ ಶಿವಪುರಾಣದ ಹಸ್ತಪ್ರತಿಯೊಬ್ಬ ಲಿಂಗಧಾರಿಯು ಅರಿತುಕೊಳ್ಳುವದು ಶ್ರೇಯಸ್ಕರವು ಧರ್ಮಾಭಿಮಾನಿಗಳು ಈ ಸುಸಂಧಿಯನ್ನು ಕಳೆದುಕೊಳ್ಳದೆ ಅಗಮಿಸಿ ಶ್ರೀಜಗದ್ಗುರುಗಳ ದರ್ಶನಾಶೀರ್ವಾದವನ್ನು ಪಡೆದು ಧನ್ಯರಾಗಬೇಕು

ವಿಳಾಸ

ಉಜ್ಜಯಿನಿ ಜಗದ್ಗುರು ಸರ್ಕೀಟುಸರ್ವಾಧಿಕಾರಿಗಳು

ಮುಂ॥ ಯಲಿವಾಳ

ಪೋ॥ ಕುಂದಗೋಳ ಡಿ॥ ಧಾರವಾಡ

ಪದವೀಪ್ರದಾನ

ತಾ॥ ೧೪-೬-೩೦ ನೆಯ ದಿನ ಶ್ರೀ ಹಿಮವತ್ಕೇದಾರ ಜಗದ್ಗುರು ನೈರಾಗ್ಯಸಿಂಹಾಸನ ಮಹಾಸಂಸ್ಥಾನ ಉಜ್ಜಾಮಕದಲ್ಲಿ ಭಾರತದ ಸುಪ್ರಸಿದ್ಧ ಧರ್ಮವಿದ್ಯಾ ವಿಶಾರದ ಎಮ್. ರಾಮಮೂರ್ತಿಗಳವರ ಧರ್ಮವಿದ್ಯಾ ಪ್ರದರ್ಶನವು ಭಾವೀ ಜಗದ್ಗುರುಗಳವಾದ ಕೇದಾರ ನಾಥ ರಾವಲ್ ಪಂ॥ ಶ್ರೀವಿಶ್ವನಾಥಲಿಂಗಶಿವಾಚಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರುಗಿತು

ಸಪ್ತಸಾಲಭೇದನ, ಮತ್ಸ್ಯಭೇದನ, ಶಬ್ದಭೇದನ, ಅಂಗದ ಲಕ್ಷ್ಯಭೇದನ, ಹಾರುವ ಪಕ್ಷಿಗಳಲ್ಲಿ ನಿರ್ದಿಷ್ಟವಾದ ಪಕ್ಷಿಯನ್ನು ಹೊಡೆಯುವಿಕೆ ಮುಂತಾದ ವಿದ್ಯಾ ಚಮತ್ಕೃತಿಯನ್ನು ಕಂಡು ಜನರು ಆಶ್ಚರ್ಯಪಟ್ಟರು. ಭಾವಿ ಜಗದ್ಗುರುಗಳವರು ಭಾರತೀಯ ಧರ್ಮವಿದ್ಯಾಪ್ರದರ್ಶಕ್ಕಾಗಿ ಯೂರೋಪ್ ಖಂಡಕ್ಕೆ ಪ್ರಯಾಣಬೆಳೆಸಿರುವ ಪ್ರೊ. ಎಮ್ ರಾಮಮೂರ್ತಿಯವರಿಗೆ ಕುಭಾತೀರ್ವಾದವನ್ನೀಯುತ್ತ "ಧರ್ಮವಿದ್ಯಾ ಚಾರ್ಯ" ಎಂಬ ಪದವಿಯನ್ನು ಪ್ರದಾನಮಾಡಿದರು.

ಪ್ರತ್ಯಕ್ಷದರ್ಶಿ

ವಿವಾಹ ಮಹೋತ್ಸವ

ವಿಜಾಪುರ ತಾಲೂಕು ಒಟಿಲೇಶ್ವರ ಗ್ರಾಮದಲ್ಲಿ ಶ್ರೀಯುತ ಧರ್ಮಾವಧಿ ಒಂಗಲಿಗೇ (ಫೌಜದಾರ) ಇವರ ಚಿರಿ ಸೌಭಾ ಕಾಂ॥ ಸಾರ್ವಜನಿಕಾಲಯವನ್ನು ಶ್ರೀಮಾನ್ ಹಸುಮಂತರಾವ ಅಬ್ಬಾಪುರ ಸಾಕೀನ ವಿಜಾಪುರ (ದರ್ಬಾರ) ಇವರಿಗೆ ನೇಮಿಸಿದ ಪ್ರಕಾರ ಇದೇ ಜೇಷ್ಠ ಶು॥ ತ್ರಯೋದಶಿ ಸೋಮವಾರ ತಾ॥ ೩೯-೫ ೫೦ ಕ್ಕೆ ಬೆಳಿಗ್ಗೆ ೮-೪೫ ಘಂಟೆಗೆ ಸಲ್ಲುವ ಸುಮುಹೂರ್ತದಲ್ಲಿ ಅಕ್ಷತಾರೋಪಣವು ಅತ್ಯಂತ ವೈಭವಭಿಯಿಂದ ಜರುಗಿತು ಈ ಮಂಗಲಕಾರ್ಯಕ್ಕೆ ಹಿರೇಮಠದ ಶ್ರೀ ಶಾಂತವೀರಸ್ವಾಮಿಗಳು ಮತ್ತು ದಿಗ್ವಾಸಿ ಬ್ರಹ್ಮನ್ಯಾಶ್ರೀಕ ಶ್ರೀ ರುದ್ರಮುನಿಶಿವಾಚಾರ್ಯರು ಆಜೂಬಾಜೂ ಹಳ್ಳಿಗಳಿಂದ ಪಾರೋಪ, ಪಟವಾರ (ಕುಲಕರ್ಣಿ) ಯವರು ಹಾಗೂ ಅಪ್ತವರ್ಗದವರೆ ಅಗಮನದಿಂದ ವಿಕೇಕ ಶೋಭೆಯುಂಟಾಗಿತ್ತು ಶ್ರೀ ಜಗದ್ಗುರುಗಳು ವಧೂವರರಿಗೆ ಮಂಗಲವನ್ನೀಯಲೆಂದು ಹಾರೈಸಿದನಂತರ ಸರ್ವರಿಗೂ ಫಲತಾಂಬೂಲಾದಿಗಳು ಹಂಚಲ್ಪಟ್ಟವು

ಓರ್ವ ಕಾರ್ಯಭಾಗಿ

ದುಃಖವಾರ್ತೆ

ಧಾರವಾಡ ನಗರವಾಸಿಗಳಾದ ಶ್ರೀ ಹೇಮಾಡ್ರಿಪ್ಪ ಚನ್ನಬಸಪ್ಪ ಕೋಟೂರು ಹಾವೇರಿಪೇಟೆ ಇವರು ತಾ॥ ೩೬-೪-೩೦ ನೇ ದಿವಸ ತಿನಪಾಯುಷ್ಯವನ್ನು ಹೊಂದಿದರೆಂದು ತಿಳಿಸಲು ದುಃಖನಿಸುತ್ತದೆ ಏಕೆಂದರೆ ಇವರಲ್ಲಿ ಗುರು-ಧರ್ಮನಿಷ್ಠೆ ಪರೋಪಕಾರಾದಿ ಸದ್ಗುಣಗಳು ತುಳುಕುತ್ತಿದ್ದವು ಇಂಥವರ ಅಗಲುವಿಕೆಯಿಂದ ಧರ್ಮಜ ಕಳೆಯು ಕುಗ್ಗುತ್ತದೆ ಇವರ ಅಂತ್ಯಸಂಸ್ಕಾರವನ್ನು ಶ್ರೀ ಒಸಲಿಂಗಸ್ವಾಮಿಗಳವರು ಹಾಗೂ ಶಿವಮೂರ್ತಿಸ್ವಾಮಿಗಳವರಾದಿಗಳೊಡನೆ ಪೂರೈಸಿದರು. ಶ್ರೀ ಜಗದ್ಗುರು ಪಂಚಾಚಾರ್ಯರು ಮೃತರ ಆತ್ಮಕ್ಕೆ ಸುಖ ಶಾಂತಿಯನ್ನು ಕೊಟ್ಟು ಬಂಧುಬಳಗದವರಿಗಾದ ದುಃಖವನ್ನು ಪರಿಹರಿಸಲೆಂದು. ಹಾರೈಸಿ ಪಂಚಾಚಾರ್ಯಪ್ರಭೆಗೆ ೨ ರೂ ಗಳನ್ನು ಚಿಕ್ಕಮಣ್ಣಾರು ಶ್ರೀಗಳವರಲ್ಲಿ ಆರ್ಪಿಸಿದರು

ಓರ್ವ ದುಃಖಭಾಗಿ

ಸ್ವೀಕಾರ

ಧಾರವಾಡ (ಹಾವೇರಿಪೇಟೆ) ವಾಸಿಗಳಾದ ಶ್ರೀ ಹೇಮಾಡ್ರಿಪ್ಪ ಕೋಟೂರ ಇವರು ತಿವೈಕುಠಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ ಗಳು ಚಿಕ್ಕಮಣ್ಣಾರು ಶ್ರೀಗಳವರ ದ್ವಾರಾ ತಲ್ಪಲುತ್ತವೆ.

ಈ ಮೇಲ್ಕಂಡ ಮಹಾತಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನೈಷ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪಂಚಾಚಾರ್ಯಪ್ರಭಾ

೧೯೫೦ ನೆಯ ಜುಲೈ ತಾ|| ೩ ನೆಯ ಸೋಮವಾರ

ಗುರುನೇವೆಯೇ ಮಾನವನ ಜೀವನದ ಗುರಿ

ತೇಜೋರೂಪವಾದ ಸೂರ್ಯಗೋಲದಿಂದ ಪ್ರಳಾತಿಸ್ಪಬಡುವ ಗೃಹನಕ್ಷತ್ರಗಳನ್ನು ನಾವು ನಿತ್ಯ ನಿತ್ಯ ನೋಡುತ್ತೇವೆ ಇಂಥ ಅನಂತಸೂರ್ಯ ತೇಜಸನ್ನು ಗರ್ಭೀಕರಿಸಿದ ಆ ಸರಿತನ ಅಂತ ರಾತ್ಮವು ಶ್ರೀಜಗದ್ಗುರು ರೇಣುಕಾವಿ ಪುಣ್ಯ ಚಾರ್ಯರೆಂಬ ನಾಮಗ್ರಹಣಂಗಿಗೆ ಪಂಚಜ್ಯೋತಿ ರ್ಲಿಂಗಗಳಲ್ಲಿ ಆವಿರ್ಭವಿಸಿ ತನಗೆ ಸಾಕ್ಷಾತ್ತಾರ ನೆನ್ನೇ ನಿರೂಪಿಸುವ ವಿಶ್ವರೈವಸಂಗ್ರಹವನ್ನು ನಾಪಿಸಿ ಭರತಖಂಡದಲ್ಲೆಲ್ಲಾ ವ್ಯಾಪಿಸುವಂತೆ ಮಾಡಿ ತಲ್ಲಿಂಗಗಳಲ್ಲಿಯೇ ಅಡಕವಾವಂಬ ವಿಷಯವು ಪುರಾತೀತಿಹಾಸಗಳಲ್ಲಿ ಪ್ರಸಿದ್ಧವಷ್ಟು ಅಂದಿಂದ ಲೂ ಉತ್ತರೋತ್ತರ ಅ ನ್ಯಾಸಗಳಿಗೆ ಅಧಿಸಿತ ಗಳನ್ನು ನೇಮಿಸುತ್ತ ಬಂದಿರುವದು ಸರ್ವಜ್ಞತಾವಿಶೆ ಈ ಪಂಚಪೀಠಾಧಿಸತಿಗಳೇ ವೀರಶೈವಸಂಪ್ರ ರಾಜ್ಯದ ‘‘ಪ್ರಭೆ ಗಳು’’ ‘‘ಆರ್ಚಾರ್ತ್ ‘‘ಜಗದ್ಗುರು ಗಳು’’ ಈ ದರ್ಮಪೀಠಗಳ ಆಗ್ರಸ್ಥಾನವನ್ನು ವಹಿ ಸುವ ಮಹಾ ಪುರುಷರು ಎಂದು ಎಲ್ಲರೂ ಕಾಂ ಜಂಗಮಾವಾಡಿಗರು ಶ್ರೀಚರಣರ ರು ಸಿದ್ಧಾಂತಶಿಖಾಮಣಿ ಸ್ಕರ ನೇತೃತ್ವವಲ್ಲಿ ವೇವಬಾಷೆಯನ್ನು ಅಭ್ಯಾಸಿಸಿ ಪವಿತ್ರವಾದ ಗಂಗಾನದಿಯ ಉದಕವಿಂದ ಪವಿತ್ರಾತ್ಮರಾಗಿ ಗುರುಪೀಠದ ಸೇವೆಯಲ್ಲಿ ತಲ್ಲೀನರಾಪವರೇ ಇರುತ್ತಾರೆ ವಿದ್ಯಾರ್ಜನೆಗಾಗಿ ಬಂದ ಯಾವತ್ತು ಗುರುಕುಲವು ವಿದ್ಯಾರ್ಥಿಗಳಿಗೆ ಅನೈಹಿಕ ಸೇವೆ ಗಳ ಪ್ರಾಮುಖ್ಯತೆಯನ್ನು ಈವರೆಗೂ ನಿರಾತಂಕವಾಗಿ ನಡಿಸುತ್ತಾ ಬಂದ ಕಾರಿ ಜಗನ್ಮಾವಾಡಿ ಮಠದ ಗೌರವವೂ, ಪೀಠದ ಮಹಿಮೆಯೂ ವರ್ಣನಾತೀತ ವಾಗಿವೆ ಶ್ರೀಜಗದ್ಗುರು ವಿಶ್ವಾರಾಧ್ಯಪೀಠದ ಆಶೀರ್ವಾದ ಬಲದಿಂದ ಪೂರ್ಣತೆಯನ್ನು ಹೊಂದಿ ಲೋಕಮಾನ್ಯರಾದ ಶ್ರೀ ರಂಭಾಪುರಿ ಜಗದ್ಗುರು ಶಿವಾನಂದರಾಜೇಂದ್ರ ಮಹಾಸ್ವಾಮಿಗಳು, ನಾಗ ನೂರು ಬ್ಬಗಿ ಪಂಡಿತ ಶ್ರೀಕಾಶೀನಾದಲಿಪ್ಪಿಗಳವರು, ತಪೋನಿಧಿಗಳಾದ ಶ್ರೀ ಉಜ್ಜಯಿನಿ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಕರುಣಾಕಾದೃಷ್ಟಿಯಿಂದ ವೀರಶೈವಧರ್ಮವನ್ನು ಜಾಗೃತಿಗೆಗೊಳಿಸಿ ಪ್ರಕಾಶಕ್ಕೆ ತಂದರು ಜ್ಯೋತಿ ಸ್ವರೂಪದಂತಿದ್ದ ಈ ಮಹನೀಯರು ನೂಲಾ ಚಾರ್ಯರಲ್ಲಿಟ್ಟ ಭಕ್ತಿವಿಶ್ವಾಸಗಳಿಂದ ಭರತಖಂಡ ದಲ್ಲೆಲ್ಲ ಹೆಸರುವಾಸಿಗಳಾಗಿ ಮೆರೆದು ಗುರುಪೀಠಗಳ ಗೌರವವನ್ನು ಹೆಚ್ಚಿಸಿದರು. ಈ ವಿಷಯದಲ್ಲಿ ಪಂಡಿತರ ಗುಣಕಥನನೂಡಲು ಸಹಸ್ರ ನಾಲಿಗೆ ಯುಳ್ಳ ಆದಿಶೇಷನಿಗೂ ಅಸಾಧ್ಯವೆಂದು ಬರೆದರೆ ಅತಿಶಯೋಕ್ತಿಯೆನಿಸದು! ಇವರು ಬ್ರಹ್ಮಚರ್ಯ ವ್ರತದಿಂದ ತಮ್ಮ ಭೌತಿಕಶರೀರವನ್ನು ಪಾವನ ಗೊಳಿಸಿದರು. ಕಾಶೀ ಜಗದ್ಗುರುಗಳವರ ಅನುಗ್ರಹ ದಂತೆ ಸತ್ಸಂಕಲ್ಪವನ್ನು ಈಡೇರಿಸುವದಕ್ಕಾಗಿ ಶಷ್ಯ ನಷ್ಯಗಳನ್ನು ಅನುಭೋಗಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ವಿಜಯೋತ್ಸವದ ಧ್ವಜಪತಾಕೆ ಯನ್ನು ನೆಟ್ಟರು. ವೀರಶೈವ ಧರ್ಮರಾಜ್ಯದ ಈ ಪತಾಕೆಯನ್ನು ಕೆಳಗಿಳಿಸದೆ ಜಗದ್ಗುರುಗಳ ವೈಭವವು ಧರ್ಮದ ಏಳಿಗೆಯೊಡನೆ ನಿರಾತಂಕವಾಗಿ ಮೆರೆಯುವಂತೆ ನೋಡಿಕೊಳ್ಳುವದು ಸನಾತನ ದರ್ಮಾವಲಂಬಿಗಳಾದ ನಮ್ಮಗಳ ಆವ್ಯಕರ್ತವ್ಯ ವಾಗಿದೆ ‘‘ನಗರೋತ್ತರಿಕಂ’’ ಎಂಬ ವೇದ ವಾಕ್ಯವು ಪಂತಿತರ ರೋಮರೋಮಗಳಲ್ಲಿ ವ್ಯಾಪ ಕವಾಗಿತ್ತು ಅಂತೆಯೇ ಅನರು ಗುರುಕ್ಷೆಯೆನ್ನು ಹೊಂದಿ ಭರತಖಂಡದಲ್ಲಿ ಅಷ್ಟೈಯೇಕೆ ? ಯುರೋಪ್ಖಂಡ, ಅನ್ಯರಿಕಾ ಮೊದಲಾದ ವರಾಷ್ಟ್ರ ಗಳಲ್ಲಿಯೂ ಹೆಸರುವಾಸಿಯಾಗಿ ಜಗದ್ವಂದ್ಯರೆಂಬ ಕೀರ್ತಿಯನ್ನು ಸಂಪಾದಿಸಿ ಮಹಾಮಹಾ ವಿದ್ವಾಂಸ ರನ್ನು ಮಂತ್ರಿಗಳಿಗಿಂತ ರಾಜಾವಿರಾಜರಿಂದ ಸನ್ಮಾ ನಿತರಾಗಿ ಇಂಪಲ್ಲಾ ಗುರುಸೇವೆಯ ಪ್ರಭಾವ ನಲ್ಲವೆ ಜೀರಯೆಲ್ಲ ಪ್ರಯುಕ್ತ ಪ್ರತಿಯೊಬ್ಬ ವೀರ ಶೈವಸರ್ವಾಬಿಮಾನಿಯು ದರ್ಮಸ್ಥಾಪಕರಾದ ಶ್ರೀ ಜಗದ್ಗುರು ಸಂತಾಚಾರ್ಯರಲ್ಲಿ ನೈಜವಾದ ಭಕ್ತಿಯನ್ನಿಟ್ಟು ತಪ್ಪದೆ ಶ್ರೀ ಗುರುಕೃಪೆಗೆ ಪಾತ್ರ ರಾಗಬೇಕಂದಾಜಿನ ತ್ತೇವೆ

ಕೊರಿಯಾದಲ್ಲಿ ಯುದ್ಧ

ಚೀನಾ ಜಪಾನಿಗೂ ನಡೆದ ಕೊರಿಯಾ ಎಂಬ ಪರಾಯುದ್ಧದ ಇನ ಇತಿಹಾಸಿನ ಆರನೆಯ ಭಾಗವು ಪ್ರಸಿದ್ಧ ಚೀನಾ ಪ್ರದೇಶ ಸುಮಾರು ವೆ ಕೂಡಾ ಪೀರದ ವಿಸ್ತಾರವಿರಬಹುದು ಇದರ ಜನಸಂಖ್ಯೆ ಸುಮಾರು ಕೋಟಿ ತಮನ ಬಾಷೆ ಟಾರ್ಟರ್, ಮಂಗೋಲ್ ಪದ್ಧತಿ ಜನರಿಗೆ ಮಿಶ್ರ ಬರೆಯ ಚೀನೀ ಲಿಪಿ ವೀಣಾ ಅಂ೦೦೦ ಚದರ ಮೈಲುಗಳು ಈ ಪ್ರಾಂತ್ಯದಲ್ಲಿ ಮಂಚೂರಿಯಾ ಮತ್ತು ಜಪಾನಿನ ನೇಪ ರೆಯೆಂತೆ ಇದೆ

ಇದರಲ್ಲಿ ಎರಡು ಭಾಗ ಉತ್ತರ ಕೊರಿಯಾ ಮತ್ತು ದಕ್ಷಿಣ ಕೊರಿಯಾ ಎಂದನ್ನು ಕಂಡರೆ ಒಂದಕ್ಕೆ ಆಗುವುದಿಲ್ಲ ದಕ್ಷಿಣ ಕೊರಿಯಾದಲ್ಲಿ ಅಮೆರಿಕದವರ ಪ್ರಭಾವ ಹೆಚ್ಚು ಉತ್ತರ ಕೊರಿಯಾದಲ್ಲಿ ರಷ್ಯಾದವರ ಪ್ರಭಾವ ಹೆಚ್ಚು

ಈಗ್ಗೆ ಒಂದು ವಾರದ ಕೆಳಗೆ, ಉತ್ತರ ಕೊರಿಯಾ ದವರು ದಕ್ಷಿಣ ಕೊರಿಯಾದ ಮೇಲೆ ದಾಳಿ ನಡಿಸಿದರು ರಷ್ಯಾದಿಂದ ಪಡೆದ ಆಯುದಗಳನ್ನೂ ವಿಮಾನಗಳನ್ನೂ ಉಪಯೋಗಿಸಿದರುತೆ ದಕ್ಷಿಣ ಕೊರಿಯಾದಲ್ಲಿ ಆಯುಧ ಬಲ ಸಾಲದು ಟ್ಯಾಂಕುಗಳ ಹೆಸರೇ ಇಲ್ಲ ವಿಮಾನ ಗಳೂ, ಹಡಗುಗಳೂ ತೀರ ಚಿಕ್ಕವು ಮತ್ತು ಯುದ್ಧಕ್ಕೆ ಬಾರದೆಂಥವು

ಉತ್ತರ ಕೊರಿಯಾದವರು ದಕ್ಷಿಣ ಕೊರಿಯಾದ ಓಂಗಜಿನ್ ಪಟ್ಟಣವನ್ನೂ, ಪೋಜಿನ್ ಪಟ್ಟಣವನ್ನೂ ವಶಪಡಿಸಿಕೊಂಡಿದ್ದಾರಂತೆ ಓಂಗಜಿನ್ ಪಟ್ಟಣ ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್‌ಗೆ ೬೩ ಮೈಲಿ ದೂರದಲ್ಲಿದೆ ಪೋಜಿನ್ ಪಟ್ಟಣ ಉತ್ತರಕ್ಕೆ ೫೫ ಮೈಲಿ ದೂರದಲ್ಲಿದೆ ಈ ವಾಳೆಯಂದ ಒಂದೆರಡು ದಿನ ಗಳಲ್ಲಿಯೇ ಸುಮಾರು ೬,೦೦೦ ಮಂದಿ ಸಾವುನೋವು ಗಳಿಗೆ ತುತ್ತಾಗಿದ್ದಾರೆಂದು ತಿಳಿದುಬರುತ್ತದೆ

ಸಹಾಯವನ್ನು ಕೂಡಲೇ ಒದಗಿಸಲು ದಕ್ಷಿಣ ಕೊರಿಯ ರಾಯಭಾರಿ ಮನವಿ

‘‘ಉತ್ತರ ಕೊರಿಯನ್ ಕಮ್ಯೂನಿಸ್ಟರ ದುರಾಕ್ರಮಣಕ್ಕೆ ಒಳಗಾಗಿರುವ ದಕ್ಷಿಣ ಕೊರಿಯಾವನ್ನು ರಕ್ಷಿಸಲು ಅಮೆರಿಕವು ಮಿಲಿಟರಿ ಸಹಾಯ ನೀಡುವುದಕ್ಕೆ ಅನುಮತಿ ಕೊಡಲು ಕಾಂಗ್ರೆಸ್ ಅಧಿಕಾರ ಕೊಟ್ಟಿದೆ. ಅಧ್ಯಕ್ಷರು ಸಹ ಮಾತ್ರ ತಮ್ಮ ಒಪ್ಪಿಗೆಯನ್ನಿತ್ತಿದ್ದಾರೆ. ಆಕ್ರಮಣಕಾರಿಗಳ ವಿರುದ್ಧ ಈ ಸಂಬಂಧಿಸ್ಥ ಪರಿಸ್ಥಿತಿಯಲ್ಲಿ ಅಮೆರಿಕನ್ ಸೈನ್ಯಗಳು ಕೊರಿಯಾಕ್ಕೆ ಬಂಧಿಷ್ಟವಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ. ನಾವು ಬರಿಯ ಸ್ನೇಹಭಾವದಿಂದ ಮಾತ್ರ ಸಹಾಯ ಕೋರಿದೆ ವಿಶ್ವಸಂ ಪ್ರಕಾರವೂ ಶತ್ರು ಕಮ್ಯೂನಿಸ್ಟರನ್ನು ಎದುರಿಸಿ ಕಾದಾಡುವ ದೃಢನಿಶ್ಚಯದಿಂದ ಅಮೆರಿಕದ ಮಿಲಿಟರಿ ಸಹಾಯ ಕೋರಿದೆವು” ಎಂದು ವಿಶ್ವಸಂಸ್ಥೆಯು ಕೊರಿಯನ್ ಪ್ರತಿನಿಧಿ ಗಳಾದ ಡಾ|| ಜಾನ್ ಮಯನ್‌ಚಾಂಗ್‌ರವರು ಅಧ್ಯಕ್ಷ ಟ್ರೂಮನ್ನರಿಗೆ ನಾಡಿಕೊಂಡ ಖಾಸಗಿ ಮನವಿಯಲ್ಲಿ ತಿಳಿಸಿದ್ದಾರೆ

ಅಧ್ಯಕ್ಷ ಟ್ರೂಮನ್ನರ ಭರವಸೆ

‘‘ದುಸ್ಥಿತಿಯಲ್ಲಿರುವ ಕೊರಿಯಾಕ್ಕೆ ಸರ್ವಸಹಾಯ ನೀಡಲು ಅಮೆರಿಕಾ ಸಿದ್ಧವಿರುವುದಾಗಿ ಅಧ್ಯಕ್ಷ ಟ್ರೂಮನ್ನರೂ, ಡೀನ್ ಅಚಿಸನ್ನರೂ ಭರವಸೆ ಇತ್ತಿರುವುದಾ ಯೂ, ಅಲ್ಲದೆ ವಿಶ್ವಸಂಸ್ಥೆ ಕೂಡ ಸಹಾಯ ನೀಡುವಂತೆ ಮಾಡಲು ಶ್ರಮಿಸುವುದಾಗಿಯೂ, ಸಹಾಯ ಕೋರಿರು ವುದರಲ್ಲಿ ಶಸ್ತ್ರಾಸ್ತ್ರಗಳನ್ನೊ ದಗಿಸುವುದು ಮುಖ್ಯಾಂಶ ವೆಂದು’’ ಕೊರಿಯಾ ರಾಯಭಾರಿ ತಿಳಿಸಿದ್ದಾರೆ.

ದಕ್ಷಿಣ ಕೊರಿಯಾಕ್ಕೆ ಅಮೆರಿಕದ ಸಹಾಯ

ದಕ್ಷಿಣ ಕೊರಿಯಾಕ್ಕೆ ೬೫,೩೬,೬೧,೪೦೮ ಡಾಲರು ಗಳಷ್ಟು ಆರ್ಥಿಕಸಹಾಯಮಾಡಬೇಕೆಂದು ಅಮೆರಿಕಾದ ಪ್ರಜಾಪ್ರತಿನಿಧಿಸಭೆ ನಿರ್ಧರಿಸಿತ್ತು ಈ ಮಸೂದೆಗೆ ಕಳೆದ ಗುರುವಾರ ಅಧ್ಯಕ್ಷಟ್ರೂಮನ್ನರು ಸಹಿನೂಡಿ ದರು ಈ ಹಣದಲ್ಲಿ ಆಧುನಿಕ ವಿಮಾನಗಳನ್ನು ನೂತನ ಶಸ್ತ್ರಾಸ್ತ್ರಗಳನ್ನು, ಸರ್ಚ್‌ಲೈಟ್‌ದಳ್ಳನ್ನು ಕೊರಿಯಾ ಕೊಳ್ಳುವುದು

ಅಮೆರಿಕನ್ ಧಾಳಿಯಿಂದ ಉತ್ತರ ಕೊರಿಯನ್ನರಿಗೆ ನೆಪ್ಪ

ಕೊರಿಯಾ ಯ ದ್ಧರಂಗದಲ್ಲಿ ಅಮೆರಿಕಾದ ಜೆಟ್ ಯುದ್ಧವಿಮಾನಗಳೂ ಮತ್ತು ಬಾಂಬರ್ ವಿಮಾನಗಳೂ ಭಾರಿ ಕಾರ್ಯಾಚರಣೆಗಿಳಿದಿವೆ ಇಯೋಲ್ ಮತ್ತು ಸುವಾನ್ ಸೈನ್ಯ ಶಿಬಿರಗಳಿಗೆ ಈ ವಿಮಾನಧಾಳಿಯಿಂದ ಒಳಪೆ ನಷ್ಟವಾಗಿವೆ, ಎಂದು ಜನರಲ್ ಮೆಕಾರ್ಥರ್‌ರವರ ಕಚೇರಿಯಿಂದ ಹೊರಬೀರುವ ಪ್ರಕಟಣೆಯಿಂದ ತಿಳಿದುಬಂದಿದೆ

ಜನರಲ್ ಮೆಕಾರ್ಥರ್‌ರವರು ೧೪ ಗಂಟೆಗಳ ಕಾಲ ಯುದ್ಧರಂಗದಲ್ಲಿ ಪರಿಶೀಲನೆ ನಡೆಸಿ ಟೋಕಿಯೋಕ್ಕೆ ಹಿಂದಿರುಗಿದ್ದಾರೆ ಹ್ಯಾನ್ ನದಿಯ ಸೇತುವೆಗಳ ಮೇಲೆ ಧಾಳಿಮಾಡಲು ೪ ಇಂಜನ್‌ಗಳ ಬಿ ೨೯ ವಿಮಾನ ಗಳನ್ನು ಕಳುಹಿಸಬೇಕೆಂದು ಅಜ್ಞೆ ಮಾಡಿದ್ದಾರೆ ಆಯುಧ ಸಾಮಗ್ರಿಯನ್ನು ವಿಮಾನಗಳ ಮೂಲಕ ದಕ್ಷಿಣ ಕೊರಿಯನ್ನರಿಗೆ ಕಳಸಲಾಗುತ್ತದೆ

ಅಮೆರಿಕಾ ವಿಮಾನ ಧಾಳಿಗೆ ಗುರಿಯಾಗಿರುವ ತೆಂಪೋ ವಿಮಾನ ನಿಲ್ದಾಣಕ್ಕೆ ನಿಕಟ ಪ್ರದೇಶವು ಉತ್ತರ ಕೊರಿಯನ್ನರ ೫೩ ಟ್ಯಾಂಕುಗಳು ೫೬ ಮೋಟಾರ್ ವಾಹನಗಳೂ ಮೊದಲಾದವು ನಾಶವಾಗಿವೆ

ಉತ್ತರ ಕೊರಿಯ ರಾಜಧಾನಿ ಮೇಲೆ ಅಮೆರಿಕದ ಧಾಳಿ

ಅಮೆರಿಕದ ಬಿ ೨೯ ಮಾದರಿಯ ಬಾಂಬರುಗಳು ಉತ್ತರ ಕೊರಿಯ ರಾಜಧಾನಿ ಮೇಲೆ ಧಾಳಿ ನಡಿಸಿದ ವೆಂದೂ ಸುಮಾರು ೩೦೦ ಬಾಂಬ್‌ಗಳನ್ನು ಹಾಕಿ ಆಯಿಕೆಂದೂ ತಿಳಿದುಬರುತ್ತದೆ

ಇದು ಯುದ್ಧವಲ್ಲ; ಕೇವಲ ಪೋಲೀಸ್ ಆಕ್ಷನ್ ಟ್ರೂಮನ್ನರ ಹೇಳಿಕೆ

ಅಮೆರಿಕಾವು ಯುದ್ಧಪೂರಿತ ದಕ್ಷಿಣ ಕೊರಿಯಾದ ಮೇಲೆ ಉತ್ತರ ಕೊರಿಯಾ ಆಕ್ರಮಣ ಮಾಡಿದ್ದರಿಂದ ಈ ಆಕ್ರಮಣವನ್ನು ತಡೆಗಟ್ಟಲು ಅಮೆರಿಕಾವು ಪೋಲೀಸ್ ಕಾರ್ಯಾಚರಣೆಯನ್ನು ಮಾತ್ರ ಕೈಗೊಂಡಿದೆ. ಅಮೆರಿಕಾವು ದಕ್ಷಿಣ ಕೊರಿಯಾದ ಸ್ವಾತಂತ್ರ್ಯವನ್ನು ರಕ್ಷಿಸಿ, ಸ್ವತಂತ್ರ ರಿಪಬ್ಲಿಕ್ ಆಗಿರುವಂತೆ ಮಾಡಲಿದೆ, ಎಂದು ಅಮೆರಿಕಾದ ಅಧ್ಯಕ್ಷ ಟ್ರೂಮನ್ನರು ತಮ್ಮ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಕೊರಿಯಾ ಪರಿಸ್ಥಿತಿ ಕುರಿತು ಟ್ರೂಮನ್‌ರವರ ನಿವರಣೆ

ರಿಪಬ್ಲಿಕ್ ಕೊರಿಯಾದ ಮೇಲೆ ಕಮ್ಯೂನಿಸ್ಟ್ ಸೈನ್ಯಗಳು ಧಾಳ ಮಾಡಿರುವುದು ವಿಶ್ವಾಬಂಡದಲ್ಲಿ ಂದುಳಿದ ರಾಷ್ಟ್ರಗಳಿಗೆ ಕಮ್ಯೂನಿಜಂನಿಂದ ಗಂಡಾಂ ರ ತಪ್ಪಿದ್ದಲ್ಲ ಎಂಬುದು ಸ್ಪಷ್ಟವಾಗಿದೆ ಎಂದು ಅಮೆರಿ ದ ಅಧ್ಯಕ್ಷರಿ ಮಿ॥ ಟ್ರೂಮನ್‌ರು ಜಮೈಕಿಕದ ವೃತ್ತ ತ್ರಿಕೆಗಳ ಸಂಸ್ಥೆಯ ಆಶ್ರಯದಲ್ಲಿ ಭಾಷಣ ಮಾಡುತ್ತಾ ೀದರು ವಿಶ್ವಸಂಸ್ಥೆಯ ಪ್ರಣಾಳಿಕೆಯ ಪ್ರಕಾರ ಶ್ವಸಂಸ್ಥೆಯ ಧ್ಯೇಯೋದ್ದೇಶಗಳನ್ನು ಜಾರಿಯಲ್ಲಿ ರಬೇಕಾದಲ್ಲಿ ಇಂತಹ ದುರಾಕ್ರಮಣಗಳನ್ನೆದುರಿಸಲೇ ೀಕು ನಮ್ಮ ಸರ್ವಪ್ರಯತ್ನಗಳಿಂದ ಆಕ್ರಮಣ ಳನ್ನು ತಡೆಗಟ್ಟಿ ವಿಶ್ವಸಂಸ್ಥೆಯ ಧ್ಯೇಯೋದ್ದೇಶಗಳನ್ನು ಾರಿಯಲ್ಲಿ ತರಬೇಕೆಂಬುದೇ ನಮ್ಮ ಧ್ಯೇಯ ತಮ್ಮ ಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕೆಂದು ಇಚ್ಛಿಸುವ ಲ್ಲಾ ರಾಷ್ಟ್ರಗಳಿಗೂ ಮತ್ತು ಜನಗಳಿಗೂ ನಮ್ಮ ಾಧ್ಯವಾದ ಎಲ್ಲಾ ಸಹಾಯ ನೀಡಲು ಸಿದ್ಧರಿ ದ್ದೇವೆ ಕಮ್ಯೂನಿಸ್ಟರ ಆಕ್ರಮಣ, ದಬ್ಬಾಳಿಕೆಗಳ ಯಭೀತಿಗಳನ್ನು ಪ್ರತಿಭಟಿಸಿ ಹಿಂದುಳಿದ ರಾಷ್ಟ್ರಗಳಿಗೆ ಹಾಯ ಸಲ್ಲಿಸಬೇಕಾಗಿದೆ ಅದಕ್ಕಾಗಿ ಸಿದ್ಧಗೊಳಿ ರುವ ತಮ್ಮ 'ಚತುರ್‌ಏಥಿ' ಕಾರ್ಯಕ್ರಮದ ಬಗ್ಗೆ ೀರ್ಘವಿವರಣೆ ಕೊಟ್ಟು, ವಿಶ್ವಾಬಂಡದಲ್ಲಿ ರಾಜ ೀಯ ಅಂದೋಳ, ಅಭದ್ರತೆ, ಜನಗಳ ಜೀವನದ ೀಳ್ಮಟ್ಟ ಇವು ಎಲ್ಲ ಮೀರಿಂದ ಇವುಗಳ ಜೊತೆಗೆ ಯ, ಬಡತನ ರೋಗಜನಿಗಳಿಂದ ಕೋಟ್ಯಾಂತರ ನಗಳು ನರಳುತ್ತಿದ್ದಾರೆ ಇಲ್ಲಿಯ ಜನಗಳ ಜೀವನದ ಯುಷ್ಯವು ಸರಾಸರಿಯಲ್ಲಿ ೩೦ ವರ್ಷಗಳಿಗಿಂತ ಕಡಿಮೆ ಾಗಿದೆ ಹಿಂಮಳವ ಪ್ರದೇಶಗಳ ಜನರ ಆಯ ಾರ ಾಸ್ಯಾಭಿವೃದ್ಧಿಗಳನ್ನು ಉತ್ತೇಜಿಗೊಳಿಸಿ, ನ್ಯವಸಾಯ ಕ್ಕು ತ್ವೈಗಾರಿಕಾ ಪ್ರೌಢಗೊಳ್ಳಲು ಪ್ರಗತಿ ಸಾಧಿಸಬೇಕೆಂ ದೇ 'ಚತುರ್‌ಏಥಿ' ಕಾರ್ಯಕ್ರಮದ ಉದ್ದೇಶ ಗಿದೆ ಹಿಂದುಳಿದ ಪ್ರದೇಶಗಳು ಆರ್ಥಿಕವೃದ್ಧಿಯೊಂದಿ ಸ್ಥಿರ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಂಡಲ್ಲಿ ಕಮ್ಯೂ ಜಂ ಆಕ್ರಮಣವನ್ನೆದುರಿಸಿ ಸ್ವಾತಂತ್ರ್ಯ ರಕ್ಷಣೆಮಾಡಿ ಳಲು ಹೆಚ್ಚು ಸಹಾಯವಾಗುವುದು 'ಚತುರ್ ' ಯೋಜನಾ ಕಾರ್ಯಕ್ರಮಗಳನ್ನು ನಾವು ತೀವ್ರ ಗಿ ಜಾರಿಯಲ್ಲಿ ತರದಿದ್ದಲ್ಲಿ, ಸಹಾಯಪೇಕ್ಷಿಗಳಾಗಿ ವ ಲಕ್ಷಾಂತರ ಜನಗಳಿಗೆ ನಿರಾಶೆಯನ್ನುಂಟುಮಾಡು ದ್ದಲ್ಲದೆ ಕಮ್ಯೂನಿಸ್ಟರ ಪ್ರಾಬಲ್ಯಕ್ಕೆ ಉತ್ತೇಜನ ಟ್ಟುಂತಾಗುವುದು ಸ್ವತಂತ್ರರಾಷ್ಟ್ರಗಳ ಆರ್ಥಿಕಾಭಿ ದ್ಧಿಗೆ 'ಚತುರ್‌ಏಥಿ" ಕಾರ್ಯಕ್ರಮ ಅತ್ಯಾವಶ್ಯಕ ಗಿದೆ ಈ ಕಾರ್ಯಕ್ರಮಕ್ಕೆ ಬೆಂಬಲಕೊಡಬೇಕು ಯಭೀತಿಗಳ ಸಂದಿಗ್ಧ ಸ್ಥಿತಿಯಲ್ಲಿ ದಾರಿಕಾಣದೆ ಕತ್ತ ತ್ತಿರುವ ಜಗತ್ತಿಗೆ "ಚತುರ್ಏಥಿ"ಯೋಜನೆ ಬಿತೆ ಭರವಸೆಗಳ ಆಶಾಕಿರಣ ಎಂದು ಹೇಳಿದರು

ಟ್ರೂಮನ್ನರ ಪತ್ರಕ್ಕೆ ರಷ್ಯದ ಉತ್ತರ

ದಕ್ಷಿಣ ಕೊರಿಯಾ ಮೊದಲು ಯುದ್ಧ ಆರಂಭಿಸಿತು

ದಕ್ಷಿಣ ಕೊರಿಯನ್ನರೇ ಮೊದಲು ಧಾಳಮಾಡಿದುದ ಕೊರಿಯಾದಲ್ಲಿ ಕದನ ತಲೆದೋರಿದೆ ಎಂದೂ, ುದ್ಧಕ್ಕೆ ದಕ್ಷಿಣ ಕೊರಿಯಾ ಸರ್ಕಾರ ಮತ್ತು ಅವರ ನ್ನ ಹಿಂದಿರುವವರೇ ಬಾಧ್ಯತೆ ವಹಿಸಬೇಕಾಗುವ ದೂ ಟ್ರೂಮನ್ನರ ಪತ್ರಕ್ಕೆ ಉತ್ತರವಾಗಿ ರಷ್ಯಾ ಪವಿದೇಶಾಂಗ ಮಂತ್ರಿಗಳಾದ ಆಂಡ್ರೀಗ್ರೋ ಮೆಕೋ ರು ಮಾಸ್ಕೋನಲ್ಲಿರುವ ಅಮೆರಿಕಾ ರಾಯಭಾರಿಗ ದ ಅಲ್ಪಾಕ್ಷರವರಿಗೆ ಲಿಖಿತಪೂರ್ವಕವಾಗಿ ತಿಳಿ ಿ. ಕೊರಿಯಾದಿಂದ ರಷ್ಯಾಸೈನ್ಯಗಳೂ ಈ ಹಿಂದೆಯೇ ರ್ ಬಂದಿಲ್ಲ ತರ ರಾಷ್ಟ್ರಗಳ ಆಂತರಂಗಿಕ ಯಗಳಲ್ಲಿ ಕೈಹಾಕಬಾರದೆಂಬ ನೀತಿಯನ್ನು ಸೋವಿ ಯ್ ಸರ್ಕಾರ ಅಕ್ಷರಶಃ ಆಚರಿಸುತ್ತಿದೆ.

ಭದ್ರತಾ ಸಮಿತಿಯಲ್ಲಿ ರಷ್ಯಾ ಭಾಗವಹಿಸಲು ನಿರಾ ಸುವುದೆಂಬುದು ತಪ್ಪು ಅಮೆರಿಕಾಧೋರಣೆಗೆ ತಿ ಚೀನಾಕ್ಕೆ ಸಭ್ಯತ್ವವನ್ನಿರಿಸುವುದರಿಂದ ಅರಿಕೆ ತಪ್ಪೇನಾಗಿತ್ತು ಎಂದು ಪ್ರತ್ಯಕ್ಷಕ್ಕೆ ತಿಳಿಸಲಾಗಿದೆ.

ದಕ್ಷಿಣ ಕೊರಿಯಾಕ್ಕೆ ಬ್ರಿಟನ್ನಿನ ಮಿಲಿಟರಿ ಸಹಾಯ

ಪಾರ್ಲಿಮೆಂಟಿನಲ್ಲಿ ಆಟ್ಲಿಯವರ ಘೋಷಣೆ

ದಕ್ಷಿಣ ಕೊರಿಯಾದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಅಮೆರಿಕನ್ ಸೇನೆಗಳಿಗೆ ಸಹಾಯ ನೀಡುವಂತೆ ಜಪಾನ್ ಕ್ಷೇತ್ರದಲ್ಲಿರುವ ಬ್ರಿಟಿಷ್ ನೌಕಾಪಡೆಗಳಿಗೆ ಆಜ್ಞೆ ಮಾಡ ಲಾಗಿದೆ ಎಂದು ಬ್ರಿಟಿಷ್ ಮಹಾಪ್ರಧಾನರಾದ ಮಿ॥ ಕ್ಲೆಮೆಂಟ್ ಆಟ್ಲಿಯವರು ಪಾರ್ಲಿಮೆಂಟಿನಲ್ಲಿ ಇಂದು ಘೋಷಿಸಿದರು ಮಿ॥ ಆಟ್ಲಿಯವರ ಘೋಷಣೆಗೆ ವಿರೋಧಪಕ್ಷದ ನಾಯಕರಾದ ಮಿ॥ ಚರ್ಚಿಲ್‌ರವರು ಪೂರ್ಣ ಬೆಂಬಲ ನೀಡಿದರು

ಮಿ॥ ಆಟ್ಲಿಯವರು ಬ್ರಿಟಿಷ್ ಸರ್ಕಾರದ ನಿರ್ಧಾರದ ನಿರ್ಧಾರ ಕುರಿತು ಮಾತನಾಡುತ್ತಾ ಗಟ್ಟಿಣ ಕೊರಿ ಯಾಕ್ಕೆ ಸಹಾಯ ನೀಡಬೇಕೆಂದು ವಿಶ್ವಸಂಸ್ಥೆಯು ಮಾಡಿರುವ ನಿರ್ಣಯಕ್ಕೆ ಅನುಗುಣವಾಗಿ ಈ ನಿರ್ಧಾರ ಮಾಡಲಾಗಿದೆಯೆಂದು ತಿಳಿಸಿದರು

ಭಾರತದ ನಿರ್ಧಾರದ ಬಗ್ಗೆ ಟ್ರೂಮನ್ನರ ಸಂತೋಷ

ಕೊರಿಯಾಕ್ಕೆ ಸಹಾಯ ನೀಡುವ ಒಗ್ಗೆ ಭದ್ರತಾ ಸಮಿತಿಯು ಮಾಡಿರುವ ನಿರ್ಣಯಕ್ಕೆ ಇಂಡಿಯಾ ಸರ್ಕಾರವು ಅಂಗೀಕಾರವಿತ್ತಿರುವುದಕ್ಕಾಗಿ ಅಮೆರಿಕೆ ಟ್ರೂಮನ್ನರು ತಮ್ಮ ಸಂತೋಷ ವ್ಯಕ್ತಪಡಿಸಿದ್ದಾರೆ

ಕೆನಡಾಗೆ ಸಂತೋಷ

ಕೆನಡ ಪಾರ್ಲಿಮೆಂಟಿನಲ್ಲಿ ಇಂದು ವಿದೇಶಾಂಗ ಸಚಿವೆಯಾದ ಮಿ॥ ಪಿಯರ್‌ಸನ್‌ರವರು ಭದ್ರತಾ ಸಮಿ ತಿಯ ನಿರ್ಣಯಕ್ಕೆ ಭಾರತವು ಒಪ್ಪಿಗೆ ಇತ್ತಿರುವ ಸುದ್ದಿಯನ್ನು ಹೊರಗೆತಿಳಿದಾಗ ಸಭೆಯಲ್ಲಿ ಜಯಕಾರ ಗಳಾದವು

ದ॥ ಕೊರಿಯಾದ ಸೇನೆಯು ಶಕ್ತಿ ಕುಂದಿದೆ

ದ॥ ಕೊರಿಯದ ಸೇನೆಗಳ ಶಕ್ತಿ ಪೂರ್ಣವಾಗಿ ಕುಗ್ಗಿದೆಯೆಂದೂ ತಿಳಿದುಬಂದಿದೆ ಉತ್ತರ ಕೊರಿಯ ಸೇನೆಗಳು ಸುವಾ ಕಡೆಗೆ ಮುಂಚಿನ ವೇಗದಲ್ಲಿ ನುಗ್ಗು ತ್ತಿವೆ ದ॥ ಕೊರಿಯಾ ಸೇನೆಗಳು ಜೀವದ ಹಂಗನ್ನು ತೊರೆದು ಹೋರಾಡುತ್ತಿವೆ

ರಷ್ಯಾಕ್ಕೆ ಬ್ರಿಟನ್ನಿನ ವಿನಂತಿ

ಕೊರಿಯ ಯುದ್ಧವನ್ನು ನಿಲ್ಲಿಸುವ ಪ್ರಯತ್ನದಲ್ಲಿ ರಷ್ಯಾವು ಸಹಕರಿಸಬೇಕೆಂದು ಬ್ರಿಟನ್ನು ರಷ್ಯಾ ಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದೆ.

ಕರ್ಪೂರ ಮೆಣಸುಗಳ ಬೆಲೆ ಏರಿತು

ಕೊರಿಯನ್ ಯುದ್ಧದ ಪ್ರತಿಕ್ರಿಯೆಯೆಂಬಂತೆ ಜೊಂ ಬಾಯಿ, ಮದರಾಸ್ ಮತ್ತು ಭಾರತದ ಇತರ ಪ್ರದೇಶ ಗಳಲ್ಲಿ ಇಂದಿನಿಂದ ಕರ್ಪೂರ, ಮೆಣಸು ಮತ್ತು ಗಾಜಿನ ಪಾತ್ರೆಗಳ ಬೆಲೆ ಏರಿದೆ.

ಭಾರತ ಪಾರ್ಲಿಮೆಂಟಿಗೆ ಶ್ರೀ ನಿಜಲಿಂಗಪ್ಪನವರು

ಮುಂಬೈ ಸ್ಟಾಂಪಿಂಗ್ ಅಡಿಟೋಫ್ ಹುದ್ದಾಪಡೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ನಿಜಪ್ಪನವರಿಗೆ ನಿಜಲಿಂಗಪ್ಪನವರು ಜೋಯಾಯ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕ್ರತಿಕ್ಷೇತ್ರೆಯಲ್ಲಿರುವ ಭಾರತ ಪಾರ್ಲಿಮೆಂಟಿಗೆ ಆಯ್ಕೆಯಾಗಿದ್ದಾರೆ.

ಗುರುವರ್ಗದ ಕನ್ನಡಿ ಕೈಲಾಸ ಸೇರಿತೆ

ಜಗತ್ತಿನಲ್ಲಿ ನೂನವೆ ವೀಪಹಾರನೆಮಾಡಿ ಸುಲಲಿತ ಕಾರ್ಯವನ್ನು ಕೈಕೊಂಡು ಕೀರ್ತಿಕಾಯರಾಗಬೇಕು. ಅದರಂತೆ ನನ್ನನ್ನು ಆಗಲಿ ಹೋದ ಪಂ॥ ಶ್ರೀಕಾಶೀ ನಾಥಶಾಸ್ತ್ರಿಗಳು ಈ ಪಂಚಭೂತಾತ್ಮಕ ಶರೀರದಲ್ಲಿ ಜನ್ಮತಾಳಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ನಿರ್ಮಿತವಾದ ವೀರಶೈವ ವ ತವೆ ಎಳೆಗೆರೆ ಬ್ರಹ್ಮಚರ್ಯಾವಸ್ಥೆಯಲ್ಲಿ ನಿಜವಾದ ಾಂಡಿತ್ಯವನ್ನು ಸಂಪಾದಿಸಿ ಪರಮತವಾದಿಗಳನ್ನು ಖಂಡಿಸಿ ಶ್ರೀಕಾಶೀ ಕ್ಷೇತ್ರದಲ್ಲಿ ಜಯಭೇರಿಯನ್ನು ಭೋಗರೆಸಿ ಅಸೇತು ಹಿಮಾಚಲಸರ್ಯಂತವಾಗಿ ಈ ನಿನಾದವು ಸೂರ್ಯ ಚಂದ್ರರಿರುವತನಕ ಉಳಿಯಲೆಂದು, ಸಂಕಲ್ಪಿಸಿ ಕೈ॥ ಶ್ರೀಜಗದ್ಗುರು ಶಿವಲಿಂಗಶಿವಾಚಾರ್ಯಮಹಾಸ್ವಾಮಿ ಗಳನ್ನು ಮತ್ತು ಮಹಾತಪಸ್ವಿಗಳಾದ ಶ್ರೀ॥ ಶ್ರೀ ಜಗ ದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳನ್ನು ಸ್ಮಾರ್ಧಿಸಿಕೊಂಡು ಜಂಗಮವಾಡಿ ಮೆರವಣಿಗೆ ಪಂಚಾ ಚಾರ್ಯ ಸಮ್ಮೇಲನವನ್ನು ನೆರವೇರಿಸಿ ತಮ್ಮ ಇಚ್ಛಾ ಶಕ್ತಿಯೊಂದಿಗೆ ಪರಮೇಶ್ವರನಿಂದ ಆಜ್ಞಾಪನಿಗೆ ಪಾಲಿಪ ಶಾಸ್ತ್ರವು ಹೊರತಂಪಡೆ ಶಿವಾಚಾರ್ಯರಿಂದ ಪ್ರಭಾ ದೇವಿಯನ್ನು ಪಡಕೊಂಡು ತವ್ವಾರಾ ಕಮಲವ ನುಕರಂದನನ್ನು ಬೀರುವಂತೆ ಜಗತ್ತಿಗೆ ಶಿವತತ್ವಗಳನ್ನು ಪ್ರವಾಸದೋವಾದಿಯಲ್ಲಿ ಹೊರಹೊರಡಿಸಲಿಕ್ಕೆ ಉಚ್ಚೈ ತರವಾದ ಕಾರ್ಯ ಕೈಕೊಂಡು ವೀರಶೈವ ಸಮಾಜಕ್ಕೆ ಮಹಾಮಂಕಾರನನ್ನು ಮಾಡಿರುವದು ಸರ್ವರಿಗೂ ತಿಳಿದೇ ಇವೆ ಮತ್ತು ಆನೇಕ ವಿದ್ವಾಂಸರು, ಲೇಖಕರು ಪಂಡಿತರಿಂದ ಪ್ರಾಮಚ-ಪಿಸಿದ ಪ್ರಥೆಯಲ್ಲಿ ಶೋಕ ಸಾಗರದಲ್ಲಿ ಮುಳುಗುತ್ತ ತೇಲುತ್ತ ಹೃತ್ಪೂರ್ವಕವಾಗಿ ಲೇಖನಗಳನ್ನು ಪ್ರಕಟಿಸಿದ್ದಾರೆ ಆದಾಗ್ಯೂ ಸ್ಮೂಲರೂಪ ವಾದ ಕನ್ನಡಿಯು ಈವಾಗ್ಯೆ ಸನಾತನಧರ್ಮಾಭಿ ಮಾನಿಗಳಾದ ಗುರುವರ್ಗದ ಹಾಗೂ ಸದ್ಭಕ್ತರ ಹೃದ ಯದಲ್ಲಿ ಸುಜ್ಞಾನವೆಂಬ ನಾಮವನ್ನು ಕೊಟ್ಟು ಮನೆ ಸಿಜನಂತೆ ಅನಂದಾತಿಶಯವನ್ನುಂಟುಮಾಡುತ್ತ ದೆ ಕಾಮಧೇನುವಾದವರಿಗೆ ಜಗತ್ತು ಹೆಸರು ಕಂಡಂತೆ ಸ್ವಾರ್ಥಶೀಲರಾದವರಿಗೆ ಕನ್ನಡಿಯ (ಪಂಡಿತರ) ಜ್ಞಾನ ವಾಗಿರಾದು ಸಂಪೂರ್ಣ ಅರಿವು ಉಂಟಾಗಬೇಕಾದರೆ ಕಾೀನಾಧಗ್ರಂಥಮೂಲೆಯ ಲ್ಲಿ ಹೊರತಕ್ಕ ಗ್ರಂಥ ಗಳಿಂದಲೂ ಮತ್ತು ಪ್ರಭಾದೇವಿಯು ಬೀರತಕ್ಕ ಲೇಖ ಗಳಿಂದಲೂ ನಿಜವಾದ ಮರ್ಮವನ್ನು ತಿಳಿದುಕೊಂಡು ಜನ್ಮ ಸಾರ್ಥಕಮಾಡಿಕೊಳ್ಳಲೆಂದು ಶ್ರೀಕಾಶೀಪೂರ್ವಕ ವಾಗಿ ಪರಚಿಂತನನೆ ತನ್ಮ ಜೀವನ್ಮುಕ್ತಿಸಾಧನೆಯೆಂದು ಪಂಡಿತರು ಪ್ರಭಾದೇವಿಯನ್ನು ಟ್ರಸ್ಟಿಗಳ ಉಡಿಯಲ್ಲಿ ಹಾಕಿ ಕೀರ್ತಿಕಾಯರಾದರೆಂದು ಹೇಳಲು ನವರಿಗೆ ಪರಮಾನಂದವೆನಿಸಿದೆ ಶ್ರೀ ಜಗದಾಚಾರ್ಯರು ವಯೋವೃದ್ಧರಾದ ತಾಯಿಯವರಿಗೂ, ಅಧ್ಯರ್ವಗಳ್ಕೂ ಮತ್ತು ವೈತರ ಆತ್ಮಕ್ಕೂ ಚಿರಸುಖಶಾಂತಿಯನ್ನುಂಟು ಮಾಡಲೆಂದು ಪ್ರಾರ್ಥಿಸುವೆ,

ದಿಗ್ಮಾವಿ ಬೃಹನ್ಮಠಾಧ್ಯಕ್ಷ
ಶ್ರೀ॥ ಷ॥ ಬ್ರ॥ ಚಿರಪಟ್ಟಾಧ್ಯಕ್ಷರುದ್ರಮುನಿಶಿವಾಚಾರ್ಯರು.

ನಿವೃತ್ತಿ

"ಪಂಚಾಚಾರ್ಯ ಪ್ರಭಾ" ಪತ್ರಿಕೆಯ ಸಂಸ್ಥಾಪಕರೂ ಸನಾತನ ವೀರಶೈವ ಧರ್ಮೋದ್ಧಾರಕರೂ ಬಾಲ ಬ್ರಹ್ಮಚಾರಿಗಳೂ ವೀರಶೈವ ಸಿದ್ಧಾಂತ ಗ್ರಂಥಪ್ರಕಾ ಶಕರೂ, ಪಂಚಪೀಠೋದ್ಧಾರಕರೂ, ಲೋಕಮಾನ್ಯರೂ ರಾಜಾಧಿರಾಜರುಗಳಿಂದ ಗೌರವ ಪಡೆದವರೂ ನಾಗಪುರು ಬೃಹತ್ಕಾಶೀಕರೂ ಆದ ವೇ॥ ಪಂ॥ ಕಾಶೀನಾಥಶಾಸ್ತ್ರಿ ಗಳು ತಾರೀಖು ೨೭-೨-೫೦ ನೇ ದಿವಸ ಪಂಚಮುಖ ಗಳಿಂದ ಪ್ರತಿಷ್ಠಿಸುವ ಪರಶಿವಪಲ್ಲಿ ಎಳ್ಳಾರದೆಯೂ ವಾರ್ತೆಯನ್ನು ಕೇಳಿ ಪತಗೆ ಸಿಡಿಲುಬಡಿದಂತಾಗಿದೆ. ಸನಾತನ ವೈದಿಕಮಾರ್ಗವಲಂಬಿಗಳಿಗೆಲ್ಲ ಅಕ್ಷಂತ ಮಃಖ ವನ್ನುಂಟುಮಾಡಿರುವ ಈ ಸನುಯದಲ್ಲಿ ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯರು ಮತ್ತು ಶ್ರೀಕಾರ್ಯೇ ಪರಮೇಶ್ವರರು ಶ್ರೀ ಪಾಶ್ವಗಳಕರ ಆತ್ಮಕ್ಕೆ ಚಿರಶಾಂತಿ ಯನ್ನೂ ಮತ್ತು ಇವರ ಬಂಧುವರ್ಗದವರಿಗೆಲ್ಲ ಧೈರ್ಯ

ತನ್ನ ಶಕ್ತಿಯನ್ನೂ ಹಾಗೂ ಶ್ರೀ ಪಂಚಾಚಾರ್ಯ ಪ್ರಭೆಯು ಪ್ರತಿ ವಾರ ಹೊರಡುವಂತೆ ಅನುಗ್ರಹವನ್ನೂ ದಯಮಾಳಿಲೆಂದು ಪ್ರಾರ್ಥಿಸುತ್ತೇನೆ

ರೇವಣಾರಾಧ್ಯ ಮರು, ಸಿದ್ಧಸೇಕೇರಿ

ಎಲೆಕ್ಟ್ರಿಕ್ ರೈಲ್ವೆಗಳೂ ಕೇಂದ್ರಕ್ಕೆ

ಬೊಂಬಾಯಿ, ಕಲ್ಕತ್ತ ಮದರಾಸುಗಳಲ್ಲಿರುವ ಎಲೆಕ್ಟ್ರಿಕ್ ರೈಲ್ವೆಗಳ ಆಡಳಿತಗಳನ್ನೂ ಕೇಂದ್ರ ಸರ್ಕಾರವೇ ವಹಿಸಿಕೊಳ್ಳುವುದೆಂದು ತಿಳಿದುಬಂದಿದೆ

ಆತ್ಮಹತ್ಯೆಯಲ್ಲಿ ಮುಂದುನರಿದ ಜಪಾನ್

ಕಳೆದ ಮಾರ್ಚಿಗೆ ಪೂರ್ತಿಯಾದ ವರ್ಷದಲ್ಲಿ ಜಪಾನಿನಲ್ಲಿ ಒಟ್ಟು ೧೭,೧೧೩ ಜನರು ಆತ್ಮಹತ್ಯೆಯಿಂದ ಮಡಿದಿದ್ದಾರೆ ಈ ರೀತಿಯ ಆತ್ಮಹತ್ಯೆಗಳಿಗೆ ಮುಖ್ಯವಾದ ಕಾರಣ ಎಂದರೆ ಖಾಹಿಲೆಯಿಂದ ನರಳುತ್ತಿರುವುದೆ ಎಂದು ತಿಳಿದುಬಂದಿದೆ

ಸಿಂಹವನ್ನು ಕೊಂದ ಎಮ್ಮೆ!

ಹೆಣ್ಣು ಸಿಂಹದೊಡನೆ ಎಮ್ಮೆಯೊಂದು ಕಾದಾಡಿ ಸಿಂಹವನ್ನು ಕೊಂದ ವಿಚಿತ್ರ ಕಥೆಯೊಂದು ರಾಜಕೋಟೆಯ ಸಮೀಪದಲ್ಲಿರುವ ಜೊರಾಲಾ ಎಂಬ ಹಳ್ಳಿಯಿಂದ ಒಂದಿದೆ ಮೇಲಿನಾಗಿ ಕಾಡಿಗೆ ತೆರಳಿದ ಎಮ್ಮೆಗಳ ಗುಂಪಿನಲ್ಲಿ ಒಂದು ಎಮ್ಮೆ ಕೊಂಚ ದೂರ ಹೋಗಿದಟ್ಟವಾದ ಕಾಡಿನ್ನು ಪ್ರವೇಶಿಸಲಾಗಿ ಹೆಣ್ಣು ಸಿಂಹವೊಂದು ಅದರ ಮೇಲೆ ಬಿತ್ತು ಆಗ ಎಮ್ಮೆ ಸಿಂಹ ದೊಡನೆ ಕಾದಾಟ ಪ್ರಾರಂಭಿಸಿ ಸಿಂಹವನ್ನು ಕೊಂದಿತು

ಸಮಯೋಚಿತವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾ ೦ ೧೮ ಫ್ರೆ ಅಮೃತಶಿಲೆಗಳಿದ ಕೂಡಿದ ಫೋಟೋ ಸೈಜು ೮೪×೪೦ ಚಿಲೆ ಗಳಿಕೆ ೦—೬—೦

ಶ್ರೀರೇಣುಕಾಚಾರ್ಯರ ಲಿಂಗಾವತಾರ ದ ಫೋಟೋ (ನವರತ್ನ ಚಿ ೦ ಮುದ್ರಿತ ಸೈಜು ೦೪×೧೦ ಚಿಲೆ ೦—೬—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗ ವಿಗ್ರಹ ಫೋಟೋ ಸೈಜು ೧೪×೧೦ ಚಿಲೆ ೦—೩—೦

" " ಚಿಕ್ಕ ಸೈಜು ಚಿಲೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗೃಹದಲ್ಲಿ ಅನುಷ್ಠಾನದಲ್ಲಿರುವ ಫೋಟೋ ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀಲಂಕೆಯಾರ್ಯಾದಿ ಪಂಚಪೀಠಾಚಾರ್ಯರಿಗೆ ಪಂಚಪೀಠಗಳನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸೃಷ್ಟಿಸುವ ಫೋಟೋ ೦—೧—೬

ಶ್ರೀ ಕಾಶಿ ಜಗದ್ಗುರು ವೀರಶೈವಶಿರೋಮಣಿ ಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರು ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೬

ಶ್ರೀಮದ್ಭೂಯೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬

ಶ್ರೀಮದ್ರಂಭಾಪುರೀ ಸಿಂಹಾಸನಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬

ಗಂಡು ಮಗುವಿನೊಡನೆ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೬

ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧೪ಚಿ ೦—೩—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧೪ಚಿ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೪ಚಿ ೦—೧—೦

ಶ್ರೀ ಜಗದ್ಗುರು ಉಜ್ಜಯಿನಿ ಪೀಠದ ಅತ್ಯಂತ ಪ್ರಾಚೀನ ಶಿಲ್ಪರಚನೆಯ ಸುಂದರ ಫೋಟೋ ೧೪ಚಿ ೦—೧—೦

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೧೪ಚಿ ೦—೧—೦

ತಿರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ೦—೧—೦

ವಿಳಕರು ಕಲ್ಲಿನ್ಮಂಟಪದಲ್ಲಿ ನೆರವೇರಿಸಿ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಸಮಾರೋಹಣದ ಫೋಟೋ ೦—೧—೦

ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಕಾಸನಗಳು ೦—೩—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ	ವೀರಶೈವಮಹಾತ್ಮರು	೪ ಆಣೆ
ಸಜ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ	ಬಸವಧ್ವಾಂತವಿವಾಕರ (೨ನೆಯ ಆವೃತ್ತಿ)	೪ ಆಣೆ
ಪಂಚಮಿಂಚಕಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ	ಆಗಮಪರಿಜ್ಞಾನ	೪ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ	ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೪ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ಶಿವಾನಂದವಿಜಯ	೪ ಆಣೆ
ಶ್ರೀರಂಭಾಶಾಸ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ	ಸಿದ್ಧಾಂತಸಾರಾವಳಿ (ಶ್ರೀರೇಣುಕಸಿದ್ಧಾಂತವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಋಷವಾದಿನಿಜಿತತ್ಕದರ್ಪಣ (೪ನೆಯ ಆವೃತ್ತಿ)	೨ ಆಣೆ	ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ	ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ಶಿವಶಕ್ತಿವಿಲಾಸ	೨ ಆಣೆ	ವಿನೇಕಮುಕ್ತಾವಳಿ	೧ ರೂ
ವಿಜಯನಗರ ಸಾಮ್ರಾಜ್ಯವು ಶ್ರೀರೇಣುಕಾಚಾರ್ಯರೂ	೨ ಆಣೆ	ವಿಚಾರಸಾರಾವಳಿ ..	೧ ರೂ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ	ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೩ನೆಯ ಆವೃತ್ತಿ)	೧೫ ರೂ
ಪಂಚಾಚಾರ್ಯಪ್ರಕಾಶ	೩ ಆಣೆ	ಶ್ರೀಶರಭಷಟ್ಕಂ (ಚಕ್ರಸೂಕ್ಷ್ಮ)	೨ ರೂ
ಪಂಚಾಚಾರ ಪ್ರಕಾಶಿಕಾ	೩ ಆಣೆ	ವೀರಶೈವರಕ್ಷೆ (ಜನಿಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ..	೪ ಆಣೆ	ರೇಣುಕವಿಜಯ ಮಹಾಪುರಾಣ (ಕನ್ನಡ ಭಾ ಮೀಸಚ್ಚಪಡಿ)	೨ ರೂ
ಲಿಂಗಧಾರಣವಿಧಿ ...	೪ ಆಣೆ	ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವಿವಾಹವಿಧಿ (೪ನೆಯ ಆವೃತ್ತಿ) .. -	೪ ಆಣೆ	ಶಿವಾಗಮಸಂಗ್ರಹ (ಪಂಚಸೂತ್ರಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ -	೪ ಆಣೆ	ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ...	೮ ರೂ
ಕೃಷ್ಣಮಪಸಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ) ..	೬ ಆಣೆ	A brief life-sketch of Pandit Sri Kashinatha Shastrigu (English)	4 As
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ	The Philosophical Aspect of Viraseivism (English)	8 As
ವೈದಿಕವಾಙ್ಮಯರಹಸ್ಯ -	೪ ಆಣೆ	Speeches by Pandit Shri Kashinatha Shastrigu (English)	12 As
ಸನ್ಯಾಸಾಶ್ರಮ ವಿಮರ್ಶತತ್ತ್ವನಿರೀಕ್ಷಣ (೩ನೆಯ ಆವೃತ್ತಿ)	೬ ಆಣೆ	ಶಿವಾಚಾರಚಂದ್ರಿಕಾ (ಕನ್ನಡ) ...	೩ ಆ
ವೀರಶೈವಾಂಕ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ	ವೀರಶೈವರಕ್ಷೆ (ಆಣಿ)	೧ ಆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ	ಪಂಚಾಚಾರವಚನೋಪನಿಷತ್ (ವೀರಶೈವಧರ್ಮ-ಸಂಸ್ಕೃತ) ...	೧ ಆ
ತಿನಾದ್ವೈತಶರಿಧಾಷಾ (ಸಂಸ್ಕೃತ)	೮ ಆಣೆ	ಸಂಧಿವಿಗ್ರಹಕಾರಿಕಾ (ಸಂಸ್ಕೃತ) .... -	೨ ಆ

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

Edited, Printed and Published by Bruhanmath Mahadevaah at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಧಿಪಪಂಚಪಾತಕಹರಶ್ರೀಕಾರ ಪಂಚಾಸ್ಯತೀರ್ಥಾಧಿಪರ್ । ಪಂಚಶ್ಲೋಕವಿಪಾಕಕರ್ ಪರಶರಕ್ರೀಸಂಜಲಿಂಗೋದ್ಭವೆರ್ ॥
ಪಂಚಾಚಾರಧಿಯಾಮಳರ್ ಪರಿಲಸತ್ಪಂಚಾಕ್ಷರೀಮೋಹರರ್ । ಪಂಚಾಚಾರ್ಯಜಗದ್ಗುರೂಪ್ಯಮರವರ್ ಪಾಲಿಪ್ಪ ವೀರೋತ್ತಮಂ ॥

ಸಂಸ್ಥಾಪಕರು—ಶಾಗನೂರು ಬೃಹನ್ಶಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಂತವೀರಪಂಡಿತಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ಶಾಗನೂರು ಬೃ॥ ಮಹಾದೇವಯ್ಯನವರು ವಿ. ಪಿ. ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೩೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೦ ನೇ ಜುಲೈ ೧೯೫೦ [ಸಂಚಿಕೆ ೧೨

ಕೊರಿಯಾದ ಸೂಕ್ಷ್ಮಪರಿಚಯ

ಕೊರಿಯಾ ಎಲ್ಲಿದೆ ?

ಇಂದು ಇಡೀ ವಿಶ್ವದ ಕುತೂಹಲವನ್ನೇ ಕೆರಳಿ
ದ ಕೊರಿಯವು ಮಂಚೂರಿಯದ ದಕ್ಷಿಣಭಾಗದಲ್ಲಿದೆ
ಕೊರಿಯದ ಪಶ್ಚಿಮದಲ್ಲಿ ಹಳದಿಸಮುದ್ರವೂ, ಪೂರ್ವ
ಜಪಾನ್ ಸಮುದ್ರವೂ, ದಕ್ಷಿಣಭಾಗದಲ್ಲಿ ಕೊರಿಯಸ್ಟ್
ಜಲ್ಲಿಯೂ ಇವೆ ಕೊರಿಯದ ವಿಸ್ತೀರ್ಣ ೬೫,೫೦೦
ಮೈಲಿಗಳು ಜನಸಂಖ್ಯೆ ೩ ಕೋಟಿ

ಪೂರ್ವೇತಿಹಾಸ

೧೯ ನೇ ಶತಮಾನದಲ್ಲಿ 'ಮಹಿಗಳ ರಾಜ್ಯ' ಎನಿಸಿ
ಂಡಿದ್ದ ಕೊರಿಯ ಇಂದು ವಿಷಪೂರಿತ ಪಟ್ಟಣವಾ
ದೆ ೧೯ನೇ ಶತಮಾನದ ಮಧ್ಯಭಾಗದಿಂದ ೨೦ನೇ
ತಮಾನದ ಆದಿಭಾಗದ ಮುಕ್ಕಾಲು ಶತಮಾನ
ಲ್ಲಿ ಕೊರಿಯದಲ್ಲಿದ್ದಷ್ಟು ಸುಖ, ಶಾಂತಿ, ಸುಭದ್ರತೆ
ದ್ದದ ಮತ್ತಾವ ರಾಷ್ಟ್ರಗಳಲ್ಲೂ ಇರಲಿಲ್ಲ ಉತ್ತರದ
ರ್ಗತಶ್ರೇಣಿಗಳಿಂದ ಹುಟ್ಟುವ ೪ ಜೀವನವಿಧಗಳಲ್ಲದೆ
ಷ್ಟಾರು ಸಣ್ಣಪುಟ್ಟ ನದಿಗಳಿಂದ ಜಲ ಸಮೃದ್ಧಿಯೂ
ದೆ ನೀರಿನಿಂದ ವಿದ್ಯುಚ್ಛಕ್ತಿಯನ್ನು ಸಹಾ ತಯಾರಿ
ಕ್ತಿದ್ದಾರೆ ಕೊರಿಯದ ಶೇಕಡ ೮೦ ಭಾಗದಷ್ಟು
ಂದಿ ಜೀಸಾಯಾಗರರು ಕೊರಿಯನ್ನರು ಕೊಂಜ
ಯು ಜನ. ಬಹು ಕಷ್ಟಸಹಿಷ್ಣುಗಳು. ಕೊರಿಯನ್ನರು
ವರ್ಷಗಳ ಕಾಲ ಜಪಾನರ ಗುಲಾಮರಾಗಿ ಅವರ
ಪ್ಪಾಳೆಯ ಅಲ್ಪಕೆಯಲ್ಲಿ ಜೆಂದು ಜೀಸಕ್ತಿದ್ದರೂ
ಜಿಕ ವ್ಯವಸಾಯ ಮತ್ತು ಕೈಗಾರಿಕಾ ಪ್ರಗತಿಗಾಗಿ
ತ ಹೋರಾಟ ಫಲಿಸಿದ್ದಾರೆ

ಕೊರಿಯದ ಆಹಾರ ವಿಷಯದಲ್ಲಿ ಸ್ವಸಂಪೂರ್ಣ
ಸ್ಮೃದ್ಧಿಯಾಗಿದೆ ಈಗಲೂ ಹೊರದೇಶಗಳಿಗೆ
ಮಾಡುತ್ತಿದ್ದಾರೆ ರೇಷ್ಮೆ, ಸೊಯಾಬೀನ್ಸ್,
ಹೊಗೆಸೊಪ್ಪುಗಳು ಕುಡಿ ಹೇರಳವಾಗಿ ಬೆಳೆಯು
ದೆ ಅಲ್ಲದೆ ಕೊರಿಯಾ ಖನಿಜ ಸಂಪತ್ತಿನಿಂದಲೂ
ಡಿದೆ ಬಂಗಾರ, ಕಬ್ಬಿಣಗಳು ಹೇರಳವಾಗಿ ಸಿಗುತ್ತವೆ

ಈಗ್ಗೆ ಅರ್ಧ ಶತಮಾನಕ್ಕಿಂತ ಹಿಂದಿನ ಪರಿಸ್ಥಿತಿ

೧೯೦೪ ರಲ್ಲಿ ಕೊರಿಯವು ಸ್ವತಂತ್ರರಾಷ್ಟ್ರವಾಗಿ
ದ್ದು ಆಗಲೇ ಆಕ್ರಮಣಕಾರಿಯಾದ ಹೆಸರಾ
ತ್ತಿದ್ದ ಜಪಾನಿಯರು ಕೊರಿಯದ ಖನಿಜ ಸಂಪತ್ತಿನ ಮೇಲೆ ಕಣ್ಣು ಹಾಕಿದ್ದರು ಜಪಾನಿಯರ ಆಕ್ರಮಣಕಾರಿ ಪ್ರವೃತ್ತಿಯನ್ನು ಅರಿತ ಜೀಜಾ
ಪಾನಿಗಳು ಕೊರಿಯದ ಮೇಲೆ ತಮ್ಮ ಪ್ರಭಾವವನ್ನು
ರಿ ಪ್ರಭುತ್ವ ಸ್ಥಾಪಿಸಲು ಎರಡು ರಾಷ್ಟ್ರಗಳು ಹೋರಾಟ
ಸಲು ಪ್ರಾರಂಭಿಸಿದವು ೧೯೦೪ ರ ಅಂತ್ಯಭಾಗದಲ್ಲಿ
ಪಾನ್ ಒತ್ತಾಯಪೂರ್ವಕವಾಗಿ ಕೊರಿಯವನ್ನು
ಮಿಸಿ ತನ್ನ ಪ್ರಭುತ್ವದ ಒಂದು ಭಾಗವನ್ನಾಗಿ
ಡಿಕೊಂಡಿತು ಅಂದಿನಿಂದ ಕೊರಿಯದ ಸ್ವಾತಂತ್ರ್ಯ
ಸ್ಮಪ್ರಾಲಾಯಿತು ಗುಲಾಮಗಿರಿಯ ಬಾಳಿನಲ್ಲಿ ಬಾಳ
ಾಗಿ ಬಂತು ಪ್ರತ್ಯಕ್ಷಸಿದ್ಧಾಂತದಂತೆ ತೌರುಮನೆ
ದ ಕೊರಿಯಾದ ಸಂಪತ್ತನ್ನು ದೋಚಲು ಆಗಿನಿಂದ
ಪಾನ್ ಪ್ರಾರಂಭಿಸಿತು ಜಪಾನರ ದಬ್ಬಾಳಿಕೆಯನ್ನು

ಆತ್ಮವಿಚಾರಮಂದಿರ, ಮೈಸೂರು

'ಆತ್ಮವಿಚಾರ' ಎಂಬ ನಮ್ಮ ಮಾಸಪತ್ರಿಕೆಯು ಪ್ರಕಟವಾಗುವದಕ್ಕೆ ಪ್ರಾರಂಭವಾಗಿ ಒಂದು ತಿಂಗಳಾಯಿತು ಈಗ ಎರಡನೆ ಸಂಚಿಕೆಯು ಪ್ರಕಟಿಸಲ್ಪಡುವುದಕ್ಕೆ ಸಿದ್ಧವಾಗಿದೆ ವೀರಶೈವ ಸಮಾಜದವರಿಂದಲಾಗ ಅನ್ಯಕಾರ್ಯವನ್ನು ಹೋಗಲಾಡಿಸಿ ವೀರಶೈವಸಮಾಧಿಪಡೆಗಳು ನಿಜವಾದ ಗುರುಗಳು ಮತ್ತು ವೀರಶೈವ ಮತೀಯರು ನಿಜವಾದ ವೀರ ಶೈವರು ಆಗುವಂತೆ ಮಾಡಬೇಕೆಂಬುದೇ ನಮ್ಮ ಪತ್ರಿಕೆಯ ಧ್ಯೇಯವಾಗಿದೆ ನಮ್ಮ ಪತ್ರಿಕೆಯನ್ನು ಓದಿ ಶ್ರೀಜಗದ್ಗುರುಗಳು ಅವರಿಯಾಗಿ ಅನೇಕ ವೀರಶೈವಸಮಾಧಿಪಡೆಗಳು, ವೀರಶೈವ ಪಂಡಿತರು ಮತ್ತು ಇತರರು ನಾವು ಶ್ರೇಗೊಂಡಿರುವ ಕಾರ್ಯವನ್ನು ಶ್ಲಾಘಿಸಿ ಪ್ರೋತ್ಸಾಹವನ್ನು ಕೊಟ್ಟಿರುತ್ತಾರೆ ನಮ್ಮ ಪತ್ರಿಕೆಯ ಪುಟಗಳನ್ನು ಜಾಸ್ತಿಮಾಡಬೇಕೆಂದಿರುವದರಿಂದ ನಮ್ಮ ಪತ್ರಿಕೆಯ ವಾರ್ಷಿಕ ಚಂದಾವನ್ನು ೫ ರೂ ಗಳಿಂದ ೬ ರೂ ಗಳಿಗೆ ಹೆಚ್ಚಿಸಲು ನಿರ್ಧರಿಸಿರುತ್ತೇವೆ ಆದುದರಿಂದ ಈ ಜುಲೈ ತಿಂಗಳ ಆಖೈರಿನೊಳಗಾಗಿ ನಮ್ಮ ಪತ್ರಿಕೆಗೆ ಚಂದಾವಾರರಾಗ ತಕ್ಕವರು ವಾರ್ಷಿಕ ಚಂದಾ ೫ ರೂಪಾಯಿಗಳನ್ನೇ ಕೊಡತಕ್ಕದ್ದು ಈ ಜುಲೈ ಆಖೈರಾದ ನಂತರ ಚಂದಾದಾರರಾಗ ತಕ್ಕವರು ವಾರ್ಷಿಕ ಚಂದಾ ೬ ರೂ ಗಳನ್ನು ಕೊಡತಕ್ಕದ್ದಾಗಿರುತ್ತೆ ಆದುದರಿಂದ ೫ ರೂ ವಾರ್ಷಿಕ ಚಂದಾ ಕೊಡಲಿಷ್ಟವುಳ್ಳವರು ಕೂಡಲೆ ಮೊಲಲಗನ್ನು ಮನಿಯಾರ್ಡರ್ ಮೂಲಕ ರವಾನಿಸತಕ್ಕದ್ದು ಅವರಿಗೆ ಎರಡು ಸಂಚಿಕೆಗಳು ಕಳುಹಿಸಲ್ಪಡುವವು ಯಾರಾದರು ನಮ್ಮ ಪತ್ರಿಕೆಗಳನ್ನು ನೋಡಿ ಅನಂತರ ಚಂದಾದಾರರಾಗಲು ಇಚ್ಛಿಸಿದ್ದಲ್ಲಿ ಅಂಥವರು ನಮಗೆ ಒಂದು ರೂಪಾಯಿಯನ್ನು ಮನಿಯಾರ್ಡರ್ ಮೂಲಕ ಕಳುಹಿಸಿದರೆ ನಾವು ಅವರಿಗೆ ನಮ್ಮ ಎರಡು ಸಂಚಿಕೆಗಳನ್ನು ಕಳುಹಿಸುತ್ತೇವೆ ಅವರಿಗೆ ಅವು ಪ್ರೆಸ್ತರವಾಗಿದ್ದರೆ ಅವರು ಬಾಕಿ ೪ ರೂ ಗಳನ್ನು ಕಳುಹಿಸಿ ಚಂದಾದಾರರಾಗಬಹುದು ಇಲ್ಲವಾದರೆ ಅವರು ನಮ್ಮ ಪತ್ರಿಕೆಗಳನ್ನು ಒಂದು ವಾರದ ಒಳಗಾಗಿ ನಮಗೆ ವಾಪಸ್ಸು ಕಳುಹಿಸಿದಲ್ಲಿ, ಅವರು ಕಳುಹಿಸಿರುವ ರೂಪಾಯಿಯನ್ನು ವಾಪಸ್ಸು ತರಿಸಿಕೊಳ್ಳಬಹುದು

3701 ನ್ಯೂಸಯ್ಯಾಜಿರಾವ್‌ರೋಡ್, ಮೈಸೂರು
ತಾ॥ 8—7—1950

M. L. Nagannah,
ಅಧ್ಯಕ್ಷರು

ಸಹಿಸದ ಕೊರಿಯನ್ನರು ೧೯೧೯ ರಲ್ಲಿ ಪ್ರಪ್ರಥಮವಾಗಿ ಜಪಾನ್ ವಿರುದ್ಧ ರಾಷ್ಟ್ರೀಯಚಳವಳಿ ಹೂಡಿದರು. ಆದರೂ ೧೯೪೫ ರ ವರೆವಿಗೂ ಜಪಾನೀಯರನ್ನು ಕೊರಿಯಾನಿಂದ ಹೊರದೂಡಲು ಸಾಧ್ಯವಾಗಲಿಲ್ಲ

ಕೊರಿಯಾ ಇಬ್ಭಾಗವಾದದ್ದು

೧೯೪೫ ರ ಹೊತ್ತಿಗೆ ಕೊರಿಯಾದಲ್ಲಿ ಎರಡು ಪಕ್ಷ
ಗಳು ಹುಟ್ಟಿ ಕೊರಿಯಾ ಸ್ವಾತಂತ್ರ್ಯಕ್ಕಾಗಿ ಒಂದು
ಪಕ್ಷವನ್ನು ರಷ್ಯಾ ರನ್ನೂ, ಮತ್ತೊಂದು ಪಕ್ಷವನ್ನು ಅಮೆರಿಕ
ರನ್ನೂ ಮೊರೆಯಿಟ್ಟಿತು. ರಷ್ಯನರನ್ನು ಮೊರೆಯಿಟ್ಟ
ಪಕ್ಷವೇ ಕಮ್ಯೂನಿಸಂ ಪ್ರಭಾವಕ್ಕೊಳಗಾದ ಪಕ್ಷ ಈ
ಎರಡು ಪಕ್ಷಗಳ ಸಹಾಯದಿಂದ ೧೯೪೬ ರಲ್ಲಿ ಜಪಾನರು
ಕೊರಿಯಾದಿಂದ ಪಲಾಯನ ಮಾಡಿದರು ಆನಂತರ
ದಲ್ಲಿ ಕೊರಿಯಾವು ಕೊರಿಯನ್ನರಿಗಲ್ಲದೆ ಎರಡು
ಪಕ್ಷಗಳೂ ತಮಗೆ ಸೇರಬೇಕೆಂದು ಆಡಾಡಿದವು
೧೯೪೬ ರಲ್ಲಿ ಸೈರೋವಿನಲ್ಲಿ ಫಲಿದ ಮಹಾನಾಯಕರ
ಸಮ್ಮೇಳನದಲ್ಲಿ ಕೊರಿಯ ಸಮಸ್ಯೆಯು ಬಗೆಹರಿಯಿತು
ಈ ಮೆಥ್ಯೆ ೧೯೪೬ ರಲ್ಲಿ ಅಂದರೆ ಎರಡನೇ ಮಹಾ
ಯುದ್ಧ ಏಣಿಮೇಲೆ ಕೊರಿಯದ ಬಗ್ಗೆ ರಷ್ಯಾ ಮತ್ತು
ಅಮೆರಿಕಾಗಳಲ್ಲಿ ಒಂದುರೀತಿಯ ಸೌಹಾರ್ದ ಒಪ್ಪಂದ
ನಾಗಿ ಕೊರಿಯವಷ್ಟು ಇಬ್ಭಾಗವನ್ನಾಗಿ ಮಾಡಿ ಉತ್ತರ
ಪ್ರದೇಶವನ್ನು ರಷ್ಯರ ಆಡಳಿತಕ್ಕೂ, ದಕ್ಷಿಣಪ್ರದೇಶ
ವನ್ನು ಅಮೆರಿಕದ ಆಡಳಿತಕ್ಕೂ ಒಪ್ಪಿಸಲಾಯಿತು —

ರಷ್ಯರಿಗೆ ಸೇರಿದ ಉತ್ತರಭಾಗದಲ್ಲಿ ಖನಿಜಸಂಪತ್ತಿ
ರುವ ಭೂಮಿ, ಕೈಗಾರಿಕಾ ಕ್ಷೇತ್ರಗಳೂ, ಫಲವತ್ತಾದ
ಭೂಮಿ, ನದೀ ಪ್ರದೇಶಗಳೂ ಇವೆ ದಕ್ಷಿಣಭಾಗ, ಅಂದರೆ
ಅಮೆರಿಕರಿಗೆ ಸೇರಿದ ಭಾಗದಲ್ಲಿ ಹೆಚ್ಚಿನ ಜನಸಂಖ್ಯೆ
ಇದೆಯೇ ವಿನಃ ಉತ್ತಮ ಕೈಗಾರಿಕಾ ಕೇಂದ್ರಗಳಾಗಲೀ,
ಗಣಿಗಳಾಗಲೀ ಇಲ್ಲ

ಸರ್ಕಾರಗಳು

ಉತ್ತರ ಕೊರಿಯದಲ್ಲಿ ಕಮ್ಯೂನಿಸ್ಟ್ ಸರ್ಕಾರವು
ಅಡಳಿತ ನಡೆಸುತ್ತಿದೆ. ದಕ್ಷಿಣ ಕೊರಿಯವು ಪ್ರಜಾ
ಪ್ರಭುತ್ವ ರಾಷ್ಟ್ರವೆಂದು ಕರೆಯಲ್ಪಟ್ಟಿದ್ದರೂ, ಅಮೆರಿಕದ
ದಬ್ಬಾಳಿಕೆಯಲ್ಲೇ ಸರ್ಕಾರ ನಡೆಯುತ್ತಿದೆ. ಅಮೆರಿಕದ
ಅಡ್ಮಿನಿಸ್ಟ್ರೇಟರ್ ಒಬ್ಬರಿದ್ದಾರೆ ಈಗ ಮಿ॥ ಜಾನ್
ಜಾರ್ ಮ್ಯಾಸರವರು ಅಡ್ಮಿನಿಸ್ಟ್ರೇಟರು ಈ ಎರಡು
ರಾಷ್ಟ್ರಗಳನ್ನು ೩೮ ನೇ ಅಕ್ಷಾಂಶರೇಖೆಯು ಬೇರ್ಪಡಿ
ಸಿದೆ

ಅಂತರ್ಯುದ್ಧ

೩೮ ನೇ ಅಕ್ಷಾಂಶರೇಖೆಯು ಕೊರಿಯಾವನ್ನು
ಇಬ್ಭಾಗವನ್ನಾಗಿ ಮಾಡಿದಾಗಿನಿಂದಲೂ ಉತ್ತರಕೊರಿಯ
ನರೂ, ದಕ್ಷಿಣಕೊರಿಯನರಿಗೂ ದ್ವೇಷಾಸೂಯೆಗಳು
ಬೆಳೆಯುತ್ತಲೇ ಬಂದಿವೆ ಆಗ್ಗೆ ಸಣ್ಣಪುಟ್ಟ ಘರ್ಷಣೆ
ಗಳು ಪ್ರಯತ್ನಪೂರ್ವಕವಾಗಿ ಇದ್ದುವು ಆದರೆ ಈಗ ಆ ಘರ್ಷಣೆ
ಗಳೆ ದೊಡ್ಡ ಯುದ್ಧವಾಗಿ ಪರಿಣಾಮಿಸಿತು. ರಷ್ಯರಿಂದ
ಶ್ರೇಗೇಟಕೊಂಡ ಉತ್ತರಕೊರಿಯನ್ ಕಮ್ಯೂನಿಸ್ಟರು
ಆಪಾದಿಸಿದ್ದಾರೆ ಎಂಬುದು ಉಲ್ಲೇಖನೀಯ.

ವಾಚಕರಲ್ಲಿ ವಿನಂತಿ

ನಮ್ಮನ್ನಾ ಕುರಿತು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾರಾಜ್ಞುಗಳವರು ಅನೇಕ ಅನುಗ್ರಹವಾದ ಸಂಸ್ಕೃತ ಗ್ರಂಥಗಳನ್ನು ಅರ್ಥಸಹಿತ ಕನ್ನಡದಲ್ಲಿ ಮುದ್ರಣಮಾಡಿಸಿ ಇಡೀ ಕರ್ನಾಟಕ ದೇಶಕ್ಕೆ ಆಸರು ಮಾಡಿರುವ ಮಹೋಪಕಾರವನ್ನು ಕುರಿತು ಆ ಬಗ್ಗೆ ಅನೇಕರಾರಿ ನಮ್ಮ ಪತ್ರಿಕೆಯಲ್ಲಿ ಲೇಖನಗಳನ್ನು ಬರೆದಿದ್ದು ಅದನ್ನು ಓದಿದ ಅನೇಕ ಪ ಪ ನೀಯರು ಆ ಗ್ರಂಥಗಳ ಪಟ್ಟಿಯನ್ನು ಅಪೇಕ್ಷಿಸಿ ನಮಗೆ ಕಾಗದಗಳನ್ನು ಒಡೆಯುತ್ತಿರುವರು ಆದಪ್ಪಯುಕ್ತ "ಶ್ರೀಜಯೆಚಾಮರಾಜೇಂದ್ರಗ್ರಂಥರತ್ನಮಾಲಾ" ಎಂಬ ಹೆಸರಿನಿಂದ ಪುಸ್ತಕಿಸಲ್ಪಟ್ಟಿರುವ ಗ್ರಂಥಗಳ ಪಟ್ಟಿಯನ್ನು ಇದೇ ಸಂಚಿಕೆಯ ಕೆಸಿಸಿಯ ಪುಟವಲಿ ಪ್ರಕಟಿಸಿರುತ್ತೇವೆ ಇವುಗಳಲ್ಲಿರುವ ಇನ್ನೂ ಕೆಲವು ಅಮೂಲ್ಯ ಗ್ರಂಥಗಳು ಮುದ್ರಣವಾಗಿರುತ್ತವೆ ಮತ್ತು ಕೆಲವು ಮುದ್ರಣದಲ್ಲಿರುತ್ತವೆ ಬೇರಾದವರ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರಮಾಡಿಕೊಳ್ಳಬಹುದು

ವಿಳಾಸ—ಮ್ಯಾನೇಜರ್,
ಅಪೂರ್ವ ಆಫೀಸ್, ಮೈಸೂರು

ನಮ್ಮ ಪ್ರಾರ್ಥನೆ

ಬಂಧುಗಳೇ ಪರಮಸವಿತೃವಾದ ವಿರಿಪಿನ ಮತ ದಲ್ಲಿ ಜನಿಸಿರುವ ನಾವು ಈಗ ಕೈಗೊಳ್ಳಬೇಕಾದ ಕರ್ತವ್ಯವಾವುದೆಂಬುದನ್ನು ಆಲೋಚಿಸುವಾ ಈ ವಿಷಯದಲ್ಲಿ ನಮ್ಮ ಈ ಅನಾನವಾದ ಮತಪ್ರಚಾರಕನೂ ಪ್ರೇಷ್ಠರೂ, ಸರ್ವಯೋಗಸಮನ್ವಯರೂ ಆದ ಸಗವಾನ್ ಎಂಬುದು ಸರ್ವಲೋಕವಿದಿತವೇ ಲವಿರಿ ಲ್ರಭಿಗಳ ದ್ಯುರು ಮಂಡಾಪಾಯರ ಸಂಕಷ್ಟದಾಗಿ, ವೈರಾಗ್ಯ ಚಕ್ರವರ್ತಿಗಳೂ, ಸಕ್ಯಾನ್ವೇಷಕರೂ, ತತ್ತ್ವಾನ್ವೇಷಿಗಳೂ ಆದ ಪೂಜ್ಯ ಪಿತಾಮಹರುಗಳ ಸತಾನಗಾಗಿಯೂ ನಾವುಗಳು ಈಗ ಸಾಮಾನ್ಯ ಕೀಟಗಳಂತೆ ನರಳುತ್ತಾ ಬಿದ್ದಿರುವುದರ ಕಾರಣವಾವುದೆಂಬುದನ್ನು ತಿಳಿಯುವುದು ಯುಕ್ತವಲ್ಲವೆ?

ನಮ್ಮ ಪೂರ್ವಜರಿಗಿಂತಲೂ ಈಗ ನಮಗೆ ಗ್ರಂಥ ವ್ಯಾಸಂಗಕ್ಕೆ ಅನುಕೂಲವಿದೆ ಉದಾಸ್ಯಗಳು ಹಾಗೂ ಪ್ರತಿಕಾರಕಾರ್ಯಗಳು ನಡೆದಿರುತ್ತವೆ ತೀರ್ಥಕ್ಷೇತ್ರ ಯಾತ್ರೆ ಗಂತೂ ವಾಹನ ಸೌಕರ್ಯಗಳನ್ನು ವಣಿ ಸಚೇತಾದಡ್ಡೇ ಇಲ್ಲ ಇಷ್ಟಿದ್ದೂ ನಮ್ಮ ಹಿರಿಯರ ಆತ್ಮಜ್ಞಾನ, ಶಾಂತಿ ಪೌರುಷ ಮುಂತಾದುವುಗಳು ನಮ್ಮಲ್ಲಿ ಕಾಣಲ್ಪಡುವುದರ ಸಾಸಿರದ ಒಂದುಪಾಲಾದರೂ ಇವೆಯೇ? ಇಲ್ಲ ಏಕೆ? ಆ ಮಹಾಪುರುಷರ ಉತ್ಸಾಹ, ಶ್ರದ್ಧೆ, ನಂಬಿಕೆ, ಆಕಾಂಕ್ಷೆ, ನಿರಂತರಸಾಧನೆ ನಿಸ್ವಾರ್ಥತೆ, ವಸ್ತುವಿವೇಚನೆ ಮುಂತಾದುವುಗಳು ನಮ್ಮಲ್ಲಿಲ್ಲದುದೇ ಜ್ಞಾನಾಭಾವಕ್ಕೆ ಕಾರಣವಲ್ಲವೇ?

ಈಗ ನಾವು ತಿರುಳಿಲ್ಲದ ಮರವಾಗಿಬಿಟ್ಟಿದ್ದೇವೆ ಯಾವುದರ ಲಾಭದಿಂದ ಮಾಯಾಮೋಹಗಳ ತೆರೆಗಳೆಲ್ಲಾ ಧಗಧಗ ಹತ್ತಿ ಉರಿದುಹೋಗುವುವೋ, ಯಾವುದರ ಲಾಭದಿಂದ ಆಣಿಮಾದಿ ಸಿದ್ಧಿಗಳು ಕಾಲ ಬಳಿ ಬಿದ್ದು ಒಪ್ಪಾಡುವುವೋ, ಯಾವುದರ ಲಾಭದಿಂದ ಅಲಭ್ಯಗಳೂ ಲಭ್ಯವಾಗುವುವೋ ಅಂತಹ ಆತ್ಮಲಾಭದ ಅಭಾವವೇ ನಮ್ಮ ಹೀನದೆಸೆಗೆ ಕಾರಣ ರಾಜ್ಯ ಧೈರ್ಯ, ಶೌರ್ಯ, ಬಲ, ವಿದ್ಯೆ ಇಲ್ಲದ ರಾಜಕುಮಾರನು ತಾನು ಮಹಾರಾಜನೆಂದು ಮೆರೆದು ಆಪಹಾಸ್ಯಕ್ಕೀಡಾಗುವಂತೆ, ತ್ಯಾಗ, ತಿಲ, ಸಂಯಮ, ಜ್ಞಾನ, ವಿವೇಕಾದಿಗಳಿಲ್ಲದ ನಾವು, ಆಚಾರ್ಯರು, ಜಂಗಮರು, ಭಕ್ತರು ಎಂದು ಹೇಳಿಕೊಂಡರೆ ಅಪಪಾಸ್ಯಕ್ಕೀಡಾಗದಿರುವೆವೇ? ದೇವರಿಲ್ಲದ ದೇಗುಲಕ್ಕೆ ಬೆಲೆ ಎನು? ಕಣ್ಣಿಲ್ಲದ ಮೂರ್ತಿಗೆ ಕಳೆ ಏಕು? ಮಲವನ್ನು ತುಂಬಿದ ಚರ್ಮದ ಗಂಡಿಗೆ ಮೌಲ್ಯವೆನ್ನು? ತಿವಜ್ಞಾನವಲವಡ ದಿದ್ದವನ ಆಚಾರ್ಯತ್ವಕ್ಕೆ ಪ್ರಶ್ನೆ ಏನು?

ಮಾಯೆಯ ವ್ಯಾಪಕತೆಯಲ್ಲಿ ಸಿಲ್ಕಿ ನಮ್ಮಲ್ಲಿರುವ ಅಹಂ, ಅಜ್ಞತೆಗೇನೇ ತಿವಜ್ಞಾನವೆಂಬ ವ್ಯಾಖ್ಯಾನವನ್ನು ಜಮಜ್ಯಾರವಾಗಿ ರಚಿಸಿ, ಶಾಸ್ತ್ರದ ಮುಂದಿನ್ನು ದೆಂಗು ಪಡಿಸಿಹಾಕುವು, ಆದರೆ ಅದು ಆತ್ಮಜಂಚನೆ ಅದಕ್ಕೆ ಫಲ ದುರ್ಗತಿ ಹಾಗಾದರೆ ನಿಜವಾದ ಜ್ಞಾನಿಯ ಲಕ್ಷಣಗಳನು ತಿಳಿಯಬೇಕಲ್ಲವೆ? ಮಾನವನಿಗೆ ತಿವ ಜ್ಞಾನವಗಟ್ಟಿಸಿ ಮೂರು ಸಿಲ್ಲುತ್ತದೆ ಆವ ಆಡಗು ತ್ತದೆ ಭೂತಭವಿಷ್ಯತ್ಕಾಲಗಳಾವುವೂ ವಸ್ತುಸ್ಥಿತಿಯ ವಿಶುದ್ಧಿಯಾಗಿರುವ ವರ್ತಮಾನಕಾಲದೇ ವಿಹಾರೋದ್ಯಾನವಾಗುತದೆ ಓಹಂ ಎಂಬುದು ಅಳಿಯುತ್ತದೆ ಜೀವತಾತೀತನಾಗುವಿಯೂ ಇಷ್ಟಾನಿಷ್ಟಗಳಲ್ಲಿಯೂ ಸಾಕ್ಷಾತ್ ಶಿವಸ್ವರೂಪವಾಗುತ್ತದೆ ಶಿವಜ್ಞಾನಿಗಳೆಂದು ಹೇಳಿಕೊಳುವ ನಮ್ಮಲ್ಲಿ ಇವುಗಳೆಲ್ಲಾ ಇವೆಯೇ ಎಂಬುದನ್ನು ನೋಡಿಕೊಳ್ಳಬೇಕಲ್ಲವೇ? ಈ ವಿಷಯ ಗಳನ್ನೆ ಲಕ್ಷಿಸಿಯೇ ತಯೋ ಆವಲ್ಲಾ ಎಲ್ಲರಿಗೂ ಸಾಧ್ಯ ವಿಲ್ಲ" ಎಂಬ ಪೌರ್ಜಲ್ಯಾಣಿ ಹೊರಟಿರುವಜ್ಞ ? ಆದರೆ ಈ ಪೌರ್ಜಲ್ಯದ ಸರಿ ಸಾನು ಆಸಿಸ

ಹಾಗಾದರೆ ಆತ್ಮಜ್ಞಾನವು ನನಗಲ್ಲದ ನುತ್ತಾರಿಗೆ ಲಗ್ಗಾಗಬೇಕೆ ? ಎಲ್ಲರಿಗೂ ಆಧಿಮಾ ಶಕ್ತಿ ಕುದುರಿಗೇ? ದಿವಾರುತ್ತಸರದಿಂದ ಸಿಡಿದು ಒಂದೆ ತವೆ ತವೆದರು ನಾವೆಲ್ಲರೇ? ಮಹಾ ಪ್ರಯತ್ನದಿಂದ ಪಡೆದುಕೊಂಡ ಅಮರ ಜ್ಯೋತಿಗಳು ನಾವೆಲ್ಲರೇ? ಸರ್ವಾಗರುಗಳು ನಾವೆಲ್ಲರೇ? ಸಾಕ್ಷಾತ್ ಶಿವ ನವ ಕಾರರು ನಾವೆಲ್ಲರೇ? ಆ ದಿವ್ಯ ಜ್ಞಾನವನ್ನು ಸಡಿಸಿ ನವಗ ಅಸಾವವೆ? ಇಂತಹ ಗತಿ ಕರ್ತಾರರಿಗೆ ಮಾಡಿ ವೇ? ಪ ಪೂರೇ ನೇ ಸಂಸಲೆ ? ಮಾಯೆಯಾದರೂ ಎಸ್ ಜ್ಞಾನಾ ಕೊರೀಪಿಯು ಮತ್ತೊಂದು ಲಿಲ್ಲ ಕೊಲೆ ವನರಿಗನ್ನು ಒಳ ವಾಡುವ ಉಪಾಯವನ್ನೂ ಕೈಯಿಂದ ಪ್ರಾಯಶ ಪ್ರಾರ್ಥಿಸಿ

ನಮ್ಮ ಆಚಾರ್ಯರಾದ ಶ್ರೀ ಜಗದ್ಗುರು ಶ್ರೀ ನಂಜನಗೂಡು ತೋತಾದ್ರಿ ಮಠದ ಪೂಜ್ಯರಾದ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳವರು ಆಶೀರ್ವಾದ ಬಲದಿಂದ ಈ ಪತ್ರಿಕೆಯು ಪ್ರಾರಂಭವಾಗಿ ಇಂದಿಗೆ ಎರಡು ವರ್ಷಗಳು ಸಂಪೂರ್ಣವಾಗಿ ಮೂರನೆಯ ವರ್ಷಕ್ಕೆ ಕಾಲಿಡುತ್ತಿದೆ ಈ ಸಂದರ್ಭದಲ್ಲಿ ಪತ್ರಿಕೆಯ ಅಭಿವೃದ್ಧಿಗಾಗಿ ಪ್ರಾರ್ಥಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ ಆದ್ದರಿಂದ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇವೆ ಪ್ರಾರ್ಥನೆಯ ಫಲವಾಗಿ ಪತ್ರಿಕೆಯ ಅಭಿವೃದ್ಧಿಯಾಗಿ ಪ್ರಚಾರವಾಗಿ ಸಾಧಾರಣ ಜನರಿಗೆ ಸಾಧ್ಯವಾಗುವಂತೆ ಚಂದಾ ಹಣವನ್ನು ಕಡಿಮೆ ಮಾಡಿ ಪ್ರಚಾರಕ್ಕೆ ಅನುಕೂಲವಾಗುವಂತೆ ಮಾಡಿಕೊಳ್ಳಬೇಕೆಂಬ ಆಶಯವಿರುತ್ತದೆ ಆದರೆ ಇದಕ್ಕೆ ಸಾಕಷ್ಟು ಚಂದಾದಾರರು ಹೆಚ್ಚಬೇಕಾಗಿರುತ್ತದೆ ಆದ್ದರಿಂದ ಪ್ರಾರ್ಥನೆಯ ಜೊತೆಗೆ ಪ್ರಯತ್ನವನ್ನೂ ಮಾಡಿಕೊಳ್ಳಬೇಕಾಗಿರುತ್ತದೆ ಆದ್ದರಿಂದ ಪ್ರಯತ್ನವನ್ನು ಮಾಡಿಕೊಳ್ಳುವಂತೆ ಪ್ರಾರ್ಥಿಸಿಕೊಳ್ಳುತ್ತೇವೆ

ವರ್ತಮಾನಸಂಗ್ರಹ

ಕೊರಿಯಾ ಯುದ್ಧದಲ್ಲಿ ೭೦೦೦ ಮಂದಿಯ ಸಾವು; ೨೦೦೦ ಕೈಸೆರೆ

ಇಂಚಾನ್ ಪತನವಾದ ಜುಲೈ ೪ ನೆಯ ತಾರೀಖಿನ ವರೆಗೆ ಕೊರಿಯಾ ಯುದ್ಧದಲ್ಲಿ ದಕ್ಷಿಣ ಕೊರಿಯಾದ ೭೦೦೦ ಮಂದಿ ಮಡಿದಿರುವುದಾಗಿಯೂ, ೨೦೦೦ ಮಂದಿ ಕೈಸರೆ ಸಿಕ್ಕಿರುವುದಾಗಿಯೂ ಪೀಠಿಂಗ್ ರೇಡಿಯೋ ವರದಿ ಮಾಡಿದೆ

ಉತ್ತರ ಕೊರಿಯಾ ಮಂತ್ರಿಮಂಡಲದ ಅಧ್ಯಕ್ಷರಾದ ಕಿಂ ಇರ್‌ಸೆನ್‌ರವರನ್ನು ಉತ್ತರ ಕೊರಿಯಾ ಸೈನ್ಯದ ದಂಡನಾಯಕರಾಗಿ ನೇಮಕಮಾಡಲಾಗಿದೆ ಎಂದು ಅ ನರದಿಯಿಂದ ತಿಳಿದುಬಂದಿದೆ

೩ ಅಮೆರಿಕನ್ ಪಡಗುಗಳ ಜಲಸಮಾಧಿ

ಕಳೆದ ಬುಧವಾರದಂದು ಚೀನ್‌ನ್‌ಡಿನ್ ಕಣಿವೆ ಬಳಿ ಉತ್ತರ ಕೊರಿಯನ್ನರು ಮೂರು ಅಮೆರಿಕನ್ ಪಡಗು ಗಳನ್ನು ಮುಳುಗಿಸಿರುವೆರೆಂದು ಸ್ಥಾಯ ನಾಂಗ್‌ಯಾಂಗ್ ನಿಂದ ಒಂದ ರೇಡಿಯೋ ವಾರ್ತೆ ತಿಳಿಸಿದೆ ಸುವಾನ್ ಪೂರ್ವತೀರದಲ್ಲಿ ನಡೆದ ಕದನದಲ್ಲಿ ೩೦ ಜಪಾನಿ ಅಧಿ ಕಾರಿಗಳು ಮಡಿದಿರುವುದಾಗಿಯೂ ಅದೇ ವರದಿ ತಿಳಿಸಿದೆ

ಜನರಲ್ ಮೆಕಾರ್ಥರ್‌ರವರಿಗೆ ಸೋವಿಯೆಟ್ ರಷ್ಯಾದ ಬೆದರಿಕೆ

ಜಪಾನಿನ ಯುದ್ಧಖಾತಕೆಗಳಿಗೆ ಒಳಗಾದ ಗತಿ ಮತ್ತು ಅವರು ಅನುಭವಿಸಿದ ಶಿಕ್ಷೆಗಳನ್ನು ಜನರಲ್ ಮೆಕಾ ಥರ್‌ರವರು ಸ್ಮರಿಸಿಕೊಳ್ಳುವುದು ಒಳ್ಳೆಯದು ಇತ್ತೀ ಚೆಗೆ ಆವರು ಸಾರಕಲಿಯಬೇಕಾಗಿದೆ ಎಂದು ರಷ್ಯ ದ ನ್ಯೂಟೈಮ್ಸ್ ಎಂಬ ಪತ್ರಿಕೆ ತಿಳಿಸಿದೆ ಎಂದು ಮಾಸ್ಕೋ ರೇಡಿಯೋ ವರದಿಮಾಡಿದೆ "ಆದರೆ ಮೆಕಾರ್ಥರ್‌ರವರಿಗೆ ಇದನ್ನೆಲ್ಲಾ ಆರೋಪಿಸಲು ಕಾಲಾ ವಕಾಶವೆಲ್ಲಿದೆ? ಕೊರಿಯಾಕ್ಕೆ ವಿಮಾನಗಳನ್ನು ಕಳು ಹಿಸಿ ಉತ್ತರ ಕೊರಿಯಾ ನಗರಗಳ ಮೇಲೆ ಥಾಳಮಾ ಡುವ ಆರ್ಭಟದಲ್ಲಿ ಅವರು ನಿರತರಾಗಿಸ್ಪಾರೆ"—ಎಂದು ಆ ಪತ್ರಿಕೆ ಟೀಕಿಸಿದೆ

ಟ್ರೂಮನ್ನರ ಆಶಾಭಾವನೆ

ಉತ್ತರ ಕೊರಿಯಾದ ಕಮ್ಯೂನಿಸ್ಟ್ ಸೈನ್ಯಗಳು ಸದ್ಯದಲ್ಲಿ ಯಕಶ್ಚಿಯಾಗಿ ಮುನ್ನುಗ್ಗಿ ಕ್ರಿತ್ತರೆಯೂ, ಆಂತ್ಯ ದಲ್ಲಿ ಉತ್ತರ ಕೊರಿಯಾಸ್ಥೆ ಸೋಲು ಶತಸ್ಸಿದ್ಧ ಎಂದು ಅಮೆರಿಕಾದ ಅಧ್ಯಕ್ಷ ಟ್ರೂಮನ್ನರು ಪತ್ರಿಕಾ ಸಮ್ಮೇಳನ ದಲ್ಲಿ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಉತ್ತರವಾಗಿ ಹೇಳಿದರು ಅಮೆರಿಕಾ ಸೈನ್ಯಗಳು ಈ ಕೊರಿಯಾ ಸೈನ್ಯಗಳಿಗೆ ತೋಚು ಪರಾಭವ ಹೊಂದಿ ಹಿಮ್ಮೆಟ್ಟುತ್ತಿ ರುವ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರಿಸಲಿಲ್ಲ

ಕೊರಿಯಾ ಪರಿಸ್ಥಿತಿ ಪರಿತೀಲಿಸಲು ವಿಶೇಷಾಧಿವೇಶನ

ಕೊರಿಯಾ ಯುದ್ಧದ ಪರಿಸ್ಥಿತಿ ಬಗ್ಗೆ ಸವಾಲೋಚನೆ ನಡೆಸಲು ತುರುತು ವಿಶೇಷ ಪಾರ್ಲಮೆಂಟಿನ ಅಧಿವೇಶನವೊಂದನ್ನು ಕರೆಯಲು ಪ್ರಧಾನಿ ಮಂ ನೆಹ್ರೂರವರು ಶ್ರೀ ಎಜ್. ವಿ ಕಾಮತ್‌ರವರೊಡನೆ ಸಮಾಲೋಚನೆ ನಡೆಸುತ್ತಿದ್ದಾರೆಂದು ಗೊತ್ತಾಗಿದೆ

ಕೊರಿಯಾದಲ್ಲಿರುವ ಭಾರತ ಪ್ರತಿನಿಧಿಗೆ ಗಾಯ

ವಿಶ್ವಸಂಸ್ಥೆಯ ಕೊರಿಯನ್ ಕಮಿಷನ್ನಿನ ಪ್ರತಿನಿಧಿ ಶಾ॥ ಆರ್ಯಾನಿಗಂರವರಿಗೆ ದಕ್ಷಿಣ ಕೊರಿಯಾದಲ್ಲಿ ತೀವ್ರ ಗಾಯಗಳಾಗಿ ಚಿಕಿತ್ಸೆಗೆ ಟೋಕಿಯೋವಿಗೆ ಕಳುಹಿಸಲಾಗಿದೆಯೆಂದು ತಿಳಿಯುತ್ತಿದೆ.

ಜರ್ಮನಿಯ ಭವಿಷ್ಯ

ಜರ್ಮನಿಯ ಭವಿಷ್ಯವನ್ನು ನಿರ್ಧರಿಸಲು ಶ್ರೀರಾಷ್ಟ್ರಗಳ ನಾಯಕರ ಸಮ್ಮೇಳನೋಪಾ ಇಂದು ಪ್ರಥಮ ನಾಗಿ ಲಂಡನ್ನಿನಲ್ಲಿ ಸಮಾವೇಶಗೊಂಡಿತ್ತು.

ಕೊರಿಯಾ ಸಮಸ್ಯೆ ಕುರಿತು ಪಂ॥ ನೆಹರೂರವರ ಹೇಳಿಕೆ

ಕೊರಿಯನ್ ಪರಿಸ್ಥಿತಿ ಬಗ್ಗೆ ಮಧ್ಯಸ್ಥಿಕೆ ವಹಿಸುವುದಾಗಿ ಭಾರತವು ತಾನಾಗಿಯೇ ಮುಂದೆ ಬಂದಿಲ್ಲ ಆದರೆ ಒಬ್ಬರ ಅಭಿಲಾಷೆಯೂ ಇಲ್ಲ ಕೊರಿಯಾದ ಎರಡು ಪಕ್ಷಗಳೂ ಭಾರತದ ಮಧ್ಯಸ್ಥಿತಿ ಅಪೇಕ್ಷಿಸಿ ಮನವಿ ಮಾಡಿಕೊಂಡಲ್ಲಿ ಭಾರತವು ಮಧ್ಯಸ್ಥಿಕೆ ನೀಡಲು ಸಿದ್ಧವಿದೆ ಸಂಘಾದಿಂದಲೇನಾದರೂ ಕೊರಿಯ ಸಲ ದೊರಕುವುದಾದರೆ " ಜವಾಹರ್‌ಲಾಲ್ ನೆಹರೂರವರು ' ವಿಶ್ವದ ಯಾವ ಮೂಲೆಗಾದರೂ ಹೋಗಿ ಸಂಘಾನ ನಡೆಸಲು ಸಿದ್ಧರಿದ್ದಾರೆ ಎಂದು ಭಾಷಿ ಪಂಡಿತ್ ನೆಹರೂರವರು ಪತ್ರಿಕಾ ಸಮ್ಮೇಳನದಲ್ಲಿ ಕೊರಿಯನ್ ಪರಿಸ್ಥಿತಿ ಬಗ್ಗೆ ಮಾತನಾಡುತ್ತಾ ಳಿಸಿದರು

ಚೀನಾಕ್ಕೆ ವಿಶ್ವಸಂಸ್ಥೆಯ ಶಾಶ್ವತಸ್ಥಾನ

ಭದ್ರತಾ ಸಮಿತಿಯಲ್ಲೂ ವಿಶ್ವಸಂಸ್ಥೆಯಲ್ಲೂ ಮತ್ತು ಇದರ ಇತರ ಅಂಗಸಂಸ್ಥೆಗಳಲ್ಲೂ ಚೀನದ ಪ್ರಜಾಸರ್ಕಾರದ ಪ್ರತಿನಿಧಿಗೆ ಅವಕಾಶ ಕೊಡುವಂತೆ ಭಾರತವು ರಾಜತಾಂತ್ರಿಕ ಮಾರ್ಗದಲ್ಲಿ ಕೆಲಸಮಾಡು ಕೊರಿಯನ್ ಸಮಸ್ಯೆಯನ್ನು ಸುಗಮವಾಗಿ ಬಗೆ ರಿಸುವ ದೃಷ್ಟಿಯಿಂದ ಚೀನದ ಪ್ರಜಾಸರ್ಕಾರಕ್ಕೆ ಭದ್ರತಾ ಸಮಿತಿಯಲ್ಲಿ ಸ್ಥಾಪಿಸಿಧ್ಯವಿತ್ತು ರಸ್ಯದ ಪ್ರತಿನಿ ಗುತ್ತಿನ್ನು ಮಾಪ್ಸ್ ಕರೆಸಿಕೊಳ್ಳುವುದು ಅತ್ಯವಶ್ಯಕ

ಭಾರತ ಮಾಡಬಹುದಾದ ಸಹಾಯ

' ಭಾರತವು ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನೀಡಬಹುದಾದ ಮಹಾನುಸಹಕಾರವೆಂದರೆ ಯುದ್ಧವು ಕೊರಿಯಾದಲ್ಲಿಂದು ಪ್ರಸರಿಸದಂತೆ ಮಾಡಬಹುದಾದ ಸಾಧನ ಗಳನ್ನು ಹುಡುಕುವುದೇ ಆಗಿದೆ ಮಿಲಿಟರಿ ಸಹಾಯ ನೀಡಲು ಭಾರತಕ್ಕೆ ಶೈಕ್ತವಿಲ್ಲ ' ಎಂದು ನೆಹರೂ ರವರು ತಿಳಿಸಿದರು

ಭದ್ರತಾ ಸಮಿತಿಯ ನಿರ್ಣಯದ ಬಗ್ಗೆ ನೆಹರು

ಅಸ್ಸಾಂನಲ್ಲಿ ಸಂಭವಿಸಿದ ಭಯಂಕರ ಭೂಕಂಪದ ಪರಿಣಾಮವಾಗಿ ೩,೦೦೦ ಚಿದರ ಮೈಲಿ ಪ್ರದೇಶ ಅನಾಹುತಕ್ಕೊಳಗಾಗಿದೆಯೆಂದೂ, ಸುಮಾರು ೧೦ ಕೋಟಿ ರೂಗಳಷ್ಟು ನಷ್ಟ ಸಂಭವಿಸಿದೆಯೆಂದೂ ಅನಧಿ ಕೃತವಾಗಿ ಅಂದಾಜು ಮಾಡಲಾಗಿದೆ ಅಸ್ಸಾಮಿನ ಪ್ರಜೆ ಗಳಲ್ಲಿ ಮೂರನೇ ಎರಡು ಭಾಗದಷ್ಟು ಮಂದಿ ಅನಾಹುತ ಕ್ಕೀಡಾಗಿದ್ದಾರೆಂದೂ ಹೇಳಲಾಗಿದೆ ಸತ್ತವರ ಸಂಖ್ಯೆ ನಿಖರವಾಗಿ ತಿಳಿಯದಿದ್ದರೂ, ಕನಿಷ್ಠಪಕ್ಷ ೧೦೦೦ ಮಂದಿ ಮರಣ ಹೊಂದಿರಬಹುದೆಂದು ಅಂದಾಜು ಮಾಡ ಲಾಗಿದೆ.

ಜಗದ್ಗುರು ತಿಪಾನಂದರಾಜೇಂದ್ರತಿಪಾಚಾರ್ಯ ಭಗವತ್ಪಾದರ ಪುಣ್ಯತಿಥಿಸಮಾರಂಭ, ಹುಬ್ಬಳ್ಳಿ

ದಿನಾಂಕ ೧೭-೮-೫೦ ಗುರುವಾರ ದಿವಸ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧಿಷ್ಠಿತರಾದ ಶ್ರೀ ೧೦೮ ಜಗದ್ಗುರು ತಿವಾನಂದರಾಜೇಂದ್ರತಿವಾಚಾರ್ಯ ಭಗವತ್ಪಾದರ ೫ ನೇ ವರ್ಷದ ಪುಣ್ಯತಿಥಿ ಸಮಾರಂಭವನ್ನು ಹುಬ್ಬಳ್ಳಿ ಹಿರೇಪೇಟೆ ಹಿರೇಮಠದಲ್ಲಿ ಧಾರವಾಡ ಹೊಸ ಮಠದ ವೀ॥ ವೀರಭದ್ರಯ್ಯನವರು ಇದೇ ಶಾಖಾಮಠ ಶಾ॥ ೪ ಗುರುವಾರ ದಿವಸ ಶ್ರೀಜಗದ್ಗುರುಗಳವರ ಮೂರ್ತಿಗೆ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ, ಮಂಗಳ ಪ್ರಸಾದಗಳು ಮಹಾ- ವೈಭವದೊಡನೆ ನೆರವೇರಿಸಿ ಶ್ರೀಜಗದ್ಗುರು ಪಂಚಾಚಾರ್ಯರಲ್ಲಿಯೂ ಹಾಗೂ ಸರ್ವ ಮಂಗಳಾಧಿಶ್ವರನಲ್ಲಿಯೂ, ವೀರಶೈವ ಧರ್ಮಕರ್ಮ ಕ್ರಿಯಾಸಿದ್ಧಿಗಾಗಿಯೂ ಮತ್ತು ಭಾರತ ಪ್ರಜಾ ರಾಷ್ಟ್ರೀಯ ಸರಕಾರಕ್ಕೆ ವರ್ಣಾಶ್ರಮಧರ್ಮಪಾಲನ ಶಕ್ತಿನಿಧಿಗಾಗಿಯೂ ಪ್ರಾರ್ಥಿಸಿ, ಹರಗುರುಗಳ ಜಯ ಘೋಷದೊಡನೆ ತೀರ್ಥಪ್ರಸಾದ ಗಣತೃಪ್ತಿಯು ನೆರವೇರಿಸಿ ಕಾರ್ಯಕ್ರಮವು ಕೊನೆಗೊಂಡಿತು.

ಶ್ರೀ ಭಗವತ್ಪಾದಾಚಾರ್ಯರವರು ವೀರಪೀಠವನ್ನು ೩೨ ವರ್ಷಗಳ ವರೆಗೆ ವೀರಶಿವಲಿಂಗ ಪ್ರಭೆಯನ್ನು, ಧರ್ಮಸೌಭಾಗ್ಯವನ್ನು ಬೀರುತ್ತ ಈಶ್ವರೀಭಕ್ತಿಯನ್ನು ಹರಗುರುಭಕ್ತಿಯನ್ನು ಸ್ಥಿರಗೊಳಿಸುತ್ತ, ವೀರಶೈವರಿಗೆ ಮಹೇಶ್ವರೋಪಾಧಿಯಲ್ಲಿ ಮೆರೆದು ರಾಜಾಧಿರಾಜ ಪೂಜಿತರಾಗಿ, ಓಜಸ್ವಿಗಳಾಗಿ, ಮಹಿಮ್ನಿಗಳಾಗಿ, ತೆಜಸ್ವಿ ಗಳಾಗಿ, ಯಶಸ್ವಿಗಳಾಗಿ " ಅಭಿವೃದ್ಧಿರೇಣುಕ "ರೆಂಬ ಪುಣ್ಯಾಭಿಧಾನದಿಂದ ದಿಗಂತವಿಶ್ರಾಂತಕೀರ್ತಿಶಾಲಿಗಳಾಗಿ ಮೆರೆದ ವೀರಶೈವ ಧರ್ಮ ಜಗದ್ಗುರುಗಳವರ ಪುಣ್ಯ ತಿಥಿಯನ್ನು ಶ್ರುತಿವರ್ಷವು ಶಾವಣ ಶಾ॥ ೪ ದಿವಸ ಸರ್ವರೂ ಆಚರಿಸಿ ಧನ್ಯರಾಗಬೇಕೆಂದು ಪ್ರಾರ್ಥಿಸು ತ್ತೇನೆ

ವೀರಭದ್ರಯ್ಯ ರುದ್ರಯ್ಯ ಹೊಸಮಠ

ಪುಣ್ಯತಿಥಿ ಸಮಾರಂಭ

ನೋಲ್ಲಾಪುರದ ಶ್ರೀಮದ್ವೀರಶೈವ ಗುರುಕುಲದಲ್ಲಿ ದಿನಾಂಕ ೧೩ ೮ ೫೦ ಕ್ಕೆ ಶ್ರೀಮದ್ರಂಭಾಪುರಿ ಶ್ರೀ ೧೦೮ ಜಗದ್ಗುರು ತಿವಾನಂದರಾಜೇಂದ್ರತಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯತಿಥಿಯನ್ನೆ ಇಲ್ಲಿಯ ಶ್ರೀಮದ್ವೀರಶೈವ ಸ್ತ್ರೀ ಸಮಾಜದ ಪರವಾಗಿ ನೆರವೇರಿ ಸಲ್ಪಟ್ಟ ಕಾರ್ಯಕ್ರಮ

ಅಧ್ಯಕ್ಷರು—ಶ್ರೀ॥ ಸಂ॥ ಬ್ರ॥ ಶಿದ್ಧಲಿಂಗಶಿವಾಚಾರ್ಯ ಹಿರೇಮಠ ಮಳಲಿ

ಸೂಚಕರು—ಶ್ರೀ ಪಿ ಆರ್ ಪಟೇಲ ಜೇಗಿನ

ಅನುಮೋದಕರು—ಶ್ರೀ ಬಿ ಎಸ್ ಕುರ್ತಿ

ಭಾಷಣಕಾರರು—

೧) ವೀ॥ ಕಲ್ಯಾಣಿ ಹಿರೇಮಠ

೨) ವೀ॥ ಸೀಲಳಕರ ಕಮಾ ಸಾವಳಗಿ

೩) ವೀ॥ ವಿದ್ಯಾರಾಮತರ್ಮಾ ಫರುತಾಬಾದ

೪) ವೀ॥ ಶಂಕರತರ್ಮಾ ಕೋರವಾರ

೫) ವೀ॥ ಸಂ॥ ಬ್ರ ವಸ್ತ್ರಿ ಪಟ್ಟದಸ್ವಾಮಿಗಳು

೬) ಸೌ॥ ಒಸವ್ವಾಬಾಯಿ ನಂದಿಮಠ

೭) ಶ್ರೀ ಗುರುಬಾಯಿ ಮಠಪತ್ರಿ

೮) ವೀ॥ ನಾಗಾಂಬಳರ್ಮಾ ಕೊಡಲಹೊಂಗಲ

ನೊದಲಾದವರು ಪೂಜ್ಯ ಶಿಪೈಕ್ಯ ಮಹಾಸ್ವಾಮಿಯ ಲ್ಲಿದ್ದಂತಹ ಪಾಂಡಿತ್ಯ ಹಾಗು ಅವರು ವೀರಶೈವ ತತ್ವಸಂಶೋ ಧನೆ ಮಾಡಿದ ಅಪ್ಪ ಮತ್ತು ವೀರಶೈವ ಸಮಾಜ ವನ್ನು ಉದ್ಧಾರಮಾಡಿದ ವಿಷಯಗಳನ್ನು ಒಳ್ಳೆಯ ಮನೋಹರವಾಗಿ ಚಿತ್ರಿಸಿ ಇಂದಿನ ಗುರುವರ್ಗದವರು ವಿಕೇಸಿತಃ ವೀರಾಧಿಪತಿಗಳು ಪೂಜ್ಯ ಶಿಪೈಕ್ಯ ಸ್ವಾಮಿ ಯ ಅನುಕರಣವನ್ನು ಮಾಡಿದ್ದಾದರೆ ನಿಜವಾಗಿಯೂ ನಮ್ಮ ವೀರಶೈವ ಮತವು ಘನವಾದ ಸ್ಥಿತಿಗೆ ಮುಟ್ಟು ವುದು ಎಂದು ಹೇಳಿದ ಮೇಲೆ ಜಗದ್ಗುರುಗಳವರ ಜಯಘೋಷದೊಡನೆ ಸಭೆಯು ಮುಕ್ತಾಯಗೊಳಿಸ ಲ್ಪಟ್ಟಿತು.

ಪಿ. ಆರ್. ಪಾಟೀಲ ಜೇಗಿನ, ಸೊಲ್ಲಾಪುರ.

ಶ್ರೀಕೇದಾರೇಶ್ವರನ ಕಮಲಪೂಜೆಯ ಸುಸಂದಿ

ಹಿಮಾಲಯದ ಉನ್ನತಶಿಖರವಲ್ಲಿ ಶೋಭಿಸುವ ಕೇದಾರಕ್ಷೇತ್ರವು ಶ್ರೀಜಗದ್ಗುರು ಏಕೋರಾಮಾರಾಧ್ಯರ ಪೀಠದಿಂದಲೂ ಜ್ಯೋತಿರ್ಲಿಂಗದಿಂದಲೂ ವಿರಾಜಿಸುತ್ತಿರುವದು ಪುರಾಣಪ್ರಸಿದ್ಧವಿರುವದಷ್ಟೇ ಅದರಿ ಪ್ರತಿ ವರುಷ ಕೇದಾರೇಶ್ವರನ ಪೂಜೆಯು ಆರು ತಿಂಗಳು ಮಾನವರಿಂದಲೂ, ಆರು ತಿಂಗಳು ದೇವತೆಗಳಿಂದಲೂ ನೇದೋಕ್ತವಾಗಿ ನಡೆಸಲ್ಪಡುವದು ಮಾನವರಿಂದ ಜರುಗುವ ಆರುತಿಂಗಳ ಪೂಜೆಯು ಎಂದಿನಿಂದಲೂ ವೀರಶೈವ ಗುರುವಂಶದ ಜಂಗಮರ ಅಧಿಕಾರಕ್ಕೊಳಪಟ್ಟಿದೆ ಪದ್ಧತಿಯಂತೆ ಈ ಶ್ರಾವಣಮಾಸದಲ್ಲಿ ಕೇದಾರನಾಥನಿಗೆ ರುದ್ರಾಭಿಷೇಕವು ಕಮಲ (ಬ್ರಹ್ಮಕಮಲ) ಪುಷ್ಪಾರ್ಪಣೆಯಿಂದ ವಿಶ್ಯುಕ್ತವಾಗಿ ಪ್ರತಿನಿತ್ಯ ನಡೆಯುವದು ಸಾವಿರಾರು ಮೈಲಿ ದೂರ ದಲ್ಲಿರುವ ಈ ಸ್ಥಾನವನ್ನು ಸಂದರ್ಶಿಸುವದು ಬಹಳ ಕೊಂದರೆಯಾಗಿದ್ದ ಮೂಲಕ ಆ ಮಹಾಲಿಂಗಪೂಜೆಯನ್ನು ಮಾಡಿಸಿ ಸುಂಗಲಾಶೀರ್ವಾದವನ್ನು ಪಡೆಯಬೇಕೆಂದಿರುವ ಶಿವಭಕ್ತರು ತಮ್ಮ ಗೋತ್ರ ಪ್ರವರಗಳನ್ನು ಪೂರ್ಣ ವಿಳಾಸದೊಡನೆ ದಾವದೆಸ್ಟೆಣಿ ಸಹಿತ ಪೋಸ್ಟಿನ ಮೂಲಕ ಕಳುಹಿಸಿದಲ್ಲಿ ಅವರ ಹೆಸರಿನಿಂದ ಪೂಜೆಯ ನಡೆಸಲ್ಪಟ್ಟು ಆಶೀರ್ವಾದವನ್ನು ಕಳುಹಿಸಲಾಗುವದು

ಪೂಜೆಯ ವಿವರಗಳು

೧೧ ರೂ ಗಳು ರುದ್ರಾಭಿಷೇಕ ೧೧ ಕಮಲಾರ್ಪಣೆ | ೨೧ ರೂ ಗಳು ರುದ್ರಾಭಿಷೇಕ ೩೭ ಕಮಲಾ ರ್ಪಣ
೫೧ ರೂ ಗಳು ,, ೧೦೧ ,, | ೨೦೧ ರೂ ಗಳು ,, ೧೦೦೦ ,,

ಕಮಲಗಳು ಶ್ರಾವಣ ಭಾದ್ರಪದ ಮಾಸದಲ್ಲಿ ಮಾತ್ರ ದೊರೆಯುವವು ಪೂಜೆಮಾಡಿಸಲು ಇಚ್ಛೈಯುಳ್ಳವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರಮಾಡತಕ್ಕದ್ದು

ವಿಳಾಸ—ಶ್ರೀ|| ಷ|| ಬ್ರ|| ಸಂ|| ಶಾಂತಲಿಂಗಶಿವಾಚಾರ್ಯಜೀ,
ಶ್ರೀಕೇದಾರನಾಥಮಂದಿರ, ಪೋಸ್ಟ್ ಕೇದಾರನಾಥ ಡಿ|| ಗಡವಾಲ (ಯು ಪಿ)

ಕಾಶೀ ವೀರಶೈವ ವಿದ್ವತ್ಸಂಘದಲ್ಲಿ ನೆಡೆದ ಸ್ವಾತಂತ್ರ್ಯೋತ್ಸವ ಹಾಗು ಪಂಡಿತರ ಭಾಷಣ

ಕಾಶೀ ವೀರಶೈವ ವಿದ್ವತ್ಸಂಘದಲ್ಲಿ ತಾ|| ೧೫ ನೇ ಆಗಸ್ಟ್ ೧೯೫೦ ಮಂಗಳವಾರ ಸ್ವಾತಂತ್ರ್ಯ ಮಹೋತ್ಸವದ ದಿನ ಸಾಯಂಕಾಲ ೪ ಘಂಟೆಗೆ ವಿವಿಧ ಸಂಸ್ಕೃತ ಹಿಂದಿ, ಮೈಥಿಲೀ, ಬಂಗಾಲಿ ಭಾಷೆಗಳಲ್ಲಿ ಅನೇಕ ಗ್ರಂಥದರ್ಶನಿಗಳೂ ವಾಗ್ಮಿಗಳೂ ಲಲಿತಕಲಾಕೋವಿದರೂ, ಉದ್ಭಾಮ ಕವಿಗಳೂ, ಉದ್ಭಟ ವಿದ್ವನ್ಮಣಿಗಳೂ ಆದ ಸಾಹಿತ್ಯಲಂಕಾರ ವೇದಾಂತ ವಾಗೀಶ ಪಂ|| ಶ್ರೀ ಆನಂದ ಝಾ ನ್ಯಾಯಾಚಾರ್ಯರವರ ಅಧ್ಯಕ್ಷತೆಯಲ್ಲಿ ಸಭೆಯು ಜರುಗಿತು ಪೂರ್ವ ಸೂಚನೆಯಂತೆ ಅಧ್ಯಕ್ಷಸ್ಥಾನಹೋದವರು ವೀರವನ್ನಲಂಕರಿಸಿದನಂತರ ಸೆಕ್ರೆಟರಿಗಳು ಸ್ವಾಗತಿಸುತ್ತ ಶ್ರೀ|| ಷ|| ಬ್ರ|| ಮಲ್ಲಿಕಾರ್ಜುನಶಿವಾಚಾರ್ಯರ ದ್ವಾರಾ ವೇದಘೋಷವಾಗುತ್ತ ಸಭಾಕಾರ್ಯಕ್ರಮವಾರಂಭವಾಯಿತು

ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲದ ಮತ್ತು ವಿದ್ವತ್ಸಂಘದ ಪರಿಚಯವನ್ನು ವೇ|| ಗುರುಸಿದ್ಧಸ್ವಾಮಿಯವರೂ, ಅಧ್ಯಕ್ಷಸ್ಥಾನಹೋದವರ ಪರಿಚಯವನ್ನು ಶ್ರೀ ಗಂಗಾಧರಶರ್ಮರೂ ಮಾಡಿಕೊಟ್ಟ ಬಳಿಕ ಶ್ರೀ|| ಷ|| ಬ್ರ|| ಸಿದ್ಧರಾಮಶಿವಾಚಾರ್ಯರವರು ಪ್ರಾಸಂಗಿಕವಾಗಿ ಭಾಷಣವನ್ನು ಮಾಡಿದರು

ಬಳಿಕ ಪಂಡಿತರತ್ನರಾದ ಅಧ್ಯಕ್ಷಮಹೋದಯರು ಕಾಶಿಯಲ್ಲಿ ಶ್ರೀ ಜ ವಿಶ್ವಾರಾಧ್ಯ ಮಹಾಸಂಸ್ಥಾನದ ಮಹತ್ವವನ್ನೂ ಭಗವತ ವ್ಯಾಪ್ತಿಯನ್ನೂ, ಅದರ ಬಗ್ಗೆ ಪೂರ್ವದಲ್ಲಿ ಗೋಧೂಳಿಯಾ ಸ್ಥಾನದಲ್ಲಿದ್ದ "ವಿಶ್ವಾರಾಧ್ಯ ರಂಗಮಂಚ" ಮೊದಲಾದನೇಕ ಸ್ಮೃತಿಚಿಹ್ನೆಗಳ ತಮ್ಮ ಅನುಭವಗಳನ್ನು ಹೇಳುತ್ತ ಶ್ರೀ ಜಗದ್ಗುರು ವಿಶ್ವಾರಾಧ್ಯ ಮೊದಲಾದ ಪಂಚಾಚಾರ್ಯರಿಂದ ಸನಾತನ ಕಾಲದಿಂದಲೂ ಅಸ್ಪ್ರತಿಹತವಾಗಿ ಪ್ರತಿಷ್ಠಾಪಿಸುತ್ತ ಬಂದಿರುವ ಶಕ್ತಿವಿಶಿಷ್ಟಾದ್ವೈತವೆಂಬ ಪರಶಿರ್ಯಾಯ ಸಾಮದಿಂದಿರುವ ಈ ವೀರಶೈವ ಸಿದ್ಧಾಂತವು ವೇದಾಗಮ ಪ್ರಮಾಣಾರಿಗಳಿಂದ ಪ್ರತಿಷ್ಠೆಗೊಳಿಸಲ್ಪಟ್ಟ ವೇದಾಂತ ಮತ (ಅದ್ವೈತ ಸಿದ್ಧಾಂತ) ದಂತೆ ಸಿಗಮಾಗಮಾದಿ ಪ್ರಮಾಣಗಳಂತೆರಗಿಂದ "ಸಿದ್ಧಾಂತಶಿಖಾಮಣಿ" "ಶ್ರೀಕರಭಾಷ್ಯ" "ಶಿವಾದ್ವೈತಸುಂದರಿ" "ಮಹಾನಾರಾಯಣೋಪನಿಷತ್" "ಲಿಂಗಧಾರಣ ಚಂದ್ರಿಕಾ" ಮೊದಲಾದ ಉದ್ದ್ರಂಥಗಳಲ್ಲಿ ಸಾಧಾರಣವಾಗಿ ಶ್ರೀಶಾವಿಷಿಷ್ಟಾದ್ವೈತವೆಂದು ಕರೆಯಲ್ಪಡುತ್ತಿರುವ ಈ ಮತವು ಸನಾತನ ಕಾಲದಿಂದ ಬಂದಿರುವ ವೈದಿಕಮತವೆಂದೂ, ವೇದಾಂತ, ಸಿದ್ಧಾಂತ (ಶುದ್ಧಾದ್ವೈತ-ಶಿವಾದ್ವೈತ) ಗಳೆರಡರಲ್ಲಿ ಅಷ್ಟು ಭೇದವನ್ನೆಣಿಸಲು ಬರುವಂತಿಲ್ಲವೆಂದೂ ಹೇಳಿ ಮುಂದುವರಿಯುತ್ತ ಶತಮಾನಗಳಿಂದ ಪಾರತಂತ್ರ್ಯದಲ್ಲಿ ಸಿಕ್ಕಿದ್ದ ನಾವು ಇಂದು ಸ್ವತಂತ್ರರಾಗಿದ್ದು ಈತರಹದ ಸ್ವಾತಂತ್ರ್ಯೋತ್ಸವಾನಂದವನ್ನು ಸದಾ ಪಡೆಯುತ್ತಿರಬೇಕಾದರ ರಕ್ಷಣಾ ಭಾರವನ್ನು ಪ್ರತಿಯೊಬ್ಬ ನಾಗರಿಕನು ಲಪ್ಪಿಸಿದಲ್ಲಿಟ್ಟು ನಡೆಯಬೇಕೆಂದೂ ಅಂದಹ ಜ್ಞಾನೋದಯಕ್ಕೆ ತಕ್ಕ ಶಿಕ್ಷಣಗಳು ಲಭಿಸಬೇಕೆಂದು ಸಂತಾದಿಸಬೇಕಾದ ಅವುಗಳ ಪ್ರಕಾರಗಳನ್ನು ವಿವರಿಸುತ್ತ ವಿದ್ಯಾರ್ಜಿಜನಕೆ ಬೇಕಾದ ಮಾರ್ಗಗಳ ಅಸದೃಶಪಡಿಸಿದರು ಸರ್ವ ಸಭಿಕರಾನಂದಭರಿತರಾಗುವಂತೆ ಭಾಷಣಮಾಡಿದರು ಆಮೇಲೆ ವಿದ್ವತ್ಸಂಘದ್ವಾರಾ ನಿರ್ಮಿತ ಶಿಖಾ ಮಣಿ ನೊದಲಾದ ಕೆಲ ಗ್ರಂಥಗಳೊಂದಿಗೆ ಫಲಾದಿಗಳನ್ನು ಅರ್ಪಿಸಲಾಯಿತು ಅನಂತರ ಸಮೃತಿ ಪುಷ್ಪಕದಲ್ಲಿ ಸ್ವಾಭಿಪ್ರಾಯವನ್ನು ಪ್ರಕಟಿಸುತ್ತಲೇ ಧನ್ಯವಾದಗಳೊಂದಿಗೆ ಸಭ್ಯರನ್ನೂ ಸಭಾಧ್ಯಕ್ಷರನ್ನೂ ಶಾಂತಿಪಾಠಮಾಡುವದಿಗೆ ಕಾರ್ಯಕ್ರಮ ಪೂರ್ತಿಗೊಳಿಸಲ್ಪಟ್ಟಿತು

ಕಾಶೀ ವೀರಶೈವ ವಿದ್ವತ್ಸಂಘದ ಸೆಕ್ರೆಟರಿ

ಶಿವರಿಂಗಾನುಷ್ಠಾನ ನಂತ್ತು ಶರಣಬಸವೇಶ್ವರ ಪುರಾಣಾಸ್ಥಾರಂಭ, ಸಿಂಧನೂರು

ರಾಯಚೂರ ಡಿ|| ತಾಲ್ಲೂಕು ಸಿಂಧನೂರು ವಿರಕ್ತ ಮಠದ ಗುರುಸಿದ್ಧಯ್ಯನವರ ಮತ್ತು ಪುರಪ್ರಮುಖ ಸದ್ಭಕ್ತರ ಪ್ರಾರ್ಥನೆಯ ಮೇರೆಗೆ ಗದ್ವಾಲ್, ದೇವರ ಗುಡ್ಡ ಸೂಂಡೂರು, ಸಿದ್ಧಗಿರಿ ಮುಂತಾದ ಕಡೆಗಳಲ್ಲಿ ದಶಮಹಾಪುರಾಣಗಳನ್ನು ಜರುಗಿಸಿ ಪ್ರಸಿದ್ಧರಾದ ಪರಮತತ್ವನಿಧಿ ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷ ಪ|| ಶ್ರೀ ಶಿವಯೋಗಿತ್ರಿವಾಚಾರ್ಯಸ್ವಾಮಿಗಳು ರೌಡಕುಂದಿ ಹಿರೇಮಠ ಇವರು ಇದೇ ಶ್ರಾವಣ ಶು|| ೪ ಗುರುವಾರದಂದು ಇಲ್ಲಿಯ ವಿರಕ್ತಮಠದಲ್ಲಿ ಶ್ರೀಶಿವಯೋಗಾನುಷ್ಠಾನ ಮತ್ತು ಕಲ್ಲುಬುರಗಿ ಶರಣಬಸವೇಶ್ವರ ಪುರಾಣವನ್ನು ಪ್ರಾರಂಭಿಸಿದರು

ಪುರಾಣವನ್ನು ಮೇಲ್ಕಂಡ ಶ್ರೀ ಸ್ವಾಮಿಗಳವರೇ ತಮ್ಮ ಅಸ್ಖಲಿತವಾದ ವಿದ್ವತ್ಪ್ರಾಣಿಯಿಂದ ದ್ವೈತಾದ್ವೈತ ಶಕ್ತಿವಿಶಿಷ್ಟಾದ್ವೈತ ಮೊದಲಾದ ಮಹಾಮತಗಳ ಸ್ವರೂಪವನ್ನು ಸರ್ವರಿಗೂ ಸರಳವಾಗಿ ತಿಳಿಯುವಂತೆ ಶಾಸ್ತ್ರಾಧಾರಪ್ರಮಾಣಪುರಸ್ಸರವಾಗಿ ಬೋಧಿಸುತ್ತಿರುವದರಿಂದ ಸರ್ವಮತೀಯರು ಸ್ವಸರಭೇದವಿಲ್ಲದೆ ಪುರಾಣಶ್ರವಣವನ್ನು ಮಾಡಿ ಮಹದಾನಂದವನ್ನು ಹೊಂದುತ್ತಿರುವರು ಶ್ರೀಗಳವರ ಸೇವಾಕಾರ್ಯವನ್ನು ಸದರಿ ಸ್ವಾಮಿಗಳವರ ಶಿಷ್ಯಂದಿ ವೇ|| ರಿ|| ಗುರುಸಿದ್ಧಯ್ಯ ಸನಾತನ ಅವರ ಧರ್ಮಪತ್ನಿಯವೇರೆ ಮೊದಲಾದ ಸದ್ಭಕ್ತರು ಶ್ರದ್ಧಾಪೂರ್ವಕವಾಗಿ ಮಾಡುತ್ತಿರುವರು ಈ ಮಹಾಪೀಯರುಗಳಿಗೆಲ್ಲ ಶ್ರೀ ಪರಶಿವನು ಶುಭವಿಭವತೆ ನಿತ್ಯೈಸುಗಂಧವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ,

ಮಾಲಿ ಜಡೇಗೌಡ, ಸಾಲಗುಂದ

ವೀರಶೈವರತ್ನ

(೩ ನೆಯ ಮುದ್ರಣ)

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಬರೆದಿರುವ ಈ ಗ್ರಂಥವನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ವಿದಿನೋಡಿ ಇದರ ಮಹತ್ವವನ್ನು ಮುಕ್ತಕಂರದಿಂದ ಹೊಗಳುತ್ತಿರುವರು ವೀರಶೈವ ಮತದ ಸರ್ವಸ್ವನೇ ಈ ಗ್ರಂಥದಲ್ಲಿ ಅಡಗಿರುವುದು ಇದರಲ್ಲಿ ಪ್ರತಿಪಾದಿತವಾಗಿರುವ ವಿಷಯಗಳ ಮಹತ್ವವು ವರ್ಣಿಸಲಾಶಕ್ಯವಾಗಿರುವದು ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದಕ್ಕೆ "ವೀರಶೈವರತ್ನ" ಎಂಬ ನಾಮವನ್ನಿಡಲಾಗಿದೆ ಈ ಗ್ರಂಥವು ಈಗ ೫ ನಾರಿ ಮುದ್ರಿಸಲ್ಪಟ್ಟಿರುವುದರಿಂದ ಈ ಗ್ರಂಥದ ಮಹತ್ವವು ಎಷ್ಟರಮಟ್ಟಿಗಿರಬಹುದೆಂಬುದನ್ನು ಬೇರೆ ವರ್ಣಿಸಬೇಕಾಗಿಲ್ಲ ಈ ಗ್ರಂಥವು ಅತ್ಯುತ್ತಮವಾದ ಕಾಗದದಿಂದಲೂ, ಒಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೩೦ ಫೋಟೋಗಳು ಸೇರಿಸಲ್ಪಟ್ಟಿರುವುವು ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರೆಯು ಮುದ್ರಿಸಲ್ಪಟ್ಟಿದೆ ಅತ್ಯಂತ ಮಹತ್ವವಿಷಯಗಳೆಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಇದರಲ್ಲಿರುವ ಅಮೂಲ್ಯ ವಿಷಯಗಳನ್ನು ವಿದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ **ಬೆಲೆ ೩ ರೂಪಾಯಿ.**

ವೈದಿಕ ಶಿವಪೂಜಾವಿಧಿ

(೨ ನೆಯ ಮುದ್ರಣ)

ಮೇಲ್ಕಂಡ ಗ್ರಂಥವು ವೇ|| ಪಂ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಬಹು ಮುದ್ರಿಸಿ ಮುದ್ರಿತವಾಗದ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿನೆ, ಆದರೆ ಮುದ್ರಾಪಕರಿಗೆ ವೈದಿಕ ಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿನೆ ಅನೇಕರು ಆ ಅಶುದ್ಧ ಮಂತ್ರಗಳನ್ನೇ ಪರಿಶುದ್ಧರಿವರು ಇನು ಅತ್ಯಂತ ವೈಸನಕರವಾದ ವಿಷಯವಾಗಿದೆ ಅಲ್ಲದೆ ಇಲ್ಲಿಯವರೆಗೆ ಮುದ್ರಿತವಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ಮೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವ ಶೃಂಖಚಕ್ರೆ ಮಹೇಶಪತಾರನೆವ್ನು ಮಾಡಿದ್ದಾರೆ ಈ ಶಿವಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದು ನಿನರವಾಗಿ ತೋರಿಸಲ್ಪಟ್ಟಿದೆ ಈ ಶಿವಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವಿ ನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವಿ ನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ವಿಘ್ನೇಶ್ವರ ನಾಮಾವಳಿ, ಶ್ರೀಪಂಚಾಚಾರ್ಯರ ನಾಮಾವಳಿಗಳು ನಾನಾವಿಧ ಶಿವಸ್ತೋತ್ರಗಳು, ದೇವಿಸ್ತೋತ್ರಗಳು ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಶಿವಪೂಜಾವಿಧಿಯು ವೀರಶೈವರಿಗೆ ಕಲ್ಪವೃಕ್ಷದಂತಿದೆ ಎಂದು ಅಮೆರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧ ರೂ. ೪ ಆಣೆ.**

ಮ್ಯಾನೇಜರ್
ಶ್ರೀಪಂಚಾಚಾರ್ಯಾ ಎಲೆಕ್ಟ್ರಿಕ್, ಪ್ರೆಸ್
ಮೈಸೂರು.

Edited, Printed and Published by Bruhanmath Mahadevaiah at Shri Panchacharya Electric Press, Sayaji Rao Road, Mysore

EGISTERED No. M. 2266 ॥ श्रीजगद्गुरु पंचाचार्याभ्यः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಪಶಸಂಕಾಶಜಪಿಕರ ಪಂಚಾಸ್ಯಪೀಠಾಧಿಪರ । ಪಂಚಕ್ಲೇಶವಿನಾಶಕರ ಪರಕರುಣ್ಯಶೀಲಂಗೈದ್ಯವರ ॥
ಪಂಚಾಚಾರವಿಯಾಮಕರ ಪರಿಲಸತ್ಪಂಚಾಕ್ಷರೀಮೋಧಕರ । ಪಂಚಾಚಾರ್ಯಜಗದ್ಗುರೂತ್ತಮರರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಶಾಗನೆಯೂರು ಬೃಹನ್ಮಹಾಧ್ಯಕ್ಷರಾದ ನೇಗಿ ಸಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೨೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೪ ನೇ ಸೆಪ್ಟೆಂಬರ್ ೧೯೫೦ [ಸಂಚಿಕೆ ೨೦

ಮರೆತೇಳೆ ನಿಂತೆ?

ಮುರುಕು ದೇಗುಲದಲ್ಲಿ ಕಗ್ಗಲ್ಲ ಮರೆಯಲ್ಲಿ
ಮತ್ಸ್ಯಳು ಮೆರಿಗಳು ಮರೆತೇಳೆ ನಿಂತೆ ?
ಎಲೆ ದೇವ ! ಹೊರಗೆ ಬಾ ಕೇಳಕೊಂಬೆ
ನಿನ್ನ ಮನೆ ನಿನ್ನಸಿರು ಹೋಯ ಮನೆ ಕೊಳೆ ಕೆಸರು
ಪೆತ್ರೆರಿನ ಹೊಳೆ ಹರಿದು ಶತ್ರುಲೆಯ ಮೆಸೆಸುರಿದು
ನಿನ್ನ ಮನಸಾವ ನೀನೆ ನೋಡು ಬಾರೊ !
ಬಿಸಿರಕ್ತನಲ, ಬಸಿಮ ಒಟ್ಟು ಹುಟ್ಟಿಸಿದವಗೆ
ಂಡಿಕೂಟ ಗತಿಯಲ್ಲ ಉಡುವುದಕೆ ಜೂಲಿಲ್ಲ
ನ್ನ ಸಗ್ಗನ ಮೆಚ್ಚಿ ಹಿಗ್ಗು ಬಾಯೋ !
ಸಿವಾಗದಿಹ ನರಗೆ ಅನ್ನ ಹರಳವಂಟು
ನೆಯಂದ ಮನೆಗಲೆದು ಹಸಿದವಸಿಗೇನುಂಟು ?
ಸಿದೊಡಲಿಗೆಗಳಾರು ಕೊಡಲು ಬಾರೋ !

ಕವಿಕಲಾನಿಧಿ
ಮಯೆಂತಿನಸರ ಎಮ್ಮಿಗನೂರು

ವಿದೇಹಿ

ನಾವುನೋವಿಗಂಜದಿರುವುದು ಒಂದು,
ಭಾವಿಪುದು ತನ್ನಂತೆ ಪರರನ್ನ ದೊಂದು,
ೇವೆಮಾಳ್ಪುದು ದೀನ, ಜ್ಞಾನಿಗಳೊಂದು
ಭಾವಿಸುತೆ ನೈರಾಗ್ಯ ಪಡೆಯುವದೊಂದು
ಿವಾಗಳು ಸತ್ಯ ಬಿಡದಿಹುದದೊಂದು,
ಾವ, ಕೊಲುವವ ದೀವನೆಂದರಿವುದೊಂದು
ೇನ ಗೌರವರನ ಭಜಿಸುವುದದೊಂದು,
ಂತೀಳು ವಿಷಯಗಳ ಜೀವನದ ಧ್ಯೇಯ,
ದನರಿತು ಆಚರಿಪವನೆ ತಾ ವಿದೇಹಿ

ಎಚ್ ಸಿ ಚಂದ್ರಶೇಖರಾರಾಧ್ಯ ಹೊಸಪುರ,
ನಂಜನಗೂಡು ತಾಲ್ಲೂಕು

ಶ್ರೀ ಪುರಾಣಪ್ರವಚನಸಮಾರಂಭ

ಬಳ್ಳಾರಿ ಜಿಲ್ಲಾ ಹೂವಿನ ಹಡಗಲಿ ತಾಲೂಕು ಹೊಳಗುಂದಿಮಜರು) ಬಾವಿಹಳ್ಳಿ ಗ್ರಾಮದಲ್ಲಿ ಯರಲ ಷ್ಟಿಮಳ ವೇ॥ ಚೆನ್ನವೀರಯ್ಯನವರು ತಮ್ಮ ಸತ್ಪಂಕಲ್ಪ ಂತೆ ಇದೇ ವಿಕೃತಿ ಸಂ॥ ೪ ಶ್ರಾವಣಮಾಸದಲ್ಲಿ ಶ್ರೀ ಂದಿಶಪುರಾಣವನ್ನು ಪ್ರಾರಂಭಿಸಿ ತಮ್ಮ ಪುತ್ರ ಚಿ॥ ನವರಾಜಯ್ಯನವರ ಪಾರ್ಮೋಪನಿಯ ನಾವನ ಂದಲೂ ಹಿರೇಹಡಗಲಿ ಪುರಾಣಿಕ ಮಕಡ ಶ್ರೀವಿರೂ ಾಕ್ಷಶಾಸ್ತ್ರಿಗಳವರ ಸಂಗೀತಸಾಹಿತ್ಯಾದಿಗಳೊಡನೆ ಪ್ರವ ನವು ಬಹುಜನಮನೋರಂಜಕವಾಗಿ ಜರುಗಿಸಲ್ಪ ತು ತಾ॥ ಕುದ್ದ ೧೦ ದಿವಸ ಪುರಾಣಸಮಾಪ್ತಿ ಂಗಲ ಗಣಾಧಾನೆ ನಡೆಯುತ್ತಿರಲು ಮೇಳೆರಾಜನು ೃಧಿಕವಾದ ಸುವ್ಯವಸ್ಥೆಯನ್ನು ಆಯೆಯುಕ್ತ ಸರ್ವರಿಗೂ ಂದವನ್ನುಂಟುಮಾಡಿದನು ಪ್ರತ್ಯಕ್ಷದರ್ಶಿ.

ಶ್ರೀಜಗದ್ಗುರು ವಾರುಕಾಚಾರ್ಯಾಯ ನಮಃ

ಆಗುವುದೆಲ್ಲವೂ ಒಳ್ಳೆಯದಕ್ಕೇ

ಲೇ॥ ಆರ್ ಎಂ ಮಲ್ಲಿಕಾರ್ಜುನಾರಾಧ್ಯರು, ಹಿಪಲೂರು

ಜಗತ್ತಿನಲ್ಲಿ ಸಿತ್ಯುರಿಪರಿಗೆ ದುರ್ಜನರಿಂದ ಅನೇಕ ವಿಪತ್ಪರಂಪರೆಗಳು ಸಂಭವಿಸುತ್ತವೆ ಹಾಗೆ ಯಾರಿಂದ ಲಾದರೂ ತೊಂದರೆಯು ಸಂಭವಿಸಿದರೆ ಅದು ನಮ್ಮ ಸತ್ಪಪರೀಕ್ಷೆಗೆ ಒಂದಿರುವುದೆಂದೂ, ನಮ್ಮ ಮತ್ತು ಅವರ ಗುಣಾವಗುಣಗಳನ್ನು ಹೊರಗೆಡುವುದಕ್ಕೆ ಬಂದಿರುವ ಸುಯೋಗವೆಂದೂ ತಿಳಿದುಕೊಂಡು ಶಾಂತಿಯಿಂದ ಸಹನೆ ಮಾಡಿಕೊಂಡರೆ ಪರಿಣಾಮದಲ್ಲಿ ಒಳ್ಳೆಯದೇ ಆಗುವದು ಉವಾ ವಿಶ್ವಾಸಿಶ್ರನು ಹಿರಿಕ್ಕಂದ್ರನ ಸಿಗೆ ತೊಂದರೆ ಕೊಟ್ಟೆದ್ದರಲ್ಲಿ ಹಿರಿಕ್ಕಂದ್ರನ ಸತ್ಯತೆ, ಚಂದ್ರಮತಿಯ ಪಶಬದ್ಧತ್ತಿ, ನಿಶ್ಚಾಮಿತ್ರನ ದುರಾಗ್ರಹ ವಸಿಷ್ಠ ಮಹರ್ಷಿ ಗಳ ಬ್ರಹ್ಮತೇಜಸ್ಸುಗಳು ವ್ಯಕ್ತವಾದವು ಕೈಕೇಯಿಯು ಶ್ರೀ ರಾಮಚಂದ್ರನನ್ನು ನನವಾಸಕ್ಕೆ ಕಳುಹಿಸಿದ್ದರಲ್ಲಿ ರಾಮಚಂದ್ರನ ಪಿತೃಭಕ್ತಿ, ಲಕ್ಷ್ಮಣನ ಭ್ರಾತೃವಾತ್ಸಲ್ಯ ಭರತನ ಒಂಭುಜ್ರೇನು ಸೀತಾದೇವಿಯ ಪತಿವ್ರತಾ ಧರ್ಮ, ಮಾಯತಿಯ ಸ್ವಾಮಿ ಭಕ್ತಿ ವಿಭೀಷಣನ ಧರ್ಮನಿಷ್ಠೆ ಕೈಕೇಯಿಯ ನೀಚ ಸ್ವಾರ್ಥತೆ, ರಾವಣನ ನೀಚತನ ಇತ್ಯಾದಿಗಳು ವ್ಯಕ್ತವಾದವು ದುರ್ಯೋಧನನು ಪಾಂಡವರನ್ನು ವನವಾಸಕ್ಕೆ ಕಳುಹಿಸಿದ್ದರಿಂದ ಧರ್ಮರಾಯನ ಸತ್ಯ, ಧರ್ಮ, ಭೀಮಾರ್ಜುನರ ಭ್ರಾತೃ ಭಕ್ತಿ, ಪರಾಕ್ರಮ, ದ್ರೌಪದಿಯ ಪತಿವ್ರತಾಧರ್ಮ, ಉತ್ತರನ ಹೇಡಿತನವು ಕೀಚಕನ ನೀಚತನವೂ ವ್ಯಕ್ತವಾದುವು ಅಕ್ರೂರನ ಕಿರಿಯ ಪತ್ನಿಯಾದ ತಿಸ್ಯರಕ್ಷಿತೆಯು ಮಲಮಗನಾದ ಕುನಾಲನ ಕಣ್ಣನ್ನು ಕೀಳಿಸಿದ್ದರಿಂದ ಅಕ್ರೂರನು ಮುದ್ದಿನ ಹೆಂಡತಿಯೆಂದು ಅಭಿಮಾನವಿಡದೆ ಅನಳ ತಿಸ್ಯೆಯನ್ನು ಮಾಡಿದ್ದರಿಂದ ಅವನ ನಿಷ್ಕೃಪಾತನವೂ, ನಿರ್ಮೋಹವೂ, ಅಕೆಯ ನೀಚತನವೂ, ಕುನಾಲನ ಧರ್ಮನಿಷ್ಠೆಯೂ, ಬ್ರಹ್ಮಚರ್ಯವೂ ಪಾಲನೆಯೂ ವ್ಯಕ್ತವಾದವು ಅದ ಪ್ರಯುಕ್ತ ಎಷ್ಟು ಕಷ್ಟಗಳು ಬಂದರೂ " ಮನದೊಳಗೆ ಹುಡಿದ ವ್ರತಗಳ ಬಿಡದವ ಜಾಣ " ಎಂಬಂತೆ ಸಮುದ್ರದಂತೆ ಶಾಂತವಾಗಿಯೂ ಗಂಭೀರವಾಗಿಯೂ ಇರದೇಕಲ್ಲವೆ ಸಂಕಟಗಳು ಅತಿ ತೀವ್ರವಾಗಿ ಪರಿಣಮಿಸಿದರೆ ಹಿತಕರವಾದ ಏನೋ ಒಂದು ಮಹತ್ಕಾದ ಬದಲಾವಣೆಯು ಉದಯವಾಗುತ್ತಲಿದೆ ಎಂದು ಭಾವಿಸಿಕೊಳ್ಳಬೇಕು

ವಾಚಕಮಹಾಶಯರೇ, ತಿರೋಣಾನಿಗೆ ಅನುಗುಣವಾದ ಒಂದು ಇತಿಹಾಸವಿರುವುದು ಏನೆಂದರೆ— ಶಿವವರ್ಮನೆಂಬ ಒಬ್ಬ ರಾಜನು ಒಂದು ಸಾರಿ ಮಾವಿನ ಹಣ್ಣನ್ನು ಕೊಯ್ಯುವಾಗ ಅಜಾಗರೂಕತೆಯಿಂದ ಕೈ ಬೆರಳುಗಳಲ್ಲಿ ಕತ್ತರಿಸಿಕೊಂಡನು ರಾಜಪರಿವಾರದವರೆಲ್ಲರೂ ಹಾಹಾಕಾರಪಡಪಹತ್ತಿದರು ಆ ಸಮಯದಲ್ಲಿ ಮಂತ್ರಿಯು " ಪ್ರಭುವೇ! ಮಂಗಲಮಯವಾದ ಸರಿ ಮಾತ್ರನು ಮಾಡುವುದೆಲ್ಲವೂ ಜೀವನ ಹಿತಕ್ಕಾಯೇ ಇರುವದು, ಇದೂ ಸಹ ತಮ್ಮ ಮೇಲ್ಮೈಗಾಯೇ ಆಗಿರುವದು ಆದ್ದರಿಂದ ತಾವು ಕಳವಳಪಡಬಾರದು " ಎಂದನು ಮಂತ್ರಿಯ ಮಾತುಗಳು ರಾಜನಿಗೆ ಅಸಮಾಧಾನವನ್ನುಂಟುಮಾಡಿದರೂ ಸುಮ್ಮನೇ ಇದ್ದನು ಕೆಲವು ದಿನಗಳು ಕಳೆದ ನಂತರ ಒಂದು ದಿನ ರಾಜನು ಮಂತ್ರಿಸಮೇತನಾಗಿ ಬೇಟೆಗೆ ಹೋಗುತ್ತಿರುವಾಗ ಮಾರ್ಗದಲ್ಲಿ ರಾಜನು ಹರಾಪ್ಪಾಗಿ ಮಂತ್ರಿಯನ್ನು ಒಂದು ಹಾಳು ಬಾವಿಗೆ ತಳ್ಳಿ " ಮಂತ್ರಿಯೇ ಇದೂ ಸಹ ಮಂಗಲಮಯನ ಇಚ್ಛೆಯಂತೆಯೇ ನಡೆದಿರುವದು ಎಂದು ಪರಿಹಾಸಮಾಡಿ ಪರಿವಾರದೊಡನೆ ಮುಂದಕ್ಕೆ ನಡೆದನು ಮಂತ್ರಿಯು ಬಾವಿಯಲ್ಲಿಯೇ ಉಳಕೊಂಡನು

ಬೇಟೆಯಾಡುತ್ತಿರಲು ಕರ್ಮಧರ್ಮಸಂಯೋಗದಿಂದ ರಾಜನಿಗೂ ಅವನ ಪರಿವಾರಕ್ಕೂ ವಿಯೋಗವಾಯಿತು. ಆಗ ರಾಜನು ನಿರುಪಾಯನಾಗಿ ರಾತ್ರಿಯನ್ನು ಕಾಡಿನಲ್ಲಿಯೇ ಕಳೆಯಬೇಕಾಯಿತು ಅಲ್ಲೊಂದು ಕಳ್ಳರ ಗುಂಪಿನ ಜನರು ಕಾಳಿಕಾಂಬೆಯ ಪೂಜೆಯನ್ನು ಮಾಡಿ ನರಬಲಿಯನ್ನು ಕೊಡುವ ಯತ್ನದಲ್ಲಿದ್ದರು " ಕಾಕ ತಾಳೀಯ್ಯಾಯ ' ದಂತೆ ಅದೇ ನೇಳೆಗೆ ಸರಿಯಾಗಿ ಈ ನನ್ನ ರಾಜನು ಅವರ ದೃಷ್ಟಿಗೆ ಬೀಳಲು, ಅವನನ್ನು ಎಳೆದುಕೊಂಡು ಜೋಗಿ ದೇವಿಯ ಮುಂಭಾಗದಲ್ಲಿ ನಿಲ್ಲಿಸಿ ಶಿರಚ್ಛೇದ ಮಾಡಲು ಖಡ್ಗಪ್ರಹಾರಮಾಡಹತ್ತಿದ ರಿದ್ದರು ಅಷ್ಟರಲ್ಲಿ ಅದ್ಭುತವಾಗಿ ಕೈ ಬೆರಳುಗಳು ಸ್ವಾಭಾವಿಕವಾಗಿರುವುದನ್ನು ಕಂಡು ನರಬಲಿಗೆ ಇವನು ತಕ್ಕವನಲ್ಲವೆಂದು ನಿರಾಕರಿಸಿಬಿಟ್ಟರು ಆಗ ರಾಜನು, ಎಲೈ ! ಬತ ಜೀವನೆ ' ಬದುಕುಳಿಕೊಂಡೆಯಾ ? ' ಎಂದೆನ್ನುತ್ತು ಮಂಗಲಮಯನ ಮಹಿಮೆಯನ್ನು ಕಂಡು ತಲೆದೂಗಿದನು ದೆಗಾಗುತ್ತಲೆ ಮಂತ್ರಿಯು ಇದ್ದಲ್ಲಿಗೆ ಬಂದು ಅವನನ್ನು ಸೇಲಕ್ಕೆತ್ತಿ ತಾನು ಮಾಡಿದ ಅವಿಚಾರಕ್ಕಾಗಿ ಕ್ಷಮೆಯನ್ನು ಬೇಡಿ, ರಾತ್ರಿ ನಡೆದ ವಿಷಯವನ್ನು ತಿಳಿಸಿದನು

ಆದಕ್ಕೆ ಮಂತ್ರಿಯು—" ಮಹಾರಾಜನೇ! ಆ ಸಮಯದಲ್ಲಿ ನಾನು ತನ್ನೊಡನೆ ಇದ್ದಿದ್ದರೆ ನನ್ನ ಪ್ರಾಣವೇ ಹೋಗುತ್ತಿತ್ತು ಕಂಡೆಯಾ ಕಾರಣನೀನೆಂದರೆ ಮಿಕ್ಕ ಪರಿವಾರದವರಂತೆ ನಾನು ತಮ್ಮನ್ನು ಅಗಲಿರುತ್ತಿರಲಿಲ್ಲ. ಆಗ ಕಳ್ಳರು ಪಮ್ಮುಖ್ಯರನ್ನು ಹಿಡಿದು ಕೊಳ್ಳುತ್ತಿದ್ದರು ತಮ್ಮ ಅಂಗದ ನ್ಯೂನತೆಯನ್ನು ಕಂಡು ನನ್ನನ್ನೇ ಬಲಿಕೊಡುತ್ತಿದ್ದರು. ಇಪ್ಪಿಲವನ್ನೂ ಅರಿತ ಭಕ್ತವತ್ಸಲನಾದ ಆ ಭಗವಂತನು ತಮ್ಮಿಂದ ನನ್ನನ್ನು ಬಾವಿಗೆ ತಳ್ಳಿಸಿ ಕಾಪಾಡಿದನು ತಮ್ಮ ಕೈ ಬೆರಳನ್ನಳಿಸಿ ಈ ಮೊದಲೇ ಕಡಿಸಿ ತಮ್ಮ ಪ್ರಾಣವನ್ನು ಉಳಿಸಿದನು ಆದಕಾರಣ " ಆಗುವುದೆಲ್ಲವೂ ಒಳ್ಳೆಯದಕ್ಕೇ ' ಎಂದು ಹೇಳಿ, ಈಶ್ವರೂಪ ದಯಾಮಯನಾದ ಆ ಪರಮಾತ್ಮನ ನಾಮಸಂಕೀರ್ತನೆಯನ್ನು ಮಾಡುತ್ತಾ ನಗರಾಭಿಮುಖರಾದರು.

ಸಾರಾಂಶ—ಯಾವ ಕಾಲಕ್ಕೆ ಏನು ಬಂದರೂ ಈಶ್ವರ ಪ್ರಸಾದವೆಂದು ತಿಳಿಯಬೇಕೆಂದಲೂ ಸಹನತೆಯಿಂದಲೂ ಅಮಭವಿಸುವುದು ಸಾತ್ವಿಕಪುರುಷರ ಲಕ್ಷಣವು.

ಪಂಚಲೋಹದ ಲಿಂಗೋದ್ಭವ ಮೂರ್ತಿಗಳು

ರುದ್ರಾಭಿಷೇಕಾದಿಗಳನ್ನು ಮಾಡುವ ದಕ್ಕೆ ಅನುಕೂಲವಾಗುವಂತೆ ನಂಚಲೋಹದಲ್ಲಿ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗಳನ್ನು ತಯಾರಿಸಬೇಕೆಂದು ಬಹುಜನ ಗುರುಭಕ್ತರು ಅಪೇಕ್ಷಿಸುತ್ತಿದ್ದರು ಅವರ ಅಪೇಕ್ಷೆಯ ಸಾರವಾಗಿ ಈಗ ಮೂರ್ತಿಗಳು ತಯಾರಾಗಿವೆ ಬೇಕಾದವರು ಬರದು ತರಿಸಿಕೊಳ್ಳಬೇಕು

ಒಂದು ಮೂರ್ತಿಯ ಬೆಲೆ ೧೬ ರೂ

ಪೋಸ್ಟು ಖರ್ಚು ಪ್ರತ್ಯೇಕ

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪಂ|| ಶ್ರೀಕಾಶೀನಾಥಲೇಖಿಮಾಲಾ

ಳ

"ಶಿವಸೂತ್ರವಾರ್ತಿಕ"

ಲೇಖಕರು—ಪಂ ಶೈಲಾಲಿಂಗಿಶಾಚಾರ್ಯರು

[ಕಳೆದ ಸಂಚಿಕೆಯಿಂದ ಮುಂದರಿಸಿದೆ]

ಈ ಸೂತ್ರಗಳು ಪರಮಶಿವನಿಂದ ವಿರಚಿತವಾಗಿರುವದರಿಂದ ಶಿವಸೂತ್ರಗಳೆಲ್ಲವೂ ಸ್ವತಃಸಿದ್ಧವಾಗಿಯೂ ಸ್ವತಂತ್ರವಾಗಿಯೂ ಇರುವವು. ಈ ವಿಶೇಷತೆಗಳನ್ನು ಇಟ್ಟುಕೊಂಡೇ ಶ್ರೀ ಶಿವಯೋಗಿ ಪರಮಶಂಕರನು ಜೊತೆಯಿಸಿರುವ ಶಿವಸೂತ್ರಗಳು ಸಂಖ್ಯೆಯಲ್ಲಿ ಎಷ್ಟಿರಬೇಕೆಂಬ ವಿಷಯದಲ್ಲಿ ಈ ವಿಷಯವನ್ನು ಸೂಚಿಸುವ ಯಾವ ಶಿಕ್ಷಾಮಾತ್ರವೂ ಪ್ರಮಾಣವು ಸಾಮಾನ್ಯವಾಗಿ ಗ್ರಂಥಾರಂಭದಲ್ಲಿ ಮಾಡಲಾಗುವ ಗ್ರಂಥಾಭಿಧೇಯ ಪ್ರಯೋಜನಗಳ ಸಂಬಂಧವನ್ನು ಸೂಚಿಸುವ ಶ್ಲೋಕವೂ ಇಲ್ಲದಿರುವದರಿಂದ ಈ ಶಿವಸೂತ್ರಗಳು ತತ್ಪ್ರತಿಪಾದ್ಯವಸ್ತುವಿನ ಅಂಶವಾಗಿ ಕಿಲಿದಿರುವಾಗಿಯೂ ಸ್ವತಂತ್ರವಾಗಿಯೂ ಇರುವವು. ಇಂಥ ಶಿವಸೂತ್ರಗಳಿಗೆ ಯಾವ ಶಿಷ್ಯನಾದರೂ ಸಂಕ್ಷಿಪ್ತವಾಗಿ ಅಥವಾ ವಿಸ್ತಾರವಾಗಿ ಯಾವ ಪ್ರಕಾರದಿಂದ ಬೇಕಾದರೂ ವಿವರಣೆಯನ್ನು ಬರೆಯಬಹುದು. ಆದರಿಂದ ಶಿವಾಗಮಪ್ರತಿಪಾದ್ಯವಾದ ಈ ಎಲ್ಲ ಸೂತ್ರಗಳು ಸಂಗತವೆ ಸಾಮಾನ್ಯವಾಗಿ ಪ್ರಮಾಣವನ್ನು ಕೇಳಿದಲ್ಲಿ ಈ ಶಿವಸೂತ್ರಗಳೇ ತತ್ಪ್ರತಿಪಾದ್ಯವಿಷಯಕ್ಕೆ ಪ್ರಮಾಣವೆಂದು ಹೇಳಬಹುದಾಗಿದೆ



ವೆಸ್ಲಿ ಮೆಮೋರಿಯಲ್ ಆಸ್ಪತ್ರೆ

ಅಮೆರಿಕ ದೇಶದಲ್ಲಿ ರಿಜಿಸ್ಟರಾದ ೬೫೫೫ ಆಸ್ಪತ್ರೆಗಳಿವೆ. ಈ ಆಸ್ಪತ್ರೆಗಳಲ್ಲಿ ಒಟ್ಟು ಸುಮಾರು ೧೫ ಲಕ್ಷ ರೋಗಿಗಳು ಇದ್ದುಕೊಂಡು ಚಿಕಿತ್ಸೆ ಪಡೆಯಲು ಅವಕಾಶ ಇದೆ.

ಈ ಚಿತ್ರದಲ್ಲಿರುವ ಆಸ್ಪತ್ರೆಯ ಹೆಸರು "ವೆಸ್ಲಿ ಮೆಮೋರಿಯಲ್ ಆಸ್ಪತ್ರೆ" ಎಂದು. ಇದು ಚಿಕಾಗೋನಗರದಲ್ಲಿದೆ ಈ ಕಟ್ಟಡವನ್ನು × ಆಕಾರದಲ್ಲಿ ಕಟ್ಟಿರುವುದರಿಂದ ಎಲ್ಲ ಕೊಟಡಿಗಳಿಗೂ ಗಾಳಿ ಬೆಳಕು ಧಾರಾಳವಾಗಿ ಬರಲು ಅವಕಾಶ ಇದೆ. ಚಿತ್ರದಲ್ಲಿ ಕಾಣುತ್ತಿರುವುದು ಕಟ್ಟಡದ ಎರಡು ಭಾಗಗಳು ಮಾತ್ರ. ಇದರಂತೆಯೇ ಇನ್ನೆರಡು ಭಾಗಗಳು ಆ ಕಡೆ ಇವೆ. ಕಟ್ಟಡದ ಮಧ್ಯಭಾಗದಲ್ಲಿ ನರ್ಸ್‌ಗಳ ಕೊಟಡಿಗಳು ಮತ್ತು ಚಿಕಿತ್ಸೆಯ ಉಪಕರಣಗಳ ಕೊಟಡಿಗಳು ಇವೆ. ಈ ಆಸ್ಪತ್ರೆಗೆ ೩೦ ಅಂತಸ್ತುಗಳಿವೆ; ಇದರಲ್ಲಿ ಒಟ್ಟು ೫೫೫ ನಿಂದ ರೋಗಿಗಳು ಇದ್ದುಕೊಂಡು ಚಿಕಿತ್ಸೆ ಪಡೆಯಲು ಅವಕಾಶ ಇದೆ. ಕಳೆದ ವರ್ಷ ಒಟ್ಟು ೧೫ ಸಾವಿರ ಮಂದಿ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವರು.

ಆಸ್ಪತ್ರೆಯ ಕೆಲಸಗಾರರ ಮತ್ತು ಆಸ್ಪತ್ರೆಗೆ ಬರುವವರ ವಾಹನಗಳನ್ನು ನಿಲ್ಲಿಸಲು ಕಟ್ಟಡದ ಮುಂದೆ ಜಾಗ ಇದೆ

ಶಾಸನ ಸಭೆಯಲ್ಲಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಭಾಷಣ

ಕಳೆದ ತಿಂಗಳು ೩೦ ನೆಯ ತಾರೀಕು ಬೆಂಗಳೂರು ಶ್ರೀರಾಜಭವನದಲ್ಲಿ ಶ್ರೀಸೂರು ಶಾಸನಸಭೆ ಪ್ರಾರಂಭವಾಯಿತು. ನಮ್ಮ ಮಹಾರಾಜರವರು ಸಭೆಯ ಪ್ರಾರಂಭ ಭಾಷಣವನ್ನು ಮಾಡುತ್ತಾ—'ಭಾರತವು ಅನೇಕ ಕಷ್ಟಗಳಿಗೆ ಈಡಾಗಿದೆ ಇದೇ ಸಮಯದಲ್ಲಿ ಭಾರತದ ಅನೇಕ ಭಾಗಗಳಲ್ಲಿ ಪ್ರವಾಹಗಳೂ ಭೂಕಂಪವೂ ಉಂಟಾಗಿ ಭಾರಿ ನಷ್ಟವನ್ನುಂಟು ಮಾಡಿದೆ ಈ ವಿಪತ್ಸಾಧಕ್ಕಾ ಸಿಕ್ಕಿ ನೊಂದವರೆಲ್ಲರಿಗೂ ಸಾಂತ್ವನವನ್ನು ಸೂಚಿಸಲಿಚ್ಛಿಸುತ್ತೇನೆ

ನಮ್ಮ ಸಂಸ್ಥಾನಕ್ಕೆ ಮುಂದೊದಗಿಬಹುದಾದ ಅನೇಕ ಕಷ್ಟಗಳನ್ನು ನಾವು ಎದುರಿಸಬೇಕಾಗಿದೆ ಅವುಗಳನ್ನು ನಾವು ಧೈರ್ಯದಿಂದ ಎದುರಿಸಿ, ಪ್ರತಿಜ್ಞಾಪಣೆಯಾಗುವಂತೆ ಮಾಡಲು ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ" ಎಂಬುದಾಗಿ ಶ್ರೀಮನ್ಮಹಾರಾಜರವರು ಭಾಷಣ ಮಾಡುತ್ತಾ ತಿಳಿಸಿದರು

ನಮ್ಮ ಸಂಸ್ಥಾನಕ್ಕೆ ಮುಂದೊದಗಿಬಹುದಾದ ಅನೇಕ ಕಷ್ಟಗಳನ್ನು ನಾವು ಎದುರಿಸಬೇಕಾಗಿದೆ ಅವುಗಳನ್ನು ನಾವು ಧೈರ್ಯದಿಂದ ಎದುರಿಸಿ, ಪ್ರತಿಜ್ಞಾಪಣೆಯಾಗುವಂತೆ ಮಾಡಲು ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ" ಎಂಬುದಾಗಿ ಶ್ರೀಮನ್ಮಹಾರಾಜರವರು ಭಾಷಣ ಮಾಡುತ್ತಾ ತಿಳಿಸಿದರು

ಮುಂದುವರಿದು, ಭಾರತದ ಇತರ ಕಡೆಗಳಿಗಿಂತ ನಮ್ಮ ಸಂಸ್ಥಾನದಲ್ಲಿ ಆಹಾರ ಸಂಗ್ರಹಣೆ ಕಾರ್ಯ ಉತ್ತಮ ಮತ್ತು ದಲ್ಲಿದೆಯೆಂದು ಹೇಳಬಹುದು ಬೇಸಿಗೆ ಬೆಳೆ ಕೆಟ್ಟುದರಿಂದಲೂ ಮತ್ತು ಕಾಲಕ್ಕೆ ಸರಿಯಾಗಿ ಮಳೆಯಾಗದಿದ್ದುದರಿಂದಲೂ ಆಹಾರದ ವಿಷಯದಲ್ಲಿ ನಾವು ಯೋಚಿಸಬೇಕಾಗಿದೆ ಇದರ ಬಗ್ಗೆ ನಮ್ಮ ಸರ್ಕಾರವನು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವವಾಗಿದ್ದಾರೆ ಆದ್ದರಿಂದ ಅವರಿಗೆ ದೊಂಬಲ ಕೊಡುವುದೊಯೆಂದು ಅಪ್ಪಣೆ ಕೊಡಿಸಿದರು

ಬ್ಲಾಕ್‌ಮಾರ್ಕೆಟ್ ತಡೆಗಟ್ಟಲು ಸರ್ಕಾರದ ಪ್ರಯತ್ನ

ರಾಷ್ಟ್ರಾಧ್ಯಕ್ಷರು ವಿಶೇಷ ಆರ್ಡಿನೆನ್ಸ್ ಹೊರಡಿಸಲಿದ್ದಾರೆ.

ಬ್ಲಾಕ್‌ಮಾರ್ಕೆಟ್, ಅಕ್ರಮಾನ್ಯ ಶೇಖರಣೆ ಅಧಿಕ ಬೆಲೆ ಮಾರಾಟ ಇವೇ ಮೊದಲಾದ ಕೃತ್ಯಗಳಲ್ಲಿ ತೊಡಗಿರುವರೆಂಬ ಬಗ್ಗೆ ಸಾಕಷ್ಟು ಆಧಾರವಿದ್ದರೂ ಸಹ ಅಂಥವರನ್ನು ಬಂಧಿಸಲು ಭಾರತದ ರಾಷ್ಟ್ರಾಧ್ಯಕ್ಷರು ಇತ್ಯರ್ಥಲ್ಲೇ ವಿಶೇಷ ಆರ್ಡಿನೆನ್ಸ್ (ಆದೇಶ) ಹೊರಡಿಸುವರೆಂದು ತಿಳಿದುಬಂದಿದೆ.

ಕೊರಿಯಾ ಯುದ್ಧದ ಪರಿಣಾಮವಾಗಿ ಮಿತಿಮೀರಿ ಏರುತ್ತಿರುವ ಬೆಲೆಗಳನ್ನು ಹತೋಟಿಗೆ ತರುವುದೂ ಈ ಆರ್ಡಿನೆನ್ಸ್ ಹೊಗಡಿಸುವುದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ ಈ ಆರ್ಡಿನೆನ್ಸಿನ ಅವಧಿ ೬ ತಿಂಗಳು ಭಾರತದ ಎಲ್ಲಾ ಪ್ರಾಂತಗಳಿಗೂ (ಸ್ಟೇಟ್ಸ್) ಈ ಆಜ್ಞೆ ಅನ್ವಯಿಸುವುದು

ಪದಾರ್ಥಗಳ ಬೆಲೆಗಳನ್ನು ನಿಗದಿ ಮಾಡಲು ಈ ಆಜ್ಞೆಯಿಂದ ಸರ್ಕಾರಕ್ಕೆ ಅಧಿಕಾರ ಲಭಿಸುವುದು ಅಲ್ಲದೆ ನಿರಾಟ-ಂರೂಢಿ ಮತ್ತು ಸಾರ್ವಜನಿಕರೂ ಅಗಾಗ್ಗೆ ತಮ್ಮ ಬಳಿ ಇರುವ ದಸಿ ಧಾನ್ಯದ ಪ್ರಮಾಣವನ್ನು ಸರ್ಕಾರಕ್ಕೆ ತಿಳಿಸುವಂತೆ ಮಾಡುವುದು, ವ್ಯಾಪಾರಿಗಳು ತಾವು ಮಾರುವ ಸಾಮಾನುಗಳಿಗೆ 'ಕ್ಯಾಷ್ ಮೆಮೋ' ಕೊಡುವಂತೆ ಒತ್ತಾಯ ಮಾಡುವುದು ಈ ಅಧಿಕಾರಗಳೂ ಸರ್ಕಾರಕ್ಕೆ ಲಭಿಸುವುವು ಕೇಂದ್ರ ಸರ್ಕಾರದವರು ಈ ಆರ್ಡಿನೆನ್ಸಿನ ವಿಧಿಗಳನ್ನು ಪ್ರಾಂತಗಳಲ್ಲಿ ಜಾರಿಯಾಗಿಸಲು ಪ್ರಾಂತ ಸರ್ಕಾರಗಳಿಗೆ ಸೂಕ್ತ ಅಧಿಕಾರ ಕೊಡಲಿದೆ

ಬಾಬು ಪುರುಷೋತ್ತಮದಾಸ್ ಠಾಂಡನ್ ಅ॥ ಭಾ॥ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾದರು

ಅ॥ ಭಾ॥ ಕಾಂ॥ ಅಧ್ಯಕ್ಷ ಪೀಠಕ್ಕೆ ನಡೆದ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದ ಮೂವರು ಉಮೇದುವಾರರುಗಳ ಪೈಕಿ ಶ್ರೀ ಬಾಬು ಪುರುಷೋತ್ತಮದಾಸ್ ಠಾಂಡನ್ ರವರು ಎಲ್ಲರಿಗಿಂತಲೂ ಅಧಿಕ ಓಟುಗಳನ್ನು ಗಳಿಸಿ ಚುನಾವಣೆಯಲ್ಲಿ ಜಯಶಾಲಿಗಳಾದರು ನುತ್ತೀರ್ಣ ಸ್ಪರ್ಧೆಗಾರರಾದ ಶ್ರೀ ಜೆ ಬಿ ಕೃಪಲಾನಿ ಮತ್ತು ಶ್ರೀ ಶಂಕರರಾವ್ ದೇವ್‌ರವರು ಶ್ರೀ ಠಾಂಡನ್‌ರವರಿಗಿಂತ ಕಡಿಮೆ ಓಟುಗಳನ್ನು ಗಳಿಸಿ ಪರಾಜಿತರಾದರು

ಅಜಾದ್ ಕಾಶ್ಮೀರದಲ್ಲಿ ಕ್ರಾಂತಿ

ಇಬ್ರಾಹಿಂ ಗುಂಪಿಗೂ ಅರಬ್ಬರಿಗೂ ಘೋರಣೆ. ಪಾಕೀಸ್ತಾನ್ ಸೇನೆಗಳ ಆಗಮನ

ಆಜಾದ್-ಕಾಶ್ಮೀರ ಪ್ರದೇಶದಲ್ಲಿ ಅರಬ್ಬರೂಗೂ ಇಬ್ರಾಹಿಂ ಗುಂಪಿಗೂ ಕಳೆದ ೧೯ ನೇ ತಾರೀಕಿನ ದಿಢೀ ಆಳಿಕೆಯಾಗಿ ನಡೆದ ಘೋರಣೆಯಲ್ಲಿ ತಡೆಗಟ್ಟಲು ಆ ಪ್ರದೇಶಕ್ಕೆ ಪಾಕೀಸ್ತಾನ್ ಶಸ್ತ್ರಸಜ್ಜಿತ ಪೋಲೀಸ್ ಪಡೆಗಳು ಬಂದಿಳಿದಿವೆಯೆಂತು ವಾರ್ತೆಯೊಂದು ತಿಳಿಸಿದೆ

ಇಬ್ರಾಹಿಂ ಗುಂಪಿನವರು ಪೂಂಚ್ ಬಾಗ್ ನುಕ್ಕು ಪಲಾಂಪ್ರಿಗಳಲ್ಲಿ ಕ್ರಾಂತಿಯಷ್ಟೆಬ್ಬಿಸಿ ಗಲಭೆ ನಡೆಸುತ್ತಿದ್ದಾರೆ ಇಬ್ರಾಹಿಂ ಗುಂಪಿನವರು ಆ ಪ್ರದೇಶಗಳಲ್ಲಿ ಸ್ವತಂತ್ರ ಸರ್ಕಾರಗಳನ್ನು ರಚಿಸಿಕೊಂಡು ಅಡಳಿತ ನಡೆಸಲು ಹವಣಿಸುತ್ತಿದ್ದಾರೆ

೬ ಈ ಪ್ರದೇಶಗಳಲ್ಲಿ ಇಬ್ರಾಹಿಂ ಗುಂಪಿನವರು ಹೆಚ್ಚಿನ ಜನರನ್ನು ತಮ್ಮ ಕ್ರಾಂತಿಕಾರಕ ಗುಂಪಿಗೆ ಸೇರಿಸಿಕೊಳ್ಳುತ್ತಿದ್ದಾರೆ ಕೆಲವೆಡೆಗಳಲ್ಲಿ ಈ ಗುಂಪಿನವರು 'ಆಜಾದ್ ಸರ್ಕಾರದ' ಮೇಲೆ ನೇರವಾದ ಕ್ರಾಂತಿ ಹೂಡಿದ್ದಾರೆಂದು ವರದಿ ತಿಳಿಸಿದೆ

ರೈಲ್ವೇ ಸ್ಟೇಷನ್ನಿನಲ್ಲಿ ೧೫ ಸಹಸ್ರ ರೂಪಾಯಿಗಳ ದರೋಡೆ

ಪಾಕೀಸ್ತಾನದ ಹೈದರಾಬಾದ್ (ಸಿಂಧ್) ರೈಲ್ವೇ ನಿಲ್ದಾಣಕ್ಕೆ ಇಬ್ಬರು ಢಕಾಯಿತಿಗಳು ನುಗ್ಗಿ ಒಂದೂಕಾಸನ್ನು ತೋರಿಸಿ ರೈಲ್ವೆ ಸ್ಟೇಷನ್‌ಮಾಸ್ಟರ್ ಮತ್ತು ಅವರ ಕೈಕೆಳಗಿನ ಕೆಲಸಗಾರರನ್ನು ಹೆದರಿಸಿ ಕಬ್ಬಿಣದ ಪೆಟ್ಟಿಗೆಯ ಬೀಗದಕೈಯನ್ನು ಪಡೆದು ಹಣವೆಂಟು ಸಹಸ್ರ ರೂ ಗಳದು ಹಣವನ್ನು ಅಪಹರಿಸಿಕೊಂಡು ಹೋದ ಪ್ರಸಂಗವೊಂದು ವರದಿಯಾಗಿದೆ ಹಣ ಅಪಹರಿಸಿಕೊಂಡು ಹೋದ ಇಬ್ಬರು ಢಕಾಯಿತಿಗಳಲ್ಲಿ ಒಬ್ಬನನ್ನು ಪೋಲೀಸರು ಹಿಂಬಾಲಿಸಿ ಹಿಡಿದು ಹಾಕಿದ್ದಾರೆ

ಮ್ಯಾಜಿಸ್ಟ್ರೇಟರ ಮೇಲೆ ಖೈದಿ ಗುಂಡು ಹಾರಿಸಿದ

ಹಿಂದೆ ಹನ್ನೊಂದುಬಾರಿ ಶಿಕ್ಷೆ ಅನುಭವಿಸಿ ಮತ್ತೆ ವಿಚಾರಣೆಗೆ ಬಂದಿದ್ದ ಕಳೆಯ ಖೈದಿಯೊಬ್ಬನ ವಿಚಾರಣೆ ನಡೆಯುತ್ತಿದ್ದಾಗ ಖೈದಿ ರಿವಾಲ್ವಾರಿನಿಂದ ಮ್ಯಾಜಿಸ್ಟ್ರೇಟರ ಮೇಲೆ ಎರಡು ಬಾರಿ ಗುಂಡು ಹಾರಿಸಿದ ಆದರೆ ದೈವವಶಾತ್ ಗುಂಡಿನೇಟು ಗುರಿ ತಪ್ಪಿತು ಕೂಡಲೇ ಪೋಲೀಸರು ಅತ್ಯಂತ ತ್ವರಿತದಿಂದ ಖೈದಿಯನ್ನು ಬಂಧಿಸಿ ಹೊರಗೆ ಕರೆದೊಯ್ದರು

ಜೂಬರ್‌ಹಾಯ್ ಅಕ್ತರ್ಸಿ ಎಂಬ ಖೈದಿಯನ್ನು ಪೋಲೀಸರು ಕಳೆದವಾರ ದಸ್ತಗಿರಿ ಮಾಡಿ ವಿಚಾರಣೆಗೆ ನ್ಯಾಯಾಲಯಕ್ಕೆ ಕರೆತಂದರು ನ್ಯಾಯಾಧೀಶರು ಖೈದಿಯನ್ನು ಒಂದು ವರ್ಷ ಒಳ್ಳೆ ನಡತೆಯಿಟ್ಟುಕೊಳ್ಳುವಂತಾ ಬಾಂಡ್ ಬರೆದುಕೊಡು ಎಂದು ಕೇಳಿದಾಗ ಈ ಕೃತ್ಯ ನಡೆಯಿತು.

ಕೈರೋ ಬಳಿ ಭಾರಿ ವಿಮಾನ ಅಪಘಾತ

೫೫ ಮಂದಿ ಮರಣ

ಕೈರೋದಿಂದ ರೋಂ ನಗರಕ್ಕೆ ಹೊರಟಿದ್ದ ಟ್ರಾನ್ಸ್ ವರ್ಲ್ಡ್ ಏರ್ ಲೈನ್ಸ್ ಕಂಪೆನಿಯ ಸ್ಟಾರ್ ಆಫ್ ಮೆರಿಲ್ಯಾಂಡ್ ಎಂಬ ವಿಮಾನವು ಕಳದ ಬಿಗನೆಯ ತಾರೀಕು ರಾತ್ರಿ ಕೈರೋ ಮರುಭೂಮಿಯ ಬಳಿ ಅಪಘಾತಕ್ಕೀಡಾಗಿ ವಿಮಾನದಲ್ಲಿದ್ದ ೫೫ ಮಂದಿ ಮೃತಪಟ್ಟರು

ಮೃತಪಟ್ಟವರಲ್ಲಿ ೮ ಮಂದಿ ಭಾರತೀಯರು ಇವರಲ್ಲಿ ೫ ಮಂದಿ ಅಮೆರಿಕಕ್ಕೂ ಉಳಿದ ಮೂವರು ಯೂರೋಪಿಗೂ ಹೊರಟಿದ್ದರು ಕೆಮಲಿಯಾ ಕೊಹೆನ್ ಎಂಬ ಏರ್ ಈಜಿಪ್ಟಿನ ಜಲಚಿತ್ರ ತಾರೆ ಉಳಿದವರಲ್ಲಿ ವಿಶ್ವ ಸಂಸ್ಥೆಗೆ ಹೋಗುತ್ತಿದ್ದ ನಿಯೋಗದವರ ಅಮೆರಿಕ, ಸ್ವಿಸ್ ಮತ್ತು ಇಟಾಲಿಯನ್ ವರ್ತಕರು

ಮೃತರ ದೇಹಗಳನ್ನೆಲ್ಲಾ ಕೈರೋಕ್ಕೆ ಸಾಗಿಸಲಾಯಿತು ವಿಮಾನವು ಕೈರೋದ ಫರೂಕ್ ವಿಮಾನ ನಿಲ್ದಾಣ ಬಿಟ್ಟು ರೋಂ ನಗರವನ್ನು ಸೇರಬೇಕಾಗಿತ್ತು ವಿಮಾನ ನಿಲ್ದಾಣವನ್ನು ಬಿಟ್ಟು ಕೇವಲ ೧೭ ಮೈಲಿ ಮಾತ್ರ ಪ್ರಯಾಣಮಾಡಿತ್ತು ಕೈರೋಕ್ಕೆ ಪಶ್ಚಿಮ ಕೈರುವ ಮರುಭೂಮಿಯ ವಾಡಿನಟ್ರೆನ್ ಎಂಬ ಹಳ್ಳಿ ಬಳಿ ವಿಮಾನ ಎಂಜನ್‌ಗೆ ತೊಂದರೆಯುಂಟುಗಿ ಅಪಘಾತಕ್ಕೀಡಾಗಿ ವಿಮಾನಕ್ಕೆ ಬೆಂಕಿ ತಗಲಿ ಸಂಪೂರ್ಣ ಸುಟ್ಟುಜಿಗಾಗುವ್ವಾಗಿ ಪರಿಣಮಿಸಿದೆ

ಈ ವಿಮಾನದಲ್ಲಿ ಒಟ್ಟು ೪೫ ಮಂದಿ ಪ್ರಯಾಣಿಕರು ವಿಮಾನಕ್ಕೆ ಸಂಬಂಧಪಟ್ಟವರೂ ಸೇರಿ ಒಟ್ಟು ೫೫ ಜನರಿದ್ದರು ಇವರಲ್ಲಿ ಯಾರೂ ಉಳಿದಿಲ್ಲ

ನ್ಯಾಯಪಟ್ಟಿಗೆ ೮ ಮಂದಿ ಭಾರತೀಯರ ಹೆಸರುಗಳು

ಶ್ರೀಗಳಾದ ದಿನಕರ ಕೌಸಿಕ್ ಮಹಾರಾಜ್ ಸಿಂಗ್ ಪಟ್ಟಿ ಬಿ ಎಸ್ ಶರ್ಮಾಜ್ಞವೇ ಅರವಿಂದ ಬೋಗಿಲಾಲ್ ಎಂ ಪಿ ಜೋಷಿ ಪಲ್ಲಾಸುಬ್ಬಯ್ಯ ಶಿಳ್ಳೆ ಪರಂಜಪೆ ಮಾಧವಮುಕುಂದ ಕರಣಿಕ್ ಮುಧು ಸಂದನ್, ಕೊನೆಯ ಮೂವರಲ್ಲಿ ಮೊದಲನೆಯವರು ವಿದ್ಯಾಧಿ ಇನ್ನುಳಿದ ಬರು ವಿಶ್ವಸಂಸ್ಥೆಯ ನೌಕರರಂತೆ ಶ್ರೀ ದಿನಕರ್ ಕೌಷಿಕ್‌ರವರು ಬೊಂಬಾಯಿ ಸರಕಾರದ ಲೈಗಾರಿಕಾ ಡೈರೆಕ್ಟರ್ ಎಂದು ಗೊತ್ತಾಗಿದೆ

೪೪ ಲಕ್ಷ ಮಂದಿ ಹಿಂದೂ ನಿರಾಶ್ರಿತರು

ಭಾರತವು ಇಬ್ಬಾಗವಾದಮೇಲೆ ೯ ವರ್ಷಗಳ ಪಶ್ಚಿಮ ಬಂಗಾಳದ ೩೪ ಲಕ್ಷ ಮಂದಿ ಹಿಂದೂ ನಿರಾಶ್ರಿತರು ಸ್ವಂತ ಒಂಗಾಳಕ್ಕೆ ಬಂದು ನೆಲೆಸಿದ್ದಾರೆಂದು ಅಧಿಕೃತ ವರದಿ ತಿಳಿಸಿದ

ಕೊರಿಯಾಕ್ಕೆ ಹೊರಟಿದ್ದ ಹಡಗು ಮುಳುಗಿತು

ಕೊರಿಯಾ ಯುದ್ಧರಂಗಕ್ಕೆ ಸೈದ್ಧಸಹಾಯ ನೀಡಲು ವೈದ್ಯಕೀಯ ಸಾಮಗ್ರಿಗಳೊಡನೆ ಹೊರಟಿದ್ದ ಅಮೆರಿಕನ್ ಆಸ್ಪತ್ರೆ ಹಡಗು ಕಳದ ಬುಕ್ರವಾರ ಕೊರಿಯಾ ತಲಪುವ ಮುನ್ನವೇ ಜಾಪಿಯಲ್ಲಿ ಮುಳುಗಿಹೋಯಿತು ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದವರ ಪೈಕಿ ೧೫ ಮಂದಿ ನೀರಿನಲ್ಲಿ ಮುಳುಗಿ ಪ್ರಾಣಬಿಟ್ಟಿದ್ದಾರೆ ೫ ಮಂದಿ ಈ ವರೆವಿಗೂ ಪತ್ತೆಯಿಲ್ಲ ಒಟ್ಟು ೫೦೨ ಮಂದಿ ಅತ್ಯಂತ ಕಷ್ಟದಿಂದ ಬದುಕಿ ಬಂದಿದ್ದಾರೆ ಎಂದು ಅಮೆರಿಕನ್ ನೌಕಾಪಡೆಯಿಂದ ಹೊರಟ ಪ್ರಕಟಣೆ ತಿಳಿಸಿದೆ

ಅಮೆರಿಕನರಿಗೆ ಎಚ್ಚರಿಕೆ

ಕೊರಿಯಾ ಕದನದಲ್ಲಿ ಭಾಗವಹಿಸಿರುವ ಅಮೆರಿಕನ್ ಸೈನಿಕರಿಗೆ ಒಚಿತ್ಯೊಚ್ಚರಿಕೆ ಇತ್ತುವ ಎಂಚೂರಿಯಾ ಗಡಿಯನ್ನು ಯಾವುದೇ ಕಾರಣದಿಂದಾಗಲೀ ದಾಟ ಕೂಡದೆಂದು ಅಮೆರಿಕನ್ ಸರಕಾರ ತಿಳಿಸಿದೆ

ಸ್ವಾತಂತ್ರ್ಯದಿನೋತ್ಸವ

ತೌಡೂರು (ಹರಪನಹಳ್ಳಿ) ೧೫ ೮-೫೦ ರಲ್ಲಿ ಶಾಲಾ ಮಕ್ಕಳಿಂದ ಪ್ರಭಾತಫೇರಿ ಊರಲ್ಲಿ ನಡೆಯಿತು ಮಧ್ಯಾಹ್ನ ೧ ಘಂಟೆಗೆ ಶ್ರೀ ಆ ಮಾ ಕೊಟ್ರಯ್ಯನವರಿಂದ ಧ್ವಜಾರೋಹಣವಾಯಿತು ಸಾಯಂಕಾಲ ೪ ಘಂಟೆಗೆ ಶ್ರೀ ಕೆ ಯಸ್ ಚನ್ನಬಸಪ್ಪ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು "ಇಂದಿನ ಸುದಿನ" ಎಂಬ ವಿಷಯ ಕುರಿತು ಶ್ರೀ ಕೆ ಕೆಂಚಪ್ಪನವರು ಮತ್ತು ಕೆ ಜೀವಣ್ಣನವರು ಭಾಷಣಮಾಡಿದರು ಅಧ್ಯಕ್ಷರ ಕೊನೆಯ ಭಾಷಣವಾದಮೇಲೆ ಅಧ್ಯಕ್ಷರಿಂದಲೇ ಧ್ವಜವನ್ನು ಇಳಿಸಲಾಯಿತು ಕಾರ್ಯದರ್ಶಿಗಳು ಆಯವ್ಯಯವನ್ನು ಓದಿದರು ಮೇಲೆ ಮಂಗಲದೊಡನೆ ಸಭೆಯು ಮುಕ್ತಾಯವಾಯಿತು ತೌಡೂರು ಪಂಚಾಯತಿ ಬೋರ್ಡಿನವರು ನೆರೆದಿದ್ದವರಿಗೆಲ್ಲ ಫಲಹಾರ ಹಂಚಿದರು

ಟಿ ಯಂ ಜಯದೇವಯ್ಯ
ಕಾರ್ಯದರ್ಶಿ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನೆಗಳು	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)	೩ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಬಸವಾದಿಶಿವಶತಕ್ಕದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೩ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪಶಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (೨ನೆಯ ಆವೃತ್ತಿ ಸಂಸ್ಕೃತ)	೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರ್ಣಯ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಹ್ನೀಕ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪ್ರಭಾಸಾ (ಸಂಸ್ಕೃತ)	೮ ಆಣೆ
ವೀರಶೈವಮನುಷಾತ್ಮರು	೮ ಆಣೆ
ಬಸವಧ್ಯಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಆಗಮಸರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲಗು)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಸ್ತುತೀನತ್ವ	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ವೀರೇಕಮುಕ್ತಾವಳಿ	೧ ರೂ
ವಿಚಾರಸಾರಾವಳಿ	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಗುವ ೩ನೆಯ ಆವೃತ್ತಿ)	೧೫ ರೂ
ಶ್ರೀಕರಭಾಷ್ಯಂ (ಚಿತುಸ್ಸೂತ್ರೀ)	೨ ರೂ
ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಪಟ್ಟಿದೆ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೪ ರೂ
A brief life-sketch of Pandit Sri Kashinatha Shastrya (English)	4 A
The Philosophical Aspect of Viraasaivism (English)	8 A
Speeches by Pandit Shri Kashinatha Shastrya (English)	12 A
ಶಿವಾಚಾರಲಕ್ಷದ್ವಿಕಾ (ಸಂಸ್ಕೃತ)	೩
ವೀರಶೈವರತ್ನ (ಮರಾಠಿ)	೨
ಪಶುಪತಾರಾಧನೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೨
ಸಂಧಿಕೌಮುದೀಕಾರಿಕಾ (ಸಂಸ್ಕೃತ)	೨

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

Edited Printed and Published by Bruhanmath Mahadevaiah at Shri Panchacharya Electric Press, Savan Rao Road Mysore

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಷ್ಟಪಂಚಜಾತಶಷಿಕರ್ । ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶಕ್ತಿಪಂಚಲಿಂಗೋದ್ಭವರ್ ॥
ಪಂಚಾಚಾರಪ್ರಿಯಾಮುಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರುತ್ರಿಮರವರ್ ಪಾಲಿಪ್ಪುದೀ ಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಶಾಖಾಧ್ಯಕ್ಷರಾದ ವೇದಾ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬೃಗಿ ಮಹಾದೇವಯ್ಯಸವರು ವಿ ಪಿ ಖರ್ಚು ಸೇರಿ ೩ ರೂ ೪ ಅಣೆ.

ಸಂಪುಟ ೩೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಸೆಪ್ಟೆಂಬರ್ ೧೯೫೦ [ಸಂಚಿಕೆ ೨೧

ಮೈಸೂರು ಮೆಡಿಕಲ್ ಕಾಲೇಜಿನ ರಜತಮಹೋತ್ಸವದ ಸಮಾರಂಭದಲ್ಲಿ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ ಭಾಷಣ

ವೈಭವದ ಸಮಾರಂಭ

ಮೈಸೂರು ಮೆಡಿಕಲ್ ಕಾಲೇಜಿನ ರಜತಮಹೋತ್ಸವದ ಆರಂಭ ಸಮಾರಂಭವನ್ನು ದಸರಾ ವಸ್ತು ಪ್ರದರ್ಶನಾಲಯದಲ್ಲಿ ಕಳೆದ ೮ ನೇ ತಾ॥ ಬೆಳಿಗ್ಗೆ ೧೦ ಗಂಟೆಗೆ ಶ್ರೀಮನ್ಮಹಾರಾಜರವರು ನೆರವೇರಿಸಿದರು

ಪ್ರಾರಂಭದಲ್ಲಿ ಸ್ವಾಗತಸರಣವಾದನಂತರ ಕಾಲೇಜಿನ ಪ್ರಿನ್ಸಿಪಾಲರೂ ಮತ್ತು ರಜತಮಹೋತ್ಸವ ಸಮಿತಿಯ ಅಧ್ಯಕ್ಷರೂ ಆದ ಡಾ॥ ಆಪ್ಪಾಜಿಯವರು ಕಾಲೇಜಿನ ಇತಿಹಾಸವನ್ನು ವಿವರಿಸಿ, ಶ್ರೀಮನ್ಮಹಾರಾಜರನಿಗೆ ಬಿನ್ನ ವತ್ತಳೆಯನ್ನು ಬಿಸಿದರು

ಶ್ರೀಮನ್ಮಹಾರಾಜರನರ ಭಾಷಣ

'ಮೈಸೂರು ಮೆಡಿಕಲ್ ಕಾಲೇಜಿನ ರಜತಮಹೋತ್ಸವದ ಆರಂಭೋತ್ಸವವನ್ನು ನೆರವೇರಿಸಲು ನನಗೆ ವಿಶಿಷ್ಟ ಹರ್ಷವುಂಟಾಗಿದೆ ಕಾಲೇಜಿನ ಪ್ರಿನ್ಸಿಪಾಲರ ವರದಿಯಿಂದ ಕಳೆದ ೩೫ ವರ್ಷಗಳಲ್ಲಿ ಈ ಸಂಸ್ಥೆಯು ಸಾಧಿಸಿರುವ ಪ್ರಗತಿಯು ಸ್ಪಷ್ಟವಾಗಿ ಗೋಚರವಾಗುತ್ತದೆ ಮೈಸೂರು ವಿಶ್ವವಿದ್ಯಾನಿಲಯದ ಮೆಡಿಕಲ್ ವಿದ್ಯಾರ್ಥಿಗಳಿಗೆ ಅಖಿಲಭಾರತ ಮೆಡಿಕಲ್ ಕೌನ್ಸಿಲ್‌ನವರು ಅಂಗೀಕಾರವಿತ್ತಿರುವುದು ಈ ಸಂಸ್ಥೆಯ ಚರಿತ್ರೆಯಲ್ಲಿ ಮಹತ್ವಪೂರ್ಣವಾದ ವಿಷಯ ನಿಜವಾಗಿಯೂ ಹೆಮ್ಮೆ ಪಡುವ ವಿಚಾರ ಈ ಸಂತೋಷ ಸಮಯದಲ್ಲಿ ಈ ಸಂಸ್ಥೆಯ ಪುರೋಭಿವೃದ್ಧಿಗಾಗಿ ದುಡಿದ ಮಹಾಶಯರನ್ನು ಕೃತಜ್ಞತೆಯಿಂದ ಸ್ಮರಿಸುವುದು ಅವಶ್ಯಕರ್ತವ್ಯ

ಉಜ್ವಲ ಭವಿಷ್ಯ

ಈ ಸಂಸ್ಥೆಯಲ್ಲಿ ವ್ಯಾಸಂಗಮಾಡುತ್ತಿರುವವರ ಸಂಖ್ಯೆ ಪ್ರತಿವರ್ಷವೂ ಹೆಚ್ಚುತ್ತಿದೆಯೆಂಬ ವಿಚಾರ ಕೇಳಿ ಸಂತೋಷ ಉಂಟಾಗಿದೆ ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಮಂದಿ ವೈದ್ಯರು ಬೇಕಾಗಿದ್ದಾರೆ ಮೆಡಿಕಲ್ ಪದವೀಧರರಿಗೆ ವಿಶಾಲ ಸೇವಾವಕಾಶವಿದೆ ಮೈಸೂರು ಮೆಡಿಕಲ್ ಕಾಲೇಜಿಗೆ ಉಜ್ವಲ ಭವಿಷ್ಯವಿದೆಯೆಂಬುದು ಇದರಿಂದ ವ್ಯಕ್ತವಾಗುತ್ತದೆ

ಸಂತೋಷಕ್ಕೆಗೆ ಪ್ರೋತ್ಸಾಹ

ರಜತಮಹೋತ್ಸವದ ಸವಿ ನೆನಪಿನಾಗಿ ಪ್ರತಿ ವರ್ಷವೂ ಒಂದು ಬಹುಮಾನ ಕೊಡುವ ವ್ಯವಸ್ಥೆ ಮಾಡಬೇಕೆಂಬ ಸಲಹೆಯನ್ನು ನಾವು ಸ್ವಾಗತಿಸುತ್ತೇವೆ ಸಂಶೋಧನೆಗೆ ಹೆಚ್ಚು ಪ್ರೋತ್ಸಾಹ ಮತ್ತು ಅವಕಾಶ ಲಭ್ಯಿಸಲು ಸೂಕ್ತ ಕ್ರಮಗಳನ್ನು ಕೈಗೆಳ್ಳುವುದೂ ಅಗತ್ಯವಾಗಿದೆಯೆಂದು ಈ ಸಂದರ್ಭದಲ್ಲಿ ಸೂಚಿಸಲು ಇಚ್ಛಿಸುತ್ತೇನೆ ನಮ್ಮ ದೇಶದ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳಲ್ಲಿ ಅಮೂಲ್ಯ ಸಂಶೋಧನೆ ನಡೆಸಿ ಜಗದ್ವಿಖ್ಯಾತಿ ಗಳಿಸಿದೆ ಆದರೆ ವೈದ್ಯವಿಭಾಗದಲ್ಲಿ ಮಾತ್ರ ನಾವು ಹಲವು ಪಾಶ್ಚಾತ್ಯರಾಷ್ಟ್ರಗಳಿಗಿಂತ ಹಿಂದುಳಿದಿದ್ದೇವೆ

ವೈದ್ಯಶಾಸ್ತ್ರದ ಗುರಿ

ವ್ಯಾಧಿಯನ್ನು ನಿರ್ಮೂಲಿಸುವುದು ಮಾತ್ರವಲ್ಲದೆ ವ್ಯಾಧಿ ಬರದಂತೆ ತಡೆಗಟ್ಟುವುದೂ ವೈದ್ಯಶಾಸ್ತ್ರದ ಗುರಿಯೆಂಬುದನ್ನು ಮರೆಯದಿರೋಣ ವ್ಯಕ್ತಿಯ ಮತ್ತು ಸಮಾಜದ ಆರೋಗ್ಯಭಾಗ್ಯವನ್ನು ಕಾಪಾಡುವುದೇ ಅಧುನಿಕ ವೈದ್ಯಪದ್ಧತಿಯ ಗುರಿ ಇತ್ತೀಚೆಗೆ ವೈದ್ಯ ಪದ್ಧತಿಯಲ್ಲಿ ನಡೆದಿರುವ ಹೊಸ ಹೊಸ ವಿಧಾನಗಳಿಂದ ಸಾರ್ವಜನಿಕ ಆರೋಗ್ಯ ಪರಿಸ್ಥಿತಿ ಮೇಲ್ಮಟ್ಟಕ್ಕೆರಿದೆ ಈ ವಿಷಯದಲ್ಲಿ ಪ್ರಪಂಚ ಆರೋಗ್ಯಸಂಸ್ಥೆಯ ಕೃಷಿ ಪ್ರಶಂಸನೀಯವಾಗಿದೆ

ಆಯುಃಪ್ರಮಾಣ

ಯೂರೋಪಿನಲ್ಲಿ ಜನರ ಆಯುಃಪ್ರಮಾಣವನ್ನು ಹೆಚ್ಚಿಸಲು ಅನೇಕ ವಿಜ್ಞಾನಿಗಳು ಹಗಲಿರುಳು ದುಡಿದ ಫಲವಾಗಿ ಅವರ ಪ್ರಯತ್ನದ ಫಲವಾಗಿ ೧೯೩೦ ನೆಯ ಇಸವಿಯಲ್ಲಿ ಸರಾಸರಿ ಆಯುಃಪ್ರಮಾಣ ೬೨ ವರ್ಷ ಕ್ಕೇರಿದೆ ಅದನ್ನು ೭೦ ವರ್ಷಕ್ಕೇರಿಸಲು ಪ್ರಯತ್ನ ನಡೆಯುತ್ತಿದೆ ಆದರೆ ಭಾರತದಲ್ಲಿ ಮಾತ್ರ ಸರಾಸರಿ ಆಯು ಪ್ರಮಾಣ ಕೇವಲ ೨೩ ವರ್ಷ ಇದು ಬಹಳ ಕೋಚನೀಯ ಮೈಸೂರಿನಲ್ಲಿ ಸರಾಸರಿ ಆಯುಃ ಪ್ರಮಾಣ ೩೭ ವರ್ಷ ಈ ಆಯುಃಪ್ರಮಾಣವನ್ನು ಯೂರೋಪ್ ಪ್ರಮಾಣದೊಡನೆ ಸರಿದೂಗುವಂತೆ ಮಾಡಬೇಕಾದ ಕರ್ತವ್ಯ ವೈದ್ಯರಿಗೆ ಸೇರಿದೆ

ರೋಗಿಗಳೊಡನೆ ಸಹನೆ

ಮಾನವನ ಸಹಜ ಸಿದ್ಧವಾದ ಸಗುಣಗಳನ್ನು ಪಡೆಯಲು ನೀವು ಪ್ರಯತ್ನಪಡಬೇಕೆಂದು ಎಷ್ಟೋ ಸಲ ಮನವಿಮಾಡಲಾಗಿದೆ ರೋಗಿಗಳು ಕೋಪೋದ್ರೇಕದಿಂದ ಅಂದ ಮಾತನ್ನು ತಾಳ್ಮೆಯಿಂದಲೂ ಮತ್ತು ಶಾಂತಿಯಿಂದಲೂ ಸಹಿಸಿಕೊಳ್ಳಬೇಕು ಇದಕ್ಕೆ ನಿಕ್ಕಲ ನಾದ ಮನಸ್ಸು ಅಗತ್ಯ

ವ್ಯಾಧಿಗೆ ತಕ್ಕ ಚಿಕಿತ್ಸೆ

ರೋಗಿಯ ವ್ಯಾಧಿ ಲಕ್ಷಣವನ್ನು ಸರಿಯಾಗಿ ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನು ಮಾಡುವುದನ್ನು ಕಲಿತುಕೊಳ್ಳಬೇಕು ಅದೊಂದು ಪ್ರಕಂಸನೀಯವಾದ ಅರ್ಹತಾ ದೂಷಣ ಭೂಷಣಗಳಿಗೆ ಮನಸೆ ಕೊಡದೆ ನೀವು ಸೇವಾ ತತ್ಪರರಾಗಿ ವರ್ತಿಸಿ, ರೋಗಿಗಳ ಸೇವೆಯಲ್ಲಿಯೇ ಪರಮಾತ್ಮನ ಸೇವೆ ಆಡಗಿದೆ ಎಂದು ತಿಳಿಸ ಮಾತಿ

ಮಾನ್ಯ ಮಹಿಳೆಯರೆ ಮತ್ತು ಮಹಶಯರೆ, ಈಗಲೂ ಇನ್ನು ಮುಂದೆಯೂ ಈ ಸಂಸ್ಥೆ ತನ್ನ ಆಕರ ತ್ರರಗಳನ್ನು ಸಾರ್ಥಕಪಡಿಸಿಕೊಳ್ಳಲು ಸಂಸ್ಥೆಯ ಕೀರ್ತಿ ದಶದಿಕ್ಕುಗಳಿಗೆ ವ್ಯಾಪಿಸಲಿ ಮೈಸೂರು ವೈದ್ಯಕಲಾ ಶಾಲೆಯ ರಜತಮಹೋತ್ಸವವನ್ನು ನೆರವೇರಿಸಲು ತುಂಬಾ ಆನಂದಪಡುತ್ತೇವೆ"

ಸಂಸ್ಥಾನಕ್ಕೆ ೫ ಸಹಸ್ರ ಟನ್ ಮೈದಾಹಿಟ್ಟು

ಅಟ್ಲಾಂಟಿಕ್ ಕ್ಯಾಪ್ಸನ್ ಎಂಬ ಹಡಗಿನಲ್ಲಿ ಅಮೆರಿಕದಿಂದ ಮದರಾಸಿಗೆ ಬಂದಿರುವ ೧೨೫೫ ಟನ್ ಮೈದಾಹಿಟ್ಟಿನಲ್ಲಿ ೫ ಸಹಸ್ರ ಟನ್‌ಗಳನ್ನು ಮೈಸೂರಿಗೆ ಕೊಡಲಾಗಿದೆ

೭೮ ಸಹಸ್ರ ಮೂಟೆ ಗೋಧಿ ಕೊಚ್ಚಿ ಹೋಗಿದೆ

ಅವ್ಯಕಸರದ ಕರನ್‌ಕಾರ್ನ್ ಎಂಬಲ್ಲಿ ಸರ್ಕಾರದವರು ದಾಸ್ತಾನು ಮಾಡಿದ್ದ ೭೮ ಸಹಸ್ರ ಮೂಟೆಗಳ ಗೋಧಿಯು ಇತ್ತೀಚಿನ ಪ್ರವಾಹಗಳಿಂದ ಕೊಚ್ಚಿ ಹೋಗಿದೆ ಎಂದು ಸರಬರಾಜು ಇಲಾಖಾ ಸಚಿವ ಸಾ॥ ಇಸಾರ್‌ಸಿಂಗ್ ಮಜಯ್‌ರವರು ಪತ್ರಿಕಾ ಪ್ರತಿನಿಧಿಗಳನ್ನು ಭೇಟಿ ಮಾಡಿದಾಗ ತಿಳಿಸಿದ್ದಾರೆ

ಸ್ವೀಕಾರ

ಧಾರವಾಡ ಡಿ॥ ಕುಂದಗೋಳ ಮಷಾಲ ವೈಕಿ ಶಿಕ್ಷಕರಿ ಸ್ವಾನಂದ ವೇ॥ ಮಲ್ಲಯ್ಯ ಮರೆಯ್ಯಾ ಮರದ ಇವರು ತಮ್ಮ ಚಿ॥ ಚಂದ್ರಶೇಖರಯ್ಯನ ದೀಕ್ಷಾಕಾರ್ಯವನ್ನು ಇವೇ ಶ್ರಾವಣ ಶು॥ ೩ ಬುಧವಾರ ದಿವಸ ಕುಂದಗೋಳ ಹಿರೇಮಠದ ಪಟ್ಟದ ಸ್ವಾಮಿಗಳವರ ಹಸ್ತದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಧಾರವಾಡ ಡಿ॥ ಲಕ್ಷ್ಮೇಶ್ವರ ಗ್ರಾಮದ ವೇ॥ ಫಕೀರಯ್ಯನವರು ಪುರಾಣಿಕ ಮಠ ಇವರ ತಂದೆಯವರಾದ ವೇ॥ ಮಹಾಲಿಂಗಯ್ಯನವರು ವಯೋವೃದ್ಧರೂ ಧರ್ಮ ನಿಷ್ಠರೂ ಆಗಿದ್ದು ಸದರಿಯವರು ತಾ॥ ೬-೭-೫೦ನೇ ಗುರುವಾರ ದಿವಸ ತಿವಾಧೀನರಾದ ಸವ ಯದಲ್ಲಿ ಪ್ರಭಾಪೋಷಣಾರ್ಥವಾಗಿ ಆರ್ಪಿಸಿದ 2 ರೂ ಗಳು ವೇ॥ ತಿವಮೂರ್ತಯ್ಯನವರು ಗಡ್ಡದ್ದೇವರಮಠ ಇವರ ದ್ವಾರಾ ತಲ್ಪಿರುತ್ತದೆ

ಬೆಳಗಾಂವ ಕಹಪೂರ (ಕೋಗಿಲ್ಲಿ) ವಾಸಿಗಳಾದ ಶ್ರೀ ನೀಲಕಂಠಪ್ಪ ವೀರಭಸಪ್ಪ ಅಣ್ಣಾಶೆಟ್ಟಿ ಇವರು ತಾ॥ ೧೯-೮ ೫೦ ನೇ ಶನಿವಾರ ದಿವಸ ತಿವಾಧೀನರಾದ ಸಮಯದಲ್ಲಿ ಇವರ ತಮ್ಮಂದಿರಾದ ಶ್ರೀ ವೈಜಪ್ಪ ಇವರು ಪ್ರಭಾಪೋಷಣಾರ್ಥವಾಗಿ ಆರ್ಪಿಸಿದ 1-4-0 ರೂ ಗಳು ಸಿ. ಜೆ ಶುಬಪೆಟ್ಟ ಸಜ್ಜನ ಕೋಗಿಲ್ಲಿ ಇವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಪಾರ್ಥಿಸುತ್ತೇವೆ.

ಪಂಚಾಚಾರ್ಯಪ್ರಭಾ

೧೯೫೦ ನೆ ಸೆಪ್ಟೆಂಬರ್ ತಾ॥ ೧೧ನೆಯ ಸೋಮವಾರ

ಸಿದ್ಧಾಂತಶಿಖಾಮಣಿ

ಶ್ರೀಜಗದ್ಗುರು ಪಂಚಾಚಾರ್ಯರ ಪರಿಶಿನ ಅಪ್ಪ ಕೆಯಮೇರೆಗೆ ಚಕುರ್ಯುಗಗಳ್ಲಿರೂಂ ಜ್ಯೋತಿಲಿಂಗಗಳಿಂದವತರಿಸಿ ವೀರಶೈವಮತವನ್ನು ಸ್ಥಾಪಿಸಿರುವ ವಿಷಯವು ಸುಪ್ರಸಿದ್ಧವಷ್ಟೆ! ಈ ಪೂಜ್ಯಪಾದರು ನಿಗಮಾಗಮಪುರಸ್ಕಾರವಾದ ಶಿವಾದ್ವೈತವನ್ನು ಸರ್ವತ್ರ ನಲಿಗೊಳಿಸಿದರು ಶಿವಜೀವೈಕ್ಯರೂಪ ಲಿಂಗಾಂಗಸಾಮರಸ್ಯವನ್ನು ಪ್ರತಿಪಾದಿಸುವದೇ ಈ ಸಿದ್ಧಾಂತದ ರಹಸ್ಯವು ಮುಕ್ತಿಯೆಂದಿರನ್ನು ಪ್ರವೇಶಿಸುವದಕ್ಕಾಗಿ ಈ ಸಿದ್ಧಾಂತವಲ್ಲಿ ಜಗದ್ಗುರುಗಳಿಂದ ಭಕ್ತ, ಮಹೇಶ, ಪ್ರಸಾದಿ ಪ್ರಾಣಲಿಂಗಿ ಶರಣ, ಐಕ್ಯ ಎಂಬ ಆರು ಸೋಪಾನರೂಪ ಸ್ಥಲಗಳು ರಚಿಸಲ್ಪಟ್ಟಿರುವವು ಇನೇ ಷಟಿಸ್ಥಲಗಳೆಂದು ಪ್ರಸಿದ್ಧವಾಗಿರವವು ಈ ಷಟಿಸ್ಥಲಜ್ಞಾನವೇ ಮೋಕ್ಷಕ್ಕೆ ಮೂಲರೂಪಸಾಧನವಾಗಿರುವದು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅನಸ್ಯ ಮಹರ್ಷಿಗಳಿಗೆ ಈ ಷಟಿಸ್ಥಲಸಿದ್ಧಾಂತವನ್ನು ಪರೀಕ್ಷಿಸಿ ಆ ಮಹರ್ಷಿಪುಂಗವರನ್ನು ಮುಕ್ತರನ್ನಾಗಿ ಮಾಡಿದರು ಈ ಉಪದೇಶದ ಸಂಗ್ರಹವೇ ' ಸಿದ್ಧಾಂತಶಿಖಾಮಣಿ' ಎಂಬ ಗ್ರಂಥವಾಗಿ ರಚಿಸಲ್ಪಟ್ಟಿದೆ ವೀರಶೈವ ಸಿದ್ಧಾಂತದಲ್ಲಿ ಪರಬ್ರಹ್ಮವು ಸ್ಥಲಲಕ್ಷಣಬದ್ಧವಿಂದ ಪ್ರತಿಪಾದಿತವಾಗಿರುವದು ಈ ಸ್ಥಲವು ಅಂಗಸ್ಥಲ ಲಿಂಗಸ್ಥಲ ಭೇದದಿಂದ ಎರಡು ಪ್ರಕಾರವಾಗಿದ್ದು, ಅಂಗಸ್ಥಲವು ಆಳ ಪ್ರಕಾರವಾಗಿಯೂ ಲಿಂಗಸ್ಥಲವು ೫ ಪ್ರಕಾರವಾಗಿಯೂ ವಿಭಾಗವನ್ನು ಹೊಂದಿ ಒಟ್ಟು ನೂರೊಂದು ಸ್ಥಲಗಳಾಗಿರುವವು ಈ ನೂರೊಂದು ಸ್ಥಲಗಳಲ್ಲಿ ಪ್ರಮಾಣ ವಿಚಾರ, ಪ್ರಮೇಯ ಸ್ವರೂಪ ವಿಚಾರ, ಲಿಂಗವಿಭಾಗ ವಿಚಾರ, ಪಂಚಾಕ್ಷರ ಮಂತ್ರಾರ್ಥವಿಚಾರ, ಪಂಚಾಕ್ಷರ ಪ್ರಣವ ದರ್ಶನವಿಚಾರ, ಕ್ರಿಯಾ ಜ್ಞಾನಸಮನ್ವಯ ವಿಚಾರ, ಷಡಕ್ಷರಿ ಮಂತ್ರ ತಾತ್ಪರ್ಯ ವಿಚಾರ, ಜೀವಾತ್ಮಪರಮಾತ್ಮವಿಚಾರ, ಪರಮಾತ್ಮ ಜಗತ್ಸೃಷ್ಟ್ಯಾದಿ ನಿಚಾರ, ಪರಿಣಾಮವಾದವಿಚಾರ, ಲಿಂಗಾಂಗ ಸಾಮರಸ್ಯವಿಚಾರ ಇವೇ ಮೊದಲಾದ ವಿಷಯಗಳು ಜನರಂಜಿಗಿ ಪ್ರತಿಪಾದಿಸಲ್ಪಟ್ಟಿರುವವು ಈ ಗ್ರಂಥವು ಮುಮು ಕ್ಷುಗಳ ಕಲ್ಯಾಣಕ್ಕಾಗಿ ಸಾರಮಾರ್ಥಕ ತತ್ಪ್ರಪ್ರತಿಪಾದಕವಾದ ಮತ ಪ್ರಸ್ಥಾನತ್ರಯವನ್ನೇ ವಿಶೇಷವಾಗಿ ವಿವೇಚಿಸಿ ತ್ರಿರುವದು ತತ್ತಾತ್ಪರ್ಯ ಪೂರಿತವಾದ ಈ ವಿಶಾಲಗ್ರಂಥದ ರಚನೆ ವೈಲಿಯು ಅತ್ಯಂತ ಹೃದಯಂಗವಾಗಿರವದ್ದು ಭಗವದ್ಗೀತೆಯಂತೆ ಬಹು ಭಾಷ್ಯಾಭಿಪ್ರಾಯಗಳಿರವದು ಇದರಮಹತ್ವವನ್ನು ಶ್ರೀಕ್ಷೇತ್ರಾಜುನರ ಸಂಪಾದನೆಯನ್ನು ಎಂಗ್ಲಿಹಿ ಆದಕ್ಕೆ ಭಗವದ್ಗೀತಾ' ಎಂಬ ನಾಮವನ್ನಿಟ್ಟಂತೆ ಶ್ರೀ ಶಿವಯೋಗಿಶಿವಾಚಾರ್ಯರು ಶ್ರೀ ರೇಣುಕಾಗಸ್ತ್ಯ ಸಂವಾದವನ್ನು ಸಂಗ್ರಹಿಸಿ ಇದಕ್ಕೆ " ಸಿದ್ಧಾಂತಶಿಖಾಮಣಿ" ಎಂಬ ನಾಮವನ್ನಿಟ್ಟರು ಇದೇ ಕಾರಣದಿಂದಲೇ ಈ ಗ್ರಂಥರತ್ನವು 'ರೇಣುಕಗೀತಾ" "ರೇಣುಕಾಗಸ್ತ್ಯಸಂವಾದ' ಎಂಬ ಪವಿತ್ರನಾಮಾಂತರಗಳಿಂದಲೂ ಪ್ರಸಿದ್ಧವಾಗಿದೆ ವೇದಾಂತಸಾರ, ವೀರಶೈವಚಿಂತಾಮಣಿ ಮೊದಲಾದ ಗ್ರಂಥಕಾರರು ಇದನ್ನು ' ರೇಣುಕಾಗಮ" ಎಂಬ ನಾಮಾಂತರದಿಂದಲೂ ಉಲ್ಲೇಖಿಸಿರುವರು ಈ ಗ್ರಂಥವು ತನ್ನ ನಾಮಕ್ಕೆ ತಕ್ಕಂತೆಸಿದ್ಧಾಂತ ತತ್ತ್ವವನ್ನು ಪ್ರತಿಪಾದಿಸಕಕ್ಕೆ ಸಮಸ್ತ ಗ್ರಂಥಗಳಲ್ಲಿ ಶಿಖಾಮಣಿಯಂತಿರುವ್ವುದಲ್ಲಿ ಇದರಮಹತ್ವವನ್ನು ಎಷ್ಟು ವರ್ಣಿಸಿದರೂ ಅತಿಶಯೋಕ್ತಿಯೆನಿಸಲಾರದು

ವೀರಶೈವಮತಗ್ರಂಥಗಳಲ್ಲೆಲ್ಲ ಈ ಗ್ರಂಥವು ಅತಿ ವ್ಯಾಪಕವಾಗಿದೆ. ವೀರಶೈವಸಿದ್ಧಾಂತವನ್ನು ಪ್ರತಿಪಾದಿಸಕಕ್ಕೆ ಗ್ರಂಥಗಳು ಈ ಪ್ರಸಂಚದಲ್ಲಿ ಎಷ್ಟಿರುವವೋ ಆ ಸಮಸ್ತ ಗ್ರಂಥಗಳಲ್ಲಿಯೂ ಈ ಗ್ರಂಥಕ್ಕೆ ಪವಿತ್ರ ನಾಮವು ಪ್ರಕಾಶಿಸುತ್ತಿರುವದು. ಶ್ರೀಪತಿಪಂಡಿತರಿಂದ ರಚಿತವಾದ " ಶ್ರೀಕರಭಾಷ್ಯ" ದಲ್ಲಿಯೂ ಶ್ರೀಕಂಠ ಶಿವಾಚಾರ್ಯರಿಂದ ರಚಿತವಾದ " ಶ್ರೀಕಂಠಭಾಷ್ಯ" ದಲ್ಲಿಯೂ ಈ ಗ್ರಂಥದ ವಾಕ್ಯಗಳು ಅನೇಕ ಕಡೆಗೆ ಪ್ರಮಾಣರೂಪವಾಗಿ ಉದಾಹರಿಸಲ್ಪಟ್ಟಿರುವವು. ಸಿದ್ಧಾಂತಕೌಮುದಿ ಎಂಬ ವ್ಯಾಕರಣ ಗ್ರಂಥವನ್ನು ರಚಿಸಿ ಜಗದ್ವಿಖ್ಯಾತರಾದ ಭಟ್ಟೋಜಿದೀಕ್ಷಿತರಿಂದ ವಿರಚಿತ ವಾಗಿರುವ " ತಂತ್ರಾಧಿಕಾರನಿರ್ಣಯ" ಎಂಬ ಗ್ರಂಥ ದಲ್ಲಿಯೂ ಕಮಲಾಕರಭಟ್ಟರಿಂದ ವಿರಚಿತವಾಗಿರುವ " ನಿರ್ಣಯಸಿಂಧು" ಎಂಬ ಗ್ರಂಥದಲ್ಲಿಯೂ " ಶಾರದಾ ತಿಲಕ ನಿರ್ಮಾಲ್ಯರತ್ನಾಕರ" " ವೈವಿಭ್ರಾಹ್ಮ ನೋತ್ಪತ್ತಿ" ಮೊದಲಾದ ಗ್ರಂಥಗಳಲ್ಲಿಯೂ ಈ ಗ್ರಂಥದ ಪ್ರಮಾಣಗಳು ಉದಾಹರಿಸಲ್ಪಟ್ಟಿರುವವು ಈ ರೀತಿಯಾಗಿ ಸ್ವಮತ ಭಿನ್ನಮತ ಪಂಡಿತಮಂಡಲಿಯಿಂದ ಅಂಗೀಕೃತವಾಗಿರುವ ಈ ಗ್ರಂಥದ ಪ್ರಾಶಸ್ತ್ಯವನ್ನು ವಾಚಕರೇ ಅರಿತುಕೊಳ್ಳಬಹುದು ಶಿವಾದ್ವೈತವಿಶಾಂತಸ್ಥಾಪಕ ಗ್ರಂಥ ಗಳಲ್ಲಿ ಶಿಖಾಮಣಿಯೆಂಬಕೊಪ್ಪುತ್ತಿರುವ ಈ ಸಿದ್ಧಾಂತ ಶಿಖಾಮಣಿ. ಈ ಮೊದಲು ಅನೇಕ ಕಡೆಗೆ ಮುದ್ರಿಸಲ್ಪಟ್ಟಿತ್ತು ಆದರೆ ಮುದ್ರಣಕಾರರು ಶಾಸ್ತ್ರಜ್ಞರೂ, ಸಂಶೋಧನಪ್ರಿಯರೂ ಆಗದಿದ್ದುದರಿಂದ ಆ ಗ್ರಂಥಗಳಲ್ಲಿ ಅಶುದ್ಧವಾಕ್ಯಗಳು ಹೇರಳವಾಗಿ ಬಿದ್ದಿರುವ ವಲ್ಲದೆ ವೀರಶೈವ ಸಿದ್ಧಾಂತಕ್ಕೆ ಅತಿ ವಿರುದ್ಧವಾಗಿರುವ ಅರ್ಥವನ್ನು ಕೊಡುತ್ತಿದ್ದವು ಅನಸ್ಯಲ್ಲಿ ಕೂಲಂಕಷವಾಗಿ ಪರಾಮರ್ಶಿಸಿದರೆ ಪ್ರತಿಯೊಬ್ಬ ಮತಾಭಿಮಾನಿಗೂ ವೈಸನವಾಗದಿರದು ಈ ರೀತಿಯಾಗಿರತ್ಕೆ ದೋಷಗಳನ್ನೆಲ್ಲ ಸರಿಪಡಿಸಿ ಶಿವಾದ್ವೈತಸಿದ್ಧಾಂತಾನುಸಾರವಾಗಿ ಸರಿಯಾದ ವ್ಯಾಖ್ಯಾನವನ್ನು ಬರೆದು ಮುದ್ರಿಸಿ ಪ್ರಸಿದ್ಧ ಪಡಿಸಬೇಕೆಂದು ಅನೇಕ ಜನ ವೀರಶೈವ ಮೆತಾಧಿಮಾನಿಗಳು ಉತ್ಕೃಷ್ಟಾಭಿಲಾಷೆಯನ್ನು ತೋರಿಸಿದ ಮೂಲಕ ನಾಗನೂರು ಬೃ॥ ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು ಶ್ರೀಘನನಿಗಳುವಾದ ಶ್ರೀ ರೇಣುಕ ಗಣನಾಥರ ಆಶೀರ್ವಾದದಿಂದ ವಿತೇತ ಶ್ರಮವಹಿಸಿ ಸಂಶೋಧನ ಮಾಡಿ " ಭಾವಪ್ರಕಾಶ' ಎಂಬ ಹೆಸರಿನಿಂದ ಕನ್ನಡದಲ್ಲಿ ಸರಳ ವ್ಯಾಖ್ಯಾನವನ್ನು ಬರೆದು ನೈಮೂರಿನಲ್ಲಿರುವ ತಮ್ಮ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರಸ್ಸಿನಲ್ಲಿ ಮುದ್ರಿಸಿ ಕಾಶೀನಾಥಗ್ರಂಥಮಾಲೆಯಲ್ಲಿ ಯಷ್ಟೆ ಪ್ರಸಿದ್ಧಪಡಿಸಿರುವರು ಈ ಗ್ರಂಥವು ವೀರಶೈವ ಧರ್ಮಕ್ಕೆ ಆಧಾರಸ್ತಂಭವಾಗಿದೆ ಆದ್ದರಿಂದ ಪ್ರತಿಯೊಬ್ಬರೂ ತಮ್ಮವ್ಯಕ್ತಿಶಕ್ತಿಗನುಸಾರವಾಗಿ ಈ ಮಹಾ ಗ್ರಂಥವನ್ನು ಸಂಗ್ರಹಿಸಿ ಜಗದ್ಗುರು ಆಚಾರ್ಯರ ಉಪದೇಶವನ್ನು ತಿಳಿದು ಪಾಲನೆಮಾಡಿ ಧನ್ಯಾತ್ಮರಾಗಬೇಕೆಂದು ಆಶಿಸುತ್ತೇವೆ

ವರ್ತಮಾನಸಂಗ್ರಹ

ಕೊರಿಯಾ ಯುದ್ಧರಂಗ
ನೇಗ್ಯಾನ್ ಪತನ

ಟೇಗುವಿಗೆ ಈಶಾನ್ಯದಲ್ಲಿ ೧೨ ಮೈಲಿಗಳ ದೂರದಲ್ಲಿರುವ ನೇಗ್ಯಾನ್ ನಗರವು ಕಮ್ಯೂನಿಸ್ಟರ ವಶವಾಯಿತೆಂದು ಯು ಪಿ ಎ ಸ್ಟಾಫ್ ವರದಿಗಾರರಾದ ರಾಬರ್ಟ್ ಜೆನಾಪ್ಸರವರು ಫೋಹಾಂಗಿಗೆ ೧೭ ಮೈಲಿಗಳ ದೂರ ದಲ್ಲಿರುವ ಕ್ವಾಂಗ್ಜುವಿನಿಂದ ವರದಿ ಮಾಡಿದ್ದಾರೆ

ಟೇಗುವಿನ ಬಳಿ ಕಮ್ಯೂನಿಸ್ಟ್ ಸೇನೆ

ಕಮ್ಯೂನಿಸ್ಟ್ ಸೇನೆಗಳು ಟೇಗು ನಗರದ ಗಡಿಯನ್ನು ಈಗಾಗಲೇ ಮುಟ್ಟಿವೆ ಈ ಪ್ರದೇಶದಲ್ಲಿ ಶತ್ರುಗಳ ಪ್ರತಿಭಟನೆಯನ್ನು ತಡೆಯಲು ಅಮೆರಿಕನ್ ಸೇನೆಗಳೂ, ದಕ್ಷಿಣ ಕೊರಿಯನ್ ಸೇನೆಗಳೂ ಬಲವಾದ ರಕ್ಷಣಾವ್ಯೂಹವನ್ನು ನಿರ್ಮಿಸಿವೆ

೬ ಸಹಸ್ರ ಕಮ್ಯೂನಿಸ್ಟರು

ಟೇಗುವನ್ನು ಸಾಲ್ಟು ಕಡೆಗಳಿಂದಲೂ ಮುತ್ತಲು ಕಮ್ಯೂನಿಸ್ಟ್ ಸೇನೆಗಳು ಬಲವಾದ ಸೇನೆಯನ್ನು ಸಜ್ಜುಗೊಳಿಸಿವೆ ಈ ಪ್ರದೇಶದಲ್ಲಿ ೬ ಸಹಸ್ರ ಕಮ್ಯೂನಿಸ್ಟರಸೈನ್ಯ ಳಗೊಂಡ ಎರಡು ಸೇನೆಗಳು ಸಿದ್ಧವಾಗಿವೆ ಟೇಗೂ ಪೂಸಾನ್ ರಸ್ತೆಯ ಸಂಚಾರವನ್ನು ಈಗ ಬಂದ್‌ಮಾಡಿದೆ ಎಂದು ವರದಿಮಾಡಿದ್ದಾರೆ.

೧೫ ಸಹಸ್ರ ಅಮೆರಿಕನರ ಕೊಲೆ
ಉತ್ತರ ಕೊರಿಯನ್ ರೇಡಿಯೋ ವರದಿ

ಯುದ್ಧವಾರಂಭವಾದಂದಿನಿಂದ ಇಂದಿನವರೆಗಿನ ಒಟ್ಟು ೧೫೧೧೬ ಅಮೆರಿಕನರನ್ನು ಕೊಲ್ಲಲಾಗಿದೆಯೆಂದೂ, ೪೫ ಸಹಸ್ರ ಅಮೆರಿಕನರನ್ನು ಸೆರೆ ಹಿಡಿಯಲಾಗಿದೆಯೆಂದೂ ಪ್ಯೊಂಗ್‌ಯಾಂಗ್‌ನಿಂದ ಬಂದ ರೇಡಿಯೋ ವರದಿ ತಿಳಿಸಿದೆ

೧೦ ಸಹಸ್ರ ಹಿಂದುಗಳಿಗೆ ಸಾಕೇತಿಸ್ತಾನದಲ್ಲಿ ಕಿರುಕುಳ

ಪಾಕೇಸ್ತಾನದ ವಶದಲ್ಲಿರುವ ಜಮ್ಮು ಮತ್ತು ಕಾಶ್ಮೀರದ ಪ್ರದೇಶಗಳಲ್ಲಿರುವ ೧೦ ಸಹಸ್ರ ಹಿಂದೂ ಮತ್ತು ಸಿಖ್‌ಗಳಿಗೆ ಪಾಕೇಸ್ತಾನದವರು ಬಹಳ ಕಿರುಕುಳ ಕೊಡುತ್ತಿದ್ದಾರೆಂದು ಗೊತ್ತಾಗಿದೆ ರಸ್ತೆಕೂಲಿ, ಜಾಡಮಾಲಿ ಮತ್ತು ಹಜಾಮರ ಕೆಲಸಗಳನ್ನು ಬಲಾತ್ಕಾರದಿಂದ ಹಿಂದೂಗಳ ಕೈಲಿ ಮಾಡಿಸಲಾಗುತ್ತಿದೆ ಎಂದು ಸುದ್ದಿ ತಿಳಿಸಿದೆ

'ಕಾಶ್ಮೀರ್ ಮೇಲ್' ದುರಂತ

ದೆಹಲಿಗೆ ಬರುತ್ತಿದ್ದ ಕಾಶ್ಮೀರ್ ಮೈಯಿಲ್ ಗಾಡಿಯು ಗುರುದಾಸಪುರದ ಹತ್ತಿರ ಕಂಬಿತಪ್ಪಿ ಅಪಘಾತಕ್ಕೀಡಾದ ಪರಿಣಾಮವಾಗಿ ೨೦ ಜನಗಳು ಸತ್ತಿರುವುದಾಗಿಯೂ, ೪೫ ಜನಗಳು ಗಾಯಗೊಂಡಿರುವುದಾಗಿಯೂ ವರದಿಯಾಗಿದೆ ಗಾಯಗೊಂಡವರಲ್ಲಿ ೧೦ ಜನಗಳಿಗೆ ತೀವ್ರ ಗಾಯಗಳಾಗಿರುವುದಾಗಿ ವರದಿಯಾಗಿದೆ ಪೊಲೀಸ್ ಪಂಜಾಬ್ ರೈಲ್ವೆ ಅಧಿಕಾರಿಗಳ ಪ್ರಕಟಣೆಯ ಮೇರೆಗೆ ೯ ಜನಗಳು ಮಡದಿರುವುದಾಗಿಯೂ ೩೫ ಜನಗಳು ಗಾಯಗೊಂಡಿರುವುದಾಗಿಯೂ ಗೊತ್ತಾಗಿದೆ

ದುರಂತಕ್ಕೆ ಕಾರಣ

ಪಠಾಣ್ ಕೋಟೆಯಿಂದ ದೆಹಲಿಗೆ ಹೊರಟಿದ್ದ ಕಾಶ್ಮೀರ್ ಮೈಯಿಲ್ ರೈಲುಗಾಡಿಯು ಗುರುದಾಸ್ ಪುರದ ಹತ್ತಿರ ಒಂದು ಸೇತುವೆಯ ಮೇಲೆ ಹೋಗುತಿರುವಾಗ ಸೇತುವೆ ಕುಸಿದುಬಿದ್ದ ಪರಿಣಾಮವಾಗಿ ಈ ದುರಂತ ಸಂಭವಿಸಿತೆಂದು ವರದಿಯಾಗಿದೆ. ಸೇತುವೆಯ ಮೇಲೆ ನೀರು ಹರಿಯುತ್ತಿತ್ತೆಂದೂ, ರೈಲು ಸೇತುವೆಯನ್ನು ಮುಕ್ಕಾಲುಪಾಲು ದಾಟಿತ್ತೆಂದೂ, ಆದರೆ ಕೊನೆಯ ಬೋಗಿಗಳು ಸೇತುವೆ ಕುಸಿದು ಬಿದ್ದದ್ದರಿಂದ ನೀರಿನೊಳಗೆ ಬಿದ್ದುಹೋದುವೆಂದೂ ವರದಿಯಾಗಿವೆ ಈ ನಾಲ್ಕು ಬೋಗಿಗಳಲ್ಲಿ ಒಂದು ಸ್ಲೀಯರ್ ಮೂರನೇ ತರಗತಿಯವೆಂದೂ, ಇನ್ನೊಂದು ಪುರುಸರ ಇಂಟರ್ ತರಗತಿಯದೆಂದೂ, ಉಳಿದೆರಡು ಒಂದನೇ ಮತ್ತು ಎರಡನೇ ತರಗತಿಯ ಬೋಗಿಗಳೆಂದೂ ವರದಿಯಾಗಿದೆ

ದುರಂತ ನಡೆದ ಸ್ಥಳಕ್ಕೆ ದಿನನಗರ, ಪಠಾಣ್‌ಕೋಟೆ ಮತ್ತು ಅಮೃತಸರಗಳಿಂದ ಕೂಡಲೇ ಸೈನ್ಯಕೀಯ ಸಹಾಯವನ್ನು ಒದಗಿಸಲಾಯಿತು

ಮೂರನೇ ಮಹಾಯುದ್ಧ
ಮುಂದಿನ ತಿಂಗಳಲ್ಲಿ ಆರಂಭವಾಗುವುದು!

" ಮುಂಬರುವ ಆಕ್ಟೋಬರ್ ತಿಂಗಳಿನ ಮಧ್ಯಭಾಗದಲ್ಲಿ ಮೂರನೇ ಮತಾಸಂಗ್ರಾಮ ಆರಂಭವಾಗುವುದು ಖಂಡಿತ ಸಂಗ್ರಾಮವು ಮಧ್ಯಮರ್ಮಾನಿಯಲ್ಲೂ ಜಪಾನಿನಲ್ಲೂ ಆರಂಭವಾಗಿ ವಿಶ್ವವ್ಯಾಪಿಯಾಗಿ ಹರಡುವುದು. ಈ ಸಂಗ್ರಾಮವು ೧೯೫೩ ಜಲ ರಲ್ಲಿ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಜಯ ದೊರಕಿಸಿಕೊಟ್ಟು ಕೊನೆಗಾಣುವುದು' ಎಂದು ನವದೆಹಲಿಯ ಇಂಡಿಯನ್ ಅಸ್ಟ್ರಾಮಿಕಲ್ ಮತ್ತು ಅಸ್ಟ್ರಲಾಜಿಕಲ್ ರಿಸರ್ಚ್ ಇನ್ಸ್ಟಿಟ್ಯೂಟಿನ ಡೈರೆಕ್ಟರ್ ಆದ ಪಂ॥ ರಾಮಸ್ವರೂಪ್ ಶರ್ಮರವರು ಭವಿಷ್ಯ ಮಾಡಿದ್ದಾರೆ.

ಭವಿಷ್ಯಕ್ಕೆ ಆಧಾರ

ಇವರು ಎಷ್ಟಿದೆ ಪ್ರಮುಖ ವ್ಯಕ್ತಿಗಳಾದ ಮಹಾತ್ಮಾ ಗಾಂಧಿ, ಪಂ॥ ನೆಹ್ರೂ, ಸುಭಾಸ್ ಬೋಸ್, ಚರ್ಚಿಲ್

್ರಿಮನ್, ಆಟ್ಲೀ, ಸ್ಟಾಲಿನ್‌ರವರುಗಳೇ ಮೊದಲಾದ
ಸಹಸ್ರ ಮಂದಿಯ ಜಾತಿಕಗಳನ್ನು ಸಂಗ್ರಹಿಸಿ
ಪ್ರದ ರೀತ್ಯಾ ಗಣನೆ ಮಾಡಿ ಈ ಭವಿಷ್ಯಮಹಿಮಿದ್ದಾರೆ
ರ ಭವಿಷ್ಯದ ಮೇಲೆ ಭಾರತೀಯರಿಗೆ ಹೆಚ್ಚಿನ
ಂಬಿಕೆ ಇದೆ ಇವರ ಭವಿಷ್ಯವಾಣಿ ಇಂದಿನಸಂದರ್ಭಕ್ಕೂ
ಸಿಯಾಗಿದ್ದಲ್ಲ

ಈ ವರ್ಷದಲ್ಲಿ ಭಾರತಕ್ಕೆ ಗಂಡಾಂತರ

ಈ ವರ್ಷದಲ್ಲಿ ಭಾರತಕ್ಕೆ ಹೆಚ್ಚಿನ ಗಂಡಾಂತರವಿದೆ
ವರ್ಷದ ಆದಿಯವರೆವಿಗೂ ಭಾರತದಲ್ಲಿ ಅಲ್ಲಲ್ಲಿ
ೂಕಂಪಗಳೂ, ಪ್ರವಾಹಗಳೂ, ಕ್ಷಾಮಗಳೂ ತಲೆ
ೋರಿ ಜನರನ್ನು ಪೀಡಿಸುವುದು ಈ ವರ್ಷ ಕಳೆದ
ಂತರ ಇಡೀ ಏಷ್ಯಂಡೇ ಹೊಸ ಬೆಳಕನ್ನು ಕಂಡು
ುಬದ ಹಾದಿ ಹಿಡಿಯುವುದು ಎಂದು ತಿಳಿಸಿದ್ದಾರೆ

ವಿಶ್ವಸಂಸ್ಥೆಯ ಅಳಿವು

ಮುಂಬರುವ ಕೆಲವು ವರ್ಷಗಳಲ್ಲಿ ಭಾರತ ಪಾಕಿ
ಸ್ತಾನಗಳಿಗೆ ಯುದ್ಧ ನಡೆಯುವ ಸಂಭವವಿಲ್ಲ
೧೯೫೨-೫೩ ರಲ್ಲಿ ವಿಶ್ವಸಂಸ್ಥೆಯಲ್ಲಿ ಸದಸ್ಯರುಗಳಲ್ಲಿ
ಲವಾದ ಭಿನ್ನ ಭಿಪ್ರಾಯ ಉಂಟಾಗಿ ಕಮ್ಯೂನಿಸಂಗೆ
ಟ್ಟ ನಷ್ಟಿಂಬಲ ದೊರೆತು ವಿಶ್ವಸಂಸ್ಥೆ ನಾಶವಾಗುವುದು
ಸುಭಾಸ್ ಚಂದ್ರಬೋಸರು ಬದುಕಿರುವುದು
ಂಡಿತ ಆದರೆ ಶಾಸ್ತ್ರದ ರೀತ್ಯಾ ಎಲ್ಲಿದ್ದಾರೆಂದು
ಳಸಲು ಅಸಾಧ್ಯ ಪಂ॥ ನೆಹರೂರವರು ವಿಶ್ವದ
ಷ್ಟು ಮಹಾನಾಯಕರಾಗುವರು ಮಿ॥ ಚರ್ಚಿಲ್‌ರವರು
ನವಂಬರ್ ಮಾಸದೊಳಗೆ ಮತ್ತೆ ಬ್ರಿಟಿಷ್
ಧಾನಿಗಳಾಗುವರು. ಮೊರ್ಸಲ್ ಸ್ಟಾಲಿನ್‌ರಿಗೆ
ಕ್ಟೋಬರ್‌ನಲ್ಲಿ ಮಹಾವಿಪತ್ತು ಕಾದಿದೆ ಅಕ್ಟೋಬರ್
ಂತ್ಯದೊಳಗೆ ಶ್ರೀ ಮೊಶಾರ್‌ರು ತಮ್ಮ ಅಧಿಕಾರ
ೆದುಕೊಳ್ಳುವರು ಎಂದು ಶ್ರೀ ಶಮಂ ನುಡಿದಿದ್ದಾರೆ

ರಾವಿನದಿಯಲ್ಲಿ ಪ್ರಚಂಡ ಪ್ರವಾಹ

೫೫ ಹಳ್ಳಿಗಳು ಮುಳುಗಿವೆ

ಲಾಹೋರಿನ ರಾವಿ ನದಿಯಲ್ಲಿ ಇದ್ದಕ್ಕಿದ್ದಂತೆಯೇ
ನೇ ಜಾರೀಕು ಖ್ಯಾತ ಕಾಲು ಹುಚ್ಚು ಪ್ರವಾಹ ಒಂದು
ಹೋರಿನ ಸಮದಾರ್, ಬಡಾಯ್‌ಭಾಗ್, ಮಿಸ್ರಿಷಾ
ದೇಶಗಳು ಜಲಾತರ್ಗತವಾಗಿನೆಯೆಂದು ವರದಿ
ಯಾಗಿದೆ ಆ ಪ್ರದೇಶಗಳ ಸಹಸ್ರಾರು ಮಂದಿ ಮನೆ
ರಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ
ಂದು ಬೆಳಗಿನಿಂದ ನದಿಯಸೀರು ಒಂದೇ ಸಮನೆ
ಚ್ಚುತ್ತಾ ಬಂದು, ಸಂಜೆಯಹೊತ್ತಿಗೆ ಸೇತುವೆಗಳ
ಲ್ಲಾ ಜಾಟ್ ಊರುಗಳಲ್ಲಿ ನೀರು ನುಗ್ಗಿತು ಜನರು
ಯಭೀತರಾಗಿ ಎತ್ತರ ಪ್ರದೇಶಗಳಿಗೆ ಓಡಿ ಹೋಗು
ದ್ದರು

ಈ ಸ್ಥಳಗಳಲ್ಲಿ ಪೋಲೀಸರೂ ಮತ್ತು ನೂರಾರು
ಯಂ ಸೇವಕರೂ ನಿರ್ಗತಿಕರಿಗೆ ಸಹಾಯ ನೀಡು
ದ್ದಾರೆ ಅಲ್ಲದೆ ರೆಡ್‌ಕ್ರಾಸ್ ಸಂಸ್ಥೆಯವರೂ ಸಹಾಯ
ೀಡುತ್ತಿದ್ದಾರೆ

ತೇಲಿಬಂದ ೬ ಮೃತದೇಹಗಳ ಪತ್ತೆ

ನದಿಯ ಪ್ರವಾಹದಲ್ಲಿ ತೇಲಿಬಂದು ರೈಲ್ವೆ ಸೇತುವೆ
ೊಂದಕ್ಕೆ ತಡೆದುಕೊಂಡಿದ್ದ ೬ ಮೃತದೇಹಗಳು
ತ್ತೆಯಾಗಿವೆ ಇನ್ನು ಸಾವುನೋವು ವಸ್ತುಗಳ ವರದಿ
ಂದಿಲ್ಲ

೫೦ ಹಳ್ಳಿಗಳು ಜಲಾಂತರ್ಗತ

ಲಾಹೋರಿನ ಸುತ್ತುಮುತ್ತಿರುವ ೫೦ ಹಳ್ಳಿಗಳು
ರಿಂದ ತುಂಬಿಹೋಗಿವೆ ಈ ಪ್ರದೇಶಗಳಲ್ಲಿ
ರೀತ ಸಾವುನೋವು ಉಂಟಾಗಿರಬಹುದೆಂದು ಊಹಿ
ಾಗಿದೆ

ಮರಗಳನ್ನು, ಕಂಬಗಳನ್ನು ಹತ್ತಿ ತಪ್ಪಿಸಿಕೊಳ್ಳುತ್ತಿದ್ದಾರೆ

ಈ ಪ್ರದೇಶದಲ್ಲಿ ಜನರು ಜೀವರಕ್ಷಣೆಗಾಗಿ ಕೋತಿ
ಂತೆ ದೊಡ್ಡ ದೊಡ್ಡ ಮರಗಳನ್ನೆಲ್ಲಾ ಏರಿ ಕೆಲವೆಡೆಗಳಲ್ಲಿ
ಾಗಿ ಕಬ್ಬಿಣಕಂಬ ಇಲಕ್ಟ್ರಿಕ್ ಕಂಬಗಳನ್ನು ಹತ್ತಿ ತಪ್ಪಿಸಿಕೊಳ್ಳುತ್ತಿದ್ದಾರೆ.

ಸಹದಾರ ನದಿ ಅಣೆಕಟ್ಟು ಒಡೆಯಿತು

ಸಹದಾರ ನದಿಯ ಪ್ರವಾಹವು ಉಲ್ಬಣಗೊಂಡು
ಎಳು ಕಡೆಗಳಲ್ಲಿ ಇದಕ್ಕೆ ಕಟ್ಟಿದ ಅಣೆಕಟ್ಟುಗಳನ್ನು ಛೇದಿಸಿ
ಊರುಗಳೊಳಗೆ ನುಗ್ಗಿ ಇಲ್ಲಿನ ವಿದ್ಯುಚ್ಛಕ್ತಿ ತಯಾರಿಕಾ
ಕೇಂದ್ರಕ್ಕೆ ತೊಂದರೆಯುಂಟಾಗಿರುವುದಾಗಿ ತಿಳಿದು
ಬಂದಿದೆ

॥ ಶ್ರೀ ಜಗದ್ಗುರು ಸಂಚಾಚಾರ್ಯೋ ಜಯತೀಪಂಚಾ ॥

ಶ್ರೀಮದ್ರಂಭಾಪುರೀ ಶಿವೈಕ್ಯ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ವೀರಶೈವಮತಕ್ಕೆ ಸಲ್ಲಿಸಿದ ಅಮೋಘ ಕಾಣಿಕೆ

ಇಂದು ಶ್ರಾವಣ ಶು॥ ೪, ಶಿವೈಕ್ಯ ಜಗದ್ಗುರು ಅಭಿನವರೇಣುಕ ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ ಪುಣ್ಯತಿಥಿ ಇಂತಹ ಸಮಯದಲ್ಲಿ ನಾವು ಮಾಡಬೇಕಾದ ಕಾರ್ಯವೇನು ? ಅವರಲ್ಲದ್ದ ಅಮೋಘವಾದ ಗುಣಗಳು ಹಾಗು ಅವರು ಸಲ್ಲಿಸಿದ ಅಪಾರ ಸೇವೆಯನ್ನು ನಾವಿಂದು ಅವಲೋಕಿಸಿ ಅದರಂತೆ ಆಚರಿಸಬೇಕಾಗಿದೆ

ಶಿವೈಕ್ಯ ಶ್ರೀಮದ್ರಾಂಭಾಪುರೀ ಮಹಾಸಂಸ್ಥಾನಾಧಿಪತಿಯ ಸಮಾಜಕಾರ್ಯವನ್ನು ನಾವು ನೋಡಿದರೆ ಪ್ರಪಂಚದಲ್ಲಿ ವ್ಯಕ್ತಿಯು ಅಚ್ಚರಿಗೊಳ್ಳದಿರಲಾರನು ಅವರಲ್ಲಿದ್ದಂಥ ಕಾರ್ಯಶಕ್ತಿಯ ಕರ್ತವ್ಯನಿಷ್ಠೆಯೇ ಅವರನ್ನು ಜಗದ್ಗುರು ಸ್ಥಾನಕ್ಕೆ ಮುಟ್ಟಿಸಿದವು ಶ್ರೀಮಹಾಸನ್ನಿಧಿಯವರು ಬೆಂಗಳೂರಿಗೆ ೧೨ ಮೈಲು ದೂರದಲ್ಲಿರುವ ಹರೀಹಾರಗ್ರಾಮದಲ್ಲಿ ೧೪೧೨ನೆಯ ವಿಶ್ವತನಾಮ ಸಂವತ್ಸರದ ಶ್ರಾವಣ ಶು॥ ೨ ಶುಕ್ರವಾರ ದಿನದಲ್ಲಿ ಜನಿಸಿದರು ಕಂದಿಕಾಯಿಗಳು ಇವರಿಗೆ ' ಸದಾಶಿವ ' ನೆಂದು ನಾಮಕರಣ ಮಾಡಿದರು ಸದಾಶಿವರು ಮುಂದೆ ನಿಜವಾಗಿಯೂ ಸದಾಶಿವನಂತೆಯೇ ಕಾರ್ಯಮಾಡಿ ಇಡೀ ವೀರಶೈವ ಸಮಾಜವನ್ನು ಉದ್ಧಾರಮಾಡಿದರು ಚಿಕ್ಕಂದಿನಲ್ಲಿಯೇ ಇವರಲ್ಲದ್ದಂತಹ ಗುಣಾಗಳು ಹಾಗು ಇವರ ಚಟುವಟಿಕೆಗಳು ಇತರ ಬಾಲಕರಂತಿರದೆ ದೇವರ ಧ್ಯಾನದಲ್ಲಿ ಹೋಗುತ್ತಿತ್ತು ಇದರಿಂದ ಇವರೋರ್ವ ಯೋಗಿಗಳಾಗುವ ಚಿಹ್ನೆ ಸೂಚಿಸುತ್ತಿತ್ತು ಜಿಗಳೂರ ರಾಜ ತಂದೆತಾಯಿಗಳು ತಮ್ಮ ಸುಪುತ್ರನೆನ್ನು ವಿದ್ಯಾ ಭ್ಯಾಸಕ್ಕಾಗಿ ಅಬ್ಬಿಗೇರಿಗೆ ಕಳುಹಿಸಿದರು ಅಲ್ಲಿ ಪಂ॥ ರೇವಣಸಿದ್ಧಶಾಸ್ತ್ರಿಗಳವರ ಹತ್ತರ ' ಸಾಹಿತ್ಯ ವ್ಯಾಕರಣ ಅಭ್ಯಾಸವನ್ನು ಮಾಡಿ ನಂತರ ಸೋಲಾಪುರದಲ್ಲಿದ್ದ ಶ್ರೀಮಂತ ಶಿವೈಕ್ಯ ಅಸ್ಸಾಸಾಹೇಬ ವಾಡ ಇವರ ಸಾರಥ್ಯದಲ್ಲಿ ಆಗಮಿಸಿ ಶ್ರೀ ವೇ॥ ಪಂ॥ ಕುಲಶಾಖಿ ಸಾಹಿತ್ಯರತ್ನ ಜಗದೀಶಶಾಸ್ತ್ರಿಗಳವರ ಹತ್ತರ ಅಭ್ಯಾಸನಾಡಿದ ಮೇಲೆ ಅದೇ ವಾರದವರ ಸಪ್ತಾಯದಿಂದ ನುಂದಿನ ಶಿಕ್ಷಣಕ್ಕಾಗಿ ಸಂಸ್ಕೃತಶಾಲೆ ತೆವರುಮನೆಯಾದ ಶ್ರೀಕಾಶೀ ಸ್ಥೇತ್ರಕ್ಕೆ ದಯಮಾಡಿಸಿ ಅಲ್ಲಿ ಪಂಡಿತವರ್ಯರಾದ ಶ್ರೀ ಗುಲಬಾಬಿ ಭಾ ಇವರ ಹತ್ತರ ೮ ೧೦ ವರುಷ ಕಳೆದು ' ನ್ಯಾಶರಣತೀರ್ಥ ' ಪ್ರಶಸ್ತಿಯನ್ನೂ ಕೂಡ ಪಡೆದುಕೊಂಡು ತಮ್ಮ ಪಾಂಡಿತ್ಯದ ಪ್ರಭಾವದಿಂದ ಪರಮತಿಯ ಪಂಡಿತರನ್ನು ಕೂಡ ಬೆರುಗುಗೊಳಿಸಿದರು ಇವರು ಸಂಸ್ಕೃತದಲ್ಲಿ ' ವೀರಶೈವೇಂದುಶೇಖರ ' ನೆಂಬ ಗ್ರಂಥವನ್ನು ರಚಿಸಿ ತಮ್ಮ ಪಾಂಡಿತ್ಯನ ಪ್ರಭೆಯಿಂದ ಕೀರ್ತಿಶಾಲಿಗಳಾದರು ಆದರೆ ಅದೇ ವೇಳೆಯಲ್ಲಿ ನೈಜಾ ಸ್ಥಾಂತರವಿದ್ದಿದ್ದ ಇತಿಹಾಸಪ್ರಸಿದ್ಧ ಪರಂಪರೆ ವೈಜನಾಥ ವ್ಯಾಜ್ಯಪ್ರತಿಕರಣವು ಉದ್ಭವಿಸಿತು ಅಲ್ಲದೆ ವೈಜನಾಥನ ಪೂಜೆಯನ್ನು ಮಾಡಲು ವೀರಶೈವರಿಗೆ ಅಧಿಕಾರವಿದ್ದಿಲ್ಲ ಇಂತಹ ದುಸ್ಥರ ಸಮಯದಲ್ಲಿ ಪಂ॥ ಸದಾಶಿವಶಾಸ್ತ್ರಿಗಳು ಹೈದ್ರಾಬಾದಿಗೆ ಆಗಮಿಸಿ ನೈಜೀಕ ಬೀಗನಲ್ಲಿ ಹೋರಾಡಿ ಜಯವನ್ನು ಸಂಪಾದಿಸಿದರು

ಅದೇ ವೇಳೆಯಲ್ಲಿ ಶ್ರೀರಂಭಾಪುರಿ ಜಗದ್ಗುರುಗಳಾದ ಶ್ರೀಮಂಚಾತ್ಥರಿವಾಚಾರ್ಯಮಹಾಸ್ವಾಮಿಗಳವರು ಉತ್ತ ರಾಧಿಕಾರವನ್ನು ಮಾಡದೆ ಶಿವೈಕ್ಯರಾದ ಮೂಲಕ ಅನೇಕ ತೊಂದರೆಗಳು ಬಂದವು. ಅಂಕ್ಕೆಲ್ಲ ವೈಸೂರ ಮಹಾಪ್ರಭುಗಳವರ ಕೀರ್ತಾಳಿದ ನೇರಿಗೆ ಶ್ರೀಸದಾ ಶಿವಶಾಸ್ತ್ರಿಗಳಿಗೆ ಪೀಠಾಧಿಕಾರವು ಪ್ರಾಪ್ತವಾಯಿತು.

ಪಾ॥ ೨೨-೧೧-೧೯೨೫ ನೇ ಇಸ್ವಿ ಕೈಲಾಸಮಾನ ಸಂವತ್ಸರ ಮಾರ್ಗಶೀರ್ಷ ಶು॥ ೭ ಭಾನುವಾರ ದಿವಸ ಪರಮಪೂಜ್ಯ ವೀರಶೈವಾಗ್ರಮಾಣಿ ಸದ್ಭರ್ಮಸಿಂಹಾಸನಾಧೀಶ್ವರರಾದ ೧೦೦೮ ಜಗದ್ಗುರು ಶಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರ ಪವಿತ್ರಹಸ್ತದಿಂದ ಸದಾಶಿವಶಾಸ್ತ್ರಿಗಳಿಗೆ ಜಗದ್ಗುರು ಶಿವಾನಂದ ರಾಜೇಂದ್ರ ಎಂಬ ನಾಮಕರಣಮಾಡಿ ಪೀಠೋಪಣ ಗೊಳಿಸಲಾಯಿತು ಅಂದಿನ ಪರಕಂತ್ರಭಾರತದಲ್ಲಿ ಯಾವದಕ್ಕೂ ನಾಗರಿಕತೆಯ ಸ್ವಾತಂತ್ರ್ಯವಿದ್ದಿದ್ದಿಲ್ಲ ಭಾಷಣ ಹಾಗು ಲೇಖನ ಸ್ವಾತಂತ್ರ್ಯವಿದ್ದಿದ್ದಿಲ್ಲ ಅಂತಹ ಪರಿಸ್ಥಿತಿಯಲ್ಲಿ ಜಗದ್ಗುರುವರೇಣ್ಯರು ಸನಾತಕ್ಕೆ ಒಂದು ಹೊಸಮಾರ್ಗವನ್ನು ತೋರಿಸಿದರು ಅನೇಕ ಕಡೆಗೆ ಸಂಚಾರ ಕೈಕೊಂಡು ವೀರಶೈವದ ಸಾಲದ ಶೂಲವನ್ನು ಪರಿಹರಿಸಿದರು ಪೀಠದ ಕೀರ್ತಿಯನ್ನು ಸರ್ವತ್ರ ಬೆಳಗಿಸಿ ರಾಜಮಹಾರಾಜರಿಂದ ಸನ್ಮಾನಿತರಾದರು ನಮ್ಮ ಸೌಭಾಗ್ಯದುರ್ದೈವದಿಂದ ಶ್ರೀಜಗದ್ಗುರುಶಿವಾನಂದರಾಜೇಂದ್ರ ಮಹಾಸನ್ನಿಧಿಯವರೂ, ಶ್ರೀ ಜಗದ್ಗುರು ವೀರಭದ್ರ ಮಹಾಸನ್ನಿಧಿಯವರೂ ಶಿವೈಕ್ಯರಾದರೆಲ್ಲವೆ, ಮೊನ್ನೆ ಮೊನ್ನೆ ಆಜಾರ್ಯರ ಅಪಾರವಿತಾರಿಗಳೆಂದು ಲೋಕ ವಿಖ್ಯಾತರಾಗಿದ್ದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರೂ ಕೂಡ ಶಿವೈಕ್ಯರಾದರು ಇದರಿಂದ ಸಮಾಜದ ಮೇಟಗಳಿಕೆ ಕಿತ್ತುಹೋದಂತಾಗಿವೆ ಇಂತಹ ದುಸ್ಥರವಾದ ಪ್ರಸಂಗದಲ್ಲಿ ನಾವು ನಮ್ಮ ನಿಮ್ಮಲ್ಲಿರತಕ್ಕಂತಹ ಮಾಕ್ಷರ್ಯ ಭಾವವನ್ನು ಬಿಟ್ಟು ಧರ್ಮಾಕೂಸ್ಯರಾದ ಜನರಿಗೆ ಧರ್ಮ ಬೋಧನೆಯನ್ನು ಮಾಡಿ ಸಮಾಜದ ವೈಚಿಕಮಟ್ಟವನ್ನು ಬಲಪಡಿಸಬೇಕಾಗಿದೆ, ಆದ್ದರಿಂದ ಸರ್ವಗುರುವರ್ಯರು ಸಣಾಲಕ್ಕೆ ಕಣ್ಣಿರೆಡು ಕಾರ್ಯಕ್ಕೆ ಕೈಯಿಕ್ಕಬಹುದೆ ?

ಓರ್ವ ಗುರುಭಕ್ತ.

ಸ್ತುತ್ಯ ಭೂದಾನ

ಬೈಲಹಂಗಲಿ ತಾಲೂಕಿನಲ್ಲಿ ಪರಿಶೋಭಿಸುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಸೇವಾಶ್ರಮವು ಮಹಾಭಕ್ತರ ಸ್ಫೂರ್ತಿಯ ಸೇವಾಫಲವಾಗಿ ದಿನೇ ದಿನೇ ಅಭಿವೃದ್ಧಿ ಯಾಗುತ್ತಲಿರುವದನ್ನು ನೋಡಿದರೆ ಯಾವ ಸಜ್ಜನರು ಸಮ್ಮುದಿತರಾಗದಿರಲಿಲ್ಲ ! ಹೊಸಪೇಟೆ ನಗರದಲ್ಲಿಯ ಜಾಲಿಯವರ ಮನೆತನವು ಪ್ರಸಿದ್ಧವಾಗಿದೆ ಹರಿಗುರು ಭಕ್ತಿಗೆ ಸಮ್ಮುಖರಾದ ಈ ಮನೆತನದ ಮಹಾಜನರು ಆದರ್ಶರಾಗಿದ್ದಾರೆ ಸದ್ಯಃ ಜಾಲಿ ಶ್ರೀಮಂತ ದೊಡ್ಡ ಜಂಬಣ್ಣನವರು ಮತ್ತು ಸೌ॥ ಚೆನ್ನಮ್ಮನವರು ಈ ದಂಪತಿಗಳು ಶಿವಾಚಾರದಿಕರೂ ಸತ್ಯಾಚಾರಧುರಂ ಧರರೂ ಆಗಿರುವರು ಇವರ ಧರ್ಮಜ್ಯೋತಿಯು ನಿಜವಾಗಿ ಸತ್ಪ್ರಕಾಶವಾಗಿದೆ ಇಂಥ ಸಜ್ಜನರು ಬಾಳುವೆಯು ಜಗದ್ಗು ಸುಖಕಾಂತಿಗಾಗಿ ಎಂಬ ವಿಷಯವು ಅನುಭವನಿದ್ದವಾದುದು ಪ್ರತಿನರ್ವದ ಪದ್ಧತಿಯಂತೆ ಈ ಸಾರೆ ಶ್ರಾವಣದಲ್ಲಿ ಶ್ರೀ ರುದ್ರಾಭಿಷೇಕವನ್ನು ಶ್ರೀ ಜಗದ್ಗುರು ರೇಣುಕಭಗವತ್ಪಾದರಿಗೆ ಜರುಗಿಸು ತ್ತಿದ್ದು ಪಾ॥ ೩೦ ಆ ೫೦ ರಲ್ಲಿ ಮೊರಬದ ತ್ರಿಗಳ ವರೆನ್ನು ಪಂಚಾಕ್ಷೇತ್ರಗಳ್ಳಿ ಬಿಜಯಂಗೈಸಿಕೊಂಡು ಮಾರ್ಗಮಧ್ಯದಲ್ಲಿರುವ ೨ ಎಕರೆ ಗದ್ದೆಯನ್ನು ಶ್ರೀ ಜಗದ್ಗುರು ವಿಶ್ವಾರಾಧ್ಯಭಗವತ್ಪಾದ ಸೇವಾಶ್ರಮಕ್ಕೆ ಅಶ್ರಮದ ಮಹಾಮೂರ್ತಿ ನೈಷ್ಠೀಬ್ರಹ್ಮಚಾರಿ ಶ್ರೀಗಳಿಗೆ ಹೃತ್ಪೂರ್ವಕವಾಗಿ ಸಮರ್ಪಿಸಿದ್ದಾರೆ ಈ ವಿಷಯವು ಅಶ್ರಮದ ಇತಿಹಾಸದಲ್ಲಿ ಅಮರವಾದ ಘಟಿತಿಯಾಗಿದೆ ಯಾರ ಪ್ರೇರಣೆ ಇಲ್ಲದೆ ಸ್ವತಃ ಈ ಮಹಾದಾನ ಜರುಗಿಸಿದ ದಂಪತಿಗಳು ನಿಜವಾಗಿ ಸ್ಮರಣೀಯರಾಗಿ ದ್ದಾರೆ ಅವರ ಉದ್ದೇಶವನ್ನು ಪರೆಯಿಸಲು ತತ್ಪ ರ್ಯವನ್ನು ಶ್ರೀಗಳು ಕೈಕೊಂಡಿದ್ದಾರೆ ಇವರಿಗೆ ಚಿ॥ ಕೆಂಚ್ಯೂರೇಶ, ಚಿ॥ ಮಲ್ಲಿಕಾರ್ಜುನ ಇಬ್ಬರು ಪುತ್ರರಿದ್ದಾರೆ ಇಂಥ ಸದ್ಭಕ್ತರ ಸೇವೆ ಅಮರವಾಗಲಿ ! ನಾಡುಮಠಗಳ ಹಿಚ್ಚುವಳಿ ಆ ಬಗೆಯ ಅರರ್ಪಣೆಯಿಂದ ಅವಿಚ್ಛಿನ್ನವಾಗಿ ನಾಗಲಿ ! ಶ್ರೀ ಸಾರ್ವಕೀ ಪರಮೇಶ್ವರರು ಶ್ರೀ ಜಗದಾಚಾರ್ಯರು ಮೇಲ್ಕಂಡ ದಂಪತಿಗಳಿಗೆ ಮತ್ತು ಅವರ ವಂಶಕ್ಕೆ ಆಯುಷ್ಯ ಮಂಗಲವನ್ನೀಯಲಿ ! !

ಜಗತ್ತಿಕಮಠದ ಉದ್ಧಾರತಯ್ಯನವರು, ಹೊಸಪೇಟೆ

ಸಿದ್ಧಾಂತಶಿಖಾಮಣಿ

ವೀರಶೈವಸಮಾಜದ ಏಕಸ್ಥಾಧಾರಜಾಮಾಡಿದ ಪ್ರತಿಯೊಬ್ಬ ನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾತಃ ವಂದಿರುವುದೆ ಈ ಮಹಾಗ್ರಂಥವಲ್ಲ ಶ್ರೀಜಗದ್ಗುರುಗಳಾದ ರೇಣುಕಾಚಾರ್ಯರು ಜಗದ್ವಿಖ್ಯಾತವಾದ ಆಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರಕಾಶಮಾನವಲ್ಲಟ್ಟಿರುವುದು ವೀರ ಶೈವಮತದಲ್ಲಿ ಸದೃಢ ಬೊಯಿತಕ್ಕ ಗ್ರಂಥಗಳಲ್ಲಲ್ಲಿ ಇದೇ ಬಹು ಪುರಾತನಗ್ರಂಥವೆಸಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೨೦೦೦ವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯರಿಂದ** ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಪವಿತ್ರಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದಿಂದ ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಅದರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢ ರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆ ಯನ್ನು ದೂರಮಾಡುವದಕ್ಕಾಗಿ **ಹಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಲು ಸರಳವಾದ ವ್ಯಾಖ್ಯಾನವನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಪಿಡಿಸೋದಿಸುವೆ.ಲಿ ಪಂಡಿತರ ನಾಮಾನದ ಮಹತ್ವವು ಪಾಠಕರಿಗೆ ವೇದ್ಯವಾಗಬಹುದು ಪಾಠಕರ ಅನುಕೂಲ್ಯಾಗಿ ಒಳ್ಳ ಶ್ರಮವಹಿಸಿ ಸಿದ್ಧಪಡಿಸಿದ ವಿದ್ಯಾಗುಮ್ರಿಯೆಯೂ ಶ್ಲೋಕ ಸಂಕ್ಯಾವ ಗಳೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೪೩೩ ಪುಟಗಳಿಂದ ಕೂಡಿದ್ದು ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಪಂಡಿತ್ಯಾನು ಸಾರವಾಗಿ ಶ್ರೀ ಗದ್ಗುರು ಣಾಚಾರ್ಯರಿಂದ ಲೀಲಾತ್ಮಕವಾದ ಮನೋಜ್ಞ ಛಾಯಾಚಿತ್ರಗಳ ಜೊ ದಿನಲ್ಲಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಧಿಸಿದೆ ಕೆಲವ್ಯಕ್ತಿಗಳಿಗೆ ಕೆಲವ್ಯಕ್ತಿಗಳಿಗೆ ವಿನಂತಿ ರುವ ಈ ಆಮೂಲ್ಯಗ್ರಂಥವು ವಿರಕ್ತಿಮಠ ಬ್ಲೂರು ಅವರಿಗಾಗಿ ಓದಬೇಕು ಬೆಲೆ ೨ ರೂಪಾಯಿ

ಸುಸ್ಪೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಒಂಟಿಪ್ರತಿ ಅಮೃತಶಿಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೫ ಬೆಲೆ ರೂ. ೦—೬—೦

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ಪಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪×೧೦ ಬೆಲೆ ರೂ. ೦—೬—೦

ಶ್ರೀ ಜಗದ್ಗುರು ಪಂಚಾಚಾರ್ಯರು ಪಂಡಿತಮೃತ್ಯುಂಜಯಶಿವಾಚಾರ್ಯರಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ರೂ. ೦—೪—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ರೂ. ೦—೪—೦

,, ,, ಚಿಕ್ಕ ಸೈಜು ಬೆಲೆ ರೂ. ೦—೧—೦

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೋರಧೋರಿಂದ ಅವತರಿಸುವ ಫೋಟೋ ರೂ. ೦—೧—೦

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ರೂ. ೦—೧—೦

ಶ್ರೀರೇಣುಕಾಚಾರ್ಯರು ಶ್ರೀಪಂಚಲಿಂಗಾಚಾರ್ಯರಿಗೆ ಚಂದ್ರಮಸೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ರೂ. ೦—೧—೦

ಶ್ರೀರೇಣುಕಾಚಾರ್ಯರು ವಿಧೀಷ್ಠಾನ ವ್ಯಾಘ್ರಚರ್ಮಧರಿಸಿ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ರೂ. ೦—೧—೦

ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ರೂ. ೦—೪—೦

ಶ್ರೀ.ಶಿವಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ .. ರೂ. ೦—೧—೦

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ರೂ. ೦—೧—೦

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮತ್ತಾಸ್ವಾಮಿಗಳವರ ಫೋಟೋ ರೂ. ೦—೧—೦

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಳಿತುಕೊಂಡಿರುವ ಫೋಟೋ ರೂ. ೦—೧—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ಸಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ರೂ. ೦—೩—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ರೂ. ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಪ್ರಭೆಯ ಆಕೃತಿ ಸುಂದರವಾದ ಫೋಟೋ ರೂ. ೦—೧—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಆಕೃತಿ ಪ್ರಾಚೀನ ಶೈಲಿಯದ ಸುಂದರ ಫೋಟೋ ರೂ. ೦—೧—೦

ಶ್ರೀ ಜಗದ್ಗುರು ಕೇದಾರಶಿಂಪಾಸನದ ಆಕೃತಿ ಸುಂದರವಾದ ಸೋಪುರದ ಫೋಟೋ ರೂ. ೦—೧—೦

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ರೂ. ೦—೧—೦

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆಸಿನೇರಿದ ರಂಭಾಪುರೀ ಜಗದ್ಗುರು ರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ರೂ. ೦—೧—೦

ಶ್ರೀಜಗದ್ಗುರುರಂಭಾಪುರೀ ಎಂಬಲ್ಲಿ ಸ್ಥಾಸಿಸಲ್ಪಟ್ಟಿರುವ ಶಿಲಾಶಾಸನಗಳು ರೂ. ೦—೩

ಸುಪ್ರೋತ್ತಮವಾದ ಮತಗ್ರಂಥಗಳು

ಸೋತ್ರಸೂತ ಪಟ (೬ನೆಯ ಆವೃತ್ತಿ)			೧ ಆಣೆ
ಸದ್ಯಾಶಾಶ್ರಮವಿಮರ್ಶ (೩ನೆಯ ಆವೃತ್ತಿ ಲ್ಯಾವೃತ್ತ)			೧ ಆಣೆ
ಪಂಚವಿಂಶಿ ಪ್ರಶ್ನಸ್ತರಕಾಶ (೫ನೆಯ ಆವೃತ್ತಿ)			೧ ಆಣೆ
ಶ್ರೀಜಗದ್ಗುರು ರೇಣುಕಾಜ ರ್ಯ ಕೀರ್ತನ			೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)			೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)			೨ ಆಣೆ
ಶ್ರೀಜಗದ್ಗುರು ಪಂಚ ಜಾರ್ಯರ ನಾಮಾವಳಿ (೨ನೆಯ ಆವೃತ್ತಿ)			೨ ಆಣೆ
ಬನವಾಸಿನಿಜಪತ್ತೆದರ್ಪಣ (೪ನೆಯ ಆವೃತ್ತಿ)			೨ ಆಣೆ
ಶ್ರೀರೇಣುಕಾಜಾರ್ಯಶತಕ (೩ನೆಯ ಆವೃತ್ತಿ)			೨ ಆಣೆ
ಶ್ರೀರುದ್ರಮುನಿಶಿವಾಜಾರ್ಯಶತಕ			೨ ಆಣೆ
ಶಿವಶಕ್ತಿವಿಲಾಸ			೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ			೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	...	...	೩ ಆಣೆ
ಪಂಚಾಚಾರ್ಯಪ್ರಕಾಶ	.....		೩ ಆಣೆ
ಪಂಚಾಚಾರ ಪ್ರಕಾಶಿಕಾ			೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	...		೪ ಆಣೆ
ಲಿಂಗಧಾರಣವಿಧಿ	.....		೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	..	...	೪ ಆಣೆ
ಶ್ರೀಪತಿಸಂಡಿತಾರಾಧ್ಯರ ಕಾಲನಿರ್ಣಯ	.....	.....	೪ ಆಣೆ
ಕೈವೋಪನಿಷತ್ಸಂಗ್ರಹ (೫ನೆಯ ಸಂಸ್ಕೃತ)		...	೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	.....		೪ ಆಣೆ
ವೈದಿಕವಾಙ್ಮಯರಹಸ್ಯ	.....		೪ ಆಣೆ
ಷಣ್ಮತಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)		.....	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	.....	.....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)			೮ ಆಣೆ
ಶಿವಾಪ್ಪೈತಕರಭಾಷಾ (ಸಂಸ್ಕೃತ)	.....	.....	೮ ಆಣೆ
ವೀರಶೈವಮಹಾತ್ಮರು			೮ ಆಣೆ
ಬಸವಧ್ಯಾಂತದಿವಾಕರ (೩ನೆಯ ಆವೃತ್ತಿ)	.....		೮ ಆಣೆ
ಅಗಮಪರಜ್ಞಾನ			೮ ಆಣೆ
ಪಂಡಿತ ಶ್ರೀರಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)			೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	...		೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಜಾರ್ಯಕೃತ)			೧೩ ಆಣೆ
ಶ್ರೀಜಗದ್ಗುರು ಸಂಚಾರಾಜಾರ್ಯ ಸೋತ್ರರತ್ನಾಕರ			೧೩ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	...		೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ			೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	...		೧ ರೂ.
ವಿನೇಕಮುಕ್ತಾವಳಿ			೧ ರೂ.
ವಿಜಾರಸಾರಾವಳಿ			೧ ರೂ.
ವೈದಿಕಶಿವಪೂಜಾವಿಧಿ (ನೈದಿಕಕ್ಷರಯುಕ್ತಪಾಮು. ೩ನೆಯ ಆವೃತ್ತಿ)			೧೫ ರೂ.
ಶ್ರೀಕರಭಾಷ್ಯಂ (ಚತುಸ್ಸೂತ್ರಿ)			೨ ರೂ.
ವೀರಶೈವವರತ್ನ (೫ನೆಯ ಆವೃತ್ತಿ, ೪೦ ಸುಂದರ್ಶದ ಫೋಟೋಗಳಿರುವುವು)			೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವುಂಗಳಪಟ್ಟದ್ದು)	...		೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	...		೨ ರೂ.
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಶಾರದಾಗಾಗಮ-ನುಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)			೨ ರೂ.
ಶಿವಾದ್ವೈತಮಂಜರಿ (ಕನ್ನಡದಲ್ಲಿ ವ್ಯಾಖ್ಯಾನ ೧೩೪೪ ಪುಟ)			೪ ರೂ.
A brief life-sketch of Pandit Sri Kashmatha Shastrya (*English*)			4 A
The Philosophical Aspect of Virasaivism (*English*)			8 A
Speeches by Pandit Shri Kashmatha Shastriji (*English*)			12 A
ಶಿವಾಚಾರಚಂದ್ರಿಕಾ (ಅಚ್ಚಾಗ)			೩
ಶಿವಶಿವಾರ್ಚನಚಂದ್ರಿಕಾ (ಅಚ್ಚಾಗ)			೧
ಸದಾಚಾರಾಚಾರಚಂದ್ರಿಕಾ (ಶಿವಶಿವಾರ್ಚನ-ಅಚ್ಚಾಗ)			೧
ಶಿವಶಿವಾರ್ಚನಚಂದ್ರಿಕಾ (ಅಚ್ಚಾಗ)	...	...	೩ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

Edited, Printed and Published by Bruhanmath Mahadevaiah at Shri Panchacharya Electric Press, Sayaji Rao Road, Mysore.

GISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಗಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾತ್ಮಪಂಚಾಚಾರ್ಯಾಧಿಕರ ಪಂಚಾಸ್ಯಪೀಠಾಧಿಪರ । ಪಂಚಕ್ಲೇಶವಿನಾಶಕರ ಪರತರಶ್ರೀಪಂಚಲಿಂಗೋದ್ಭವರ ॥
ಪಂಚಾಚಾರಧಿಯಾಮಕರ ಪರಲಸತ್ಪಂಚಾಕ್ಷರೀಮೋದಧರ । ಪಂಚಾಚಾರ್ಯಜಗದ್ಗುರೂತ್ತಮರವರ್ಷಾಲಿಪ್ರವೀಲೋಕನಂ ॥

ಸಂಪಾದಕರು— ನಾಗನೂರು ಬೃಹನ್ಮಹಾಧ್ಯಕ್ಷರಾದ ವೆ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ಕ್ಕಿಗೆ ಚಂದಾ ವರ್ಷಕ್ಕೆ ರೂ ೩ ಸಂಪಾದಕರು— ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಂಪುಟ ೩೪| ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ ನೇ ಸೆಪ್ಟೆಂಬರ್ ೧೯೫೦ [ಸಂಚಿಕೆ ೨೨

॥ ಶ್ರೀ ಜಗದ್ಗುರು ಪಂಚಾಚಾರ್ಯಾಗಃ ಪ್ರಸೀದಂತು

ಶ್ರೀಕಾಶೀಜಗದ್ಗುರುಗಳವರ ಸಂಚಾರ

ತಾ॥ ೧೪ ರಲ್ಲಿ ಶ್ರೀಕ್ಷೇತ್ರ ಕಾಶೀ ಜ್ಞಾನಸಿಂಹಾಸನಾ
ಶ್ವರ ಶ್ರೀ ೧೦೦೮ ಜಗದ್ಗುರು ವಿಶ್ವೈಶ್ವರಶಿವಾಚಾರ್ಯ
ಜಾಸ್ವಾಮಿಗಳವರು ಶ್ರೀ ಕೇದಾರೇಶ್ವರ ವಿಷಯ
ದೇಶನಾಗಿ ಧನಸಂಗ್ರಹಮಾಡಲು ಸಂಚಾರವನ್ನು
ಸಿರುಗುದು ಸರಿಯಷ್ಟೇ! ಈ ಪ್ರಕಾಪುರ ತಾಲೂಕಿ
ಸಂಚಾರವನ್ನು ಮಾಡುತ್ತಿರುವಾಗ ಗದಗ ಶಹರ
ತಾನಿಗಳಾದ ಸಾಹುಕಾರ ಬಸಪ್ಪನವರು ಅಬ್ಬೇಗೇರಿ
ರು ಪ್ರತಿವರ್ಷದ ಪದ್ಧತಿಯಂತೆ ಈ ವರ್ಷ
ವಣಮಾಸದ ವ್ರತಸಮಾಪ್ತಿಯ ಸಮಯದಲ್ಲಿ
ಕಾಶೀಜಗದ್ಗುರುಗಳನ್ನು ತಾ॥ ೭ ೯ ೫೦ ರಲ್ಲಿ ತಮ್ಮ
ನೆಗೆ ದಯಮಾಡಿಸಿಕೊಂಡು ಹೋಗಿ ಪದ್ಧತಿಯಂತೆ
ಾದಶ ರುದ್ರಾಭಿಷೇಕಪೂರ್ವಕ ಪಸಸ್ರಬಿಲ್ವಾರ್ಚನೆ
ಡನೆ ಮಹಾಪಾದಪೂಜೆಯನ್ನು ಮಾಡಿ ಪ್ರಸಾದ
ಯೋಗದಿಂದ ಸರ್ವರನ್ನು ಸಂತೋಷಪಡಿಸಿ ಶ್ರೀ
ವಾರಪೀಠದ ವಿಷಯವಾರ್ಗಾಗಿ ಏಡುನೂರು ರೂಪಾ
ಗಳನ್ನು ಸಮರ್ಪಿಸಿದರು ಮತ್ತು ಇನ್ನೂ ಏಡುನೂರು
ಡಲು ಆಶ್ವಾಸನವಿತ್ತಿದ್ದಾರೆ ಉದಾರ ಹೃದಯಿಗಳೂ
ಾಗುರುವಕ್ಕಿಸಂಪನ್ನರೂ, ಪೀಠಾಭಿಮಾನಿಗಳೂ
ಶ್ರೀಮಾನ್ ಅಬ್ಬೇಗೇರಿ ಒಸಪ್ಪನವರಿಗೆ ಶ್ರೀ ಪರ
ತ್ಮನು ಆಯುರಾರೋಗ್ಯಭಾಗ್ಯಗಳನ್ನಿತ್ತು ಕಾಪಾ
ಗದಗ ಶಹರ ನಿವಾಸಿಗಳಾದ ಶಿವ್ಯಮಂಡಳಿ
ವರು ಕೇದಾರೇಶ್ವರ ಸಹಾಯಕ್ಕಾಗಿ ಶ್ರೀಜಗದ್ಗುರು
ವರನ್ನು ಪುನಃ ದಯಮಾಡಿಸಿಕೊಳ್ಳಲು ವಿನ್ನಪಿಸಿ
ಂಡಿದ್ದಾರೆ ಶ್ರೀಜಗದ್ಗುರುಗಳವರು ಬಂಕಾಪುರ
ಲೂಕು ಕುಂದೂರಿಗೆ ತಾ॥ ೧೧ ೯ ೫೦ ನೆಯ ದಿನದ
ಪಲ್ಲಕ್ಕಿಮಹೋತ್ಸವದೊಡನೆ ದಯಮಾಡಿಸಿ
ಾಂ ನಾಡಿದ್ದು ಅಲ್ಲಿಯ ಭಕ್ತಮಂಡಳಿಯವರು
ಸ್ವಾತಕ್ಷರಂಗಿರುತ್ತಾರೆ

ಓರ್ವ ಪೀಠಾಭಿಮಾನಿ

ಶ್ರೀಶೈಲ ಜಗದ್ಗುರು ಮಹಾಸಂಸ್ಥಾನಮಠ ಂತಕಲ್ಲಿನಲ್ಲಿ ನೆರವೇರಿದ ಮಹಾಗಣಕಾರಾಧನೆ

ತಾ॥ ೧೧ ೯ ೫೦ ನೇ ಸೋಮವಾರ ಅನಂತಪುರ
ಲ್ಲಾ ಗುಂತಕಲ್ಲು ನಗರದಲ್ಲಿ ಶ್ರೀಶೈಲ ಶ್ರೀಗಿರಿರಾಜ
ರ್ಯಸಿಂಹಾಸನ ಮಹಾಸಂಸ್ಥಾನದ ಶ್ರೀಮಠದಲ್ಲಿ
ನರ್ಷ ಪದ್ಧತಿಯಂತೆ ಶ್ರಾವಣಾನೂದ ಮಜ್ಜ
ಭಿಷೇಕನಿಮಿತ್ತವಾದ ಮಹಾಗಣಕಾರಾಧನೆ ನೆರವೇರಿ
ಟ್ಟಿತು. ಅಂದು ಪ್ರಾತಃಕಾಲದಿಂದ ಮಧ್ಯಾಹ್ನ ೧೨
ಯವರೆಗೆ ಶ್ರೀ ಜಗದ್ಗುರು ಪಂಡಿತಾರಾಧ್ಯ
ೋದ್ಭವಮೂರ್ತಿಗೂ ಪೂರ್ವಗುರುಗಳ ಸಮಾಧಿ
ಿಂಗಳ್ಯ ಮಹಾರುದ್ರಾಭಿಷೇಕ, ಮಹಾಪೂಜೆ,
ಗಣಾರತಿ ನಡೆಸಲ್ಪಟ್ಟುತ್ತಿರುವಾಗ ಗ್ರಾಮಸ್ಥಮುಖ
ಶಿಷ್ಯರೊಡನೆ ಪೂಜಾಮಂಟಪಕ್ಕೆ ವೀರಾಧೀಶ್ವರರಾದ
ಶ್ರೀಜಗದ್ಗುರು ವಾಗೀಶಪಂಡಿತಾರಾಧ್ಯ ಮಹಾಸ್ವಾಮಿಗಳ
ವರು ಆಗಮಿಸಿದರು ಮಹಾಚಾರ್ಯರ ಜಯಘೋಷವು
ದಿಙ್ಮಂಡಲವನ್ನು ಭೇದಿಸುವಂತೆ ಸಾಸ್ತಿಕಶ್ಯ ದಯವಮ್ಮ
ಭೇದಿಸಿ ಸಮಂತೆ ವ್ಯಾಪಕವಾಗುತ್ತಿರುವಾಗಲೇ ಜಗದ್ಗುರು
ಗಳವರು ಸಿಂಹಾಸನದಲ್ಲಿ ಮಂಡಿಸಿದರು ಭಕ್ತರ
ಪ್ರಾರ್ಥನೆಯಂತೆ ಶ್ರೀರುದ್ರ ಭಿಷೇಕ ರುದ್ರಗಣಾರಾಧನೆ
ಎಂಬ ವಿಷಯದ ಮೇಲೆ ತೆಲುಗುಭಾಷೆಯಲಿ ಒಂದು
ಘಂಟೆವರೆಗೆ ಶ್ರೀಜಗದ್ಗುರುಗಳವರು ಉಪದೇಶವಿತ್ತರು.
ಶಿಷ್ಯರ ಆನಂದಕ್ಕೆ ಪಾರವಿಲ್ಲ ಉಪದೇಶಾನಂತರ
ಎಲ್ಲರಿಗೂ ತೀರ್ಥಪ್ರಸಾದ ವಿಶೇಷೋಗವಾಯಿತು ನಗ
ರಾಧ್ಯಕ್ಷರೂ, ಕಮೀಷನ್ನರೂ ಗೌರ್ನಮೆಂಟ್ ಅಧಿಕಾರಿ
ಗಳೂ, ಜಗದ್ಗುರು ಪಂಡಿತಾರಾಧ್ಯ ಹೈಸ್ಕೂಲು ಪ್ರೈಸು
ದೆಂಟರೇ ಮೊದಲಾದವರು ಜಗದ್ಗುರುಗಳವರ ಶಾಂತಿ
ಕಾರ್ಯದಕ್ಷತೆ ವಿಶಾಲಸ್ವಭಾವ ಪರಮತಪ್ರೇಮ
ವಿದ್ವತ್ತು, ತತ್ತ್ವಜ್ಞಾನಿಷ್ಠೆ ನಿಶ್ಚಲವಾದ ಶಿವಭಕ್ತಿ ಮುಂತಾ
ದುವುಗಳ ಒಗ್ಗೆ ತಮ್ಮ ಧಾರ್ಮಿಕ ಭಕ್ತಿಗಳನ್ನೊಪ್ಪಿಸಿ
ಶುಭಾಶೀರ್ವಾದಗಳನ್ನು ಪಡೆದರು

ಗೌರಾಧಿಷ್ಠಾನ ನಡೆಯುತ್ತಿರುವಾಗಲೇ ಸುವೃಷ್ಟಿ
ಯಾಗುದು ಜನರಿಗೆ ಮಿತ್ಯಾಶ್ಚರ್ಯ ಆನ ದವನ್ನುಂಟು
ಮಾಡಿತು ಸಂಜೆ ಎಂಟು ಗಂಟೆವರೆಗೂ ಗಣಾರಾಧನ
ಅವಿಚ್ಛಿನ್ನವಾಗಿ ಸಾಗಿತು ಕತ್ಯಕಾರದಲ್ಲಿಯೂ ಇಂಥ
ಧರ್ಮಿಷ್ಠ ಕಾರ್ಯಗಳಿಗೆ ಪದ್ಧತ್ಯರು ನೆರವಾಗುದು
ಪ್ರಶಂಸನೀಯ

ಇಲ್ಲಿಯ ಶ್ರೀಜಗದ್ಗುರು ಪಂಡಿತಾರಾಧ್ಯ ಹೈಸ್ಕೂಲು
ಕಟ್ಟಡವು ಭೂದಿಂದ ಸಾಗುತ್ತಿದೆ ೪೦೦ ಜನ ವಿದ್ಯಾ
ರ್ಥಿಗಳು ಆ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸಮಾಡುತಿರು
ವರು ಶ್ರೀಜಗದ್ಗುರುಗಳವರು ಈ ಹೈಸ್ಕೂಲು ಪ್ರಗತಿ
ಒಗ್ಗೆ ಮತ್ತು ಶಿಕ್ಷಣವಾಗಿ ಪ್ರಾರಂಭಿಸಲಿರುವ ಶ್ರೀ
ಬೋಡಿ ಂಗಿನ ಒಗೆ ವೀರ್ಘವಾಗಿ ಪ್ರಯತ್ನಿಸುತ್ತಿರು
ವರು ಸುತ್ತಮುತ್ತಲಿನ ಎಲ್ಲ ಶಿಷ್ಯರೂ ತ್ರಿಕರಣಶುದ್ಧಿ
ಯಿಂದ ಜಗದ್ಗುರುಗಳಲ್ಲಿ ಭಕ್ತಿಯಿಂದ ಸೇವೆ ಸಲ್ಲಿಸು
ತ್ತಿರುವದು ಆದರಣೀಯವಾಗಿದೆ

ಇಷ್ಟೆಲ್ಲವನ್ನು ಅರಿತು ಆನಂದವುಳ್ಳವರಾದಕಾರಣ
ಶ್ರೀ ಜಗದ್ಗುರುಗಳವರು ಕೊಪಣಿಗೆ ಆರಾಧನೆ ಮುಗಿಯು
ವಾಗಿ ಈ ವಿಷದ ಪಂಡಿತಾರಾಧ್ಯರ ಪೂಜಾಫಲವನ್ನು
ಶಿಷ್ಯಕಲ್ಯಾಣಕ್ಕಾಗಿ ಧಾರೆಯೆರೆದುಗೆವು ಎಂದು
ಅಪ್ಪಣೆಕೊಡಿಸಿದರು

ಯಂ ಯಂ ನಾಗಯ್ಯ ಗುಂತಕಲ್ಲು

ಶ್ರಾವಣಮಾಸದ ಶಿವಲಿಂಗಪೂಜಾಸಮಾರಂಭ

ಬೆಳಗಾಂವ ಜಿಲ್ಲೆಗೆ ಸೇರಿದ ಶ್ರೀ ದಕ್ಷಿಣಕಾಶೀಕ್ಷೇತ್ರ
ವೆನಿಸಿ ಆತ್ಯಂತ ವಿಖ್ಯಾತವಾ ಪ್ರಾಚೀನತೆಯಲ್ಲಿ ಪ್ರಾಶಸ್ತ್ಯತೆ
ಯನ್ನು ಪಡೆದ ಪುಣ್ಯಕ್ಷೇ (ಹೂಲಿ) ಯಲ್ಲಿ ಪ್ರತಿವರುಷ
ದಂತೆ ಈ ಶ್ರಾವಣಮಾಸವಪ್ಪಿಯೂ ಇಲ್ಲಿನ ಶ್ರೀ ಸಿದ್ಧ
ಕಂಚೇಶ್ವರ, ರೇವಣಸಿದ್ಧೇಶ್ವರ, ಮಹಾಳಿಸಿದ್ಧೇಶ್ವರ,
ಏಕೋರಾಮ, ಪಂಡಿತಾರಾಧ್ಯ, ಶ್ರೀ ವಿಶ್ವನಾಥ, ಇಮೇ
ಶ್ವರ, ಕಲ್ಲೇಶ್ವರ, ಅಂಧಕೇಶ್ವರ, ಆಗಸ್ತೇಶ್ವರ ತಾರಕೇ
ಶ್ವರ, ಫಲಕಂಠೇಶ್ವರ ನಿರ್ಮಲಲಿಂಗೇಶ್ವರ, ಬ್ಯಾಳಿ
ಒಸವೇಶ್ವರ, ಶ್ರೀ ವೀರಭದ್ರ ಶ್ರೀ ವೀರಮಾರುತೇಶ್ವರ
ಹಾಗೂ ಇನ್ನು ಅನೇಕ ಪ್ರಾಚೀನ ಶಿವಲಿಂಗಗಳ ರುದ್ರಾ
ಭಿಷೇಕ ಮತ್ತು ಶ್ರೀ ಒನಕಾರುದೇವಿಯ ಕುಂಕು
ಮಾರ್ಚನ ಕಾರ್ಯವು ಶ್ರೀ ವೀರಶೈವ ಧರ್ಮೋತ್ಕರ್ಷಕ
ಸಂಘದಲ್ಲಿ ಸ್ಥಾಪಿತವಾದ ಪಂಚವರ್ಣಧ್ವಜ ಭಕ್ತಧ್ವಜ
ಧರ್ಮಾಧ್ಯ ಜೈಕ್ಯತಾಸಮ್ಮೇಳನ ವಿದ್ಯಾರ್ಥಿ
ಗಳಂದ ವಿಘಾನೋಕ್ತವಾಗಿ ನೆರವೇರಿಸಲ್ಪಟ್ಟಿತು ಈ
ಶಿವಲಿಂಗೇಶ್ವರ ಶುಭಾಶೀರ್ವಾದದಿಂದ ಮಳೆಬೆಳೆಗಳು
ಉತ್ತಮ ಫಲಕಾರಿಯಾಗಿದ್ದು ಯಾವತ್ತೂ ಜನರು
ಸಂತೋಷಭರಿತರಾಗಿದ್ದಾರೆ ಹಾಗೂ ಸದ್ಯ ಮುಂದೆ
ಗ್ರಹಯೋಗದಿಂದ ದೇಶಕ್ಕೆ ಉಂಟಾಗುವ ಯುದ್ಧಾದಿ
ಮತ್ತು ರೋಗಾದಿಗಳ ಕಾಟದಿಂದ ಜಲಪ್ರಳಯದ ಭೀತಿ
ಯನ್ನು ಕಡಿಮೆಮಾಡಿ ಸರ್ವರಿಗೂ ಸುಖಶಾಂತಿಯ
ನ್ನುಂಟುಮಾಡಲೆಂದು ಆ ದಯಾಘನನಿಗೆ ತಾರೀಖು
೧೧ ೯ ೫೦ ನೆಯ ಚಂದ್ರವಾರ ದಿವಸ ಅಂತ್ಯಮಂಗಲ
ವನ್ನು ಆಘಿಸಲಾಯಿತು

ಸಕ್ರೆಟರಿ
ಜ ಗು ವಿಶ್ವಾರಾಧ್ಯ ವಾಚನಾಲಯ, ಹೂಲಿ

ಶ್ರೀ ರುದ್ರಾಭಿಷೇಕದ ಪೂಜಾದ್ರವ್ಯಗಳು
(ಸಂವತ್ಸರ)

(ಆರ್ಘ್ಯ)

ಬಿಳೆಸಾಸ್ವಿ ಕತೆ ೨ಸರ ।
ಸುಲಲಿತ ಕರ್ಪೂರ ಕೋಮ್ಮಬಾಳದ ಬೇರುಂ ॥
ತಿಳಿಗುಲ್ಲಿವಾರುನ್ನವ್ಯವು ।
ಸಲೆಕಂಕರನಾಭಿಷೇಕಾರ್ಘ್ಯಮೆನಿಕ್ಕುಂ ॥೧॥

(ಪಾದ್ಯ)

ತಿಲದರ್ಭೆ ಭತ್ತ ಜವೆ ಸ ।
ಲ್ಲಲಿತಾಕಳಹಾಲು ಸಾಸ್ವಿಸಪ್ತ್ಯವ್ಯಗಳ್ ॥
ಇಳೆಯೋಳ್ ಪಂಡಿತರಿಯಲ್ ।
ಮಲಿಕರನಾಭಿಷೇಕಗೆಯ್ಯೆವಾದ್ಯವೆನಿಕ್ಕುಂ ॥೨॥

(ಆಚಮನ)

ಕರ್ಪೂರಕೇಸ್ರಿಕೋಷ್ಮಂ ।
ಒಪ್ಪುವ ಯಾಲಕ್ಕಿ ಚೆನ್ನ ಜಾಜಿಕಜೋರಂ ।
ತಪ್ಪದೆ ವೈದಿಕರಿಯಲ್ ।
ಮುಪ್ಪುರಹರನಾಭಿಷೇಕಾಚಮನಕ್ಕುಂ ॥೩॥

(ಪಂಚಾಮೃತ)

ಸದುಮಲಗೋಕ್ಷೀರವು ೩ ।
ದ್ಧಧಿಶ್ಯೆತ ಮೇಣ್ ಜೇನುತುಪ್ಪಸಕ್ಕರೆಯೆಂಬೀ ॥
ವಿಧ ಪಂಚಾಮೃತವಭಿಷೇಕ ।
ಕೃದಿ ಶ್ರೀಕಿವಲಿಂಗನೊಲಿದು ಸೌಖ್ಯವಪ್ಪಿಸಮಂ ॥೪॥

ಕವಿಲಾಸಾಧಿ ಶ್ರೀಗುರುಸಿದ್ಧಕಿತಾಚಾರ್ಯರು
ಮಹಂತಿಸಮ್ಮಠ, ಎಮ್ಮಿಗನೂರು

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸದ್ಗುರುವೇ ಪರಮಾಶ್ರಯಭೂತನು

ಲೇ—ಜರಪಟ್ಟಾಧ್ಯಕ್ಷ ಶ್ರೀ ಸಾ ಬ್ರ॥ ಶಿವಯೋಗಿಶಿವಾಚಾರ್ಯ ಸ್ವಾಮಿಗಳು, ಕಾಡಕುಂಬಿ ಹಿರೇಮಠ

ಸೃಷ್ಟಿದಾನಂದ ಘನಪರಮಶಿವದಿಂದ ಸೃಷ್ಟಿಸಲ್ಪಟ್ಟ ಈ ಜಗತ್ತಿನಲ್ಲಿ ಜೀವನ ಉತ್ಪತಿಯಾಗಲೀ ಅವನಿಷಿಯಾಗಲಿ ಆಗದೇಹಾದರೆ ಮನುಷ್ಯಜನ್ಮದಿಂದಲೇ ಪ್ರಾರಂಭವಾಗುವುದು ಮನುಷ್ಯನು "ಸ್ವಕರ್ಮಸೂತ್ರ ಗ್ರಥಿತೋಹಲೋಕಃ" ಎಂಬ ಜೈಮಿನಿಮಹರ್ಷಿಗಳ ವಚನದಂತೆ ಪೂರ್ವಜನ್ಮಾರ್ಜಿತವಾದ ಕರ್ಮಪಾಕದಿಂದ ಬದ್ಧನಾಗಿ ತನ್ನ ಕರ್ಮಾನುಸಾರ ಫಲವನ್ನು ಭೋಗಿಸುತ್ತಾನೆ ಧರ್ಮಾಧರ್ಮ ನಿಯಮಗಳ ಸಂಬಂಧವೂ ಅವುಗಳ ಪರಿಣಾಮಗಳ ಸಂಘಟನೆಯೂ ಮನುಷ್ಯರಿಗಲ್ಲದೆ ಇತರ ಪ್ರಾಣಿಗಳಿಗುಯುವುದಿಲ್ಲ ಜೀವನಚರಿತಾರ್ಥವನ್ನಷ್ಟೇ ಸಾಧಿಸಿಕೊಳ್ಳಲಿಕ್ಕೆ ಮಾತ್ರ ಅವುಗಳಿಗೆ ಗೊತ್ತಿರುತ್ತದೆ, ಸಂಸಾರ ತಾಪತ್ರಯರೂಪ ದುಃಖದಿಂದ ಬಿಡುಗಡೆಹೊಂದಿ ಸುಖವನ್ನು ಹೊಂದಬೇಕೆಂಬ ಪ್ರಬಲ ಇಚ್ಛೆಯು ಮನುಷ್ಯನಲ್ಲಿದ್ದಂತೆ ಅವುಗಳಲ್ಲಿ ಇದೆಯಾದರೂ ಮಾನವಭಿನ್ನ ಪ್ರಾಣಿಗಳ ಸುಖಾಪೇಕ್ಷೆಗೂ ಮನುಷ್ಯನ ಸುಖಾಪೇಕ್ಷೆಗೂ ಭೂಮ್ಯಾಕಾಶದಷ್ಟು ಅಂತರವಿದೆ ಯೆಂಬುದು ಅನುಭವದಿಂದಲೇ ಗೊತ್ತಾಗುತ್ತದೆ, ಅಂತು ಸಮಸ್ತ ಪ್ರಾಣಿಗಳ ಪ್ರಯತ್ನಗಳೆಲ್ಲವು ಸುಖವನ್ನು ಪ್ರಾಪ್ತಮಾಡಿಕೊಳ್ಳಲಿಕ್ಕೋಸ್ಕರವೇ ಇರುತ್ತವಂದಾಗಾಯಿತು ಸಿದ್ಧಾಂತ ವೈದ್ಯಾನಾದಿ ವಿಷಯಗಳಲ್ಲಿ ಮಾನವರಿಗೂ ಒಂದೇ ಸಾಮ್ಯವಿದ್ದರೂ ಮನುಷ್ಯನು ಮಾತ್ರ ಈ ವಿಷಯದಲ್ಲಿ ಎಷ್ಟೋ ದೂರ ಮುಂದುವರಿದವನಿರುತ್ತಾನೆ, ತನ್ನ ಸುಖದ ಧ್ಯೇಯ ಸಾಧನೆಗಾಗಿ ಧನ-ಧಾನ್ಯ-ಭೂಮಿ ಪಶು ಪುತ್ರ ಕಳತ್ರ ಮೊದಲಾದ ಅನೇಕ ಸುಖಸಾಮಗ್ರಿಗಳನ್ನು ಸಂಗ್ರಹಿಸಿ ಕೊಂಡು ಯಚ್ಛಿಂತಿತ ಸುಖಾನಂದನನ್ನು ಹೊಂದುತ್ತಿದ್ದರೂ ಅವನ ಸುಬೇಚ್ಛೆಯು ಪ್ರಬಲವಾಗುತ್ತಲೇ ಇರುತ್ತದೆ ಹೀಗೆ ಪ್ರಬಲನಾದ ಸುಬೇಚ್ಛೆಯನ್ನು ಪೂರ್ಣಮಾಡಿಕೊಳ್ಳುವುದಕ್ಕಾಗಿ ಪ್ರಪತ್ಯಾಗವಾಗುವವರೆಗೂ ಪ್ರಯತ್ನವನ್ನು ಒಂದೇ ಸಮನೆ ಮಾಡುತ್ತಾನೆ ಕಡೆಗೂ ಅವಿವೇಕ ಪ್ರಾಬಲ್ಯದಿಂದ ಸುಖೇಚ್ಛೆಯು ಪೂರ್ಣವಾಗದೆ ಹೊಲಿ ಕಂಗೆಟ್ಟು ಅಂಧಕಾರದಲ್ಲಿ ಸಿಕ್ಕಿ ಕುರುಡಿನಂತೆ ಮುಗ್ಗರಿಸುತ್ತ ಮಹಾದುಃಖವುಂಟಾಗಿ ಅಯ್ಯೋ?! ನನ್ನನ್ನು ಈ ಮಹಾದುಃಖದಿಂದ ಬಿಡಿಸಿ ನಿಜಸುಖವನ್ನು ತೋರಿಸುವವರು ಯಾರಾದರು ಇರುವರೆ? ಯಾವ ಉಪಾಯವನ್ನು ಮಾಡಿದರೆ ಈ ದುಃಖದಿಂದ ನಾನು ಪಾರಾಗಬಹುದು ಎಂದು ಯೋಚಿಸುತ್ತಾ ಕಳವಳಪಡುತ್ತಾನೆ ನಾನು ಇಷ್ಟು ದಿವಸ ನಿಸ್ಸಾರ ವಸ್ತುಗಳಲ್ಲಿ ಸುಖವನ್ನು ಹುಡುಕಿದ್ದು ಮಳಲಿನಲ್ಲಿ ಎಣ್ಣೆಯನ್ನು ತೆಗೆಯಲು ಪ್ರಯತ್ನಪಡುವ ಮೂರ್ಖನಂತೆ ಎನ್ನ ಗತಿಯಾಯಿತಲ್ಲ! ನನ್ನ ಮೂರ್ಖತನಕ್ಕೆ ಬೆಲೆಯುಂಟೆ ಎಂದು ಮಹಾ ಚಿಂತೆಪಡುತ್ತಾನೆ ಕಡೆಗೆ ಕಣ್ಣೀರಿಡುತ್ತಾನೆ ಇಂಥಾ ಸ್ಥಿತಿಯು ಪ್ರಾಪ್ತವಾಗಬೇಕಾದರೆ—

" ಬಹುಜನ್ಮಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ।
ಶುದ್ಧಾಂತಃಕರಣೋದೇಹೇ ಪಿಂಡಕರ್ಪೇನಗೀಯತೇ ॥

ಎಂಬ ರೀತ್ಯಾಗಿರಬೇಕಾದ್ದೆಯಂತೆ ಅನೇಕ ಜನ್ಮಾರ್ಜಿತವಾದ ಪುಣ್ಯವಿಶೇಷವು ಬೇಕಾಗುತ್ತದೆ. ಅಂದರೆ ಬಹು ಜನ್ಮಗಳಲ್ಲಿ ಮಾಡಿದ ಪುಣ್ಯಕರ್ಮಗಳಿಂದ ಪಾಪಸಮೂಹವು ನಷ್ಟವಾಗಲಾಗಿ ಜೀವನು ಪರಿಶುದ್ಧವಾದ ಅಂತಃಕರಣವುಳ್ಳವನಾಗಿ "ಪಿಂಡ" ಎಂದು ಹೇಳಿಸಿಕೊಳ್ಳುವನು. ಇಲ್ಲಿಂದಲೇ ಮನುಷ್ಯನಿಗೆ ಹೊಸ ಜೀವನವು ಪ್ರಾಪ್ತವಾಗುತ್ತದೆ ಜೀವನಾಂಧಕಾರದಲ್ಲಿ ಕಿರುಬೆಳಕು ಬೀಳುತ್ತದೆ, ಲೌಕಿಕಕಾರ್ಯಗಳಿಂದ ಆಯಾಸಗೊಂಡ ಮನುಷ್ಯನು ವಿಶ್ರಾಂತಿಸುಖವನ್ನು ಅಪೇಕ್ಷಿಸುವಂತೆ ಮನುಷ್ಯನು ಲೌಕಿಕ ವಸ್ತುಗಳಾದ ಸ್ತ್ರೀ ಪುತ್ರ ಧನಾದಿಗಳಿಂದ ಮುಕ್ತನಾಗಲು ಹವಣಿಸುತ್ತಾನೆ. ಆಗ ಅವನಿಗೆ ಸಂಸಾರ ಸುಖಾದಿಗಳಲ್ಲಿ ರುಚಿ ತೋರದೆ ವಿಶ್ರಾಂತವಾಸನೆ ಪರಮಶ್ರೇಯಸ್ಸಿನಿಸುತ್ತದೆ. ಆಗ ಅವನು ಮೌನವಾಗಿ ಯೋಚಿಸಿ ಕಡೆಗೆ ಮಹದಾನಂದ ರೂಪವಾದ ಶಾಶ್ವತ ಸುಖವನ್ನು ಪ್ರಾಪ್ತಮಾಡಿಕೊಡುವ ಮಹದಾಶ್ರಯವನ್ನು ಪಡೆಯಲು ಇಚ್ಛಿಸುತ್ತಾನೆ, ಜಗತ್ತಿನಲ್ಲಿ ಪ್ರತಿಯೊಂದು ವಸ್ತುಗಳು ಅರೋಗ್ಯದಾಶ್ರಯದಿಂದಲೆ ಕೂಡಿದವುಗಳಿರುತ್ತವೆ ಸೃಷ್ಟಿಗೆ ಮೂಲಭೂತ ಗಳಾದ ಪಂಚತತ್ವಗಳು ಅಣು ಪರಮಾಣುಗಳು. ಗ್ರಹೋಪಗ್ರಹಗಳು, ಒಂದನ್ನೊಂದು ಆಶ್ರಯಿಸಿಕೊಂಡೇ ಇರುತ್ತವೆ. ಪ್ರಜೆಗಳು ರಾಜನನ್ನು, ಸತಿಯು ಪತಿಯನ್ನು, ಶಿಷ್ಯರು ಗುರುಗಳನ್ನು, ರೋಗಿಯು ವೈದ್ಯರನ್ನು, ಬಡವರು ಶ್ರೀಮಂತರನ್ನು, ಮಕ್ಕಳು ಮಾತಾ ಪಿತೃಗಳನ್ನು, ಒಳ್ಳೆಯುಗಿಡವನ್ನು, ಮುದುಕರು ಕೋಲನ್ನು ಆಶ್ರಯಿಸಿಕೊಂಡಿರುವಂತೆ ಇವನು (ಜೀವನು) ಮಹದಾಶ್ರಯವನ್ನು ಪಡೆಯುವವರು ಪಡೆಯಲು ಹವಣಿಸುವುದು ಯಥಾರ್ಥವೇ ಸರಿ (ಇಲ್ಲಿ ಮಹದಾಶ್ರಯ ವೆಂದರೆ ಸಂಸಾರ ತಾಪತ್ರಯರೂಪ ದುಃಖನಿಂತತ್ತ ಜೀವಿಗಳಿಗೆ ಅಭಯದಾನವನ್ನಿತ್ತು ಶಾಶ್ವತ ಒಽಸುಖ ನಂದನವನ್ನು ಪ್ರಾಪ್ತಮಾಡಿಕೊಡುವ ಸದ್ಗುರುಗಳ ಆಶ್ರಯವೇ ಮಹದಾಶ್ರಯವೆಂದರ್ಥ) ಇಂಥಾ ಮಹಾಗುರುಗಳು ವಾಸಮಾಡಿದ ಸ್ಥಲಕ್ಕೇನೆ ಮಕ್ಕಳೆಂತಲೂ ಗುರುಕುಲಗಳೆಂತಲೂ ಆಶ್ರಮಗಳೆಂತಲೂ ಹೆಸರು. ಇಂಥಾ ನುಳಗಳು ಅಧವಾ ಗುರುಕುಲಗಳು ಅಯಾ ಮತಾಚಾರ್ಯಾರಿಂದ ಸ್ಥಾಪಿಸಲ್ಪಟ್ಟು ಭರತಖಂಡದ ತುಂಬಾ ಯಿರುತ್ತವೆ, ಇದರೊಳಗೆ ವೀರಶೈವ ಧರ್ಮರಾಜ್ಯಾಧಿಪತಿಗಳಾದ ಪಂಚಪೀಠಾಧಿಪತ್ಯರ ಮುಖ್ಯ ಮಠಗಳು ಅಂದರೆ ರಂಭಾಪುರಿ, ಉಜ್ಜಯಿನಿ, ಹಿಮವತ್ಕೇದಾರ, ಶ್ರೀಶೈಲ, ಕಾಶಿ ಈ ಮಹಾಮಠಗಳಲ್ಲದೆ ಇವುಗಳ ಶಾಖೋಪಶಾಖೆಗಳಾದ ಲಕ್ಷಾಂತರ ಮಕ್ಕಳು ಪ್ರಪಂಚದ ತುಂಬಾ ಯಿರುತ್ತವೆ

ಈ ವೀರಶೈವ ಮಕ್ಕಳು ಇರ ಮತಾಚಾರ್ಯ ಉಪಾಚಾರ್ಯ ಮಠಗಳಂತೆ ಮಧ್ಯಕಾಲದಲ್ಲಿ ಸ್ಥಾಪಿಸಲ್ಪಟ್ಟವುಗಳಲ್ಲ! ಕೃತಯುಗಾದಿಯಂದಲೇ ಸ್ಥಾಪಿಸಲ್ಪಟ್ಟವುಗಳೆಂಬುದು ಸಿಗನಾಗಮಾದಿ ವಿಶಿಷ್ಟಾಗಮ ಗ್ರಂಥಗಳಿಂದಲೂ ತಾಮ್ರಶಾಸನ ಶಿಲಾಶಾಸನಗಳಿಂದಲೂ ಈ ಪಂಚಪೀಠಾಸನ ಮಠಗಳ ವಿಷಯವಾ ಮಾಧ್ಯಾಸ್, ಮೆಂಬಯು, ಆಲಶಾಬಾದ, ಮೊದಲಾದ ಹೈಕೋರ್ಟು ಜಡ್ಜರು ಈ ಮಾರ್ಗನಿರ್ಣಯ ಅಡ್ಡಿಮಾಡಿಸಿಂದಲೂ, ಮತೀಯ ಪರಮತೀಯ ಮತಗ್ರಂಥಗಳಿಂದಲೂ-ಇಂಗ್ಲೆಂಡ್ ಅಮೆರಿಕಾ, ಜರ್ಮನಿ ಫ್ರಾನ್ಸ್, ಮೊದಲಾದ ದೇಶಗಳ ರಾಯಭಾರಿಗಳಾದ ಪಂಡಿತರ ರಿಪೋರ್ಟುಗಳಿಂದಲೂ ತಿಳಿಯಬರುತ್ತದೆ ಮುಖ್ಯವಾಗಿ ಈ ಎಲ್ಲಾ ಮತಗಳ ಉದ್ದೇಶವು ಮಾನವ ಸಮಾಜವನ್ನು ಸಮಾಜ ಘಟಕಪ್ರಾಯವಾದ ಮಾನವನನ್ನು ಸಂಸಾರ ಸಾಗರದಿಂದ ಉದ್ಧರಿಸುವುದೇ ಆಗಿರುತ್ತದೆ. ಅಂತೆಯೇ ಅಮರ ಸಿಂಹನು ಕೂಡಾ ತನ್ನ ನಿಘಂಟಿನಲ್ಲಿ "ಮರಕ್ಕ್ಯತ್ಪಾದಿನಿಲಯಃ" ಎಂದು ಹೇಳಿರುತ್ತಾನೆ ಅಂದರೆ ಶಾಲೆಯಲ್ಲಿ ಲೌಕಿಕೋಪಯುಕ್ತಗ್ರಂಥಗಳಾದ ಗಣಿತ ಭೂಗೋಳ ವಾರಿಗಳು ಚಿಕ್ಕಮಕ್ಕಳಿಗೆ ಬೋಧಿಸುವಂತೆ ಮಠಗಳಲ್ಲಿಯೂ ಕೂಡಾ ಇವುಗಳನ್ನು ಬೋಧಿಸುತ್ತಾರೆಂತಲ್ಲ? ಯಾವ ಯಾವ ವಿದ್ಯೆಯನ್ನು ಕಲಿಯುವದರಿಂದ ಸರ್ವ ದುಃಖಗಳು ನಾಶವಾಗಿ (ಆತ್ಮಾನಾತ್ಮವಿಚಾರವುಂಟಾಗಿ) ಮತ ದಾನಂದವು ಪ್ರಾಪ್ತವಾಗುತ್ತದೆಯೋ ಅಂಥಾ ವಿದ್ಯೆಯೇ ವಿದ್ಯೆಯು! ಪರಾವಿದ್ಯೆಯು! ಆಧ್ಯಾತ್ಮ ವಿದ್ಯೆಯು!! ಇಂಥಾ ವಿದ್ಯೆಯನ್ನು ಬೋಧಿಸುವ ಸ್ಥಳಗಳಿಗೆ ಮಕ್ಕಳೆಂಬು ಹೆಸರು. ಸಂಸಾರ ದುಃಖನಿವಃತ್ತಿರೂಪ ಜೀವರು ಆರ್ಥಾತ್ ಮನುಷ್ಯರು ಮಹದಾಶ್ರಯವನ್ನು ಪಡೆಯ ಬೇಕೆಂದರೆ ಇಂಥಾ ಮಕ್ಕಳ ಮತಾಧಿಪತಿಗಳಾದ ಗುರುಗಳ ಆಶ್ರಯವನ್ನು ಮಾಡಬೇಕೆಂದರ್ಥ! ಸದ್ಗುರು ಗಳ ಆಶ್ರಯವನ್ನು ಮಾಡದ ವನಜ ಮಾನವರಿಗೆ ಸುಖವೆಲ್ಲಿ? ಈ ಬಗ್ಗೆ ಆದ್ಯೆಷಾಚಾರ್ಯರಾದ ಶಂಕರಾಚಾರ್ಯರು ಕೂಡಾ—

ಸತ್ಸಂಗತ್ವೇ ನಿಸ್ಸಂಗತ್ವಂ।
ನಿಸ್ಸಂಗತ್ವೇ ನಿರ್ಮೋಹತ್ವಂ ॥
ನಿರ್ಮೋಹತ್ವೇ ನಿಶ್ಚಲತತ್ವಂ।
ನಿಶ್ಚಲತತ್ವೇ ಜೀವನ್ಮುಕ್ತಃ ॥

ಎಂಬುದಾಗಿ ಹೇಳಿಸಿದ್ದಾರೆ. ಅಂತೂ ಮಕ್ಕಳೆಂಬು ನಾಮಾಂತರವನ್ನು ಪಡೆದ ಗುರುಕುಲಗಳು ಅಥವಾ ಆಶ್ರಮಗಳು ಮಾನವನ ಭಾವವನ್ನು ಸಂಸಾರ ಮೋಹದಿಂದ ದೇವಭಾವಕ್ಕೆ ತಿರುಗಿಸಿ ಶಿವಭಾವವನ್ನಾಗಿ ಮತ್ತಕೃತ್ಯನ್ನಾಗಿ ಸರಿಸಿ ಬದಲಾಯಿಸುವದೇ ಇವುಗಳ ಕರ್ತವ್ಯವಾಗಿದೆ ಆದಕಾರಣ " ಮುಖ್ಯತತ್ವ ಮಹತ್ಕಯೆಯೆ " ಎಂಬ ನಾರದಮಹರ್ಷಿಗಳ ಅಪ್ಪಣ್ಣಾಯದಂತೆ ಜಗದ್ವಿಮಲ ತನೂ ಲೋಭ ಮೋಹವಿದೂರವೂ ಜೀವಾತ್ಮ ಪರಮಾತ್ಮರ ಯಥಾರ್ಥ ಸ್ವರೂಪವನ್ನು ತಿಳಿದವನೂ, ಸಂಸಾರ ಸಂಬಂಧವಾದ ವಿಷಯಬೃಮದಿಂದ ದೂರವಾದವನೂ ಶಿವಾದ್ವೈತ ಸಿದ್ಧಾಂತ ಸ್ವರೂಪವನ್ನು ಜೀವಾಗಿಳಿದವನೂ ಶಿಷ್ಯನ ಮನಿಸ್ಸಲ್ಲಿ ಉಂಟಾಗುವ ಸಂಶಯರೂಪ ವಿಭ್ರಮಗಳನ್ನು ದೂರವಾಡುವವನೂ ಸಮಸ್ತ ತಂತ್ರಗಳ ಪ್ರಯೋಗವನ್ನು ಬಲ್ಲವನೂ ಶಿವಧರ್ಮನಿಷ್ಠನೂ ಸತ್ಯವಾದಿಯೂ ಶಿಷ್ಯಪ್ರಶಿಷ್ಯರಿಂದೊಡಗೂಡಿದ ಪಂಚ ಗುರುಸ್ಥಲದ ವಂಶಪರಂಪರೆಯಿಂದ ಪ್ರಾಪ್ತವಾದ ಆಚಾರಧರ್ಮಗಳುಳ್ಳವನೂ ಕುತ್ಸಿತಾಚಾರಗಳಿಂದ ದೂರನಾದವನೂ ಶಿವಧ್ಯಾನಾಸಕ್ತನೂ ಶಾಂತನೂ ಶಿವಸ್ವರೂಪವನ್ನು ಬಲ್ಲವನೂ ಭೂಮ್ಯಧ್ಯೂಲನ ಭಕ್ತಪ್ರಿಯುಂಡ ರುದ್ರಾಕ್ಷಗಳನ್ನು ಧರಿಸುವುದರಲ್ಲಿ ಆಸಕ್ತವಾದ ಮಹಾ ಸ್ಫುಳ್ಳವನೂ ಭಕ್ತಸ್ವರೂಪವನ್ನು ಬಲ್ಲವನೂ ಶಿವಲಿಂಗ ಧಾರಣ ಶಿವಯೋಗಸಾಧನ ಶಿವಲಿಂಗಪೂಜಾದಿಗಳಲ್ಲಿ ನಿತ್ಯ ತನಾದವನೂ ಲಿಂಗಾಂಗಸಾಮರಸ್ಯವನ್ನು ತಿಳಿದು ಶಿವಾದ್ವೈತೋಪಾಸನೆಯಲ್ಲಿ ಮಗ್ನನಾದನೂ ವಿಕ್ಕೈತ್ವ ಕತಸ್ಥಲ (ಅಂಗ-ಲಿಂಗಸ್ಥಲ) ಗಳ ಭೇದಸ್ವರೂಪವನ್ನು ತಿಳಿದವನೂ ಸದಾ ಶುಭವಚನಗಳನ್ನಾಡುವವನೂ ಆದ ಗುರುವನ್ನು ಹೊಂದಿ ಸೇವಾಸಕ್ತನಾದ ಜೀವನಿಗೆ (ಶಿಷ್ಯನಿಗೆ) ಗತಿಯೂ ಪರಮಾನಂದರೂಪ ಮುಕ್ತಿಯೂ ಲಭ್ಯವಾಗದಿರದು. ಉಳಿದ ಜಡಜೀವಿಗಳಿಗೆ ಸಾಧ್ಯವಿಲ್ಲ ಹುಟ್ಟ ತೃಣಗಳಂದ ಬಳಿದಿದ ಮಿಮುಷ್ಯನು ಅಹಾರಾದಿಗಳಿಂದ ಕೃಪ್ತಿಯನ್ನು ಪಡೆದಂತೆ ಭಯಂಕರ ಸಂಸಾರ ತಾಪತ್ರಯದುಃಖದಿಂದ ಬಳಲಿದ ಮಮುಷ್ಯನು ಶ್ರೀಗುರುಸೇವೆ ಮಹಾನುಭವತಾಪನದಿಂದ ತೃಪ್ತಿಯನ್ನು ಹೊಂದುತ್ತಾನೆ, ದುಃಖಸಾಗರದಿಂದ ಕಡೆಸಾಗುತ್ತಾನೆ ಭವಸಾಗರದಿಂದ ಪಾರಾಗಿ ಪರಮಾನಂದರೂಪ ಶಿವಪದವನ್ನು ಪಡೆಯಲು ಗುರುವಚನವೇ ಕಾರಣವಲ್ಲವೆ ಬೇರೆಯಿಲ್ಲ ಈ ಬಗ್ಗೆ ಶಿವಯೋಗ ಸಿದ್ಧರಾದ ಶ್ರೀನಿಜಗುಣರು ಕೂಡಾ ತಮ್ಮ ಗೀತೆಯಲ್ಲಿ—

" ಶ್ರೀ ಗುರುವಚನೋಪದೇಶವನಾಲಿಸಿದಾಗಳಹುದು ನರಂಗೆ ಮುಕುತಿ "

" ನೆನೆವುದನುದಿನದುದಯಕಾಲದೊಳೆಶ್ವರನಿಕೆ
ಯೊಳು | ವಿನುತ ಗುರುಮೂರ್ತಿಯಂಶ್ರಿಯನು "

" ಶ್ರೀಗುರುವಚನವಿಂದಧರಿಸುಧೆಯಂಟೆ "
ಸಾವನಾತ್ಮಕ ಶಂಭುಲಿಂಗನೆ ತಾನಾದ ನಿಜಕ್ಕೆವಲ್ಯ
ಪದವೀವನೆಗೆ ವಿಹತ ಗುರುವಹನು ॥

ಎಂದು ಮುಕ್ತಕಂರದಿಂದ ಹಾಡಿದ್ದಾರೆ ಘನವಿರಕ್ತರೂ ಪರಮ ತಪಸ್ವಿಗಳೂ ಆದ ಸರ್ವಭೂಷಣ ಶಿವಯೋಗಿಗಳು ಕೂಡಾ ತಮ್ಮ ಗೀತೆಯಲ್ಲಿ " ಗುರುಬೋಧೆಯಿಂದ ತಿಳಿಯಮಾದುದೊಂದೆಂದೆ! ಪರತತ್ವವನ್ನು ತೋರಿಸುವವಾಗಿ " ಎಂದು ಸುಮಧುರ ಆಧ್ಯಾತ್ಮಸಂಗೀತವನ್ನು ಹಾಡಿ ಮಾನವ ಸಮಾಜಕ್ಕೆ ಸುಪಥವನ್ನು ತೋರಿಸಿದ್ದಾರೆ. ಅಂತೆಯೇ ಶೃತಿಗಳೂ—

" ನಗುರೋರಧಿಕಂ ತತ್ವಂ ! ನಗುರೋರಧಿಕಂ ತಪಃ !
ನಗುರೋರಧಿಕಂ ವಿದ್ಯಾ ! ನಾಸ್ತಿತತ್ವಂ ಗುರೋಃ ಪರಂ !
ಯಸ್ಯದೇವೇಪರಾಭಕ್ತಿರ್ಯಥಾದೇವೇ ತಥಾಗುರೌ ॥

ಎಂಬುದಾಗಿ ಘಂಟಾಘೋಷವಾಗಿ ಸಾರುತ್ತವೆ. ಆ ಕಾರಣ ವೇದಾಗಮೋಪನಿಷತ್ಪ್ರಸಿದ್ಧವಾದ ಗುರುಗಳಶ್ರಯವನ್ನು ಆಶ್ರಯಿಸುವುದು ಮುಖ್ಯವಾದ ಕಾರ್ಯವಾಗಿದೆ. ಹೀಗೆ ಪದವಾದ ಪಂಚಪೀಠಗಳು ಪಾಶಿಲು ಅಂಗಗಳನ್ನು ಆಶ್ರಯಿಸುವಂತೆ ಸಂಸಾರ ಸಾಗರರೂಪ ಪದಿಯನ್ನು ಪಾಟುಪಡಲು ಶ್ರೀಗುರುವೆಂಬ ನಾವಿಕನನ್ನು ಆಶ್ರಯಿಸದೆ ಗತ್ಯಂತರವಿಲ್ಲ ಇಷ್ಟೆ ಗುರುರೂಪ ಪ್ರಸಾದದಿಂದಲೂ ಜಾತಿ ಕ್ಷೀಣಾದಿ ಮಕರಗಳಕ್ಕಮಲಾದಿಗಳಿಂದ ಕೂಡಿರುವ ಅಗಿರುವ ಸಂಸಾರ ಸಮುದ್ರವನ್ನು ಪಾಟುಪಡಲು ಪ್ರಯತ್ನಪಡುವ ಜೀವಾತ್ಮನೆಂಬ ಪ್ರಯಾಣಿಕ

ಗುರುವೆಂಬ ನಾಮಕಪ್ರಾಶ್ರಯಿಸಿ ಅವನ ಮೋಹಾ
ದೋಣಿಯಲ್ಲಿ ಉಳುತುಕೊಂಡಾಗ್ಗೆ ಮಾತ್ರ
ವಾತ್ಮರು ಪಾರಾಗಬಹುದಲ್ಲದೆ ಅನ್ಯಥಾ ಪಾರಾ
ರರು ಯಾವ ಗುರುವರೇಣ್ಯನ ಉಪದೇಶ ವಚನ
ು ಅಜ್ಞಾನಂಧಕಾರವನ್ನು ನಾಶಮಾಡುವದರಲ್ಲಿ ಶರ
ಲದ ಚಂದ್ರನ ಕಿರಣಗಳಂತೆ ಇರುವವೋ ಯಾವ
ರುವನ ಪವಿತ್ರವಾದ ಉಪದೇಶವಚನ ಧಾರೆಯು
ನು ಶಿವನು ಉಹುದೋ ಅಲ್ಲವೋ ಎಂಬ ಸಂಶಯ
ಪ ಅರ್ಥಾ ಸಮೂಹವನ್ನು ನಾಶಮಾಡುವದರಲ್ಲಿ
ಮರಿಯಾಂವದೋ ಜೀವಾತ್ಮರುಗಳಿಗೆ ಜನ್ಮ
ತ್ಯಾಂತರಗಳಿಂದ ಬಾಧೆಗೊಳಿಸುವ ಸಂಸಾರವೆಂಬ
ೀಗವನ್ನು ನಾಶಮಾಡಲು ಸಮರ್ಥವಾದ ಶಿವಾ
ತ್ಮಜ್ಞಾನವೆಂಬ ಮಹೌಷಧವನ್ನು ಯಾವಾತನು
ನುಗ್ರಹಿಸುವನೋ ಅಂಥಾ ಸದ್ಗುರುವನ್ನು ಆಶ್ರ
ಬೇಕೆಂಬುದೇ ಸಕಲ ಶಾಸ್ತ್ರಗಳ ಸಾರವಾಗಿದೆ.

ಲೋಕದಲ್ಲಿ ಜನರಿಗೆ ಅವರವರ ಪುರಾಕೃತ ಕರ್ಮ
ುಸಾರವಾಗಿ ಪ್ರಾಪ್ತವಾಗುವ ಭೌತಿಕ (ನಾತ-ಪಿತೃ
ಸ್ಯ) ಸಂಬಂಧ ರೋಗಗಳನ್ನು ಪರಿಹಾರಮಾಡಲು
ೈದ್ಯರು ಇರುಂತೆ ಮಾನವನಿಗೆ ಜನ್ಮಜನ್ಮಾಂತರಗಳಿಂದ
ಂಟುಬಿದ್ದಿರುವ ಭವರೋಗವನ್ನು ಯಾವ ವೈದ್ಯನೂ
ಳೆಯಲಾರನು ಶಿವಪ್ರಸೂಪಣಾದ ಶ್ರೀ ಗುರುವೇ ಭವ
ೋಗವೈದ್ಯನಲ್ಲದೆ ಬೇರೆ ಯಾರಿಂದಲೂ ಸಾಧ್ಯವಲ್ಲ!
ಂಥಾ ಭವರೋಗ ವೈದ್ಯನಾದ ಶ್ರೀ ಗುರುವು ಶಿಷ್ಯರಿಗೆ
ಪ್ರಸಾದಾಗಿರೋಣಾದರೆ ಅನೇಕ ಕೋಟಿ ಜನ್ಮಜನ್ಮಾಂತ
ದ ಪುಣ್ಯಫಲ ಸಂಪತ್ತಿಯಿಂದ ಶಿವಕಾರುಣ್ಯವನ್ನು
ಡೆದರೆಯೇಆಗುತ್ತದೆ. ಈ ಬಗ್ಗೆ ನಮ್ಮ ಅಭಿಪ್ರಾಯ
ಂತೆ ಹೇಳಬೇಕಾದರೆ ಶ್ರೀ ಗುರುವಿನ ಮತವೇ ದವಾ
ನಾಯು, ಶ್ರೀ ಗುರುವೇ ಡಾಕ್ಟರನು. ಶಿವಯೋಗ
ಪ್ರಸಾದ ಪವಿತ್ರಗುರುಸ್ಥಲ ಜಗದುದ್ಧಾರಿಯೇ (ಸಂ
ಮನು) ಕಾಂಪೌಂಡರನು ಈ ಉಭಯರಿಂದ ಕೊಡ
ಟ್ಟ ಪಾರೋದಕವೇ ಕಷಾಯವು (ಟಾನಿಕ್), ಪ್ರಸಾ
ನೇ ಮಾತ್ರೆಯು, ಸಂಸಾರ ಮಾಯಾಮೋಹ ನಿವೃ
ಯುಂಟಾಗಿ ನಿತ್ಯಾನಿತ್ಯವಸ್ತು ವಿವೇಕ ಫಲಭೋಗ
ುರಾನ್ಯಾನಂತರ ಪ್ರಾಪ್ತವಾಗುವ ಶಿವಸುಜ್ಞಾನದರೂಪ
ುಕ್ತಿಭಾವನೆಯೇ. ರೋಗನಿವಾರಣೆಯು ಇಂಥಾ
ುಯಂಕರ ಭವರೋಗನನ್ನು ನಿವಾರಣೆಮಾಡುವ ಸಮ
ರ್ಥನಾದ ಶ್ರೀ ಗುರುರೂಪ ವೈದ್ಯನನ್ನು ಆಶ್ರಯಿಸದೆ
ದ್ದಲ್ಲಿ ರೋಗ ನಿವೃತ್ತಿಯಾಗುವುದೆಂತು?

"ತೇಜೋವಿನಾಸಶಸ್ಯಾಂತೇ: ಕಥಂಸ್ಯುರತಿ
ಂಕಜ" ಎಂಬ ಶ್ರೀಜಗದ್ಗುರು ರೇಣುಕಭಗವತ್ಪಾದರ
ಪ್ರತಿಯೆಂತೆ ಸೂರ್ಯನ ತೇಜಸ್ಸಿಲ್ಲದೆ ಕಮಲವು ಹೇಗೆ
ರಳುವಿದಿಲ್ಲವೋ ಹಾಗೆ ಶ್ರೀ ಗುರು ನಿನ್ ಉಪದೇಶವನ್ನು
ಡೆಯದೆ ಶಿಷ್ಯನ ಹೃದಯರೂಪ ಕಮಲವು ವಿಕಸಿತ
ಾಗುವದಿಲ್ಲ! ಅಂದರೆ ಅಧ್ಯಾತ್ಮಿಕಾದಿ ತಾಪತ್ರಯರೂಪ
ುಃಖಾಗ್ನಿಯು ನಾಶವಾಗದೆ ಪರಮಪದವಾದ ಶಾಂತಿ
ು ಪ್ರಾಪ್ತವಾಗುವದಲ್ಲಿ ಸರ್ವಾತ್ರಯ ಭಯಭಾತನೂ ಜೀವರ
ಶಿತ್ವಲ) ಭವರೋಗನನ್ನು ನಾಶಮಾಡುವಲ್ಲಿ ವೈದ್ಯ
ರೂಪನೂ ಶಿವಾನಂದನೆಂಬ ಮೋಕ್ಷರೂಪ ಫಲವನ್ನು
ನುಗ್ರಹಿಸು ಳ್ಳವನ್ನುವದಂತಿರುವವನೂ ಆದ ಶ್ರೀಗುರು
ನ ಪಾದವೆ ಆಶ್ರಯವನ್ನು ನೂಡಲಿಕ್ಕೆ ಯೋಗ್ಯಸ್ಥಾನ
ಾಗಿದೆಯೆಂಬುದು ಕನ್ನಡಿಯಂತೆ ಪ್ರಕ್ಷವಾಗಿ ತಿಂದು
ುರುತ್ತದೆ ಅಂತೆಯೇ "ಹೀನಾತ್ಮಯನ ಕರ್ತವ್ಯಂ
ರ್ತವ್ಯಂ ಮಹದಾತ್ಮಯ:" ಎಂಬ ಮಹಾತ್ಮರ ವಚನವು
ತ್ಯಕ್ಷ ಸಿದ್ಧವಾಮದಾಗಿದೆ ಅದಕಾರಣ ಯಾರಿಗೆ ಜನನ
ುರಣರೂಪಸಂಸಾಹದಿಂದ ಪಾರಾಗಲು ಇಚ್ಛೆಯಿರು
ದೋ ಸಮಸ್ತಪಾಪಗಳಿಂದ ವಿಶೇಷ್ಟಿಸಿ ಪರಿಶುದ್ಧಾಂತಃ
ರಣವುಳ್ಳವರಾಗಿ ಜೀವಧಾವನ್ನು ಬಿಟ್ಟು ಶಿವಧಾವ
ನ್ನು ಪಡೆದು ನಿತ್ಯಾನಿರತಿಕಯಾನಂದರೂಪ ಮೋಕ್ಷ
ನ್ನು ಪಡೆಯಬೇಕೆಂಬ್ಬಬಲೇಚ್ಛೆಯು ಯಾರಿಗುಂಟಾ
ುರುವದೋ ಸಂಸಾರ ರಥವನ್ನು ಇಹಲೋಕದಲ್ಲಿ ಸರ
ತಿಯಿಂದ ನಡೆಸಿಕೊಂಡು ಪರಲೋಕದವನ್ನು ಅಂಕರೆ
ಾಗಿ ಸಾಮರ್ಥ್ಯರೂಪ ಶಿವಸಾಯುಜ್ಯವನ್ನು ಪಡೆ
ುವಬೇಕೆಂಬ ಹೆಬಲವು ಯಾರಿಗೆ ಇರುವದೋ ಅವರು
ಶಿವಪ್ರಿಯರಾದ ಶ್ರೀಭವಹಗುರು ಶ್ರೀ ಜಗದ್ಗುರು ಪಂಚಾ
ರ್ಯರ ಪಾದಾರವಿಂದವನ್ನು ಆ ಶ್ರ ಯಿಸು ವ ದು
ುಖ್ಯ ಕರ್ತವ್ಯವಾಗಿರುತ್ತದೆ.

ವರ್ತಮಾನ ಸಂಗ್ರಹ

ಕೊರಿಯಾ ಯುದ್ಧರಂಗ

ಬೇಗು ಪಡೆಗಳ ಉತ್ಕರ್ಷದಲ್ಲಿ ಛೇಕರ ಚಾಕಗ

ಕೊರಿಯಾ ರಣರಂಗದಲ್ಲಿ ವಿಶ್ವಸಂಸ್ಥೆಯ ರಕ್ಷಣಾ ವ್ಯೂಹದ ಉತ್ತಾನ್ಯ ದಿಗ್ಭಾಗದಲ್ಲಿ ದಿ! ಕೊರಿಯನ್ ಪಡೆಗಳು ಎರಡು ಮೈಲಿ ದೂರ ಮುಂದೆ ಹೋಗಿವೆ ಎಂದು ಅಮೆರಿಕದ ೮ ನೆಯ ಸೇನಾದಳದ ಅಧಿಕಾರಿಗಳು ಪ್ರಕಟಿಸಿದ್ದಾರೆ

ಬ್ರಿಟಿಷ್ ಯೋಧರ ಸಹಾಯ

ಬೇಗುವಿಗೆ ಪಶ್ಚಿಮದಲ್ಲಿ ಬ್ರಿಟಿಷ್ ಪಡೆಗಳು ನುಸುಳಿ ಬರುತ್ತಿರುವ ಶತ್ರುಸೈನ್ಯವನ್ನು ಪಶ್ಚಿಹಟ್ಟುವ ಕಾರ್ಯದಲ್ಲಿ ತೊಡಗಿವೆ. ಬ್ರಿಟಿಷ್ ಪಡೆಗಳಿಬ್ಬ ಸ್ಥಳಕ್ಕೆ ಎಡಭಾಗದಲ್ಲಿ ಅಮೆರಿಕದ ಎರಡನೇ ಡಿವಿಜನ್ ದಕ್ಷಿಣದಲ್ಲಿ ೩೫ ನೆಯ ಡಿವಿಜನ್ ಸೇನೆ ಕಾರ್ಯಾಚರಣೆ ನಡೆಸುತ್ತಿವೆ.

ಬಾಂಬ್ ಮಾಡಲು ಬಿಸಿಲೂ ಇಲ್ಲ

ಉತ್ತರ ಕೊರಿಯಾದಲ್ಲಿ ಬಾಂಬ್ ಮಾಡುವಂತಹ ಮುಖ್ಯ ಸ್ಥಾವೇಕ ಯಾವುದೂ ಉಳಿದಿಲ್ಲ ಎಂದು ಮೇ!! ಜ!! ಡಾನೆಲ್‌ರವರು ತಿಳಿಸಿದರು.

ಯುದ್ಧಕೈದಿಗಳ ಗತಿ ವಿಚಾರಿಯೋ ಗೊತ್ತಿಲ್ಲ

ಕೊರಿಯಾ ರಣಕ್ಷೇತ್ರದಲ್ಲಿ ಕಮ್ಯೂನಿಸ್ಟರಿಗೆ ಸೆರೆ ಸಿಕ್ಕಿರುವ ಯುದ್ಧ ಕೈದಿಗಳ ಗತಿ ವಿಚಾರಿದೆಯೋ ಗೊತ್ತಿಲ್ಲ. ಈ ಬಗ್ಗೆ ವಿಶ್ವಸಂಸ್ಥೆಯ ಯುದ್ಧ ಕಚೇರಿಗೆ ಯಾವ ಸುದ್ದಿಯೂ ಬಂದಿಲ್ಲ

ಬೇಗು ಕ್ಷೇತ್ರದಲ್ಲಿ ಕಮ್ಯೂನಿಸ್ಟರಿಗೆ ಒಂದೇದಿನ ೧೪೯೦ ಸಾವುನೋವು

ಬೇಗು ಕದನರಂಗದಲ್ಲಿ ಅಮೆರಿಕಾ ವಿಮಾನಗಳ ಕಾರ್ಯಾಚರಣೆಯಿಂದಲೂ ಮತ್ತು ಬ್ರಿಟಿಷರು ನಡೆಸುತ್ತಿರುವ ದಕ್ಷಿಣ ಕೊರಿಯಾ ಪೋಲೀಸರ ಹೋರಾಟದಿಂದಲೂ ಉತ್ತರ ಕೊರಿಯನ್ನರಿಗೆ ಒಂದೇದಿನದಲ್ಲಿ ೧೪೯೦ ಸಾವುನೋವಾಗಿಹಾಗಿನೆಯೆಂದು ವರದಿಯಾಗಿದೆ ಬ್ರಿಟಿಷ್ ರಾಯಲ್ ನೌಕಾದಳದ ಯೋಧರು ದಕ್ಷಿಣ ಕೊರಿಯಾದಲ್ಲಿ ಬಂದಿಳಿದಿದ್ದಾರೆ

೫೫ ನುಂದಿ ನೌಕರರಿಗೆ ೫೫ ವರ್ಷ ಶಿಕ್ಷೆ

ಬೆನಾರಸ್ ಬಟ್ಟೆ ಹತ್ಯೋಟೆ ಕಚೇರಿಯ ೫೫ ನುಂದಿ ನೌಕರರಿಗೆ ಅಸಿಸ್ಟೆಂಟ್ ಸರ್ಜರು ೫ ವರ್ಷಗಳ ಕಠಿಣಶಿಕ್ಷೆ ವಿಧಿಸಿದ್ದಾರೆ ಘೋಷ್‌ಮಾಡಿದ ಬಟ್ಟೆ ಪರ್ಮಿಟ್ ಕೊಡಲು ಸಂಚು ನಡೆಸಿದರೆಂಬುದೇ ಅಪಾದನೆ.

ಸೈದ್ರಾಬಾದಿನ ಮುಖ್ಯ ಪೋಸ್ಟ್ ಆಫೀಸ್

ಅಕ್ಟೋಬರ್ ಒಂದರಿಂದ ಹೈದ್ರಾಬಾದಿನಲ್ಲಿರುವ ಧಾರಕ ಒಕ್ಕೂಟದ ಮುಖ್ಯ ಪೋಸ್ಟ್ ಆಫೀಸು ಸಾರ್ವಜನಿಕರ ಉಪಯೋಗಕ್ಕಾಗಿ ರಾತ್ರಿ ೧೦ ಗಂಟೆಯವರೆಗೆ ತೆಗೆದಿರುವುದೆಂದು ಪತ್ರಿಕಾ ಪ್ರಕಟಣೆ ತಿಳಿಸುತ್ತದೆ

ಹೈದ್ರಾಬಾದಿನಲ್ಲಿರುವ ಮುಖ್ಯ ಪೋಸ್ಟ್ ಆಫೀಸ್ ಬೆಳಿಗ್ಗೆ ೮ ಗಂಟೆಗೆ ಪ್ರಾರಂಭವಾಗಿ ರಾತ್ರಿ ೧೦ ಗಂಟೆಯವರೆಗೆ ತೆರೆಯಮಾಡುವುದು. ಮಧ್ಯಾಹ್ನ ೩ ಗಂಟೆ ಯವರೆಗೆ ಎಂ. ಓ. ಸೇವಿಂಗ್ಸ್‌ಬ್ಯಾಂಕ್ ಇತ್ಯಾದಿ ವ್ಯವಹಾರ ನಡೆಸುತ್ತದೆ. ರಿಜಿಸ್ಟ್ರೇಷನ್ ಸ್ಟ್ಯಾಂಪ್‌ಗಳ ಮಾರಾಟ ಇತ್ಯಾದಿಗಳಿಗೆ ರಾತ್ರಿ ಹತ್ತು ಗಂಟೆಯವರೆಗೂ ತೆರೆದಿರುತ್ತೆ. ಇದೇರೀತಿ ಭಾಮವಾರವೂ ಸಹ ಬೆಳಿಗ್ಗೆ ೮ ರಿಂದ ರಾತ್ರಿ ೧೦ ಗಂಟೆಯವರೆಗೆ ಪೋಸ್ಟ್ ಆಫೀಸ್ ಕೆಲಸಮಾಡುವುದಾಗಿ ಪ್ರಕಟಣೆ ತಿಳಿಸುತ್ತದೆ.

ನಾಸಿಕ್ ಕಾಂಗ್ರೆಸ್ ಪ್ರತಿನಿಧಿಗಳಿಗೆ ಪಂ!! ನೆಹ್ರೂರವರ ಮನವಿ

ಕಾಂಗ್ರೆಸ್ ಅಧ್ಯಕ್ಷ ಜುನಾನೆಯ ಫಲಿತಾಂಶವನ್ನು ಕಂಡು ರಾಷ್ಟ್ರದಲ್ಲಿನ ಜಾತೀಯತಾದಿಗಳು ಮತ್ತು ಪ್ರತಿಗಾಮಿ ಶಕ್ತಿಗಳು ತಮ್ಮ ಸಂತೋಷವನ್ನು ಬಹಿರಂಗವಾಗಿ ವ್ಯಕ್ತಪಡಿಸಿ ಕಾಂಗ್ರೆಸ್ ಸಂಸ್ಥೆ ತನ್ನ ಕಾರ್ಯನೀತಿ ಮತ್ತು ಧೋರಣೆಯ ಬಗ್ಗೆ ಸ್ಪಷ್ಟ ಘೋಷಣೆ ಹೊರಡಿಸ ಬೇಕಾದ್ದು ಅತ್ಯಗತ್ಯ ಎಂದು ಪ್ರಧಾನರಾದ ಪಂ!! ನೆಹರೂರವರು ನಾಸಿಕ್ ಅಧಿವೇಶನಕ್ಕೆ ಮುನ್ನ ಕಾಂಗ್ರೆಸ್ ಪ್ರತಿನಿಧಿಗಳ ಪರಿಶೀಲನೆಗೆಂದು ದೇಶದ ಆರ್ಥಿಕ ಮತ್ತು ಮಿತ್ರತರ ಸಮಸ್ಯೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ

ಈ ವಿಷಯ ಕೇವಲ ಒವ್ಯಕ್ತಿಗೆ ಸಂಬಂಧಪಟ್ಟ ವ್ಯಾಗಲಿ, ಅಥವಾ ಜಾಗಿ ವಿಷಯವಾಗಲಿ ಅಲ್ಲ. ಇತೀ ರಾಷ್ಟ್ರ ಮತ್ತು ಕಾಂಗ್ರೆಸ್ ಸಂಸ್ಥೆಯ ಮೇಲೆ ವಿಶೇಷ ಪರಿಣಾಮವುಂಟುಮಾಡುವುದಾಗಿದೆ.

ಈ ಕಾರಣದಿಂದ ಕಾಂಗ್ರೆಸ್ ಸಂಸ್ಥೆ ತನ್ನ ಸ್ಪಷ್ಟ ನೀತಿಯೆನೆಂಬುದನ್ನು ಘೋಷಿಸಬೇಕಾದ್ದು ಉಚಿತ ಸಂದರ್ಭದಲ್ಲಿ ಆಕ್ಷಗಳಾಗಿದೆ ಇದರಿಂದ ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ತಾನೆಲ್ಲರಿರುವೆನೆಂಬುದನ್ನು ತಿಳಿದು ಕೊಳ್ಳಲು ಅನುಕೂಲವಾಗುವುದು.

ಆರ್ಥಿಕ ನೀತಿ

ರಾಷ್ಟ್ರದ ಪ್ರಗತಿ ಮತ್ತು ಪುರೋಭಿವೃದ್ಧಿಗಳೇ ತಮ್ಮ ಆರ್ಥಿಕ ನೀತಿಯಾಗಿಗೆ ಕೇವಲ ಒಂದುಗುಂಪಿನ ಅಥವಾ ಕೆಲವು ವ್ಯಕ್ತಿಗಳ ಹಿತರಕ್ಷಣೆಗಾಗಿ ಅಲ್ಲ ಉದಾತ್ತ ಧ್ಯೇಯದಿಂದ ಸ್ಫೂರ್ತಿಯೂ ಹಿಂದಕ್ಕೆ ಸರಿಯಲು ಸಾವು ಇಚ್ಛಿಸುವುದಿಲ್ಲ ಸಾಮಾನ್ಯ ಜನರಿಗೆ ಆರ್ಥಿಕ ನೀತಿ ಯಿಂದ ಪ್ರಯೋಜನವಾಗದೇಳಂಬುದೇ ತಮ್ಮ ಆಸೆ.

ಕೋಮುವಾರು ನೀತಿಯ ಬಗ್ಗೆ ಸ್ಪಷ್ಟೀಕರಣ ಅಗತ್ಯ

ಕಾಂಗ್ರೆಸ್ ಸಂಸ್ಥೆ ಹಿಂದಿನಿಂದಲೂ ಕೋಮುವಾರು ತತ್ವವನ್ನು ಅಲ್ಲಗಳೆದಿದೆ ಆದರೆ ರಾಷ್ಟ್ರ ವಿಭಜನೆ ಯಾದನಂತರ ಕೋಮುವಾರು ವಿಷಜ್ವಾಲೆ ದೇಶದಲ್ಲಿ ಹರಡಿದೆ. ಈ ವಿಷಜ್ವಾಲೆ ಕಾಂಗ್ರೆಸ್ ಸಂಸ್ಥೆಯನ್ನು ಆವರಿಸಿ, ಕೆಲವುವೇಳೆ ಸರ್ಕಾರದ ನೀತಿಗೂ ಅಡ್ಡಿ ಬಂದಿದೆ ಪಾಕಿಸ್ತಾನವು ಅನುಸರಿಸುತ್ತಿರುವ ಜಾತೀ ಯತೆಯ ಪ್ರತಿಕ್ರಿಯೆಯೆಂದು ಹೇಳಬಹುದು ಪಾಕೀ ಸ್ತಾನವು ಏನುಬೇಕಾದರೂ ಮಾಡಲಿ ನಾವು ಮಾತ್ರ ಜಾತಿಜಾತಿಗಳ ಭಿನ್ನ ಭಾವಬಿಲ್ಲದೆ ನಿಸ್ಪೃಹತಾ ರೀತಿಯಲ್ಲಿ ಎಲ್ಲ ಮತೀಯರಿಗೂ ಸಮಾನಾನಕಾರಗಳನ್ನು ಕಲ್ಪಿಸು ವುದೇ ನಮ್ಮ ಪವಿತ್ರಕರ್ತವ್ಯ. ಕಾಂಗ್ರೆಸ್ ಈ ಬಗ್ಗೆ ತನ್ನ ನೀತಿಯೇನೆಂಬುದನ್ನು ಯಾವ ಸಂದೇಹಕ್ಕೂ ಆಸ್ಪದವಿಲ್ಲದಂತೆ ಸ್ಪಷ್ಟಪಡಿಸಬೇಕಾಗಿದೆ

ಅಧಿಕಾರಮೋಹವೇ ಸಂಸ್ಥೆಯ ಅಧೋಗತಿಗೆ ಮುಖ್ಯ ಕಾರಣ

ಕಾಂಗ್ರೆಸ್ಸಿಗರಲ್ಲಿ ಹುಟ್ಟಿರುವ ಅಧಿಕಾರದಾಸ್ಯ ಜುನಾವಣೆಗಳ ಮೋಹವೇ ಕಾಂಗ್ರೆಸ್ ಸಂಸ್ಥೆಯಲ್ಲಿ ಕಲಹೋ ರಿಯ ಅಧೀತಿ ಮತ್ತು ದುಷ್ಪರಿಣಾಮಗಳಿಗೆ ಮುಖ್ಯ ಕಾರಣವಾಗಿವೆ ಕಾಂಗ್ರೆಸ್ ಸಂಸ್ಥೆಯ ಮುಖ್ಯ ಕಾರ್ಯ ಕ್ರಮಗಳಿಂದ ಜುನಾವಣೆಗಳನ್ನು ಮತ್ತು ಪಾರ್ಲಿ ಮೆಂಟರಿ ಕಾರ್ಯಕ್ರಮಗಳನ್ನು ತೆಗೆದುಹಾಕಿದಲ್ಲಿ, ಕಾಂಗ್ರೆಸ್ ಸಂಸ್ಥೆಯಲ್ಲಿ ತೆಲೆದೂರಿರುವ ಅಧೀತಿ ಮತ್ತು ದುಷ್ಪರಿಣಾಮಗಳು ಮಾಯವಾಗಿ ಕಾಂಗ್ರೆಸ್ ಸಂಸ್ಥೆ ಉತ್ತಮವಾಗುವುದು ಎಂದು ಹೇಳಿದರು.

ಗುಪ್ತರ ಕಾಲದ ೨೦೦ ಪ್ರತಿಮೆಗಳು

ಗುಪ್ತವಂಶದ ಚಕ್ರವರ್ತಿಗಳ ಕಾಲಕ್ಕೆ ಸಂಬಂಧಿಸಿದ ೨೦೦ ಪ್ರಾಚೀನ ಪ್ರತಿಮೆಗಳನ್ನು ಪೋಲೀಸಧಿಕಾರಿಯು ಒಬ್ಬನಿಂದ ವಶಪಡಿಸಿಕೊಂಡಿದ್ದಾರೆ.

ಆತನಿಗೆ ಅವ ಉತ್ತರ್ಪ್ರದೇಶ್‌ದಲ್ಲಿ ೮ ಮೈಲಿ ದೂರದ ಬಿಲ್ಲಿಯ ಟ್ಯೂಕಾ ಎಂಬಲ್ಲಿ ದೊರೆತ್ತಿದ್ದುವೆಂದು ಹೇಳಲಾಗಿದೆ.

ಕಲ್ಕತ್ತದಲ್ಲಿ ಕಮ್ಯೂನಿಸ್ಟ್ ಚೀನ ರಾಯಭಾರಿಗಳ ಪ್ರಥಮ ಭಾಷಣ

ಭಾರತ ಮತ್ತು ನವ ಚೀನಗಳಲ್ಲಿ ಮಧುರ ಭಾಂದವ್ಯ ಇನ್ನೂ ವೃದ್ಧಿಯಾಗುವಂತೆ ಭಾರತಕ್ಕೆಲ್ಲರುವ ಚೀನ ಪ್ರಜೆಗಳು ಶ್ರಮಿಸಬೇಕ —ಎಂಬುದಾಗಿ ಭಾರತದಲ್ಲಿ ಕಮ್ಯೂನಿಸ್ಟ್ ಚೀನ ರಾಯಭಾರಿಗಳಾಗಿ ನೇಮಕವಾಗಿರುವ ಜನರಲ್ ಯಾನ್‌ಚುಂಗ್ ಹೀನ್‌ರವರು ಕಳೆದ ೧೫ನೆಯ ತಾರೀಕಿನ ದಿನ ಕಲ್ಕತ್ತದಲ್ಲಿ ಚೀನ ಪ್ರಜೆಗಳು ಏರ್ಪಡಿಸಿದ್ದ ಸತ್ಕಾರ ಸಮಾರಂಭದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

ಚೀನದಲ್ಲಿ ನೂತನ ಪ್ರಭುತ್ವ ಅಧಿಕಾರಕ್ಕೆ ಬಂದ ಮೇಲೆ ಪರಕೀಯರ ದಬ್ಬಾಳಿಕೆ ಸಂಪೂರ್ಣವಾಗಿ ಮಾಯವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಒಂದಿದ ಚೀನಾದ ನೂತನ ಸರ್ಕಾರವು ಈ ಹಿಂದಗೆಟ್ಟಿದ್ದ ಆರ್ಥಿಕ ಪರಿಸ್ಥಿತಿ ಸುಧಾರಿಸುವಂತೆ ಕ್ರಮ ಕೈಗೊಂಡಿದೆ— ಎಂದೂ ಅವರು ತಿಳಿಸಿದರು

ಅಂತರ್ಯುದ್ಧದ ಪರಿಣಾಮವಾಗಿ ತಲೆದೋಗಿದ ಪರಿಸ್ಥಿತಿಯು ಕ್ರಮೇಣ ಮಾಯವಾಗಿ ನವಚೀನದ ಉದಯವಾಗಿದೆ ಅಂತರ ರಾಷ್ಟ್ರೀಯ ವ್ಯವಹಾರದಲ್ಲಿ ನೂತನ ಚೀನ ಮಹತ್ತರ ಪಾತ್ರ ವಹಿಸಬೇಕಾಗಿದೆ ಎಂದರು

ರಜಕಾರ್ ನಾಯಕ ಖಾಸಿಂ ರಜ್ವಿಗೆ ಜೀವಾವಧಿ ಶಿಕ್ಷೆ

ಹೋಬುಲ್ಲಾಖಾನ್‌ರವರ ಕೊಲೆ ಮೊಖದ್ದಮೆಯಲ್ಲಿ ವಿಶೇಷ ನ್ಯಾಯಾಲಯದ ತೀರ್ಪು

ಹೈದರಾಬಾದಿನ ಇಮ್ರೋಜ್ ಉರ್ದು ದಿನಪತ್ರಿಕೆಯ ಸಂಪಾದಕರಾಗಿದ್ದ ಜ| ಹೋಬುಲ್ಲಾಖಾನ್‌ರವರ ಕೊಲೆಯ ಸಂದರ್ಭದಲ್ಲಿ ಒಳಸಂಚು ನಡೆಸಿ ಕೊಲೆಗೆ ಪ್ರೇರಕರಾಗಿದ್ದರೆಂಬ ಆಪಾದನೆಯ ಮೇಲೆ ನಿಜಾಮರಿಗೆ ಗುರುಮಾದಲ್ಪಟ್ಟಿದ್ದ ಲಳ ವಸ ಪಯ್ಸ್ಸನ ಮಾಜಿ ರಜಕಾರ್ ನಾಯಕ ಸೈಯದ್ ಖಾಸಿಂರಜ್ವಿಯವರನ್ನು ಕ್ಷುಷ್ತಶಿಕ್ಷೆಯೆಂದು ತೀರ್ಮಾನಿಸಿ ಈ ವಿಶೇಷ ನ್ಯಾಯಾಸ್ಥಾನದಲ್ಲಿ ಅವರಿಗೆ ಜೀವಾಧಿ ಕರಣ ಶಿಕ್ಷೆಯನ್ನು ವಿಧಿಸಲಾಯಿತು

ನೊಕದ್ದಮೆಯ ಹಿನ್ನೆಲೆ

ಇಮ್ರೋಜ್ ಪತ್ರಿಕೆಯ ಸಂಪಾದಕರಾ ದ್ದ ಜ| ಹೋಬುಲ್ಲಾ ಖಾನ್‌ರವರು ಹೈದರಾಬಾದಿನ ರಾಜಕೀಯ ಚಟುವಟಿಕೆಗಳ ಬಗ್ಗೆ ಲೇಖನಗಳನ್ನು ಬರೆದುದು ಖಾಸಿಂ ರಜ್ವಿಯವರ ಸರ್ವಾಧಿಕಾರ ಮತ್ತು ಹೈಯಗಳಿಗೆ ಧಕ್ಕೆ ಬಂದುದರಿಂದ ಸೈಯದ್ ಖಾಸಿಂ ರಜ್ವಿಯ ವರೋಹೋಬುಲ್ಲಾಖಾನ್‌ರವರನ್ನು ಕೊಲೆಮಾಡಲು ಒಳ ಸಂಚು ಹೆಣೆದರು ಎಂದು ಛಾರ್ಜ್ ಶೀಟ್‌ನಲ್ಲಿ ನಿಲಾಗಿದೆ

ಖಾಸಿಂ ರಜ್ವಿಯಲ್ಲದೆ ಇನ್ನಿಬ್ಬರು ಆಪಾದಿತರುಗಳಾದ ಪ್ರೊ|ವೇಣುಗೋಪಾಲ್ ಉಸ್ಮಾನಿಯ ಸಬ್‌ಇನ್‌ಸ್ಪೆಕ್ಟರ್ ಅಬ್ದುಲ್ ಮುಘೀಖಾನ್ ಮತ್ತು ನಿರ್ದೇಶಿಗಿ ಬಾಲಕ ಮೋಜೆಸ್ ರಾಜು ಎಂಬ ನನ್ನು ಕೊಲೆಗೆ ಸಹಾಯ ನೀಡಿದರೆಂದು ಆಪಾದಿಸಲಾಗಿದೆ ಇನ್ನಿಬ್ಬರು ಆಪಾದಿತರುಗಳು ಭಾರತ ವನ್ನು ಬಿಟ್ಟು ಓಡಿಹೋಗಿರುವುದರಿಂದ ಅವರನ್ನು ತಲೆಮರೆಸಿಕೊಂಡವರು ಎಂದು ಪರಿಗಣಿಸಲಾಗಿದೆ

ಕಾಶ್ಮೀರ ಸಮಸ್ಯೆ ಬೇಗ ಬಗೆಹರಿಸುವುದು ಕ್ಷೇಮ

ಕಾಶ್ಮೀರ ಸಮಸ್ಯೆ ಜಾಗ್ರತೆ ಬೇಗನೆ ಇತ್ಯರ್ಥ ಆಗದಿದ್ದರೆ ಪರಿಸ್ಥಿತಿ ಪದಗಡ ಸ್ಥಿತಿ ಖಂಡಿತ ಎಂಬುದಾಗಿ ಸಂಸತ್ಸಾದಸ ವಿದೇಶಾಂಗ ಸಚಿವರಾದ ಸರ್ ಜಫ್ರುಲ್ಲಾ ಖಾನ್‌ರು ತಿಳಿಸಿರುವರು ಈಗ ಇವರು ವಿಸ್ತಸಂಸ್ಥೆಯ ಒಪರಲ್ ಅಸೆಂಬ್ಲಿಯ ಅಧಿವೇಶನದಲ್ಲಿ ಭಾಗವಹಿಸಲು ನ್ಯೂಯಾರ್ಕಿನಲ್ಲಿದ್ದಾರೆ

ಒಂದೂವರೆ ಆಣೆಯ ಪೋಸ್ಟ್ ಕಾರ್ಡ್

ಒಂದೂವರೆ ಆಣೆಯ ಎರಡು ವ ದಿಕೆಯುಳ್ಳ ಅಂಚೀ ಕಾರ್ಡುಗಳು ಅಕ್ಟೋಬರ್ ಎರಡರಿಂದ ಎಲ್ಲ ಅಂಚೀ ಕಛೇರಿಗಳಲ್ಲಿ ಮಾರಾಟಕ್ಕೆ ಒರ ವುವು ಈ ಕಾರ್ಡುಗಳಲ್ಲಿ ಎರಡು ವಿವಿಧ ಎಂದೂವರೆ ಆಣೆಯ ಅಂಚೀ ಚೀಟಿ ಅಂಟಿಸಿರುವುದು ಮತ್ತು ಎಸೂ ಅಂಟಿಸದೆ ಖಾಲಿಯಾಗಿರುವ ಕಾರ್ಡುಗಳು ಖಾಲಿಯಾಗಿರುವ ಕಾರ್ಡುಗಳನ್ನು ಒಂದು ಸಾವಿರಕ್ಕೆ ೭ ರೂ ೮ ಆಣೆ ಗಳಂತೆ ಎಲ್ಲಾ ಪೋಸ್ಟಾಫಿಸುಗಳಲ್ಲಿಯೂ ಮಾರಾಟ ಮಾಡಲಾಗುವುದು ಇದು ಪ್ರಾಕ್ಟಿಕ್ ಯಂತ್ರ ಉಪಯೋಗಿಸಿಕೊಳ್ಳುವವರಿಗೆ ಅನುಕೂಲವಾ

ಪಶ್ಚಿಮ ಜಪಾನಿನಲ್ಲಿ ಸಂಭವಿಸಿದ ಪ್ರಚಂಡ ಬಿರುಗಾಳಿಯಿಂದ ಭಾರಿನೆಷ್ಟ

ಪಶ್ಚಿಮ ಜಪಾನಿನಲ್ಲಿದ್ದ ಭಯಂಕರ ಬಿರುಗಾಳಿಯಿಂದ ೬೫೦ ಜನಗಳು ಸತ್ತಿರುವುದಾಗಿಯೂ ಎರಡು ವರೆ ಲಪ್ಪ ಜನಗಳು ಮನೆಮಠಗಳನ್ನು ಕಳೆದುಕೊಂಡು ನಿಗೆ ತಿಕರಾಗಿರುವುದಾಗಿಯೂ ಸುಮಾರು ೧೨ ಸಾವಿರ ಮನೆಗಳು ಸಂಪೂರ್ಣ ಹಾಳಾಗಿರುವುದಾಗಿಯೂ ೨೬ ಸಾವಿರ ವ ನೆಗಳು ಆರ್ಥ ಸಾಶವಾಗಿನುವಾಗಿಯೂ ವರದಿಯಾಗಿದೆ

ತಿರುವಾಂಕೂರಿನಲ್ಲಿ ಆಹಾರ ವಿಷಮಸ್ಥಿತಿ

ಕೊಂದ ಎಂಟು ವರ್ಷಗಳಿಂದ ರೇಷನಿಂಗ್ ಜಾರಿಯಲ್ಲಿರ ವ ತಿರುವಾಂಕೂರಿನಲ್ಲಿ ಕಳೆದವಾರ ಸ್ಪರ್ಧಿಸಿದ ಒರಿಸ್ಸ ಗಳಲ್ಲಿ ಕ್ಯಾಲಿ ಫ್ಲವ ಜನರು ಅಂತಿ ರಗಬೇಕಾಯಿತ ಒಟ್ಟಿನಿಗೆ ಕೆಲವ ಎರಡು ಪ್ರಸ್ತಾವಿಕ್ಕೆ ಯನ್ನು ಮಾತ್ರ ಕೊಡಮಾಯಿತು

ಅಕ್ಕಿಗೆ ಬದಲು ಟಾಪಿಯೋಕಾವನ್ನು ಪಡೆದ ಕಾರ್ಮಿಕ ಶ್ರೇಣಿಯವರು ಕಿಮ್ಮ ವಕ್ಕು ಸ್ನವಿಲ್ಲದ ಗಂಯವೆಂದು ಕಣ್ಣೀರು ಸರಿಸಿ ತ್ತಿದ್ದರು

ಕಳವವಾರ ರೇಷನ್ ಡಿಗಳಲ್ಲಿ ಅಕ್ಕಿ ಕೊಡಿಸಿ ಹೋಗಿ ನಗರದ ಕೆಲವು ಪ್ರದೇಶಗಳಲ್ಲಿ ಕೆಲವು ೧೦ ೧೫ ನರ್ಷದ ಮಕ್ಕಳು ಅನ್ನವಿಲ್ಲದ ಬೀದಿಗಳಲ್ಲಿ ಪರ್ಸ್ ಒಂದು ಬಿದ್ದುವಾಗಿ ವರದಿಯಾಗಿದೆ

ಹಳ್ಳಿಗಳಲ್ಲೂ ಅಕ್ಕಿ ಇಲ್ಲ

ಕ್ವಿಲಾನ್ ಮತ್ತು ಕೊಟ್ಟಾಯಂಗಳ ಹಳ್ಳಿಗಳಲ್ಲೂ ಕಳೆದ ಎರಡು ವಾರಗಳಿಂದ ಅಕ್ಕಿಯಿಲ್ಲದೆ ಜನಗಳು ಕಷ್ಟಪಡುತ್ತಿರುವುದಾಗಿ ವರದಿಯಾಗಿದೆ

ತಿರುವಾಂಕೂರಿನ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಸಂಸ್ಥಾನದಲ್ಲಿನ ಆಹಾರದ ಉತ್ಪಟ ಪರಿಸ್ಥಿಯ ಬಗ್ಗೆ ತಿಳಿಸಿರುವುದಾಗಿ ವರದಿಯಾಗಿದೆ ಸರ್ಕಾರವು ಬತ್ತವನ್ನು ವಿರುವ ಶೈತರಿಂದ ಖರೀದಿ ರೂಪವಾಗಿ ಬತ್ತವನ್ನು ಪಡೆಯಲು ಸಾಧ್ಯವಾದ ಎಲ್ಲಾ ಪ್ರಯತ್ನ ಗಳನ್ನೂ ಮಾಡುತ್ತಿರುವುದಾಗಿ ತಿಳಿದುಬಂದಿದೆ

ಕಲ್ಕತ್ತಾದಿಂದ ಅಕ್ಕಿಯನ್ನು ತೆಗೆದುಕೊಂಡುಬರುವ ಹಡಗಿನ ಕಡೆ ತಿರುವಾಂಕೂರು ಸರ್ಕಾರ ಎದುರು ನೋಡುತ್ತಿದ್ದ ಅಕ್ಕಿ ಒಂದಕೂಡಲೇ ಅಕ್ಕಿ ಅಭಾವ ವಿರುವ ಪ್ರದೇಶಗಳಿಗೆ ತೀವ್ರವಾಗಿ ಅಕ್ಕಿಯನ್ನು ಕಳುಹಿಸಲಾಗುವುದು ಸಕಾಲಕ್ಕೆ ಕಲ್ಕತ್ತ ೬ ಸಾವಿರ ಟನ್ ಅಕ್ಕಿಯೂ ವಿದೇಶಗಳಿಂದ ೧೪ ಸಾವಿರ ಟನ್ ಅಕ್ಕಿಯೂ ಬಾರದಿದ್ದಲ್ಲಿ ತಿರುವಾಂಕೂರಿನ ಆಹಾರ ಪರಿಸ್ಥಿತಿ ವಿಷಮಿಸುವುದಾಗಿ ವರದಿಯಾಗಿದೆ

ನೂತನ ಶಾಲಾ ಸಮಾರಂಭ

ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ತಾ|| ಇಟ್ಟಿಗೆ ಸೈಕಿ ಗದಿಗೇಶ್ವರ ಕೋಡಿಹಳ್ಳಿಯಲ್ಲಿ ತಾ|| ೪ ೯ ೫೦ರಲ್ಲಿ ನೂತನ ಕನ್ನಡ ಪ್ರಾಥಮಿಕ ಶಾಲೆಯ ಸ್ಥಾರಂಭೋತ್ಸವ ಸಮಾರಂಭವು ಶ್ರೀ ಯಾತಗಿರಿ ಶಿದ್ಧಲಿಂಗಪ್ಪನವರು ಜಿಲ್ಲಾ ಬೋರ್ಡು ಸದಸ್ಯರು ಇನರ ಅಧ್ಯಕ್ಷತೆಯಲ್ಲಿಯೂ ಹೊಸಪೇಟೆ ಕರ್ನಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರುಗಳು ಮತ್ತು ಜಿಲ್ಲಾ ಬೋರ್ಡ್ ಸದಸ್ಯರೂ ಆದ ಶ್ರೀ ಕೆ ಚೆನ್ನ ಬಸವಗೌಡರು ಬಿ ಎ, ಇವರ ಉದ್ಘಾಟನೆಯಲ್ಲಿ ಬಹು ಸಂಭ್ರಮದಿಂದ ಜರುಗಿತು ಶ್ರೀಮತಿ ಮಾಗಳ ಸೋಮಮ್ಮ ಇವರು ತಮ್ಮ ಭಜನಾಮಂದಿರವನ್ನು ಶಾಲೆಗೆ ಉದಾರಬುದ್ಧಿಯಿಂದ ಉಚಿತವಾಗಿ ಕೊಟ್ಟಿದ್ದಕ್ಕೆ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸಲಾಯಿತು

ಚಂದ್ರಶೇಖರಗೌಡ ಪಾಟೀಲ
ಗ್ರಾಮಾಧಿಕಾರಿ

ದುಃಖವಾರ್ತೆ

ಬಳ್ಳಾರಿ ಡಿ|| ಹೊಸಪೇಟೆ ತಾಲೂಕು ಹಂದಿಹಾಳು ಕಂಬಾಳ ಮಕಾಧ್ಯಕ್ಷರಾದ ವೀ|| ಕೆಳಗೋಟಿಯ್ಯನವರು ಇದೇ ನಿನ ಅಪಾಘ ಬು|| ೫ ಗುರುವಾರ (೩ ೮ ೫೦) ದಿನಸ ತಿವಾಧೀನರಾದರು ಇವರು ಸ್ಕೂಲ್ ಮಾಸ್ಟರ್ ರಾಗಿ ನೂರಾರು ಜನರಿಗೆ ವಿದ್ಯಾಬ್ಯಾಸಕಾನವಾಯಿತ್ತಲ್ಲದೆ ತಿವಪೂಜಾನಿಷ್ಠರಾಗಿ ಹರಗುರುಸೇವೆಯನ್ನು ಸಲ್ಲಿಸಿದರು ಅಯುರ್ವೇದ ಸಾಂಡಿತ್ಯದಿಂದ ಸ್ವಗ್ರಾಮಸ್ಥರಿಗೂ ಸುತ್ತು ಮುತ್ತಲಿನ ಗ್ರಾಮಗಳಿಗೂ ಅರೋಗ್ಯಸಹಾಯ ಮಾಡಿದರು ಇವರ ಅಂತಿಕ್ರಿಯೆಗೆ ಸಾವಿರಾರು ಜನರು ಕೂಡಿದ್ದರು ಯಥಾವಿಧಿಯಾಗಿ ದಾನಧರ್ಮಗಳು ನಡೆಯಲ್ಪಟ್ಟು ಸಮಾಧಿಸಂಸ್ಕಾರವು ಜರುಗಿತು ಅಂದಿನಿಂದ ಶಾನವಣ ಶು|| ೧ ಸೋಮವಾರದ ವರೆಗೆ ಗೃಹದಲ್ಲಿ ಬಳ್ಳಾರಿ ಶ್ರೀ ವೀರಮೂರ್ತಿಸ್ವಾಮಿಗಳವರ ಪಾದಪೂಜೆ ತೀರ್ಥವ್ರತಾದಿಗಳು ಪ್ರತಿದಿನವೂ ನಡೆಯುತ್ತಲ್ಪಟ್ಟು ಪ್ಯಾತಿದಿಯ ಶ್ರಾವಣ ಶು|| ೧೫ ಸೋಮವಾರ ದಿವಸ ಅನ್ನಸಂತರ್ಪಣೆಯು ಜರುಗಿತು ಶ್ರೀಜಗದ್ಗುರು ಪಂ ಜಂಗಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕ ಟುಂಬವಿಗೆ ಸಂಭ್ರವಿಸಿದ ಮು ಖವಾಗಿ ವನ್ನೂ ಗುಂಟುಮಾಡಿದೆಂದು ಹಾರೈಸುತ್ತೇನೆ

ಓರ್ವ ದುಃಖಭಾಗಿ

ಸ್ವೀಕಾರ

ಒಬ್ಬರಿ ಡಿ| ಹೊಸಪೇಟೆ ತಾಲೂಕು ಹಂದಿಹಾಳು ಗ್ರಾಮವಾಸಿಗಳಾದ ವೀ|| ಒಕೆದ ಕೆಳಗೋಟಿಯ್ಯನವರು ಶಿವೈಕ್ಯರಾದ ಮೂಲಕ ಅವರ ಪುಣ್ಯತಿಥಿ ಸ್ಮಾರಕಕ್ಕಾಗಿ ಅವರ ಪುತ್ರರಾದ ಎಚ್ ಎಂ ಓಂಕಾರಶಾಸ್ತ್ರಿ ಶಾಲಾ ಮಾಸ್ತರ ಇವರು ಪ್ರಥಮಪೂಜನೆಗಾಗಿ 1 ರೂ ಹಾಗು ವೀ| ಶಿವಲಿಂಗಯ್ಯ ಕಂಬಾಳಮಠ ಕಾಕುಬಾಳ ಇವರು 2 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಹೊಸಪೇಟೆ ತಾ ಕಾನಹಳಪುರ ಕಟ್ಟಿಮನೆ ಸಿದ್ಧ ಲಿಂಗಿಸ್ವಾಮಿಗಳವರ ತಮ್ಮ ಗೃಹದಲ್ಲಿ ಮಹಾರುದ್ರಾಭಿಷೇಕ ಪುರಾಣಪ್ರವಚನ ಒಂದು ಕಿಂಗಳು ಜರುಗಿಸಿದ ಸಮಯದಲ್ಲಿ ಸಿದ್ಧಲಿಂಗಸ್ವಾಮಿಗಳವರು ಪ್ರಥಮಪೂಜನೆಗಾಗಿ ಸಲ್ಲಿಸಿದ 1 ರೂ ಯು ಎಸ್ಮಿಗಳವರು ಶ್ರೀಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲ ಶ್ರೀಜಗದ್ಗುರು ಪಂಚಾಚಾರ್ಯರು ಹೃತ್ಪೂರ್ವಕ ಮಂಗಲವನ್ನು ಆಯುರಾರೋಗ್ಯಗಳೆಂದು ಹಾರೈಸುತ್ತೇವೆ

Edited, Printed and Published by Brahmanath Mahadevaiah at Shri Panchacharya Electric Press, Sayaji Rao Road, Mysore

EGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಗಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವಪಪಂಕಜಾತಜನಿಕರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಕರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಲಸತ್ಪಂಚಾಕ್ಷರೀಮೋಘರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೫ ನೇ ಸೆಪ್ಟೆಂಬರ್ ೧೯೫೦ [ಸಂಚಿಕೆ ೨೩

ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಪಾದಕ್ಕೆ ಸಮರ್ಪಿಸಿದ ಏಕವಿಂಶತಿ ರಾಗಮಾಲಿಕೆ

ರಾಗ—ಕೇರವಾಣ—[ಎಲ್ಲಾ ಸುತಿಗಳಿಗೂ ಏಕತಾಳ]

ಶ್ರೀ ದಿಯೋ ಕಾಶಿನಾಥಾ । ಸಾಧಿಸಿ ನಿನ್ನ ಪಂಥ ।
ಪಾದಿ ಆಚಾರ್ಯರಧ್ವಜ । ಮೇದಿನಿಯೊಳು ಮೆರೆಸಿ ॥೫॥

ಜಗನೂರು ಬೃಹನ್ಮಠದಿ ಜನಿಸಿ । ಹೋಗಿ ಕಾಶಿಗೆ ಶಾಸ್ತ್ರ ಅಭ್ಯಾಸಿಸಿ ।
ಬಾಗಳೆ ಕಾಲಿಕೇಶ್ವರನನ್ನು ಜಯಿಸಿ । ಮರ್ಮಾದ ದೂರೀಕರಣವ ರಚಿಸಿ ॥೧॥

ರಾಗ—ಶಂಕರಾಭರಣ

ಪಂಚಮುಖದಿಂದ ಜನಿಸಿದ । ಪಂಚಾಚಾರ್ಯರ ಮೂಲತತ್ವ ಪ್ರ ।
ಪಂಚಕೆಲ್ಲಾ ತೋರಿ ಮೆರೆದು । ಪಂಚಾಚಾರ್ಯರ ಅವತಾರಿಯೆನಿಸಿ ॥೨॥

ರಾಗ—ಸಾವೇರಿ

ಪೂರ್ವ ಕಾಶಿನಾಥ ಪುಟ್ಟಿ । ಜಗವೆಲ್ಲಾ ಕಾಶಿನಾಥರ ಮಾಡಿಬಿಟ್ಟಿ ।
ಧರ್ಮಹೀನರ ವಂಶವ ಸುಟ್ಟಿ । ಗುರುವರ್ಗಕೆ ಅವಿಪರುಪದ ಶೆಟ್ಟಿ ॥೩॥

ರಾಗ—ಮೋಹನ

ಪ್ರತ್ಯಹ್ಯರ್ಯದ ಬಲದಿ । ಈ ಭ್ರಾಮ್ಯಾಂಡವನೆಲ್ಲಾ ಜಯಿಸಿದಿ ಕಾಶಿನಾಥ ।
ಪ್ರತ್ಯಹ್ಯರ್ಯದ ನಿಧಿಯಾದ ಸಿದ್ಧಲಿಂಗ । ಗೊನ್ಮೈ ಅರುಹಿತತ್ರ ಪೊಲಿಸಿದ ಧೀರ
ಪೋದೆಯಾ ॥೪॥

ರಾಗ—ಆರಭಿ

ಸಿದ್ಧ ಗುರುವರ್ಗಾತತ್ಪೈವ ನೀನು । ಶ್ರದ್ಧೆಯಿಂದ ಶೋಧಿಸಿ ನೇದಾಗನು ।
ಮೋಕ್ಷೈಧಿಸಿದ ನಿನ್ನಘಮತವ । ಪದ್ಮಂಸಿಜರಲ್ಲಿ ಮೆರೆವಂತೆ ಅರುಹ ॥೫॥

ರಾಗ—ಶ್ರೀರಾಗ

ವೀರಶೈವ ತತ್ವನೆಂಬ ಸೂರ್ಯನನು । ಧರೆಗೆ ತೋರಿದ ಧೀರ ಪೋದೆನೆಂದು ।
ಕಾರಾಡುವ ಗೂಗಿಗಳ ಗರ್ವವ ಸೂರೆಗೊಳ್ಳಲು ಕೋಟಿಸೂರ್ಯರೆ ಮಾಡಿ ನೀನು॥

ರಾಗ—ಕಾಂಬೋಧಿ

ಪಂಚಾಚಾರ್ಯರ ಪ್ರಭೆಯನುಯೀ ಪ್ರ । ಪಂಚದಲ್ಲಿ ಹೊರಡಿಸಿ ಬೋಧಿಸಿ ।
ಪಂಚಾಚಾರ್ಯರ ಮರೆತು ನಡೆವರಿಗೆ । ಪಂಚಾಚಾರ್ಯರೆ ಗುರು ಎಂದು ಸ್ಥಾಪಿಸಿ ॥

ರಾಗ—ಭೈರವಿ

ಶೈವೆಯೊಳು ವೀರಶೈವರು ನಿನ್ನನು । ಯಷ್ಟು ಧ್ಯಾಪಿಸಲು ಸಾಲದೆಂದು ಯೋಚಿಸಿ ।
ಪುಟ್ಟಿದ ಬಾಲರಿಗೆ ನಿನ್ನ ನಾಮ । ಪಟ್ಟವನೇ ಧನ್ಯನೆಮಂತೆ ಅರುಹ ॥೮॥

ರಾಗ—ನಾಸಾನಾಮಕ್ರಿಯ

ಕಾಶಿನಾಥನೆ ನಿನ್ನ ಧೈರ್ಯವು । ದಶದಿಕ್ಕಿನೊಳು ಪಾರಾಡುವುದಯ್ಯ ।
ಶಿವಾಸ ವ್ಯಾಸನಿಗಿಂತ । ವೇದ ಆಗಮಗಳ ತೋರಿದಿ ಜಗಕೆ ॥೯॥

ರಾಗ—ಶಾಸವ

ಪರಸಿಂಹಾಸನವನ್ನು । ಯೇರಬೇಕೆಂದು ಮಹಮಹವೀರರು ।
ಸಿದ್ಧೆಯ ಅ ಧನಗರಾತಿಯ । ಹಾರಿಸಿ ವೀರಪೀಠ ಯೇರಿಸಿದ ಧೀರ ॥೧೦॥

ರಾಗ—ಪಣ್ಣುಖಪ್ರಿಯ

ಕೃಷ್ಣೀಪಾಲರ ಪ್ರಾರ್ಥನೆಗೆ । ಆರ್ಥಯೀ ರೇಣುಕ ಅರಮನೆಗೆ ಪೋಗಿ ।
ತೀರ್ಥಮಂತ್ರ ಮಹಾರಾಜರಿಗೆ ನಿನ್ನ । ಸಾಮರ್ಥ್ಯದಿ ಸೈದು ಕೀರ್ತಿಯ ಧರಿಸಿ॥೧೧॥

ರಾಗ—ಸುಲಯಮಾಹತ

ಪ್ರಾಣಗಳನು ನೀ ತೃಣಸಮಾನಮಾಡಿ । ಕ್ಷೋಣಿಯೋಳು ಹೂಡಿದಿ ವೀರಕೈವ
ಯುದ್ಧ ।
ಹೊಸ್ಮ ಆದಿಕ್ರಿಮಲ ನೋಡಬಾರದೆಂಬ । ಮಾನ್ಯರ ಮೋಚಿಗಳ ಒಣ್ಣಗೆಡಿಸಿ ನೀ

ರಾಗ—ಗುಮಾರಿ

ಕೊಂದುಬಿಡುವೆನೆಂದು ಬಂದುಕ ಹಿಡಿದು । ಹಿಂದೆ ಮುಂದೆ ತಿರುಗಾಡಿದ ಕುಹಕರ।
ವೃಂದಕೆ ಹೆದರದೆ ಕುಂದದೆ ಕುದಿಯ ದೆ । ಬಂಧುರನಾಗಿ ವೈರಿ ಮುಂದೆ ಜೋಧಿಸಿ
ಜಯಿಸಿ ॥೧೩॥

ರಾಗ—ಮಾಯಮಾಳವಗೌಳ

ರೇಣುಕಾದಿ ಲಿಂಗಮೂರ್ತಿ ಭಾವಚಿತ್ರ । ಕಾಣಿವು ಎಂದೆಂದಿಗೂ ತೋರಿದ ಧೀರ ।
ಕ್ಷೋಣಿಯೊಳು ವೀರಶೈವ ನಾಣ್ಯ ಗ್ರಂಥಪ್ರ । ಮಾಣವಾಗಿರಲೆಂದು ಮಾಣದೆ
ಚಾಪಿಸಿ ॥೧೪॥

ರಾಗ—ಚಕ್ರವಾಳ

ಧರ್ಮಹೀನನ ಕಾಲದಿ ಅ ವ ತದ ಧರ್ಮ ಗುರು ವು ಅವತರಿಸಿ ಜಗದಿ ।
ಧರ್ಮೋದ್ಧಾರವನೈಯ್ಯುವನೆಂಬ । ಆರ್ಯೋಕ್ತಿಯನು ಪೂರೈಸಿ ಪೋದ್ಯಾ ॥೧೫॥

ರಾಗ—ಕಾಮವರ್ಧನಿ

ಗುರುವು ಮರೆತ ವೀರಶೈವರ ಕರ್ಮವು । ಅರಿಯವು ಜಗದಾಚಾರ್ಯರ ಭಜನವು ।
ಅರುಹಿ ಆಚಾರ್ಯರ ವರಕೋಟಿಕೋಟಿ ನಾಮ । ಧರೆಗೆ ಸೂರಿಗೈದಿ ಧೀರನಿ
ಮರೆಯದೆ ॥೧೬॥

ರಾಗ—ಆರಭಿ

ಪೊರವ್ಯ ಯಲ್ಲವ್ಯ ಮಾರಿವ್ಯ । ಮೈಲಾರಲಿಂಗ ಬಾರದ ಕಾರ್ಯಕೆ ।
ಯಿರುವರ ಭಜನ ಹಾಡ್ಯಾರಿ ಕುಣಿದು । ಪೂರ್ವ ಗುರುವು ಮರೆತ ಕರ್ಮಗಳಿಗೆ
ಸೂತ್ರ ಗುರುತ ತೋರಿದ ಧೀರ ॥೧೭॥

ರಾಗ—ತೋಡಿ

ಹಳ್ಳಿಹಿಳ್ಳಿ ವಳ್ಳೆವಳ್ಳೆ ಪಟ್ಟಣಗಳ । ಪೊಳ್ಳುಬಿಡದೆ ನಿನ್ನ ಕೀರ್ತಿಯೆಂಬ ಸೂರ್ಯ ।
ಥಳಥಳಿಸುತಯೀ ಯಿಳೆಯೊಳು ಯುಗಯುಗ । ಮುಳುಗದಂತೆ ಮಾಡಿ ಹೊಳೆ
ವುದು ನಿನ್ನ ಜ್ಯೋತಿ ॥೧೮॥

ರಾಗ—ಧರಣಪ್ರಿಯ

ವೀರನು ನೀನೇ ಧೀರನು ನೀನೆ । ಸಾರಜ್ಞಾರ್ಯದವನಿಧಿ ನೀನೆ ।
ವೀರಶೈವತತ್ವ ಧರೆಗೆ ತೋರಿದ ಫಲದಿಂ । ಸೇರಿದಿ ಸ್ವರ್ಗವಿಹಾರವುರುಜನೆಂದು॥೧೯॥

ರಾಗ—ಶಂಕರಾಭರಣ

ಗುರುಸಿದ್ಧಲಿಂಗನ ಕರುಣಾಕರಧಿಯೊಳ । ಗಿರುವ ನಿನಗೆ ಯೀ ಧರೆಯೊಳು
ಸರಿಯಾರೋ ॥೨೦॥

ಜಗದಾಚಾರ್ಯರ ನಾಮಗಳನ್ನು । ಜಗದೊಳು ಕೊಂಡಾಡಿ ಕುಣಿಯುವ ನಾನು ।
ಜಗದ್ಗುರು ಉಜ್ಜಯಿನಿ ಪೀಠಕೆ ಕಟ್ಟಿನುವಿ । ಕೊಟ್ಟೂರು ಕೆಂಭಾವಿಮಠದ
ಪಟ್ಟಿಬನಾಚಾರ್ಯಕೃತ ॥೨೧॥

ಪಂಚಾಚಾರ್ಯಪ್ರಭಾ

೧೯೫೦ನೆಯ ಸೆಪ್ಟೆಂಬರ್ ತಾ|| ೨೫ನೆಯ ಸೋಮವಾರ

ವೀರಶೈವ

"ವಿ" ಎಂಬ ಶಬ್ದವು ಲಿಂಗಾಂಗಸಾಮರಸ್ಯರೂಪ ಶಿವಜೀವೈಕ್ಯ ವಿದ್ಯೆಯನ್ನು ಬೋಧಿಸುತ್ತದೆ "ಒನ್ಯೇ ಷಾನುಸಿದ್ಧೈಶ್ಯತೇ" ಎಂಬ ಪಾಣಿನೀಯಸೂತ್ರಾನುಸಾರವಾಗಿ "ವಿ" ಶಬ್ದಕ್ಕೆ ದೀರ್ಘವು ಪ್ರಾಪ್ತವಾಗುವದರಿಂದ 'ವೀರ' ಎಂಬ ಶಬ್ದವು ಸಿದ್ಧವಾಗುತ್ತದೆ. ಯಾವ ಜ್ಞಾನವು ವೇದಾಂತಜನ್ಯವಾದುದೋ ಅದು ವಿದ್ಯೆಯೆಂದು ಹೇಳಿಸಿಕೊಳ್ಳುವದು. ಇಂಥ ವಿದ್ಯೆಯಲ್ಲಿ ಯಾವನು ರಮಿಸುವನೋ ಅವನು ವೀರ ಎಂಬ ಹೆಸರುಪಡೆಯುವನು. ಪರಶಿವಬ್ರಹ್ಮಸ್ವರೂಪವಾದ ವಿದ್ಯೆಯಲ್ಲಿ ವಿಶೇಷವಾಗಿ ಯಾರು ಪ್ರೀತಿಯನ್ನಿಡುವರೋ ಅವರು ವೀರಶೈವರೆಂದು ಹೇಳಿಸಿಕೊಳ್ಳುವರು. ಇವರಲ್ಲಿ ಕರ್ಮಯಜ್ಞಪ್ರೇಮಿಗಳು ಮಾಹೇಶ್ವರರೆಂದು ಹೇಳಿಸಿಕೊಳ್ಳುವರು. ವೀರಶೈವರು ಲಿಂಗಪೂಜೆಯನ್ನು ಪ್ರಧಾನವಾಗಿಟ್ಟುಕೊಂಡಿರುವರು. ಇವರಲ್ಲಿ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ-ಶರಣ ಐಕ್ಯ ಎಂಬ ಸ್ಥಲಸಂಜ್ಞಕ ನಾಮಧೇಯಗಳಿಂದ ಆರು ವಿಧವಾಗಿದ್ದಾರೆ.

ಯಾವನಲ್ಲಿ ನಿಜವಾದ ಶಿವಭಕ್ತಿಯು ಉತ್ಪನ್ನವಾಗುತ್ತದೆಯೋ ಅವನು 'ಭಕ್ತ' ನೆನಿಸುವನು. ಪಾದದಲ್ಲಿ ನಿಷ್ಪಾತನೂ, ಶಿವಾಸಕ್ತನೂ, ಬ್ರಹ್ಮಾದಿಸ್ತಾನ ವಿಮುಖನೂ ಆದವನೇ 'ಮಹೇಶ್ವರ' ನೆನಿಸುವನು. ಈ ಮಹೇಶ್ವರನು ತನ್ನ ಮನಃಪ್ರಸನ್ನತೆಗಾಗಿ ನಿರ್ಮಲ ಜ್ಞಾನಕಾರಣವಾದ ಶಿವಪ್ರಸಾದವನ್ನು ಸ್ವೀಕರಿಸುವದರಿಂದ 'ಪ್ರಸಾದಿ"ಯೆನಿಸುವನು. ಪರಶಿವಬ್ರಹ್ಮವು ಚಿಚ್ಛಕ್ತಿರೂಪನೆಂದೂ ಆ ಪರಶಿವಬ್ರಹ್ಮದಲ್ಲಿರುವ ಶಕ್ತಿಯು ಪ್ರಾಣಸ್ವರೂಪವೆಂದೂ ಲಿಂಗವು ಈ ಎರಡರ ಸ್ವರೂಪವಾಗಿರುವುದೆಂದೂ ತಿಳಿಯುವ ಪ್ರಸಾದಿಯೇ, "ಪ್ರಾಣಲಿಂಗಿ"ಯೆನಿಸುವನು. ತನ್ನ ಪತಿಯು ಹೊರತು ಪರಪುರುಷರಲ್ಲಿ ವಿಮುಖಳಾದ ಪತಿವ್ರತಾಸ್ತ್ರೀಯಂತೆ ಯಾವನು ತನ್ನನ್ನು ತಿನನ ವಿಷಯದಲ್ಲಿ ಸತಿಯಳಾಗಿ ಭಾವಿಸಿಕೊಂಡು ಅನ್ಯದೇವತೆಗಳ ವಿಷಯದಲ್ಲಿ ವಿಮುಖನಾಗುವನೋ ಆ ಪ್ರಾಣಲಿಂಗಿಯೇ 'ಶರಣ' ನೆನಿಸುವನು. ಈ ಶರಣನು ಪ್ರಾಣಲಿಂಗಾದಿಯೋಗದಿಂದ ಸುಜ್ಞಾತಿಶಯವನ್ನು ಹೊಂದಿ ಶಿವೋಹಂ ಭಾವನೆಯಿಂದ ತಿನನಲ್ಲಿ ಏಕತ್ವವನ್ನು ಹೊಂದುವುದರಿಂದ "ಐಕ್ಯ"ನೆನಿಸುವನು ಎಂದು ಶ್ರೀ ರೇಣುಕಭಗವತ್ಪಾದರು ಷಟ್‌ಸ್ಥಲಗಳ ಸ್ವರೂಪವನ್ನು ನಿರೂಪಿಸಿರುವರು. ಈ ಷಟ್‌ಸ್ಥಲಗಳ ವಿವರಣೆಯನ್ನು ಕೆಳಗೆ ಉಲ್ಲೇಖಿಸಲಾಗಿದೆ.

ಭಕ್ತಸ್ಥಲ

(ಅಂಗಸ್ಥಲಗಳು—೮೪)

ಯಾವನಲ್ಲಿ ನಿಜವಾದ ಶಿವಭಕ್ತಿಯು ಉತ್ಪನ್ನವಾಗುತ್ತದೆಯೋ ಅವನು ಭಕ್ತನೆಂದು ಹೇಳಿಸಿಕೊಳ್ಳುವನು. ಆ ಭಕ್ತನು ಅನುಷ್ಠಾನಮಾಡತಕ್ಕ ಧರ್ಮಗಳ ಉಪದೇಶವೇ ಭಕ್ತಸ್ಥಲವೆನಿಸಿಕೊಳ್ಳುವುದು. ಈ ಭಕ್ತಸ್ಥಲವು ಪಿಂಡಸ್ಥಲ, ಪಿಂಡಜ್ಞಾನಸ್ಥಲ ಸಂಸಾರಹೇಯಸ್ಥಲ, ದೀಕ್ಷಾಲಕ್ಷಣಾಗುರುಕಾರುಣ್ಯಸ್ಥಲ, ಲಿಂಗಧಾರಣಸ್ಥಲ, ಭಸ್ಮಧಾರಣಸ್ಥಲ, ರುದ್ರಾಕ್ಷಧಾರಣಸ್ಥಲ, ಪಂಚಾತ್ಪರಜಪಸ್ಥಲ, ಭಕ್ತಮಾರ್ಗಕ್ರಿಯಾಸ್ಥಲ, ಉಭಯಸ್ಥಲ, ತ್ರಿವಿಧಸಂಪತ್ತಿಸ್ಥಲ, ಪ್ರಸಾದಿಸ್ಥೀಕಾರಸ್ಥಲ, ಸೋಪಾಧಿದಾನಸ್ಥಲ, ನಿರುಪಾಧಿದಾನಸ್ಥಲ, ಸಹಜಜಾಪಸ್ಥಲ ಎಂಬ ಭೇದದಿಂದ ೧೫ ಪ್ರಕಾರವಾಗಿರುವುದು. ಶಿವಭಕ್ತನಾದವನು ಈ ೧೫ ಸ್ಥಲಗಳಲ್ಲುಕ್ತವಾದ ಧರ್ಮಗಳನ್ನು ಪ್ರಯತ್ನಪೂರ್ವಕವಾಗಿ ಆಚರಿಸಬೇಕು.

(ಸತಿತ)

ವರ್ತಮಾನಸಂಗ್ರಹ

ದಕ್ಷಿಣ ಕೊರಿಯ ರಾಜಧಾನಿ ಸಿಯೋಲ್ ನಲ್ಲಿ ಅಮೆರಿಕನ್ ಸೇನೆ

ಅಮೆರಿಕನ್ ಸೇನೆಗಳು ಕಳೆದ ೨೧ನೆಯ ಶಾರೀಕು ರಾತ್ರಿ ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್ ನಗರವನ್ನು ಎರಡು ಕಡೆಗಳಿಂದ ಪ್ರವೇಶಿಸಿದೆಯೆಂದು ನ್ಯೂಯಾರ್ಕ್ ರೇಡಿಯೋ ವರದಿ ತಿಳಿಸಿದೆ.

ಸಿಯೋಲ್ ಯುದ್ಧ ಮುಖಕ್ಕೆ ಮೆಕಾರ್ಥರ್ ಭೇಟಿ

ಸಿಯೋಲ್ ಇಂಚಾನ್ ಯುದ್ಧ ಮುಖಕ್ಕೆ ಜನರಲ್ ಮೆಕಾರ್ಥರ್‌ರವರು ಭೇಟಿಕೊಟ್ಟಾಗ ಅಮೆರಿಕನ್ ಸೇನೆಗಳು ಸಿಯೋಲ್‌ಗೆ ಮೂರು ಮೈಲಿಗಳ ದೂರದಲ್ಲಿರುವ ಯಾಂಗ್‌ಡಾಂಗ್ ಪೊ ಬಳಿ ಕದನ ನಡೆಸುತ್ತಿದ್ದವು.

ಸಿಯೋಲ್ ನಗರ ಅರಿಯುಷ್ಕಿತ

ಜನರಲ್ ಮೆಕಾರ್ಥರ್‌ರವರು ಸಿಯೋಲ್ ಒಡಾವಣೆಯಲ್ಲಿ ಒಂದು ಮೈಲಿ ದೂರ ಹೋಗಿ ಪರಿಶೀಲನೆ ನಡೆಸಿದಾಗ ಸಿಯೋಲ್ ನಗರದ ಒಂದು ಭಾಗ ಅಗ್ನಿ ಜ್ವಾಲೆಯಿಂದ ದಗದಗಿಸುತ್ತಿತ್ತು.

ವಿಶ್ವ ಸಂಸ್ಥೆಯ ಪಡೆಗಳಿಗೆ ಉತ್ತೇಜನ

'ನೀವು ಸರಿಯಾದ ಯುದ್ಧ ಮಾಡಿದ್ದೀರಿ ನಿಮ್ಮ ಮೇಧಾ ಶಕ್ತಿ ಅಸಮಾನ್ಯವಾದುದು. ಇದೇ ರೀತಿ ಕದನ ನಡೆಸಿದ್ದೇ ಆದಲ್ಲಿ ಇನ್ನು ಕೇವಲ ಕೆಲವೇ ಗಂಟೆಗಳಲ್ಲಿ ಸಿಯೋಲ್ ಹಿಡಿಯಬಹುದು' ಎಂದು ಜನರಲ್ ಮೆಕಾರ್ಥರ್‌ರವರು ವಿಶ್ವ ಸಂಸ್ಥೆಯ ಪಡೆಗಳಿಗೆ ಉತ್ತೇಜನ ಕೊಟ್ಟರು.

ಸಿಯೋಲ್‌ಗೆ ಹೆಚ್ಚಿನ ಸೇನೆಗಳು

ಸಿಯೋಲ್‌ಗೆ ವಿಪರೀತ ಸೇನೆಗಳನ್ನು ತರಲು ವಿಶ್ವ ಸಂಸ್ಥೆಯ ಪಡೆಗಳು ಇಂಚಾನ್—ಸಿಯೋಲ್ ಹಾದಿಯನ್ನು ಸರಿಪಡಿಸುತ್ತಿದ್ದವು. ಹೆಚ್ಚಿಗೆ ಅಪಾಯಕ್ಕೆ ಒಳಗಾಗಿದ್ದ ರೈಲು ಮತ್ತು ಸಂಚಾರ ರಸ್ತೆಗಳನ್ನು ವಿಶ್ವ ಸಂಸ್ಥೆಯ ಪಡೆಗಳು ಇಂದು ಸರಿಪಡಿಸುತ್ತಿದ್ದವು.

ಇಂಚಾನ್‌ನಲ್ಲಿ ೩೦೦ ಕಮ್ಯೂನಿಸ್ಟರ ಬಂಧನ

ಅಮೆರಿಕನ್ ಇಂಟೆಲಿಜೆನ್ಸ್ ಅಧಿಕಾರಿಗಳು ಇಂಚಾನ್ ನಲ್ಲಿರುವ ಕಮ್ಯೂನಿಸ್ಟ್ ಪಕ್ಷದ ಸದಸ್ಯರುಗಳನ್ನೆಲ್ಲಾ ಬಂಧಿಸುತ್ತಿದ್ದಾರೆ. ಈ ವರೆವಿಗೂ ೩೦ ಮಹಿಳೆಯರ ಸ್ಟೋಳಗೊಂಡು ೩೦೦ ಮಂದಿ ಕಮ್ಯೂನಿಸ್ಟರನ್ನು ಬಂಧಿಸಲಾಗಿದೆ.

ಬ್ರಿಟಿಷ್ ಗಡಿಯೊಳಗೆ ರಷ್ಯದ ಅಕ್ರಮ ಪ್ರವೇಶ

ಬರ್ಲಿನ್ನಿನಲ್ಲಿರುವ ಬ್ರಿಟಿಷ್ ಪ್ರದೇಶ ಪೋಸ್ಟ್‌ಡಾಂ ಆಟೋಬಾನ್ ಗಡಿಯೊಳಗೆ ರಷ್ಯ ಸೇನೆಗಳು ಕೆಲವು ಗಜಗಳ ದೂರ ಅಕ್ರಮ ಪ್ರವೇಶಮಾಡಿದೆಯೆಂದು ಅದನ್ನು ತಡೆಗಟ್ಟಿಲು ಬ್ರಿಟಿಷ್ ಸೇನೆಗಳು ಗಡಿಪ್ರದೇಶದಲ್ಲಿ ಬಲವಾದ ಕಾವಲಾಗಿದ್ದರು ಸುಮಾರು ೨೦೦ ರಷ್ಯನ್ ಸೈನಿಕರು ಗಡಿಯೊಳಗೆ ಅಕ್ರಮ ಪ್ರವೇಶ ಮಾಡಿದುದನ್ನು ಕಣ್ಣಾರೆಕಂಡ ಜರ್ಮನರು ಈ ವಿಷಯ ವನ್ನು ಬ್ರಿಟಿಷ್ ಅಧಿಕಾರಿಗಳಿಗೆ ತಿಳಿಸಿದರು

ಭಾರತಕ್ಕೆ 'ಜಟ್-ವ್ಯಾಂಪೈರ್' ವಿಮಾನಗಳು

ಮುಂದಿನ ಮಾಸದಲ್ಲಿ ಬ್ರಿಟನ್ನಿನಿಂದ ೬ 'ಜಟ್ ವ್ಯಾಂಪೈರ್' ವಿಮಾನಗಳು ತವದೆಹಲಿಗೆ ಬರಲಿವೆ. ಭಾರತದ ರಕ್ಷಣಾಕಾಲೆಯವರು ಕೊಂಡಿರುವ ೪ ಜಟ್ ವಿಮಾನಗಳು ಬ್ರಿಟನ್ನಿನಿಂದ ಈಗಿ ಬಿಡಾರ ತವದೆಹಲಿಗೆ ಬಂದವು.

ಜೇಲಂ ನದಿಯ ಭಾರಿ ಪ್ರವಾಹ

ಜೇಲಂ ನದಿಯಲ್ಲಿ ಅಳತ್ಮಿಕವಾಗಿ ಉಂಟಾಗಿರುವ ಭಾರಿ ಪ್ರವಾಹದಿಂದ ಬ್ರಿಯಲ್ಲಾದಿಂದ ಬಿಹಿಮು, ಅರ್ಮಟ್ಟಾಂಗ್ ವರೆಗಿನ ೭೦ ಮೈಲಿಗಳ ಕಾಶ್ಮೀರ ಕಣಿವೆಯ ಅನೇಕ ಊರುಗಳು ನೀರಿನಲ್ಲಿ ಮುಳುಗಿಹೋಗಿವೆಯೆಂದು ಕಾಶ್ಮೀರ ಸರ್ಕಾರದಿಂದ ಬಂದ ವರದಿ ತಿಳಿಸಿದೆ.

ನಾಸಿಕಕ್ಕೆ ಹೊರಟಿದ್ದ ಜಮ್ಮು ಕಾಶ್ಮೀರ ಪ್ರಧಾನ ಮಿ|| ಬಷೀಗುಲಾಂ ಮಹಮ್ಮದ್‌ರವರು ಈಗ ಕಾಲ್ಲಾದೆಯಲ್ಲೇ ಶ್ರೀನಗರಕ್ಕೆ ಹಿಂದಿರುಗುತ್ತಿದ್ದಾರೆ

ಶ್ರೀನಗರದಲ್ಲಿ ಐದು ಅಡಿ ನೀರು ನಿಂತಿದೆ

ಇಡೀ ಶ್ರೀನಗರದಲ್ಲಿ ಐದು ಅಡಿ ನೀರು ನಿಂತಿದೆ. ಶ್ರೀನಗರದ ರೇಡಿಯೋ ಕೇಂದ್ರವು ಕಳೆದ ಗುರುವಾರ ಇದ್ದಕ್ಕಿದ್ದಂತೆಯೇ ನಿಂತುಹೋಯಿತು ರೇಡಿಯೋ ನಿಲಯದ ಟ್ರಾನ್ಸ್‌ಮಿಟರುಗಳು ೫ ಅಡಿ ನೀರಿನಲ್ಲಿ ನಿಂತಿವೆ ಈ ಪ್ರವಾಹದಿಂದ ಬತ್ತದ ಬೆಳೆಗೆ ತೀರ ನಷ್ಟವಾಗಿದೆ ಕೊನೆಯ ಪಕ್ಷ ೨೦ ಲಕ್ಷ ಮಣ ಆಹಾರಪದಾರ್ಥಗಳು ನಷ್ಟ ಹೊಂದಿರಬೇಕೆಂದು ಊಹಿಸಲಾಗಿದೆ ಸಾವು ನೋವುಗಳ ವರದಿ ಇನ್ನೂ ತಿಳಿದುಬಂದಿಲ್ಲ

ತೋಳಗಳಿಂದ ೨೩ ಮಕ್ಕಳ ದುರ್ಮರಣ

ಅಲಹಾಬಾದಿಗೆ ೩೭ ಮೈಲಿಗಳ ದೂರದಲ್ಲಿರುವ ಶಿರಾತು ಎಂಬಲ್ಲಿ ತೋಳಗಳ ಕಾಟ ವಿಪರೀತವಾಗಿದೆ ಯೆಂದೂ ತೋಳಗಳು ೨೩ ಮಕ್ಕಳನ್ನು ಕಬಳಿಸಿವೆ ಎಂದೂ ವರದಿಯಾಗಿದೆ ಈ ತೋಳಗಳನ್ನು ಹಿಕಾರಿ ಮಾಡಲು ೧೦ ಪ್ರವೀಣ ಹಿಕಾರಿ ಪೋಲೀಸರನ್ನು ಕಾಡಿಗೆ ಕಳುಹಿಸಲಾಗಿದೆ

ಗದ್ದೆಯಲ್ಲಿ ಬಂಗಾರದ ಒಡವೆಗಳ ಪತ್ತೆ

ಹಂಕೋಟು ಎಂಬ ಊರಿಗೆ ೩ ಮೈಲಿಗಳ ದೂರದಲ್ಲಿನ ಒಂದು ಗದ್ದೆಯಲ್ಲಿ ಹೂತಿಟ್ಟಿದ್ದ ೧೩ ಬಂಗಾರದ ಗುಂಡಿನ ಸರಗಳೂ ಇತರ ಸನ್ನ ಒಡವೆಗಳೂ ಒಬ್ಬ ರೈತನಿಗೆ ದೊರೆತಿವೆಯೆಂದು ವರದಿಯಾಗಿದೆ ಈ ಸುದ್ದಿ ತಿಳಿದೊಡನೆ ತಹಶೀಲ್‌ದಾರ್‌ರವರು ಪೋಲೀಸ್ ಸಿಬ್ಬಂದಿಯೊಡನೆ ಸ್ಥಳಕ್ಕೆ ಹೋಗಿ ೧೩ ಬಂಗಾರದ ಸರಗಳನ್ನು ವಶಪಡಿಸಿಕೊಂಡು ರೈತನನ್ನು ದಸ್ತಗಿ ಮಾಡಿ ಕೊಂಡ ಹೊತ್ತಿನ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು ಆ ಭೂಮಿಯು ತಿರುಪತಿಯ ದೇವಸ್ಥಾನಕ್ಕೆ ಸೇರಿತ್ತೆಂದು ಗೊತ್ತಾಗಿದೆ

ಭಾರತದಲ್ಲಿ ಸುಮಾರು ೧೮ ಕೋಟಿ ಓಟುದಾರರು

ಹೊಸ ರಾಜ್ಯಾಂಗದ ಪ್ರಕಾರ ಭಾರತದಲ್ಲಿ ಇನ್ನು ಮುಂದೆ ಏದು ವರ್ಷಕ್ಕೊಮ್ಮೆ ಜನಾವಣೆ ನಡೆಯುತ್ತದೆ ಈ ಜನಾವಣೆಯು ಮುಂದಿನ ವರ್ಷ ಪ್ರಥಮ ಬಹುದು ಜನಾವಣಾ ಸಮಿತಿಯ ಅಧಿಕಾರಿಗಳ ಹೆಸರು ಶ್ರೀ ಎಸ್ ಸೇನ್ ಎಂದು ಆದೆ. ಆವರು ಜನಾವಣೆಯ ಕೆಲವು ವಿಷಯಗಳನ್ನು ತಿಳಿಸಿರುವರು.

ಭಾರತದಲ್ಲಿ ಸುಮಾರು ೧೮ ಕೋಟಿ ಓಟುದಾರರಾಗಬಹುದು ಒಂದುಸಾವಿರ ಓಟುದಾರರಿಗೆ ಒಂದರಂತೆ ಓಟುಕೊಡುವ ಸ್ಥಳವನ್ನು ಸೊತ್ತುಮಾಡಲಾಗುವದು ಭಾರತದಲ್ಲಿ ಓದುಬರಹ ಬಾರದವರೇ ಹೆಚ್ಚಾಗಿರುವದರಿಂದ ಅವರು ಸರಿಯಾಗಿ ಓಟುಮಾಡದೆ ಹೋಗಬಹುದು. ಮೋಸ ಆಗಬಹುದು ಇದನ್ನು ತಪ್ಪಿಸುವದಕ್ಕಾಗಿ ಜನಾವಣೆಗೆ ನಿಲ್ಲುವ ಪ್ರತಿಯೊಬ್ಬರ ಜೊತೆ ಪಕ್ಷಿಯೂ ಒಂದೊಂದು ಓಟಿನ ಪೆಟ್ಟಿಗೆ ಇರಬೇಕೆಂದು ಸಲಹೆ ಬಂದಿದೆ ಪ್ರಜಾಪ್ರತಿನಿಧಿ ಸಭೆಯ ಮತ್ತೊಂದು ಪ್ರತಿನಿಧಿ ಸಭೆಯ ಜನಾವಣೆಗಳೆರಡೂ ಒಟ್ಟಿಗೆ ನಡೆಯುವವು.

ಶ್ರೀಮದ್ರಂಭಾಪುರೀ ಜಗದ್ಗುರುಗಳ ಪುಣ್ಯತಿಥಿ ದಿಣ್ಣಾಚರಣೆ ದಾವಣಗೆರೆ

ಶಾಲಿವಾಹನ ಶಕಾಬ್ದ ೧೮೭೨ ವಿಕೃತಿ ಸು॥ ಶ್ರಾವಣ ೪ ಗುರುವಾರ ಶಾ॥ ೧೩-೮-೧೯೦ ದಿವಸ ದಾವಣ ಸಿಟಿ ಗೌರ್ನಮೆಂಟ್ ಆಸ್ಪತ್ರೆಯ ಸರ್ಜನ್ ಆಸಿಸ್ಟೆಂಟ್ ಸರ್ಜನ್ನರವರಾದ ಶ್ರೀಮಾನ್ ಡಾಕ್ಟರ್ ಎಂ ಸಿ ಜಪ್ಪನವರು ಅಸಾಧಾರಣ ಭಕ್ತಿಯಿಂದ ಜಗದ್ಗುರು ರಾಪೀಠ ವೀರಸಿಂಹಾಸನಾಧೀಶ್ವರ ಶ್ರೀ ೧೦೦೮ ದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾ ಮಿಗಳವರ ಪುಣ್ಯತಿಥಿಯನ್ನು ಬಹು ವೈಭವದಿಂದ ರಿಸಿದರು. ಈ ಸಮಾರಂಭಕ್ಕೆ ನಗರದ ಪ್ರಮುಖ ಗರಿಂದೂ ಆಗಮಿಸಿದ್ದರು. ಆ ಸಮಾರಂಭದಲ್ಲಿ ಭಾಪೋಷಣಕ್ಕಾಗಿ ೨ ರೂ ಗಳನ್ನು ಶ್ರೀ ಹೆಜ್ ಶಿವಾನಂದಸ್ವಾಮಿ ಶಾಸ್ತ್ರಿಗಳವರ ವಕ್ಕಣ್ಯ ಶ್ರೀ ದ್ಗುರು ಗದ್ದುಗೆಯ ನಂದಾದೀಪಾರಾಧನೆಗೆ ೬೦ ಸಾಯಿಗಳನ್ನು ರಂಭಾಪುರಿ ಸಂಸ್ಥಾನ ಮರಕ್ಕೂ ಹಿನಲಾಯಿತು ಡಾಕ್ಟರ್‌ರವರು ಕುಟುಂಬವರ್ಗಕ್ಕೆ ವೆತ್ತಾದರು ಲಿಂಗಾಯುರಾರೋಗ್ಯ ವಿಶ್ವರ್ಯವ ಯಿಲೆಂದು ಹಾರೈಸುತ್ತೇನೆ

ಓರ್ವ ಕಾರ್ಯಭಾಗಿ

ಗಂಗಾವತಿ

ರಾಯಬೂರು ಡಿ॥ ಗಂಗಾವತಿ ಶ್ರೀ ಪಂಚಾಚಾರ್ಯ ರ್ಣಾರ್ಥ ಕೈ ವಿಧ್ಯವಾಕಾಲೆಯಲ್ಲಿ ಪದ್ಮತಿಯಂತೆ ೀ ವಿಕೃತಿನಾಮಸಂವತ್ಸರ ಶ್ರಾವಣ ಶು॥ ೧ ಯಿಂದ ಪ್ರಪದ ಮಃ ೩ ವರೆಗೆ ಶ್ರೀ ಕೊಟ್ಟೂರು ಬಸವೇಶ್ವರ ಶಾಸ್ತ್ರಾನವೇಕನವು ನಡೆದು ಸಮಾಪ್ತಿಗೊಳಿಸಲ್ಪಟ್ಟಿತು ದಿನ ಕೊಟ್ಟೂರೇಶ್ವರ ಪೂಜೆಯು ರುದ್ರಾಭಿಷೇಕ ಪ್ರಬಲ್ಯಾರ್ಚನ ನೇದಭೋಷಣೆ ಪಂಚಾಚಾರ್ಯರ ನೆಗಳಂದ ವಿದ್ಯುಕ್ತವಾಗಿ ನಡೆಯುತ್ತಿತ್ತು. ನೆಯ ದಿವಸ ಪ್ರಾತಃಕಾಲದಲ್ಲಿ ಪುರಾಣ ಪಂಚಾ ರ್ಯರ ಭಾವಚಿತ್ರಗಳನ್ನು ಹೋಡಿಸೋಪಚಾರ ಂದ ಪೂಜಿಸಿ ಪಲ್ಲಕ್ಕಿಯಲ್ಲಿಟ್ಟು ಹೊರಡಿಸಿದ ಉತ್ಸ ತಳಿರುತೋರಣಗಳಂದಲಂಕೃತವಾದ ರಾಜಬೀದಿ ಳಗೆ ಶಿವಭಟನೆ ಮಂಗಲವಾದ್ಯಗಳಿಂದ ಕೈಲಿಂದ ಸಂದಣಿಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಮೂರ್ತಿಪ್ರತಿಷ್ಠಾಪನೆ ನಡೆದು ಮಧ್ಯಾಹ್ನ ೧೨ ಟೆಗೆ ಸ್ವಸ್ಥಾನವನ್ನು ಅಲಂಕರಿಸಿತು ಆಮೇಲೆ ಾರಾಧನೆಯು ನಡೆಯಲ್ಪಟ್ಟು ಪುರಾಣವು ಪರಿ ಾಪ್ತಿಯನ್ನು ಹೊಂದಿತು

ಓರ್ವ ಧರ್ಮಾಭಿಮಾನಿ

ಪುರಾಣ ಸಮಾಪ್ತಿ, ಹೆಜ್ಜತರೆ

ಶಿವಮೊಗ್ಗ ಡಿ॥ ಸಾಗರ ತಾಲೂಕು ಹಿರೇಭಾಸ್ಕಾರು ಬಳಿ ಹೆಜ್ಜತರೆ ಶ್ರೀಮಾನ್ ಹೆಜ್ ವಿ ದ್ಯಾವಪ್ಪ ರ ಸ್ವಗೃಹದಲ್ಲಿ ಇದೇ ಶ್ರಾವಣ ಶು॥ ೧ ರಿಂದ ಣ ಬ॥ ೩೦ ರವರೆಗೆ ಶ್ರೀ ಕ್ಷೇತ್ರವಿವಸವೂ ಶ್ರೀ ರಣ ರಾಮೃತಮೆಂಬ ಪುರಾಣವಷ್ಣು ಬಹಳ ಭಕ್ತಿಯಿಂದ ಣ ಮಾಡಿಸಿ ಕೊನೆಯ ದಿವಸ ಗಣಾಸಂತರ್ಪಣೆ ನ್ನು ನೆರವೇರಿಸಿದರು ಸುಮಾರು ೫೦೦ ಜನರಿಗ ಸಂತರ್ಪಣೆಯಲ್ಲಿ ಭಾಗಿಗಳಾಗಿದ್ದರು ಇವರು ರ್ಷವೂ ಪುರಾಣಶ್ರವಣ, ಗಣಾಸಂತರ್ಪಣೆಯನ್ನು ಳ ಕಾಲದಿಂದ ಪಡೆದುಬಿಕೊಂಡು ಬಂದಿರುವರು ಈ ರ್ಷವು ಇಷ್ಟು ಮುಂಡಿಯೂ ವಿರ್ಘ್ನವಾಗಿ ದ್ಯಾರ್ಥ ನಡೆಯುತ್ತ ಬರಲೆಂದು ಶ್ರೀ ದಯಾ ಿನಾದ ಶಂಕರರನ್ನು ಬೇಡುತ್ತೇನೆ.

ಶ್ರೀಮಾನ್ ದ್ಯಾವಪ್ಪಗೌಡರು ದೊಡ್ಡ ಜಮೀನು ರು. ದೊಡ್ಡ ಮನೆತನದವರು. ಇವರು ಸರ್ಕಾರಕ್ಕೆ ಾರು ೩೦೦೦ ರೂಪಾಯಿಗಳ ಮೇಲ್ಪಟ್ಟು ಯವನ್ನು ತೆರುತ್ತಿರುವರು ಶ್ರೀಮಾನ್ ರು ಸರಸ್ವತೀಭಾವದವರು. ಬಡವರಲ್ಲಿ ತುಂಬಾ ನವಿಟ್ಟವರು, ಸ್ಥಾಯಿಸರು, ಭಿಕ್ಷಾಪಾತ್ರಿಗಳು, ಾಂತಸ್ವಭಾವದವರು. ಇವರು ಸಾಗರದಲ್ಲಿ ಪಶುವೈದ್ಯ ಶಾಲೆಯ ಕಟ್ಟಡಕ್ಕೂ ಸಾಗರದಲ್ಲಿ ಮುಂದೆ ಕಟ್ಟಲ್ಪಡುವ ಆಸ್ಪತ್ರೆ ಕಟ್ಟಡಕ್ಕೂ ವೀರಶೈವ ವಿದ್ಯಾರ್ಥಿನಿಲಯಕ್ಕೂ, ಸಾಗರ ಟೌನ್ ಕಂಬಳಕೊಪ್ಪ ದಲ್ಲಿ ಕಟ್ಟಿಲ್ಪಟ್ಟಿರುವ ಶ್ರೀ ವೀರಭದ್ರ ದೇವಸ್ಥಾನದ ಕಟ್ಟಡಕ್ಕೂ ಸಹಾಯಮಾಡಿದ್ದಲ್ಲದೆ ದೇವಸ್ಥಾನದ ಹಕ್ಕಿರ ಧರ್ಮಾರ್ಥವಾಗಿ ಒಂದು ಬಾವಿಯನ್ನು ಸಹಾ ತೆಗೆಯಿಸಿಕೊಟ್ಟಿರುತ್ತಾರೆ ಮತ್ತು ದೇವರ ಸೇವೆಗೆ ಒಂದ ಭಕ್ತಾದಿಗಳು ಉಳಿದುಕೊಳ್ಳುವ ಬಗ್ಗೆ ಕೆಲವು ಭಕ್ತಾದಿಗಳ ಸಹಾಯದಿಂದ ಧರ್ಮಶಾಲೆಯು ಕಟ್ಟಿಡ ಮಾಡಿಸುತ್ತಿರುವರು ಇವರು ಮಾಡಿದ ಧರ್ಮ ಕಾರ್ಯಕ್ಕೆ ನಮ್ಮನ್ನಾಳುವ ಶ್ರೀಮಚ್ಛಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಮೆಚ್ಚಿ ಇವರಿಗೆ ಪಬ್ಲಿಕ್ ಸರ್ವಿಸ್ ಮೆಡ್ಡಿನ್ನು ದಯಪಾಲಿಸಿರುತ್ತಾರೆ ಅಂದಮೇಲೆ ಇವರ ವಿಷಯದಲ್ಲಿ ಇನ್ನು ಹೆಚ್ಚಿಗೆ ಹೇಳುವುದು ಅನಾವಶ್ಯಕ ಶ್ರೀ ಗೌರ ಕುಟುಂಬಕ್ಕೆ ಹಾಗೂ ಇವರ ಮನೆತನದವರಿಗೆ ವಿಶ್ವರ್ ಸುಖಸಂಪ ತ್ತೆಷ್ಣು ಕೊಟ್ಟು ದೀನದಾರಿದ್ರರಿಗೆ ಸಹಾಯ ಮಾಡಿಸಿ ಇಹಪರ ಸುಖಕ್ಕೆ ಭಾಗಿಗಳಾಗುವಂತೆ ಅನುಗ್ರಹಿಸ ಲೆಂದು ಶ್ರೀ ಸರ್ವೇಶ್ವರನನ್ನು ಬೇಡಿಕೊಳ್ಳುತ್ತೇನೆ

ಓರ್ವ ಪ್ರತ್ಯಕ್ಷದರ್ಶಿ

ಶ್ರೀಮುಕ್ತಿಮಂದಿರ ಗುರುಕುಲಂಪಂಚ್ಗೆಗೆ ಸಲ್ಲುವ ಸೇವೆ

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳವರ ಮೂಲಮಹದ (ಪಾಲಿಕೊಪ್ಪ ಬೃಹನ್ಮಠ) ಶಿಷ್ಯ ವೀರ ಭದ್ರಪ್ಪ ಶಿಪ್ಪಣ್ಣ ಹೂಗಾರ ಸಾ॥ ಹೊಳೆ ಆಲೂರ ಇವರ ಅರಿಕೆ—

ಹೊಳೆಆಲೂರ ವ್ಯಾಪಾರಿ ಕೇಂದ್ರಸ್ಥಳವಿದ್ದು ಇಲ್ಲಿ ಶಿವೋಪಾಸನೆಯ ಸಾಮಾನುಗಳು ದೊರೆಯುವದು ದುರ್ಲಭವಾಗಿತ್ತು ಕಾರಣ ನನ್ನ, ಶ್ರೀ ಗಂಗಾಧರ ಸ್ವೋಸಿಗಿನಿಲ್ಲಿ ಅದರ ಒಂದು ಶಾಖೆಯನ್ನು ತೆಗೆದು ಹುಬ್ಬಸಮಾರಂಭದಲ್ಲಿ ಸ್ವಲ್ಪ ಸ್ವಲ್ಪ ಕಾಣಿಕೆರೂಪದಿಂದ ಸಲ್ಲಿಸುತ್ತ ಮತ್ತು ವ್ಯಾಪಾರ ಮಾಡುತ್ತ ಬಂದ ಶಿಲ್ಕು ಕೆಳಗಿನಂತಿದೆ

ಶ್ರೀಕಕೆ ೧೮೭೨ನೇ ವಿಕೃತಿನಾಮಸಂವತ್ಸರ ಶ್ರಾವಣ ಬಹುಳ ೩೦ಕ್ಕೆ—

೪೧೦ ಸುಗಂಧಕ್ಕೆಯಾಧಸ್ಯದ ಕೆಟ್ಟಿಗಳು ಸಣ್ಣವು ದೊಡ್ಡವು ಸಹಿತ
೧೦೪೦ ಸಾದಾ ಧಸ್ಯದ ಕೆಟ್ಟಿಗಳು ಸಣ್ಣವು ದೊಡ್ಡವು
೧೩೪೦ ಶಿವದಾರ
೧೯೨ ಲಿಂಗು (ಪೀಠಿಕಾ) ಪಂಚಸೂತ್ರದವು ಮತ್ತು ಸಾಮಾನ್ಯರದವು
೬೫ ಪುಸ್ತಕಗಳು (ಧರ್ಮಗ್ರಂಥಗಳು)
೫೮ ಫೋಟೋಗಳು ಕಾಲುಹಾಕಿದವು ಸಹಿತ (ಧಾರ್ಮಿಕ).
೫೪ ರುದ್ರಾಕ್ಷಿ ಸಣ್ಣವು ದೊಡ್ಡವು
೬ ಸಾಣೆಕಲ್ಲುಗಳು
೨ ಬೆಳ್ಳಿಯ ಲಿಂಗೋದ್ಭವ ಪದಕ
ಪಂಚ ಚಾಪಿಗಳು

ಅರ್ಥಿ, ಸಾಧ್ಯ, ಅಜಮಿನ, ಗಂಧದಪುಡಿ ಮತ್ತು ಪಣಾಂಗ, ಧೋಖು ೧೩-೧೨-೬.

ಈ ಮೇಲಿಲು ಸಂಸ್ಥೆಗೆ ಕೆಲವು ಸಾಮಾಗ್ರಿಗಳನ್ನು ಸಲ್ಲಿಸಿದೆ ಅದರಲ್ಲಿ ಒಂದು ಸಾಣೆಕಲ್ಲು ೬೦ ಇಂಚು ಸುತ್ತಳತೆಯುದ್ದಿದೆ ಯಾವತ್ತು ಹಣವು ಶ್ರೀ ಮುಕ್ತಿ ಮಂದಿರ ಗುರುಕುಲ ಸಂಸ್ಥೆಗೆ ಸಲ್ಲುವದರಿಂದ ವಿಲ್ಲರೂ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗಿ ವಿನಂತಿ.

ವಿನಯ—

ಶ್ರೀ ಗಂಗಾಧರ ಸ್ಟೋರ್ಸ್,
ಹೊಳೆ ಆಲೂರ (ಎಂ ಎಸ್ ಎಂ. ರೈಲ್ವೆ)
ತಲ್ಲಾ ಧಾರವಾಡ.

ಧರ್ಮಾರ್ಥ ಹೋತಿಷ್ಯ, ವೈದಿಕಪಾಠಶಾಲಾ ಸ್ಥಾಪನೆಯು

ಧಾರವಾಡ ಜಿಲ್ಲಾ ಹಿರೇಕೆರೂರು ತಾಲೂಕು ಎಡ ಗೋಡಪ್ಪಾಟೆನಲ್ಲಿ ಈ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರ ಅಭಿಪ್ರಾಯದಮೇರಿಗೆ ಹೂಲಿ ಬೃಹನ್ಮಠಾಧೀಶ, ಶರಪಟ್ಟಾಧ್ಯಕ್ಷ, ತರ್ಕತೀರ್ಥ, ಸಾಂಖ್ಯಾಲಂಕಾರ, ನ್ಯಾಯವಾಚಸ್ಪತಿ, ವೇದಾಂತವಿದಾ ರದ ಇತ್ಯಾದ್ಯನೇಕ ಪದವೀಧರರಾದ ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳ ಅಪ್ಪಣೆಆಶೀರ್ವಾದದಿಂದ ಭಕ್ತ ಮಾಜೇಶ್ವರರು ಈ ಹಿಂದೆ ಕಮಿಟಿಯೊಂದನ್ನು ಮಾಡಿ ನಿರ್ಧರಿಸಿಕೊಂಡಂತೆ ಶಾ॥ ೭ ೯೫೦ ನೆಯ ಇಸವಿ ಗುರುವಾರ ಸ್ಥಾತಃಕಾಲ ಪಾಠಶಾಲೆಯನ್ನು ಆರಂಭಿಸಿ ಇಲ್ಲಿಯ ಶ್ರೀ ಜಗದ್ಗುರು ಪಂಡಿತಾರಾಧ್ಯ, ವಿಶ್ವಾರಾಧ್ಯ ಶಿಲಾಲಿಂಗೋದ್ಭವಮೂರ್ತಿಗಳ ಶ್ರೀ ರುದ್ರಾಭಿಷೇಕವು ನಡೆಯಿತು ಮತ್ತು ಇವೇ ದಿನ ಸಾಯಂಕಾಲ ನಾಲ್ಕು ಘಂಟೆಗೆ ಸರಿಯಾಗಿ ಹೂಲಿ ಸಂಸ್ಥಾಧಿಕರ ರಾದ ವೇ॥ ಸಿದ್ಧಾಂತ ಶಿವಬಸವಶಾಸ್ತ್ರಿಗಳ ಅಧ್ಯಕ್ಷತೆ ಯಲ್ಲಿ ಗ್ರಾಮದ ಪ್ರಮುಖರೊಂದಿಗೆ ಸಭೆ ಸೇರಲ್ಪಟ್ಟಿತು. ಈ ಸಭೆಯಲ್ಲಿ ಪಾಠಶಾಲೆಯ ಅಧ್ಯಾಪಕತ್ವವನ್ನು ವಹಿ ಸಿದ ವೇ॥ ರುದ್ರಾರಾಧ್ಯಶಾಸ್ತ್ರಿಗಳು ಬಸವನಾಳಮಠ ಇವರು ಜೋತಿಷ, ವೈದಿಕ ಮಹತ್ವದ ಬಗ್ಗೆ ಭಾಷಣ ಮಾಡಿ ಇತೀ ಜಗದ್ಗುರು ಮತ್ತು ಶ್ರೀಕೈಲ ಜಗದ್ಗುರು ಗಳವರು ಪಾಠಶಾಲೆಯ ಬಗ್ಗೆ ಬರೆದ ಶುಭಾಶೀರ್ವಾದ ಪತ್ರಗಳನ್ನು ಓದಿದನಂತರ ಯಾವತ್ತರೂ ಆನಂದಭರಿತ ರಾದರು

ಅತಂತರ ಅಧ್ಯಕ್ಷರು ಪಾಠಶಾಲೆಯ ಕಾರ್ಯಕ್ರಮ ನೆನ್ನು ವಿಶದವಾಗಿ ತಿಳಿಸಿದ ನಂತರ ಜಗದೀಶನ ಜಯ ಘೋಷಮಾಡಿನೆ ಸಭೆಯು ವಿಸರ್ಜನೆಗೊಳ್ಳಲ್ಪಟ್ಟಿತು.

ರುದ್ರಪ್ಪಯ್ಯ ಹಾಲಪ್ಪಯ್ಯ ಭೈರವಾಡ ಮಕ

ಮಹಾಪ್ರಭುಗಳವರ ಉದಾರ ದಾನ

ಸಂಸ್ಥಾನದಲ್ಲಿ ಆಹಾರ ಆಧಾವನಿಂದ ನೊಂದವರಿಗೆ

ಮೈಸೂರು ಸಂಸ್ಥಾನದ—ಮೈಸೂರು, ಕೋಲಾರ, ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಆಹಾರ ಅಭಾವ ತಲೆದೋರಿತ್ತಷ್ಟೆ ಈ ಪ್ರದೇಶಗಳಲ್ಲಿ ನೊಂದ ವರ ಪರಿಹಾರಕ್ಕಾಗಿ ಮೈಸೂರಿನ ಶ್ರೀಮನ್ಮಹಾರಾಜ ರವರು ಒಂದು ಲಕ್ಷ ರೂಪಾಯಿಗಳನ್ನು ಉದಾರವಾಗಿ ದಾನಮಾಡಿದ್ದಾರೆ

ಅಸ್ಸಾಂ ಭೂಕಂಪಪೀಡಿಗೆ

ಶ್ರೀಮನ್ಮಹಾರಾಜರವರು ಅಸ್ಸಾಂ ಭೂಕಂಪ ಪರಿ ಹಾರ ನಿಧಿಗೂ ಒಂದು ಲಕ್ಷ ರೂ ಗಳನ್ನು ಉದಾರವಾಗಿ ದಾನಮಾಡಿದ್ದಾರೆ.

ಸ್ವೀಕಾರ

ಶಿವಮೊಗ್ಗಾ ಡಿ॥ ಸಾಗರ ತಾಲೂಕು ಹೆಜ್ಜತರೆ ಗ್ರಾಮವಾಸಿಗಳಾದ ಶ್ರೀ ಹೆಜ್ ವಿ ದ್ಯಾವಪ್ಪಗೌಡರು ತಮ್ಮ ಗೃಹದಲ್ಲಿ ಪುರಾಣ ಸಮಾಪ್ತಿಯ ಗಣಾರಾಧನೆ ಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭುವೇಷಣಕ್ಕಾಗಿ ಸಮರ್ಪಿಸಿದ 5 ರೂ. ಗಳು ಗುಳ್ಳೇಹಳ್ಳಿ ಶ್ರೀ ಚನ್ನಬಸವೈಗೌಡರ ದ್ವಾರಾ ತಲ್ಪಿರುತ್ತವೆ.

ದಾವಣಗೆರೆ ಸಿಟಿ ಹಾಸ್ಪಿಟಲ್ ಯಂ.ಸಿ ನಂಜಪ್ಪನವರು ಆಸಿಸ್ಟೆಂಟ್ ಸರ್ಜನ್ ಇವರು ಶಾ॥ ೧೬-೮-೫೦ ನೆಯ ದಿನಸ ರಂಭಾಪುರಿ ಜಗದ್ಗುರು ಶ್ರೀ ಶಿವಾನಂದ ರಾಜೇಂದ್ರ ಸ್ವಾಮಿಗಳವರ ಭೌತಿಕಾಧಿ ಅಳರಿಂದ ಸಮ ಯದಲ್ಲಿ ಪ್ರಭುವೇಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಶ್ರೀ ಹೆಜ್. ಎಂ. ಶಿವಾನಂದಸ್ವಾಮಿಶಾಸ್ತ್ರಿ ಹಿರೇ ಮಠ ಇವರ ದ್ವಾರಾ ತಲುಪಿರುತ್ತವೆ.

ಈ ಮೇಲ್ಕಂಡ ಮಹಾಶಯರುಗಳಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಶಿಷ್ಯಮೇಗಲವನ್ನು ರಿಯಲೆಂದು ಹಾರೈಸುತ್ತೇನೆ.

ಮಹಾಪೂಜಾ ನುತ್ತು ಪುರಾಣಪ್ರವಚನ ಸಮಾಪ್ತಿ ಸಮಾರಂಭ ಕಾಮಲಾಪುರ

ಶ್ರೀಮದ್ವಿದ್ಯಾನಗರ ದಕ್ಷಿಣಕಾಶಿ ಸಂಪಾಸುಕ್ಷೇತ್ರ ಹಂಪಿ ಸಾವಿರೇದರು ಎಮ್ಮಿಗನೂರು ಮಹಂತಿನ ಮಠದ ಪಟ್ಟಾಧ್ಯಕ್ಷ ಶ್ರೀ॥ ಪ॥ ಬ್ರ॥ ಬಾಲಶಪ್ಪ ಗುರುಸಿದ್ಧ ತಿವರೋಗಿತಿವಾಚಾರ್ಯ ಸ್ವಾಮಿಗಳವರು ಹೊಸಪೇಟೆ ತಾಲ್ಲೂಕು ಕಾಮಲಾಪುರ ಕಪ್ಪೆಮನೆ ಶ್ರೀಮತಿ ಸಿದ್ಧಲಿಂಗಮ್ಮನವರ ಪ್ರಾರ್ಥನೆಯಂತೆ ಆಗಮಿಸಿ ಗೃಹದಲ್ಲಿ ಮಹಾರುದ್ರಾಭಿಷೇಕ ಮತ್ತು ಸಿದ್ಧರಾಮೇಶ್ವರ ಪುರಾಣ ಪ್ರವಚನಗಳನ್ನು ಶ್ರಾವಣ ಮಾಸದಲ್ಲಿ ನಡೆಸಿದ್ದು ಅತ್ಯಂತ ವಿಜೃಂಭಣೆಯಿಂದ ಜರುಗಿದವು ತಾ॥ ೧೩ ೯೫೦ ಬುಧವಾರ ೬ ಘಂಟೆಗೆ ಸಿದ್ಧಲಿಂಗಮ್ಮನವರ ಬೀದಿಯಲ್ಲಿ ಸಭೆ ಜರುಗಿತು ಮೊದಲು ಕಾಮಲಾಪುರ ಸ್ಕೂಲ್ ಟೀಚರ್ ಕೆ ಎಂ ಬಸವರಾಜಶಾಸ್ತ್ರಿ ಸಂಗೀತದಿಂದ ತಿವಪ್ರಾರ್ಥನೆ ಯಾಯಿತು ನಂತರ ಕಾಮಲಾಪುರ ವೇ॥ ಕೆ ಎಂ ಈಶ್ವರಯ್ಯನವರು ಅನುಷ್ಠಾನದ ವಿಷಯವನ್ನೂ ಶ್ರೀಗಳವರ ವಿಷಯವನ್ನೂ ಕುರಿತು ಅತ್ಯಂತ ಮನೋಹರವಾಗಿ ಭಾಷಣ ಮಾಡಿದರು ಅಧ್ಯಕ್ಷರೂ ಜ್ಞಾನಿಗಳೂ ತಮ್ಮ ಅನುಭವಾಣಿಯಿಂದ ಸಭಿಕರಿಗೆ ಮನನಾನಂದವಾಗುವಂತೆ ಪರಮ ತಪೋನಿಧಿ ಶ್ರೀಮದ್ಗುರುಸಿದ್ಧಲಿಂಗತಿವಯೋಗಿಗಳ ವಿಷಯದಲ್ಲಿ ಭಾಷಣ ಮಾಡಿದರು ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಓರ್ವ ಗುರುಭಕ್ತ

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಜೀವಿತದ ಅತ್ಯುತ್ತಮ ಘಟನೆಗಳಿಂದ ಕೂಡಿದ ಫೋಟೋ ಸೈಜು ೨೦×೧೫ ಬೆಲೆ ೧೯೫	೦—೬—೦
ಶ್ರೀವೀರ ಕಾಚಾರ್ಯರ ಲಿಂಗಾವತಾರ ದ ಫೋಟೋ (ನೂನ ವಿಭಜಿಸಲ್ಪಟ್ಟಿಂಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಪೀಠಾಧಿಪತಿಗಳಿಗೆ ತಿವಪೂಜೆಯಲ್ಲಿ ತೊಡಗಿರುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೯೫	೦—೩—೦
,, , ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ತಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ತಿವ ಚಾರ್ಯರಿಗೆ ಪಟ್ಟಾಭಿಷೇಕ ನಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಕಂಠರಾಚಾರ್ಯರಿಗೆ ಜಂಪ್ರಮಾಳೀಕ್ಷರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ತಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರತಿವಾಚಾರ್ಯರಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು)	೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟ ಧಾರಣವನ್ನು ಮಾಡುವ ಫೋಟೋ	೦—೧—೬
ಶ್ರೀಮಜ್ಜಗದ್ಗುರುಯೋ ಸಿಂಹಾಸನಾಧಿಷ್ಠಿತರಾದ ಶ್ರೀ ಜಗದ್ಗುರು ಪಿಬ್ಬಲಿಂಗತಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ಗುರುಭಾಸ್ಕರಾಯ ಶಿವಾಚಾರ್ಯರ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮಜ್ಜಗದ್ಗುರುಯೋ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧೪	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧೪	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಆಕೃತಿ ಸುಂದರವಾದ ಫೋಟೋ ೧೪	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಆಕೃತಿ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೪	೦—೧—೬
ಶ್ರೀ ಜಗದ್ಗುರು ಕೇದಾರಲಿಂಗಾಸನದ ಆಕೃತಿ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂ॥ ಕೂಡು ಅಂಬೊನ್ಮೆಂಟನಲ್ಲಿ ನೆಲೆಸಿರುವ ರಂಭಾಪುರೀ ಜಗದ್ಗುರುಗಳ ಅದ್ಧಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರೀ ವೀರಪಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಸಂಧ್ಯಾಪ್ರ ತಿವಪೂಜಾವಿಧಿ (೯ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೨ ಆಣೆ
ಬಸವಾದಿಶಿಜಶತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿತಿವಾಚಾರ್ಯಶತಕ	೨ ಆಣೆ
ತಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ ...	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೮ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) ...	೪ ಆಣೆ
ಶ್ರೀಪಟಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಕೈವೋಪನಿಷತ್ಭಂಗ್ಯಹ (ಸಂಸ್ಕೃತ) (೫ನೆಯ ಆವೃತ್ತಿ) ...	೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ...	೪ ಆಣೆ
ವೈದಿಕವಾಜ್ಞಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರ್ಣಯ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂಶ್ಚೇಷ್ಟಿ—ಶ್ರಾದ್ಧವಿಧಿ	೫ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೨ ೮ ಆಣೆ
ತಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ

ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತವಿದಾರಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಶ್ರೀಜಗದ್ಗುರು ತಿವಾನಂದವಿಜಯ ..	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನತಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ತಿಪಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ವಿವೇಕಮುಕ್ತಾವಳಿ	೧ ರೂ
ವಿಜಯವಿಜಾರವಳಿ	೧ ರೂ
ವೈದಿಕತಿವಪೂಜಾವಿಧಿ (ವೈದಿಕ್ಕರಯುಕ್ತವಾದುದು. ೩ನೆಯ ಆವೃತ್ತಿ)	೧೫ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೩ ರೂ
ವೀರಶೈವರತ್ನ (೩ನೆಯ ಆವೃತ್ತಿ. ೪೦ ಮಹತ್ವದ ಫೋಟೋಗಳಿಂದಲಂಕೃತವು)	೩ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಛಾಯಾಚಿತ್ರದ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ತಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮುಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ತಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ..	೪ ರೂ
A brief life-sketch of Pandit Sri Kashinatha Shastrigu (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastrigu (*English*)	12 As
ಶಿವಾಚಾರಚಂದ್ರಿಕಾ (ಸಂಸ್ಕೃತ)	೩ ಕ
ಶಿವಶರಣರು (ಮರಾಠಿ)	೧ ಕ
ಮಹಾನಾರಾಯಣೋಪನಿಷತ್ (ಶಿವರಹಸ್ಯ-ಸಂಸ್ಕೃತ)	೧ ಕ
ನಂದಿಕೇಶ್ವರಕಾರಿಕಾ (ಸಂಸ್ಕೃತ) .	೨ ಆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Brihanmath Mahadevaiah at Shri Panchacharya Electric Press, Sayaji Rao Road, Mysore.

REGISTERED No. M 2266 ಶ್ರೀಮನ್ನಾಗನೂರು ಮಂಚಾಚಾರ್ಯಾ: ಪ್ರಸೀದಂತು। REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಚಾರ್ಯನಮಸಂಜಾತಜನಿತರ ಪಂಚಾಸ್ಯವೀಣಾಧಿಕರ । ಪಂಚಕ್ಲೇಶವಿನಾಶಕರ ಪರಶಕ್ತಿಪಂಚಲಿಂಗೋದ್ಭವರ ॥
ಪಂಚಾಚಾರಧಿಯಾಮಕರ ಪರಲಸತ್ಪಂಚಾಕ್ಷರೀಮೋಧಕರ । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮತಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೬ ರೂ ೪ ಆಣೆ.

ಸಂಪುಟ ೨೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಅಕ್ಟೋಬರ್ ೧೯೩೦ [ಸಂಚಿಕೆ ೨೪

ಅಭಿಸಂದನೆಸಭೆ ಕಾಶೀ

ತಾ॥ ೮-೯-೧೯೩೦ ನೇ ದಿನ ಸಾಯಂಕಾಲ ಕಾಶೀ ವೀರಶೈವ ವಿದ್ವತ್ಸಂಭೆದ ಸಭಾಭವನದಲ್ಲಿ ಶ್ರೀ ಜ ವಿಶ್ವಾರಾಧ್ಯ ಗುರುಕುಲ ಸ್ಥಾಪಕರೂ ಸದರ ಸಂಭೆದ ಮಾನ್ಯ ಸದಸ್ಯರೂ ಆದ ವೇ॥ ಪಂ॥ ಸೋಮಶೇಖರ ಶಾಸ್ತ್ರಿಗಳು ಬಿ ಎ, ರಾಯಚೂರು ಇವರ ಸನ್ಮಾನಕ್ಕಾಗಿ ಅಭಿನಂದನ ಸಭೆಯು ಕೇದಾರ ಪೀಠದ ಭಾವಿ ಜಗದ್ಗುರುಗಳಾದ ವಂ॥ ಶ್ರೀ ವಿಶ್ವನಾಥಲಿಂಗತಿವಾಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು ಮೊದಲು ವೇದಸೋಷ ಪಾದ ಬಳಿಕ ವೇ॥ ಶ್ರೀ ಗುರುಸಿದ್ಧಸ್ವಾಮಿಗಳೂ, ಶ್ರೀ॥ ಷ ಬ್ರ॥ ಸಿದ್ಧರಾಮತಿವಾಚಾರ್ಯರೂ, ಶ್ರೀ॥ ಷ॥ ಬ್ರ॥ ಮಲ್ಲಿಕಾರ್ಜುನತಿವಾಚಾರ್ಯರೂ, ವೇ॥ ಗಂಗಾಧರ ಶಾಸ್ತ್ರಿಗಳವರ ಒಡ್ಡಿ ಮಾತನಾಡಿದರು ಬಳಿಕ ಶ್ರೀ ಕಾಶೀನಾಥಶಾಸ್ತ್ರಿಗಳವರು ಕೂಡಿದ ಮಿತ್ರರೊಂದಿಗೆ ಬಾಲ್ಯದಿಂದ ಸಂಘಟಿಸಿರುವ ತಮ್ಮ ಅನುಭವಗಳನ್ನೂ ಈ ಮಧ್ಯ ಸೌಭಾಗ್ಯದಿಂದ ತಮಗೆ ಪ್ರಾಪ್ತವಾಗಿದ್ದ ಶ್ರೀ ಕೇದಾರ ಮಹಾಪೀಠದ ಸೇವೆಯನ್ನೂ ಬಿಚ್ಚಿಸುತ್ತ ಹರ್ಷಪೂರಿತವಾಗಿ ಭಾಷಣಮಾಡಿದರು

ಅನಂತರ ಅಧ್ಯಕ್ಷಪಾದರು ಶಾಸ್ತ್ರಿಗಳವರ ಚುರುಕು ಬುದ್ಧಿ, ವಿದ್ಯಾವ್ಯಾಸಂಗ, ಸ್ವಧರ್ಮಾಭಿಮಾನ, ಗುರಾಚಾರ್ಯರಲ್ಲಿರುವ ನಿಷ್ಠೆ, ಅವರಿಂದ ಘಟಿಸಿದ ಕೇದಾರೀರದ ಸೇವೆ ಮೊದಲಾದವುಗಳ ಬಗ್ಗೆ ಭಾಷಣ ಮಾಡುತ್ತ ಶಾಸ್ತ್ರಿಗಳಂತೆ ಇತರರೂ ಸಹ ಪರಿಶ್ರಮಿಸಿ ಬದ್ಧಿಬಲವನ್ನು ಸಂಸಾರಿಸಿ ಸಮಾಜದ ಸುವ್ಯವಸ್ಥೆಗಾಗಿ ಸನ್ನದ್ಧರಾಗಬೇಕೆಂದೂ ಇಂದು ಈ ಗುರುಕುಲಗಳಲ್ಲಿ ತಯಾರಾಗುತ್ತಿರುವ ಸ್ನಾತಕರೇ (ಸ್ನಾತಕವಿದ್ಯಾರ್ಥಿಗಳೇ) ನಾಳೆ ಸಮಾಜದ ಧುರಂಧರರಾಗುವೆರೆಂದೂ ಅಪ್ಪಣೆಕೊಡಿಸುತ್ತ ಇಂದಿನ ವಾತಾವರಣದಲ್ಲಿ ಧರ್ಮಗುರುಗಳ ದ್ವಾರಾ ಆಗಬೇಕಾದ ಸಮಾಜ ಸಂಘಟನೆ, ಶಿಕ್ಷಣ, ಸಂಸ್ಕೃತಿ, ಸಭ್ಯತೆಗಳ ರಕ್ಷಣೆ, ದರ್ಮದ ಮೇಲಾಗುತ್ತಿರುವ ಆಧರ್ಮಾಕ್ರಮಣದ ನಿವಾರಣೆ ಮೊದಲಾದವುಗಳ ಬಗ್ಗೆ ಸರಸವಾಗಿಯೂ ಸುಂದರವಾಗಿಯೂ ಉಪದೇಶಿಸಿದರು ಬಳಿಕ ಷ॥ ಬ್ರ॥ ಸಿದ್ಧರಾಮತಿವಾಚಾರ್ಯರಿಂದ ಅಡಾಗಲೇ ತಯಾರಿಲ್ಪಟ್ಟಿದ್ದ ಅಭಿನಂದನ ಪದ್ಯವನ್ನು ಸಮರ್ಪಿಸಲಾಯಿತು ಕಡೆಗೆ ವಂದ್ಯವಾದಗಳೊಂದಿಗೆ ಸಭ್ಯರಿಸಿದ ಬಳಿಕ ಶಾಂತಿಪಾಠದೊಂದಿಗೆ ಸಭಾಕಾರ್ಯಕ್ರಮವು ಪೂರ್ತಿಗೊಳಿಸಲ್ಪಟ್ಟಿತು

ಕಾರ್ಯದರ್ಶಿ
ಕಾಶೀ ವೀರಶೈವ ವಿದ್ವತ್ಸಂಘ

ಶ್ರೀಪುರಾಣಮಹೋತ್ಸವಸಮಾರಂಭ, ಸರಗುಂದ

ಧಾರವಾಡ ತಿ॥ ಸರಗುಂದ ಪಂಚಗೃಹ (ಗುಡ್ಡದ) ಹಿರೇಮಠದ ಅಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಶಿವಲಿಂಗೇ ಸ್ವಾಮಿಗಳವರು ಶ್ರಾವಣಮಾಸದಲ್ಲಿ ಶ್ರೀ ಒಸವಪುರಾಣ ಪ್ರಾರಂಭಮಾಡಿಸಿ ಶಲವಡಿ ಹಿರೇಸುರದ ವೇ॥ ಈಶ್ವರ ಶಾಸ್ತ್ರಿಗಳವರ ಪ್ರವಚನದಿಂದಲೂ ರೌಜಗೇರಿ ಬಿ ಎಂ ಮಹಾರುದ್ರಯ್ಯನವರ ಇಂಪಾದ ಓದುಗಾರಿಕೆಯಿಂದಲೂ ಅತ್ಯಂತ ಮನೋರಂಜಕವಾಗಿ ನಡೆಸಿದ್ದರು ಈ ಸಮಯದಲ್ಲಿ ಇಲ್ಲಿಗೆ ಆಗಮಿಸಿದ್ದ ಬಳ್ಳಾರಿ ತಿ॥ ಹಿರೆಹಡಗಲಿ ಪುರಾಣಿಕರುವರ ವೇ॥ ಪಂಡಿತ ವಿರೂಪಾಕ್ಷಶಾಸ್ತ್ರಿಗಳವರು ೫ ದಿವಸ ಆಸ್ಥಾನದಲ್ಲಿ ಗುರುಮಹತ್ವಾದಿಗಳ ಬಗ್ಗೆ ಚೆನ್ನಾಗಿ ಬೋಧಮಾಡಿದರು ಪುರಾಣ ಸಮಾಪ್ತಿಯ ಭಾದ್ರಪದ ಶು॥ ೪ ದಿವಸ ಮಹಾಗಣಾಧಿಪತಿಯೂ ಸಹಸ್ರಾವಧಿಜನರಿಗೆ ಅನ್ನ ಸಂತರ್ಪಣೆಯೂ ನಡೆದುಬಳಿಕ ಸಾಯಂಕಾಲಕ್ಕೆ ಕುಂಭೂರು ಶ್ರೀಗುರವರ ಮತ್ತು ಶ್ರೀ ಪುರಾಣ ಪಲ್ಲಕ್ಕೆ ಮಹೋತ್ಸವವು ಗಜಾಶ್ವಗಳಿಂದ ಅನೇಕ ಮಂಗಲವಾದ್ಯಗಳೊಡಗೂಡಿ ರಾತ್ರಿ ೧೦ ಘಂಟೆವರೆಗೂ ಸಂಭ್ರಮದಿಂದ ನೆರವೇರಿತು

ಈ ಸಮಾರಂಭಕ್ಕೆ ಅನೇಕ ಗ್ರಾಮಗಳ ಭಕ್ತಾದಿಗಳು ಒಂದು ಕೇಳಿ ನೋಡಿ ಆನಂದಪಟ್ಟರು ಶ್ರೀಪರಶಿವನು ಸರ್ವರಿಗೂ ಸಕಲವಿಧವಾದ ಸೌಖ್ಯವನ್ನೀಯಲೆಂದೂ ಹಾರೈಸುವನು

ಪ್ರತ್ಯಕ್ಷದರ್ಶಿ

ಶಿವಸಂಕೀರ್ತನೆ ಸಮಾರಂಭ ಹಾರನಪಳ್ಳಿ

ಶಿವಮೊಗ್ಗಾ ತಿ॥ ತಾವರಹಳ್ಳಿಪೇಟೆ ಶ್ರೀ ಬಸವೇಶ್ವರ ದೇವಾಲಯದಲ್ಲಿ ಇವ ವೈಶಿನಾಮ ಸಂವತ್ಸರದ ಶ್ರಾವಣ ಶು॥ ಪ್ರತಿಪದೆಯಿಂದ ಆಮೌವಾಸ್ಯೆಯ ವರೆಗೂ ಶ್ರೀಮನ್ ವೀರಪಟ್ಟಾಧಿಕ್ರಿ ವೀರಭದ್ರಪ್ಪನವರ ನೇತೃತ್ವದಲ್ಲಿ ಶ್ರೀ ಜ॥ ರಂಭಾಪುರೀಸಂಸ್ಥಾನದ ಆಸ್ಥಾನವಿದ್ವಾನ್ ಕೀರ್ತಿಶೇಷರಿ ಕವರತ್ನ ವೇ॥ ಗುಬ್ಬಿ ಶಿವಕ್ಲಾಪಂಡಿತ ಶಿವರುದ್ರಶಾಸ್ತ್ರಿಗಳಿಂದ ಪ್ರತಿದಿನವೂ ಸಾಯಂಕಾಲ ೭ ಘಂಟೆಯಿಂದ ೯ ಘಂಟೆಯವರೆಗೂ ಧರ್ಮಭೋಧ ಪ್ರವಚನದ ಶಿವಸಂಕೀರ್ತನೆಗಳು ನಡೆಯಲ್ಪಟ್ಟವು ಸತ್ಯವಾಕ್ಪವಣಕ್ಕಾಗಿ ಸ್ವಕಲಪರಿತ್ಯಾಗಳಂದೆ ಸ್ವಮತ ಪರ ಮತೀಯ ಸ್ತ್ರೀಪುರುಷರು ವಿಶೇಷವಾಗಿ ಬಂದು ಸೇರಿ ಆನಂದಪರವಶರಾಗುತ್ತಿದ್ದರು ಕಾರ್ಯದರ್ಶಿಗಳಾದ ಶ್ರೀಮಾನ್ ಯಜಮಾನ್ ಜವೆ ಮುದ್ದೀಪ್ಪನವರು, ಗಾಜನೂರು ಗುರುಪಾದಪ್ಪನವರು ಜವೆ ಪರಮೇಶ್ವರಪ್ಪನವರು ಸಹ ಗ್ರಾಮದ ಮಹಾಜನರಿಂದ ಧನರೂಪವಾಗಿ ಸಹಾಯವನ್ನು ಪಡೆದು ಅದ್ಯಂತವವರೆಗೂ ದಕ್ಷತೆಯಿಂದ ಕಾರ್ಯ ವನ್ನೆಸಗಿದ್ದುದು ಶ್ಲಾಘನೀಯವಾಗಿದೆ ಇದೇ ಸ್ಥಾನ ವೇಶದಲ್ಲಿ ಪ್ರಾಪ್ತವಾದ ಶಿವೈಕ್ಯ ಜಗದ್ಗುರು ಶ್ರೀ ಶಿವಾನಂದಾಜೀಂದ್ರಶಿವಾಚಾರ್ಯಮಹಾಸ್ವಾಮಿಗಳವರ ಪುಣ್ಯತಿಥಿಯ ಸಮಾರಂಭವು ಅಲೆದ ಶ್ರಾವಣ ಶು॥ ೪ ಗುರುವಾರವಾದ್ದರಿಂದ ಶಾಸ್ತ್ರಿಗಳವರು ಆ ಗುರುಸಾರ್ವಭೌಮರ ಜೀವನಚರಿತ್ರೆಯನ್ನೇ ಕೀರ್ತನ ರೂಪವಾಗಿ ತಮ್ಮ ಅನುಭವಪೂರ್ಣವಾದ ವಿಷಯ ಗಳನ್ನೂ ಸೇರಿಸಿ ಸಮಸ್ತ ಜನರನ್ನೂ ಭಕ್ತಿ, ಶೋಕ ರಸಗಳಲ್ಲಿ ಮುಳುಗಿಸಿದರು ಆಂಠಿಯೇ ಸಂದರ್ಭಾನುಸಾರ ಧರ್ಮಾವತಾರಿಗಳಾದ ಶಿವೈಕ್ಯ ಪಂಡಿತತಿಲೋಮಣಿ, ಲೋಕಮಾನ್ಯ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಗುಣಕಥನವನ್ನು ಮಾಡಿ ಆ ಮಹಾನೀಯರು ದುಂಬಿದ ಮಹೋಪಕಾರ ವಿಚಾರಗಳನ್ನು ಸರ್ವರ ಸ್ಮರಣೆಗೂ ತಂದು ಅವರ ವಿಯೋಗದ ಅಪಾರ ದುಃಖವನ್ನು ವ್ಯಕ್ತಗೊಳಿಸಿದ್ದರು ಈ ಶಿವಕೀರ್ತನ ಸಮಾರಂಭದ ಸಮಾಪ್ತಿಯ ಮಂಗಳಾಚರಣೆಯು ತಾ ೧೯-೯೩೦ ನೇ ಸೋಮವಾರ ಮಹಾ ಗಣಾರಾಧಭವೂನ ಕ ಒಷ ವೈಭವದಿಂದ ನೆರವೇರಲ್ಪಟ್ಟಿತು. ಶ್ರೀಜಗದ್ಗುರು ಪಂಚಾಚಾರ್ಯರ ಕೃಪಾಶೀರ್ವಾದದ ಪ್ರಭಾವದಿಂದ ಕಾರ್ಯಕಲಾಪಗಳು ಒಂದು ತಿಂಗಳ ಪರಿಯಂತವೂ ಕ್ರಮವಾಗಿ ನಿರ್ವಿಘ್ನವಾಗಿ ನೆರವೇರಿ ಸಂತೋಷಸೂಚಕಾರ್ಥ ಪ್ರಭಾಪೋಷಣಕ್ಕಾಗಿ ಇಲ್ಲಿನ ವೀರಶೈವ ಮಂಡಲಿಯವರಿಂದ ೨ ರೂ ಗಳು ವೇ॥ ಶಾಸ್ತ್ರಿಗಳವರಿಗೆ ಸಮರ್ಪಿಸಲ್ಪಟ್ಟವು ಇಂತಹ ಪುಣ್ಯ ಕಾರ್ಯಕ್ಕೆ ಭಾಗಿಗಳಾದ ಸರ್ವರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಸಕಲ ಸೌಖ್ಯವನ್ನೀಯಲೆಂದು ಹಾರೈಸುವ,

ಓರ್ವ ಧರ್ಮಾಭಿಮಾನಿ

ಅಪೂರ್ವಲಪುರದ ಅಭೂತ ಮಹೋತ್ಸವ

ಗುಲ್ಬರ್ಗಾ ತಿ॥ ಅಫಝಲಪುರದ ಬೃಹನ್ಮಠಾಧೀಶರಾದ ಪೂಜ್ಯ ಶ್ರೀ॥ ಷ॥ ಬ್ರ॥ ಶಾಂತವೀರಮಲೇಂದ್ರ ಶಿವಾಚಾರ್ಯಸ್ವಾಮಿಗಳವರು ಳಳದ ಶ್ರಾವಣ ಶು॥ ೧೦ ದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಮಹಾಪುರಾಣ ನನ್ನು ತಮ್ಮ ಅಧ್ಯತವಾಣಿಯಿಂದ ಹೇಳುತ್ತ ದಿನಾಂಕ ೧೭-೯-೩೦ ಭಾದ್ರಪದ ಶು॥ ೬ ಸಾಯಂಕಾಲ ೬ ಗಂಟೆಗೆ ಸಮಾಪ್ತಿಗೊಳಿಸಿದರು ಈ ಮಹಾಕಾರ್ಯಕ್ಕಾಗಿ ಜೇವರ್ಗಿ ಬೃಹನ್ಮಠಾಧೀಶರಾದ ಶ್ರೀ॥ ಷ॥ ಬ್ರ॥ ಬಾಲತಪಸ್ವಿ ಗುರುಶಾಂತವೀರಾಚಾರ್ಯಸ್ವಾಮಿಗಳವರು ಹಾಗು ಸೈಂದರ್ಗಿ ಬೃಹನ್ಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ವೀರಸಂಗಶಿವಾಚಾರ್ಯಸ್ವಾಮಿಗಳವರು ಸೋಲಾಪುರದಿಂದ ನೆ॥ ಒಸಮ್ಮಾಬಾಯಿ ನಂದಿಮಠ ಹಾಗು ಪಿ ಈ ಪಟೇಲರು ಆಗಮಿಸಿದ್ದರು

ದಿನಾಂಕ ೧೭ ಕ್ಕೆ ಮುಂಜಾನೆ ಸರಿಯಾಗಿ ೯ ಗಂಟೆಗೆ ಜೇವರ್ಗಿ ಹಾಗು ಸೈಂದರ್ಗಿ ಶ್ರೀಗಳವರಿಗೆ ೧೦೮ ಎತ್ತುಗಳ ರಥೋತ್ಸವ ತೆಗೆಯಲಾಯ್ತು. ಈ ಉತ್ಸವದಲ್ಲಿ ಸಾಧಾರಣವಾಗಿ ಸಾವಿರಾರು ಜನರು ಕೂಡಿದ್ದರು ಈ ಜನಸಂದಣಿಯಿಂದ ತುಂಬಿದ ಅಫಝಲಪುರವು ಕುಲಕುಲು ನಗುವಂತೆ ಭಾಸವಾಗುತ್ತಿತ್ತಲ್ಲದೆ ಜಗದಾಚಾರ್ಯರ ಜಯಘೋಷವು ಗಗನಮಂಡಲದಲ್ಲಿ ಧುಮಧುಮಿಸುತ್ತಿತ್ತು

ಮರುದಿವಸ ಪೂಜ್ಯ ಸದರಿ ಬೃಹನ್ಮಠಾಧ್ಯಕ್ಷರ ಅಪ್ಪಣೆಯ ಮೇರವಣಿಗೆ ಹೊರಟಿತು ಈ ಮೆರವಣಿಗೆ

[೩ ನೆಯ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ

೧೯೫೦ನೆಯ ಅಕ್ಟೋಬರ್ ತಾ॥ ೨ನೆಯ ಸೋಮವಾರ

ಭಕ್ತಸ್ಥಲದಲ್ಲಿ ಹೇಳಲ್ಪಟ್ಟ ಅಂಗಸ್ಥಲಗಳ ವಿಚಾರ

೧ ಪಿಂಡಸ್ಥಲ

[ಕಳೆದ ಸಂಚಿಕೆಯಿಂದ ಮುಂದುವರೆದುದು]

ಬಹುಜನ್ಮಗಳಲ್ಲಿ ಮಾಡಿರಿ ಪುಣ್ಯಗಳಿಂದ ಪಾಶ ಸಮೂಹವು ನಷ್ಟವಾಗಲು, ಜೀವನು ಶುದ್ಧಾತ್ಮಕರಣ ಯುಕ್ತನಾಗಿ 'ಪಿಂಡ" ಎಂದು ಹೇಳಿಸಿಕೊಳ್ಳುವನು ಶಕ್ತಿ ವಿಶಿಷ್ಟಪರಶಿವನಿಂದ ಉತ್ಪನ್ನವಾದ" ಪ್ರಪಂಚದಲ್ಲಿ ಪುಣ್ಯಾಧಿಕ್ಯದಿಂದ ಪಾಶಸಮೂಹವನ್ನು ನಾಶಗೊಳಿಸಿ ಕೊಂಡು ಶುದ್ಧಾತ್ಮನಾದ ಪಿಂಡನಾಮಕಜೀವನು ಸರ್ವರಿಗಿಂತಲೂ ಶ್ರೇಷ್ಠನೆನಿಸಿಕೊಳ್ಳುವನು ಪರ ಶಿವನು ಚಿದಾನಂದಸ್ವರೂಪನೂ ಸರ್ವವ್ಯಾಪಕನೂ, ಭೇದರಹಿತನೂ, ನೀಲಪೀತಾದ್ಯಾಕಾರರಹಿತನೂ, ಮಾಯಿಕಸತ್ವರಜಸ್ತಮೋಗುಣಶೂನ್ಯನೂ, ಮಾಯಿಕ ಪ್ರಪಂಚದೂರನೂ, 'ಏಕ ಏವರುದ್ರೋ ನ ದ್ವಿತೀ ಯಾಯ ತಸ್ಥೇ" "ಏಕಮೇವಾದ್ವಿತೀಯಂ ಬ್ರಹ್ಮ" ಇತ್ಯಾದಿಶ್ರುತಿಪ್ರಮಾಣಾನುಸಾರವಾಗಿ ಒಬ್ಬನೇ ಒಬ್ಬನೂ ಆಗಿರುವನು ತನ್ನಲ್ಲಿ ನಿಶ್ಚಸಂಬಂಧದಿಂದಿರುವ ವಿಮರ್ಶ ಶಕ್ತಿಯಲ್ಲಿ ಅಡಕನಾಗಿರನ ಅನಾದಿಮಾಯೆಯ ಸಂಬಂಧದಿಂದ ಆ ಪರಶಿವನ ಅಂಶವು "ಜೀವ "ಎನಿಸಿಕೊಳ್ಳುವುದು. ಆ ಜೀವನು ದೇವ, ಮನುಷ್ಯ, ಪಶು, ಪಕ್ಷಿ, ಮೃಗ, ಜಲಚರ ಇತ್ಯಾದ್ಯನಂತಾನಂತಭೇದಗಳಿಂದ ಕೂಡಿದ ಪ್ರಾಣಿವರ್ಗದಲ್ಲಿ ವಾಸಿಸುವನು

ಶಿವಾಂಶೀಭೂತನಾದ ಜೀವನು ಕಿಂಚಿದ್ಜ್ಞನೂ, ಕಿಂಚಿತ್ಕರ್ತೃವೂ, ಕಿಂಚಿಚ್ಛಕ್ತಿಯುತನೂ, ಅವಿದ್ಯಾ ಮೋಹಿತನೂ, ಬ್ರಹ್ಮೈಕ್ಯಜ್ಞಾನವರ್ಜಿತನೂ, ಬದ್ಧನೂ ಆಗಿರುವನು ಪರಶಿವನು ಸಚ್ಚಿದಾನಂದಸ್ವರೂಪನೂ, ಸರ್ವಜ್ಞನೂ, ಸರ್ವಕರ್ತೃವೂ, ಸರ್ವಶಕ್ತಿ ಸಮಸ್ಪಿತನೂ ಉಪಪಾತೀತನೂ, ಜನನಮರಣರಹಿತನೂ, ಚಿರಾಚಿರ ಪ್ರಪಂಚವ್ಯಾಪಕನೂ, ಆಗಿರುವನು

ಅವಿದ್ಯೆಯಿಂದ ಮೋಹಿತರಾದ ಜೀವರು "ಅಹಂ ಬ್ರಹ್ಮಾಸ್ಮಿ" ಎಂಬ ತಾತ್ಪರ್ಯಜ್ಞಾನರಹಿತರಾಗಿರು ವರು ಜೀವರು ತಮ್ಮ ತಮ್ಮ ಕರ್ಮಾನುಸಾರವಾಗಿ ದೇವ, ಮನುಷ್ಯ, ಪಶು, ಪಕ್ಷಿ ಮೊದಲಾದ ಎಳ ಲಕ್ಷ ಜೀವರಾಶಿಯೋನಿಗಳಲ್ಲಿ ಜನಿಸಿ, ಚಕ್ರನೇಮಿಕ್ರಮದಿಂದ ಸಂಸಾರದಲ್ಲಿ ಯಾವಾಗಲೂ ಸುತ್ತುತ್ತಿರುವರು ಜಾತಿ ಆಯುಸ್ಸು-ಸುಖ-ದುಃಖ ಇತ್ಯಾದಿಗಳಿಗೆಲ್ಲಾ ಜೀವರ ಕರ್ಮವೇ ಮೂಲಕಾರಣವಾಗಿದೆ ಬ್ರಾಹ್ಮಣಾದ್ಯುತ್ತಮ ಜಾತಿಗಳಲ್ಲಿ ಜನಿಸುವುದಕ್ಕೂ, ಶೂದ್ರಾದಿಕನಿಷ್ಠ ಜಾತಿ ಗಳಲ್ಲಿ ಜನಿಸುವುದಕ್ಕೂ ಜೀವರ ಕರ್ಮವೇ ಮುಖ್ಯ ಕಾರಣವಾಗಿದ್ದು, ಬ್ರಾಹ್ಮಣಾದಿಜಾತಿಗಳು ಜನ್ಮಸಿದ್ಧ ವಾದವುಗಳೆನ್ನುವುದೇ ಭಗವತ್ಪಾದರ ಮುಖ್ಯಾಭಿ ಪ್ರಾಯವಾದರೆ ಇದೇ ಅಭಿಪ್ರಾಯವನ್ನು ಯೋಗ ಶಾಸ್ತ್ರಪ್ರಣೇತೃಗಳಾದ ಪತಂಜಲಿಮಹರ್ಷಿಗಳು—"ಸತಿ ಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾಃ" ಎಂಬ ಯೋಗಸೂತ್ರದಲ್ಲಿ ಪ್ರತಿಪಾದಿಸುತ್ತಿರುವರು ಕರ್ಮಯಂತ್ರಸಿಯಂತ್ರಿತವಾದ ಸಂಸಾರಚಕ್ರದಲ್ಲಿ ಯಾವಾಗಲೂ ಸುತ್ತುತ್ತಿರುವ ಜೀವರಿಗೆ ಪರಮೇಶ್ವರನು ಪ್ರೇರಕನೂ ಸಾಕ್ಷಿಭೂತನೂ ಆಗಿರುವನು. ಪ್ರೇರಕನಾದ ಪರಮೇಶ್ವರನು ಜೀವರಿಗೆ ಹಿತಕಾರಕಮಾರ್ಗವನ್ನು ಪ ದೇಶಿಸುವನೂ, ಪುನರಾವೃತ್ತಿರಹಿತವಾದ ಮೋಕ್ಷ ಮಾರ್ಗವನ್ನು ತೋರಿಸುವನೂ ಆಗಿರುವನು. ಜೀವನು ತನ್ನ ಕರ್ಮಪರಿಪಾಕದಿಂದ ಅನಾದಿಮಲವಾಸನೆಯನ್ನು ಳೆದುಕೊಂಡು, ಶಿವಪ್ರಸಾದದಿಂದ ಶುದ್ಧಾಂತಃಕರಣವುಳ್ಳವ ನಾಗಲು, ಶಿವಕಾರುಣ್ಯದಿಂದ ಶಿವಸಂಬಂಧವಾದ ಶುದ್ಧ ಭಕ್ತಿಯು ಉತ್ಪನ್ನವಾಗುವುದು. ಈ ಪ್ರಕಾರವಾದ ಶುದ್ಧಶಿವಭಕ್ತಿಯುಕ್ತನಾದ ಜೀವನು ಚರಮಶರೀರಿ ಯಾಗಿ "ಪಿಂಡ" ಶಬ್ದವಾಚ್ಯನಾಗುವನು.

(ಸಕಿಸ)

ಶ್ರೀ ಟಿ. ಯಾಲಕ್ಕಪ್ಪಾಚಾರ್ಯರವರ ನಿಧನ

ಮೈಸೂರಿನ ಗಣ್ಯವ್ಯಕ್ತಿಗಳಲ್ಲಿ ಒಬ್ಬರೂ ಆರಮನೆಯ ಪ್ರಸಿದ್ಧ ಕಂಟ್ರಾಕ್ಟರ್ರೂ, ಚಾಮುಂಡೇಶ್ವರೀ ಮತ್ತು ಗಣೇಶ ಟಾಕೀಸುಗಳ ಮಾಲೀಕರೂ ಆದ ಶ್ರೀ ಟಿ ಯಾಲಕ್ಕಪ್ಪಾಚಾರ್ಯರವರು ಕೆಲವು ದಿನಗಳಿಂದ ಕಾಯಿಲೆ ಯಿದ್ದು ಕಳೆದ ತಾ॥ ೨೮-೯-೫೦ನೆಯ ಗುರುವಾರ ದಿನ ತಮ್ಮ ೬೪ನೆಯ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ತುಂಬಾ ನಿಷಾದವ್ಯಸಿಸುತ್ತದೆ

ಇವರು ತಮ್ಮ ಜೀವನಾವಧಿಯಲ್ಲಿ ಕಂಟ್ರಾಕ್ಟರಾಗಿ ಮಾಡಿದ ಕೆಲಸಗಳನ್ನು ನೋಡಿದರೆ ಇವರ ಬುದ್ಧಿ ಕೌಶಲತೆಯನ್ನು ವ್ಯಕ್ತಗೊಳಿಸುತ್ತ ಕಾರ್ಯದಕ್ಷರೂ ಕಲಾಸಿಪುಣರೂ, ದೈವಭಕ್ತರೂ ಆದ ಇವರು ಅಲ್ಪಕಾಲ ದಲ್ಲಿಯೇ ಶ್ರೀಮಂತರಾಗಿದ್ದು ತಿನಸಂಕಲ್ಪ ಈಶ್ವರಪ್ರಸಾದ ಪ್ಪತರ ಅತ್ಯಕ್ಕೆ ಶಾಂತಿಯನ್ನೂ ಇವರ ಬಂಧುವರ್ಗ ಕ್ಕಾಂಟಾಗಿರುವ ದುಃಖಭವನವನ್ನೂ ಉಂಟುಮಾಡ ಲೆಂದು ಕಾರ್ಯಸಿತ್ರೇವೆ

ವರ್ತಮಾನ ಸಂಗ್ರಹ

ಪಂ॥ ನೆಹ್ರೂರವರಿಗೆ ಕೊಟ್ಟ ಜಪಾನ್ ' ಟಾಯ್ ಆರ್ಕಿಸ್ಟ್ರ

ಈ ಬಾರಿ ದಸರಾ ವಸ್ತು ಪ್ರದರ್ಶನದಲ್ಲಿ ಇಡಲಾಗುವುದು

ಜಪಾನಿಗೆ ಆನೆಯನ್ನು ಕಳುಹಿಸಿದ ಜ್ಞಾಪಕಾರ್ಥ ವಾಗಿ ಜಪಾನಿನಿಂದ ಪಂ॥ ನೆಹ್ರೂರವರಿಗೆ ಕಳುಹಿಸಿ ಕೊಟ್ಟಿರುವ 'ಟಾಯ್ ಒರ್ಕೆಸ್ಟ್ರ' (ಜೊಂಬೆ ವಾದ್ಯ ಗೋಷ್ಠಿ) ಯನ್ನು ಈ ಸಲದ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಇಡಲಾಗುವುದು

ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್ ಸಂಸ್ಥೆ

ಮೈಸೂರು ಸರ್ಕಾರದ ಆರ್ಥಿಕಾಭಿವೃದ್ಧಿ ಕಮಿಷನರಾದ ಶ್ರೀ ಜೆ ಬಿ ಮೆಲ್ಲಾರಾಧ್ಯರನ್ನೂ, ಮೈಸೂರು ಮಹಾರಾಜಾ ಕಾಲೇಜಿನ ಇತಿಹಾಸದ ಅಸಿಸ್ಟೆಂಟ್ ಪ್ರೊಫೆಸರಾದ ಶ್ರೀ ರಾಳೆಗೇದ್ರರಾಯರನ್ನೂ ಭಾರತದ ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್ನಿನ ಸದಸ್ಯರನ್ನಾಗಿ ಇಂಡಿಯಾ ಸರ್ಕಾರದವರು ನೇಮಕಮಾಡಿದ್ದಾರೆ

ಹೈ ಕೋರ್ಟಿಗೆ ಕಾಸಿಂ ರಜ್ವಿ ಅಪೀಲು

ಸೋಬುಲ್ಲಾ ಕೊಲೆ ಮೊಕದ್ದಮೆ ಮತ್ತು ಬಿಬಿನಗರ ಡಕಾಯಿತಿ ಮೊಕದ್ದಮೆಗಳಲ್ಲಿ ಹೈದರಾಬಾದ್ ವಿಶೇಷ ನ್ಯಾಯಾಸ್ಥಾನದಲ್ಲಿ ಶಿಕ್ಷೆಗೆ ಒಳಪಟ್ಟಿರುವ ಮಾಜಿ ರಜಾಕಾರ್ ನಾಯಕ ಕಾಸಿಂ ರಜ್ವಿಯು ಹೈದರಾಬಾದ್ ಹೈಕೋರ್ಟಿಗೆ ಅಪೀಲು ಮಾಡಿಕೊಂಡಿದ್ದನು. ಅದನ್ನು ಹೈಕೋರ್ಟು ತಿರಸ್ಕರಿಸಿದೆ

ವಿಷ ಹಾಕಿ ರಾಜಕುಮಾರಿಯಿಂದ ಪತಿಯ ಕೊಲೆ

ಭರಾಲಿ ಸಂಸ್ಥಾನದ ರಾಜರ ಸೊಸೆ ಫಲವೇಂದ್ರ ಕೌರ್ ಎಂಬುವಳು ತನ್ನ ಪತಿಗೆ ವಿಷವಿಟ್ಟು ಕೊಂದು ಅವಕ ಶವವನ್ನು ಒಂದು ವಾರದವರೆಗೆ ಪೆಟ್ಟಿಗೆಯಲ್ಲಿ ಬಚ್ಚಿಟ್ಟಿದ್ದು ನಂತರ ಪಾಳು ಭಾವಿಯೊಂದರಲ್ಲಿ ಹಾಕಿದ ಕೆಂಬ ಆಪಾದನೆ ಮೇಲೆ ಅಲ್ಲಿನ ಮ್ಯಾಜಿಸ್ಟ್ರೇಟರು ಆಕೆಯನ್ನು ಸೆಷನ್ಸ್ಸು ವಿಚಾರಣೆಗೆ ಗುರಿಪಡಿಸಿದ್ದಾರೆ. ಈ ಕೃತ್ಯದಲ್ಲಿ ತಾಯಿಯು ಭಾಗವಹಿಸಿದ್ದನೆಂದೂ ಈಗ ಅವಳು ಪರಾರಿಯಾಗಿರುವನೆಂದೂ ತಿಳಿಸಲಾಗಿದೆ.

ಬ್ರಹ್ಮಪುತ್ರನದಿಯಲ್ಲಿ ಭಾರಿ ಪ್ರವಾಹ

ಬ್ರಹ್ಮಪುತ್ರ ನದಿಯಲ್ಲಿ ಸೆಪ್ಟಂಬರ್ ೩೬ನೇ ತಾರೀಕು ಇದ್ದಕ್ಕಿದ್ದಂತೆ ಪ್ರವಾಹ ಉಲ್ಬಣಗೊಂಡುದರಿಂದ ದೆಸಿ ಯಿಂದ ದಿಬ್ರುಳಿಗರ್ಗೆ ನೀರು ಬಹುರಭಸದಿಂದ ಹೊಗ್ಗಿದೆ ದಿಬ್ರುಳಿಗರ್ ನಲ್ಲಿನ ಎರಡು ಭಾರಿ ಕೊರ್ಟ್ ಕಟ್ಟಡಗಳು, ಅನೇಕ ಮನೆಗಳೂ ಅಂಗಡಿಗಳೂ ಪ್ರವಾಹದಲ್ಲಿ ಸಿಕ್ಕಿ ಕುಸಿದು ಬಿದ್ದಿವೆ

ಕಾಶ್ಮೀರ ಸಮಸ್ಯಾ ಪರಿಹಾರ

ಭಾರತ-ಪಾಕೀಸ್ತಾನಗಳು ತಮ್ಮೊಳಗೆ ಪರಸ್ಪರ ಒಪ್ಪಂದದಿಂದ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಿ ಕೊಳ್ಳಲು ಸಾಧ್ಯವಿಲ್ಲ ಭದ್ರತಾಸಮಿತಿ ಈ ವಿಷಯದಲ್ಲಿ ಯೋಗ್ಯಪರಿಹಾರ ಕಂಡುಹಿಡಿಯಬೇಕಾದ್ದು ಅಗತ್ಯ ಎಂದು ಪಾಕೀಸ್ತಾನದ ಪ್ರಧಾನಕಾರದ ಮಿ॥ ಲಿಯಾಕತ್ ಅಲಿಯವರು ಸರ್ ಡಿಕ್ಸನ್ನರ ವರದಿಯ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಹೇಳಿದರು.

ಭಾರತಕ್ಕೆ ಬ್ರಿಟಿಷ್ ನಾಟಕ ಸಂಘದ ಆಗಮನ

ಪ್ರಸಿದ್ಧ ನಿರ್ಮಾಪಕನಾದ ಮಿ॥ ಹಾರ್ಮನ್ ಮಾರ್ಷಲ್‌ರವರ ಮುಖಂಡತ್ವದಲ್ಲಿ ಭಾರತಕ್ಕೆ ಬರುವ ಬ್ರಿಟಿಷ್ ಥಿಯೇಟ್ರಿಕಲ್ ಗ್ರೂಪಿನವರು ಭಾರತದಲ್ಲಿ ಷೇಕ್ಸ್‌ಪಿಯರ್ ನಾಟಕಗಳನ್ನು ಪ್ರದರ್ಶಿಸುವರು. ಈ ನಾಟಕ ಸಂಘದವರು ಡಿಸಂಬರ್ ಮಾಸದಲ್ಲಿ ಭಾರತಕ್ಕೆ ಬರುವರು

ದಕ್ಷಿಣ ಕೊರಿಯದ ಅರ್ಧಭಾಗ ವಿಶ್ವಸಂಸ್ಥೆ ಪಡೆಗಳ ವಶ

ದಕ್ಷಿಣ ಕೊರಿಯಾದಲ್ಲಿ ಅರ್ಧ ಭಾಗದಷ್ಟು ಪ್ರದೇಶ ಈಗ ವಿಶ್ವಸಂಸ್ಥೆ ಪಡೆಗಳ ವಶದಲ್ಲಿದೆ

ಸಿಯೋಲ್‌ನಲ್ಲಿ ಉತ್ತರ ಕೊರಿಯನ್ನರ ಕಾರ್ಯಾ ಚರಣೆ ಮುಗಿದುಹೋಗಿದೆ.

ಅಮೆರಿಕಾ ಪಡೆಗಳು ಒಲನೆಯ ರೇಖೆಯ ದಕ್ಷಿಣ ದಲ್ಲಿ ೧೩॥ ಮೈಲಿ ದೂರದಲ್ಲಿರುವ ಯಾಂಗ್‌ಜಾಂಗ್ ಎಂಬ ಪಟ್ಟಣವನ್ನು ತಲುಪಿವೆಯೆಂದು ತಿಳಿದುಬಂದಿದೆ

ಟೋಜೋಜ್ ನಗರದಲ್ಲಿ ಕಮ್ಯೂನಿಸ್ಟರ ಹೋರಾಟ ಕುಗ್ಗಿಹೋಗುತ್ತಿದೆ. ಅಮೆರಿಕಾ ವಿಮಾನಗಳು ಉತ್ತರ ಕೊರಿಯಾ ಸೇನೆಯ ಮೇಲೆ ಬಾಂಬುಗಳನ್ನು ಸುರಿ ತ್ತಿವೆ ಟೇಜೋನಿನಿಂದ ಉತ್ತರ ದಿಕ್ಕಿಗೆ ಕಮ್ಯೂನಿಸ್ಟರು ಓಡಿಹೋಗುತ್ತಿದ್ದಾರೆ

೭೨,೦೦೦ ಅಮೆರಿಕೆನ್ನರ ಸಂಹಾರ?

ಈ ಮಾಹಿ ೧೪ರಿಂದ ೩೭ರವರೆಗೆ ಉತ್ತರ ಕೊರಿ ಯನ್ನರು ೭೨,೦೦೦ ಅಮೆರಿಕಾ ಯೋಧರನ್ನು ಸಾವಿ ನೋವುಗಳಿಗೆ ಗುರಿಮಾಡಿರುವರೆಂದು ಪೋಂಗ್ಯಾಂಗ್ ರೇಡಿಯೋ ಪ್ರಸಾರ ಮಾಡಿದೆ

ಉತ್ತರ ಕೊರಿಯದ ಸೈನ್ಯಾಧಿಪತಿಗಳಾದ ಡಾ॥ ಕ್ರೆಂ ಇಲ್ ಸುಂಗ್‌ರವರು ಒಲನೆಯ ರೇಖೆಯವರೆಗೆ ಹಿಂತೆರಗುದೇಕೆಂಬುದಾಗಿ ತಮ್ಮ ಸೈನ್ಯಪಡೆಗಳಿಗೆ ಆಜ್ಞೆ ಮಾಡಿರುವರೆಂದು ಅಧಿಕೃತವಾಗಿ ತಿಳಿದುಬಂದಿದೆ.

ಅವರು ಈ ಬಗ್ಗೆ ರಹಸ್ಯವಾದ ಆಜ್ಞಾಪತ್ರವೊಂದನ್ನು ರಣರಂಗದಲ್ಲಿರುವ ದಂಡನಾಯಕರಿಗೆ ಕಳಿಸಿದ್ದಾರೆಂದೂ ಇದನ್ನು ಅಮೆರಿಕದ ರಹಸ್ಯ ಕೋಧಕ ದಳದವರು ಪತ್ತೆ ಹಚ್ಚಿದ್ದಾರೆಂದೂ ತಿಳಿದುಬಂದಿದೆ. ಕೊರಿಯದ ಯುದ್ಧ ರಂಗದಲ್ಲಿ ನಡೆಯುತ್ತಿರುವ ಇತ್ತೀಚಿನ ಘಟನೆಗಳು ನಿರ್ದಶನವಾಗಿವೆ. ಕಳೆದವಾರದಲ್ಲಿ ಸಿಯೋಲ್ ಬಟ್ಟಿಗೆ ಬೇರೆಲ್ಲೂ ಕಮ್ಯೂನಿಸ್ಟರ ತೀವ್ರ ಹೋರಾಟ ಕಂಡು ಬಂದಿಲ್ಲ. ಸಾಧ್ಯವಾದಷ್ಟು ಸಾಧನ ಸಾಮಗ್ರಿಯೊಂದಿಗೆ ಉತ್ತರ ಕೊರಿಯಾಕ್ಕೆ ಹಿಂತಿರುಗುವುದಾಗಿ ಉತ್ತರ ಕೊರಿಯನ್ನರಿಗೆ ಆಜ್ಞೆಯಾಗಿದೆ ಎಂದು ತಿಳಿದುಬಂದಿದೆ.

ಕೇವಲ ೧೦ ದಿನಗಳ ಹಿಂದೆ ಉತ್ತರ ಕೊರಿಯನ್ನರೇ ದೇವ ಮೇಲ್ಚೈ ಅಗಿತ್ತು. ಈಗ ಎಲ್ಲೆಲ್ಲೂ ಅವರ ಪರಾಜಯ ಹೊಂದಿದ್ದಾರೆ. ಇದು ಬಹುಮಂದಿ ಆಶ್ಚರ್ಯವನ್ನು ಉಂಟುಮಾಡಿದೆ.

ದಕ್ಷಿಣ ಕೊರಿಯದಲ್ಲಿ ವಿಜಯೋತ್ಸವ

ಏಶ್ಯ ಸಂಸ್ಥೆಯ ಸೈನ್ಯಗಳು ಈಗಿದ ಶುಕ್ರವಾರ ದಕ್ಷಿಣಕೊರಿಯದ ರಾಜಧಾನಿ ಸಿಯೋಲನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡು ಅದನ್ನು ಅಲ್ಲಿನ ಮಾಜಿ ರಿಪಬ್ಲಿಕ್ ಸರ್ಕಾರದ ಅಧ್ಯಕ್ಷ ಸಿಂಗ್‌ಮನ್ ರೀಯವರಿಗೆ ಒಪ್ಪಿಸಿದುತು. ಅಲ್ಲಿ ಈಗಿದ ಶುಕ್ರವಾರ ವೈಭವಯುತವಾದ ವಿಜಯೋತ್ಸವವು ನಡೆಯಿತು. ದಕ್ಷಿಣ ಕೊರಿಯದ ಹಂಗಾಮಿ ರಾಜಧಾನಿಯಾಗಿದ್ದ ಟೇಗುವಿನಿಂದ ಸರ್ಕಾರವನ್ನು ಸಿಯೋಲಿಗೆ ವರ್ಗಾಯಿಸಲಾಗಿದೆ. ಮಿತ್ರ ಸೈನ್ಯಗಳು ೩೮ ನೇ ಸಮಾನಾಂತರ ರೇಖೆಯವರೆಗೂ ಹೋಗಿವೆ ಯಾವ ಭಾಗದಲ್ಲೂ ಕಮ್ಯೂನಿಸ್ಟರ ಪ್ರತಿಭಟನೆ ಇರುವುದಿಲ್ಲ.

ರಿಪಬ್ಲಿಕ್ ಇಂಡೋನೇಷ್ಯಕ್ಕೆ ವಿಶ್ವ ಸಂಸ್ಥೆಯಲ್ಲಿ ಸದಸ್ಯತ್ವ
ಜನರಲ್ ಅಸೆಂಬ್ಲಿಯ ಅಂಗೀಕಾರ

ಇಂಡೋನೇಷ್ಯಕ್ಕೆ ವಿಶ್ವಸಂಸ್ಥೆಯಲ್ಲಿ ಸದಸ್ಯತ್ವ ಕೊಡಲು ವಿಶ್ವಸಂಸ್ಥೆ ಅಧಿನೇತರದಲ್ಲಿ ಸರ್ವಾನುಮತದಿಂದ ನಿರ್ಧರಿಸಲಾಯಿತು. ಈ ಬಗ್ಗೆ ಭಾರತ ಮತ್ತು ಅಸ್ಟ್ರೇಲಿಯಾ ಪ್ರತಿನಿಧಿಗಳು ಮಂಡಿಸಿದ ಸಂಯುಕ್ತ ನಿರ್ಣಯ ಓಟ್ಟಲ್ಲಿದೆಯೇ ಅಂಗೀಕೃತವಾಯಿತು ಇಂಡೋನೇಷ್ಯಾ ವಿಶ್ವಸಂಸ್ಥೆಯ ೬೦ನೆಯ ರಾಷ್ಟ್ರವಾಯಿತು

ಭಾರತಕ್ಕೆ ಇಂಡೋನೇಷ್ಯದವರ ಕೃತಜ್ಞತೆ

ಇಂಡೋನೇಷ್ಯಕ್ಕೆ ಈ ಸೌಲಭ್ಯವನ್ನು ಕಲ್ಪಿಸಿ ಕೊಡಲು ಭಾರತ ಆಸ್ಟ್ರೇಲಿಯಗಳು ವಿಶ್ವಸಂಸ್ಥೆಯಲ್ಲಿ ಸಟ್ಟು ಸರ್ವಪ್ರಯತ್ನಕ್ಕಾಗಿ ಡಾ॥ ಪಾಲಾರ್ಮರವರು ತಮ್ಮ ಕೃತಜ್ಞತೆಗಳನ್ನರ್ಪಿಸಿದರು ೧೯೪೪ ರಿಂದ ಭಾರತವು ಪಟ್ಟು ಶ್ರಮವು ಇಂದು ಸಾರ್ಥಕವಾಯಿತೆಂದು ಅವರು ತಿಳಿಸಿದರು. ಈ ಬಗ್ಗೆ ಸಭಾಪತಿ ನೀಡಿದ ಎಲ್ಲ ರಾಷ್ಟ್ರಗಳಿಗೂ ಇಂಡೋನೇಷ್ಯದವರ ವಂದನೆಗಳನ್ನು ಅರ್ಪಿಸಿದರು.

ನೇಪಾಳದ ಮಹಾರಾಜರ ಕೊಲೆಗಾಗಿ ಪಿತೂರಿ

ನೇಪಾಳದ ಮಹಾರಾಜರು ಹಾಗೂ ಅವರ ಮಂತ್ರಿ, ಪ್ರಧಾನ ಸೇನಾಪತಿ ಮತ್ತು ಇತರ ಪ್ರಮುಖ ಅಧಿಕಾರಿಗಳನ್ನು ಕೊಲೆ ಮಾಡಲು ಪಿತೂರಿ ನಡೆದಿರುವ ಅಂಶವು ತಿಳಿಬಂದಿದೆ. ಅಲ್ಲಿನ ಕಾಂಗ್ರೆಸ್ ಮುಖಂಡರುಗಳ ವಸ್ತಗಿರಿಯಿಂದ ಈ ವಿಷಯವು ಪತ್ತೆಯಾಗಿರುತ್ತದೆ ಈ ಕೃತ್ಯಗಳಲ್ಲಿ ತೊಡಗಿದ್ದವರೆಲ್ಲರೂ ದಸ್ತಗಿರಿಯಾಗಿದ್ದಾರೆ ಕೆಲವೆಯ ಜೊತೆಗೆ ಮದ್ದು ಗುಂಡುಗಳ ಕಾರ್ಖಾನೆ ಮತ್ತು ಆಯಕಟ್ಟಿನ ಪ್ರದೇಶಗಳನ್ನು ಆಸ್ಟ್ರೀಯರ ಗಳ ಸಹಾಯದಿಂದ ಸಿಡಿಸಲೂ ಸಹ ವಿಸಾರಾಡಿದ್ದಿತು ನೇಪಾಳದ ಮಾಜಿ ಸೇನಾನಿಯೊಬ್ಬರ ಅಳಿಯಂದಿರ ಮನೆಯಲ್ಲಿ ಶಸ್ತ್ರಾಸ್ತ್ರಗಳ ಕೋಧನೆಯಾಗಿದೆ

ಲೈಸನ್ಸ್ ಇಲ್ಲದ ಶಸ್ತ್ರಾಸ್ತ್ರಗಳ ಪತ್ತೆ

ಪಂಜಾಬ್ ಸರ್ಕಾರದವರು ಈ ವರ್ಷದಲ್ಲಿ ಲೈಸೆನ್ಸ್ ಹೊಂದಿಲ್ಲದ ೧೯೭೫ ಶಸ್ತ್ರಾಸ್ತ್ರಗಳನ್ನು ಪತ್ತೆ ಹಚ್ಚಿ ವಶಪಡಿಸಿಕೊಂಡಿದ್ದಾರೆಂದು ಸರ್ಕಾರಿ ಪ್ರಕಟಣೆ ತಿಳಿಸಿದೆ.

ಈ ವರ್ಷ ದಸರಾ ಮೆರವಣಿಗೆ ನಡೆಯುವುದಿಲ್ಲ

ಈ ಸಲ ರಾಜಧಾನಿಯಲ್ಲಿ ದಸರಾ ಮೆರವಣಿಗೆಯು ನಡೆಯುವದಿಲ್ಲ. ಅರಮನೆಯಲ್ಲಿ ದರ್ಬಾರಿನ ಸಂಪ್ರದಾಯವಾದ ಹಾಸ್ಯೋತ್ಸ ಕೆಲಸಗೆಲು ಮಾತ್ರ ನಡೆಯುವವು ವಸ್ತುಪ್ರದರ್ಶನವೇನೋ ನಡೆಯುವದು. ಆದೂ ಒಂದು ಮಾಮೂಲಿನ ವೈಖರಿಯಂದಲ್ಲ ಶೈವ್ಯಶೇಷವೈಭವಿಯಿಂದ ನಡೆಯಿಸಲಾಗುವದೆಂದು ತಿಳಿದುಬಂದಿದೆ.

[೧ ನೆಯ ಪುಟದಿಂದ ಮುಂದುವರಿದುದು]

ಸುಕ್ಷಮುಖ್ತಿಲಿನ ಎಲ್ಲಾ ಊರುಗಳಿಂದ ಭಜನಾಮಂಡಳಿ ಬಂದಿದ್ದಲ್ಲದೆ ಸಾವಿರಾರು ಜನರು ಉತ್ಸವದಲ್ಲಿ ಭಾಗವಹಿಸಿದ್ದರು. ಪೂಜ್ಯ ಶ್ರೀಗಳವರು ಸದಾಜ ಪ್ರೇಮಿಗಳೆದ್ದು ಇವರು ಹಾಗು ಜೀವ್ಗಿರ್ ಮತ್ತು ವೈಂದರ್ಗಿ ಶ್ರೀಗಳು ಕೂಡಿ ಕಲ್ಬುರ್ಗಿಯ ಶರಣನಗರದಲ್ಲಿ ಶ್ರೀಮನ್ ದ್ವೀರಶೈವ ಬೋಡಿಂಗನ್ನು ಸ್ಥಾಪಿಸಿದ್ದು ಸದ್ಯ ಅಲ್ಲಿ ೫೦ ಜನ ವಿದ್ಯಾರ್ಥಿಗಳ ಊಟದ ವ್ಯವಸ್ಥೆಯಿದೆ ಇಂತಹ ಸಮಾಜ ಪ್ರೇಮಿಗಳು ಇಂದಿನ ಕಾಲದಲ್ಲಿ ದೊರೆಯುವುದು ವಿರಳ

ಅದೇ ದಿನದ ಸಾಯಂಕಾಲ ೯ ಗಂಟೆಗೆ ಸಭೆ ಸೇರಿತು. ಸಭೆಗೆ ಬರೀಡ ಜನಸಮುದಾಯ ಕೂಡಿತಿಲ್ಲದೆ, ಪಿ ಈ. ಪಟೇಲ್, ಬಸಲಿಂಗಯ್ಯನವರು ಕಲ್ಬುರ್ಗಿ, ಸೌ॥ ಬಸಮ್ಮಾಬಾಯಿ ನಂದೀಮಠರವರು ಶ್ರೀ ಶಿಕ್ಷಣದ ಅವಶ್ಯಕತೆ ಎಂಬ ಬಗ್ಗೆ ಸರವಾಗಿ ಭಾಷಣಮಾಡಿದರು ಪಿ ಈ. ಪಟೇಲ್ ಹಾಗು ವೈಂದರ್ಗಿ ಶ್ರೀಗಳೂ ಕೂಡ ಭಾಷಣ ಮಾಡಿದರು ಇವರ ಪರಿಣಾಮವಾಗಿ "ಮಾತಾ ನುಲ್ಲಮ್ಮನ ಬಳಗ" ಎಂಬ ಸಂಸ್ಥೆಯು ಸ್ಥಾಪಿಸಲಾಯಿತು ಈ ಸಂಸ್ಥೆಗೆ ಜೀವ್ಗಿರ ಬೃಹನ್ಮಠಾಧೀಶರಾದ ಪೂಜ್ಯ ಬಾಲಶಸ್ಯೀ ಶ್ರೀ॥ ಪೆ॥ ಬ್ರ॥ ಗುರುಶಾಂತ ಶಿವಾಚಾರ್ಯಸ್ವಾಮಿಗಳವರು ೫ ರೂ. ಅಕ್ಷಿವಾದ ವೆನ್ನು ಮಾಡಿದರು. ಇವರ ಆಶೀರ್ವಾದಬಲದಿಂದ ಸಂಘವು ದಿನೇ ದಿನೇ ಊರ್ಜಿತಾವಸ್ಥೆ ಹೊಂದಲಿ.

ಅಫಜಲಪುರ ಮಲಕ್ಕೆ ೭.೭.೯೯ ತಿಳ್ಳರ ಮನೆಗಳೆವೆ ಯಲ್ಲದೆ ಈ ಮೆರದ ಮೂಲಪುರುವಂದ ಮಳೇಂದ್ರ ಶಿವಾಚಾರ್ಯಸ್ವಾಮಿಗಳಗೆ ಬಜಾಪುರದ ಅರಸನಾದ ಅದಿಲಶಹನು ಬಂಧಿಸಿ ಮಳೆಯನ್ನು ಕೇಳಿದಾಗ ಪೂಜ್ಯ ಶ್ರೀಗಳವರು ತಮ್ಮ ತಪೋಬಲದಿಂದ ಮಳೆಗರೆಯಿಸಿ ಬಜಾಪುರ ಹಾಗು ಇನ್ನಿತರ ದೇಶದ ದುರ್ಭಿಕ್ಷವನ್ನು ಹೋಗಲಾಡಿಸಿದರು ಇವರ ತಪೋಬಲವನ್ನು ಕಂಡು ಅದಿಲಶಹನು ಇವರನ್ನು ಬಂಧಮುಕ್ತರನ್ನಾಗಿ ಮಾಡಿದನೆಂದು ತಿಳಿದುಬರುತ್ತದೆ

ಸದ್ಯದ ಶ್ರೀಗಳಾದ ಶ್ರೀ॥ ಪೆ॥ ಬ್ರ॥ ಶಾಂತವೀರ ಶಿವಾಚಾರ್ಯಸ್ವಾಮಿಗಳವರು ಜೆಸರಿಗೆ ತಕ್ಕಂತೆ ಶಾಂತ ಮೂರ್ತಿಗಳೆದ್ದು ಸಮಾಜದ ಬಗ್ಗೆ ಅವರು ಸದಾಕಾಲ ದಲ್ಲಿಯೂ ತಕ್ಕಮಳಿಸುತ್ತಾರೆ ಇಂತಹ ಸಮಾಜ ಪ್ರೇಮಿಗಳನ್ನು ದೊರಕಿಸಿಕೊಂಡ ಅಫಜಲ್ಪುರವರ ನಿವಾಸಿಗಳೇ ಧನ್ಯರು !

ಅಫಜಲ್ಪುರದ ಜನರು ಭಕ್ತಿನಂತರವ್ಹಾದೆ. ಅಲ್ಲದೆ ಯಾವಾಗಲು ಮೂಢಭಾವನೆಳ್ಳವರಾಗಿ ಸ್ವಾಮಿಗಳ ಸೇವೆಯನ್ನು ಮಾಡುವ ಸತ್ಕರ್ತರಾಗಿದ್ದಾರೆ ಇಂತಹ ಮುಗ್ಧ ಭಕ್ತರಿಗೂ ಹಾಗು ಇವರನ್ನು ಸುಧಾರಿಸಲು ಪ್ರಯತ್ನಿಸುತ್ತಿರುವ ಅಫಜಲ್ಪುರವರ ಶ್ರೀಗಳವರಿಗೂ ಆ ಜಗದ್ಗಾಚಾರ್ಯರು ಆಯುರಾರೋಗ್ಯವನ್ನು ದಯ್ಪು ಪಾಲಿಸಿ ಕಾಪಾಡಲೆಂದು ಪ್ರಾರ್ಥಿಸುವ,

ಪಿ ಈ. ಪಟೇಲ, ಸೋಲಾಪುರ.

ಮರಣವಾರ್ತೆ

ಡಾವಣಗೆರೆ ಸಿಟಿ ಪ್ರಿನ್ಸ್ ಎಜ್ಯುಕೇಷನ್ ಡಾಕ್ಟರ್ ಶಿವಯ್ಯಸ್ವಾಮಿ ಇವರ ಪತ್ನಿ ಸೌ॥ ಜಸ್ಸ ವೀರಮ್ಮ ಈ ದಂಪತಿಗಳಿಗೆ ೩೩ ವರ್ಷದ ಬಾಲಕ ವಿಶ್ವನಾಥಯ್ಯ ನೆಂಬ ಒಬ್ಬನೇ ಸುಕುಮಾರ. ಈತನು ಕಳ್ಳಕ್ಕ ಇಂಗ್ಲೀಷು ಇಂಟರ್‌ಮೀಡಿಯೇಟ್ ಆಗಿ ಬೆಂಗಳೂರಿಲ್ಲಿ ಎಲ್ ಎಂ.ಪಿ ಮೆಡಿಕಲ್ ಕಾಲೇಜಿನಲ್ಲಿ ೨ ವರ್ಷದಿಂದ ಅಭ್ಯಾಸಮಾಡುತ್ತ ಇದ್ದು ವಿಕಾಲಕ್ಕೆ ವಿಷಮಜ್ವರ ದಿಂದ ತಾ॥ ೨-೭-೫೦ ಶನಿವಾರ ತಿಮಧೀನನಾದನು. ಈ ಸ್ಮಸಾನೇಶದಲ್ಲಿ ತಂದೆತಾಯಿಗಳಿಗಾದ ದುಃಖವು ಮೇರೆದಪ್ಪಿದೆ. ತೀಳಿ ಪಿದ್ದಿಯೇ ವಿವೈಕ್ಯ ವಿಶ್ವನಾಥನ ಅತ್ಯಕ್ಕ ಶಾಂತಿಯನ್ನೊ, ವಿವಯ್ಯಸ್ವಾಮಿ ದಂಪತಿಗಳ ದುಃಖವಿಮೋಚನೆಯನ್ನಷ್ಟು ಉಂಟುಮಾಡಲೆಂದು ಜಗನ್ನಿಯಾಮಕನಾದ ಪರಮಾತ್ಮನನ್ನು ಭಜಿಸುತ್ತೇನೆ.

ಓರ್ವ ದುಃಖಿಗಾ.

ಅನುಷ್ಠಾನಸಮಾರಂಭ ಸಂಪೂರ್ಣ

ಗುಲ್ಬರ್ಗಾ ಜಿಲ್ಲಾ ಹಂಗರ ಗ್ರಾಮದ ತೋಸಳಕ್ಕೆ ಹಿರೇಮಠದ ಜರಿಷ್ಠರ ಪಟ್ಟಾಧ್ಯಕ್ಷರೂ ಶ್ರೀ॥ ಪೆ॥ ಬ್ರ॥ ಸದಾಶಿವಶಾಸ್ತ್ರಿಗಳವರು ಶ್ರಾವಣ ಮಾಸ ಅರಂಭವಾಗಿ ಮಠದ ಮೂಲಪುರುಷ ಮಹಿಮಾಶಾಲಿಗಳಾದ ಶ್ರೀ ಮಲಯಾಂತೇಶ್ವರದೇವಾಲಯದಲ್ಲಿ ಅನುಷ್ಠಾನವೆ ನ್ನಾಚರಿಸಿ ಭಾದ್ರಪದ ಶು॥ ೭ ಸೋಮವಾರ ದಿವಸ ಸಮಾಪ್ತಿಮಾಡಲ್ಪಟ್ಟಿತು. ಈ ಮಹೋತ್ಸವಕ್ಕೆ ಅನೇಕ ಜನರು ಆಗಮಿಸಿದ್ದರು. ಮಂಜಾನೆ ಗುರುಗಳ ಗದ್ದಿಗೆಗೆ ರುದ್ರಾಭಿಷೇಕವಾಗಿ ಮಹಾ ಗಣಾರಾಧನೆಯಾಯಿತು. ೪ ಘಂಟೆಗೆ ಸದರಿ ಶ್ರೀಗಳ ಅಧ್ಯಕ್ಷತೆಯಲ್ಲಿ ಅನೇಕ ಜನರ ಧಾರ್ಮಿಕ ಭಾಷಣಗಳಾದವು ಸರದಾರ ಶರಣ ಗೌಡ್ರು ಇನಾಮುದಾರ ಇವರು ವಕ್ಕಲತನ ಹಾಗು ಮನುಷ್ಯನ ಜೀವನದ ಪರಿಸ್ಥಿತಿ ಹಾಗು ಅದರ ಗುರಿ ಈ ವಿಷಯದ ಮೇಲೆ ಮನೋಹರವಾಗಿ ಭಾಷಣ ಮಾಡಿದರು ಗುಲ್ಬರ್ಗಾ ಆಜುಬಾಜು ಗ್ರಾಮದ ಜನರು ನೆರೆದಿದ್ದರು ಮಠದ ಶ್ರೀಗಳು ಅನುಷ್ಠಾನದ ಬಗ್ಗೆ ಮಾತಾಡಿದರು ಜಯಜಯಕಾರಧೊಡನೆ ಸಭೆ ಮುಕ್ತಾಯವಾಯಿತು.

ಓರ್ವ ಗುರುಭಕ್ತ

ಸ್ವೀಕಾರ

ದಾವಣಗೆರೆ ಸಿಟಿ ಡಾಕ್ಟರ್ ಶಿವಯ್ಯಸ್ವಾಮಿ ಇವರ ಚಿ॥ ವಿಶ್ವನಾಥಯ್ಯನು ತೀರಿಹೋದ ಸಮಯದಲ್ಲಿ ಅತಿವ ಸೋದರಮಾವನಂದಿರಾದ ಹೊಸಪೇಟೆ ಕನಕೇರಿಮಠದ ಶ್ರೀಮಂತ ಹೊಡ್ಡಕೊಟ್ರಯ್ಯನವರು ಪ್ರಥಾಪೋಷಣಕ್ಕಾಗಿ ಆರ್ಪಿಸಿದ 5 ರೂ. ಗಳು ವೈ. ಪಂ॥ ಸೈಸೂರ ಸಿದ್ದಯ್ಯನವರು ಹೊಸಪೇಟೆ ಇವರ ದ್ವಾರಾ ತಲ್ಪಿರು ತ್ತವೆ.

ರಾಯಚೂರು ಡಿ॥ ಗಂಗಾವತಿಯಲ್ಲಿ ಬೂದಗುಂಪಿ ನಾಲ್ಕು ರಾಣ ಮರದ ಶ್ರೀ॥ ಪೆ॥ ಬ್ರ॥ ಚರಬಸ್ಯಾಧ್ಯಕ್ಷ ಶ್ರೀ ರುದ್ರಮುನಿಶಿವಾಚಾರ್ಯಸ್ವಾಮಿಗಳವರ ಶ್ರಾವಣ ಮಾಸದ ಪೂಜಾಪಮಾರಂಭವೆಯು, ಶ್ರೀ ಕೊಟ್ಟೂರು ಬಸವೇಶ್ವರ ಪುರಾಣವು ಒಳ್ಳೇ ಹೃದಯಂಗಮವಾಗಿ ನಡೆಯಿಸಲ್ಪಟ್ಟು ಪೂರ್ತಿಯಾದ ಸಮಯದಲ್ಲಿ ಶ್ರೀಗಳ ವರು ಪ್ರಥಾಪೋಷಣಕ್ಕಾಗಿ ಸಮರ್ಪಿಸಿ ಕಳುಹಿಸಿದ 2 ರೂ ಗಳನ್ನು ಆತ್ಯಾನಂದದಿಂದ ಸ್ವೀಕರಿಸಿದ್ದೇನೆ.

ಶಿವಮೊಗ್ಗಾ ಡಿ॥ ಹಾರನಹಳ್ಳಿ ಪೇಟೆ ಶ್ರೀ ಬಸವೇ ಶ್ವರದೇವಸ್ಥಾನದಲ್ಲಿ ನಡೆದ ಶ್ರಾವಣಮಾಸದ ಶಿವ ಸಂತೇರ್ತನ ಸಮಾರಂಭದ ಸಂತೋಷಸೂಚಕವಾಗಿ ಅಲ್ಲಿಯ ವೀರಶೈವಮಹಿಳೆಯರು ಪ್ರಥಾಪೋಷಣ ಕ್ಕಾಗಿ ಸಮರ್ಪಿಸಿದ 2 ರೂ. ಗಳು ಗುಬ್ಬಿ ಶಿವಕಥಾ ಪಂಡಿತ ಶ್ರೀ ಶಿವರುದ್ರಶಾಸ್ತ್ರಿಗಳವರಿಂದ ತಲ್ಪಿರುತ್ತವೆ.

ಬೆಳಗಾಂವ (ಶಿದಪುರ) ವಾಸಿಗಳಾದ ಮಃ॥ ಚನ್ನ ಬಸಪ್ಪ, ಅಣ್ಣಾಳುರುಪೆಟ್ಟಿ ಸಜ್ಜನ ಇವರ ಚಿ॥ ನಾಡ ಸಂಗಪ್ಪ ಎಂಬವನು ತಾ॥ ೧೫-೯-೫೦ ನೇ ಮಂಗಳ ವಾರ ರಾತ್ರಿ ೮ ಘಂಟೆಗೆ ಹೃದಯವಿಕಾರದಿಂದ ವಿವೈಕ್ಯ ನಾದ ಸಮಯದಲ್ಲಿ ಪ್ರಥಾಪೋಷಣಕ್ಕಾಗಿ ಸಮರ್ಪಿಸಿದ 1-4-0 ರೂ ಗಳು ಶ್ರೀ ಆರ್. ಬಿ. ಗಡ್ಡದ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ॥ ಹಿರೇಕೆರೂರ ತಾಲ್ಲೂಕ ಎಂಗೋಡ ಸ್ಟಾಟಿನಲ್ಲಿ ಗ್ರಹಣಾರ್ಥವಾಗಿ ಜ್ಯೋತಿಷ್ಯ ವೈದಿಕಾಚಾರ ಶಾಲೆಯು ಸ್ಥಾಪಿಸಿದ ಸಮಯದಲ್ಲಿ ಪ್ರಥಾಪೋಷಣ ಕ್ಕಾಗಿ ಸಮರ್ಪಿಸಿದ 1 ರೂ. ಯು ವೇ॥ ರುದ್ರಪ್ಪಯ್ಯ ಗವರು ಭೈರಪಹಾಡಿಮಠ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲ ಶ್ರೀಜಗದ್ಗುರು ಸಂಬಾಚಾರ್ಯರು ನಿಶ್ಕಮಂಗಲವನ್ನೀಯಲೆಂದು ಹಾರ್ಸಿಸುತ್ತೇನೆ.

ಶ್ರೀ ಗುರುಸಿದ್ಧನಂಜೇಶ್ವರಭವಿಷ್ಯವಾಣಿ

(ಅಪ್ರಕಟಿತಕಾಲಜ್ಞಾನ)

ಲೇಖಕ—ವೇ॥ ಪಂ॥ ಸಿ ಶಿವಶಂಕರಶರ್ಮ ಬೃಹನ್ಮಠ ಹೂಲಿ ಪಾರಕಾಲಾ

ಶ್ರೀಕಾಲಜ್ಞಾನಿಗಳಾದ ಪ್ರಾಚೀನಮಹರ್ಷಿಗಳು, ಧರ್ಮಗುರುಗಳು ಶಿವಯೋಗಿಗಳು ಮುಂದಿನ ಆಗುಹೋಗುಗಳನ್ನು ತಮ್ಮ ಸನ್ ಜ್ಞಾನದೃಷ್ಟಿಯಿಂದ ತಿಳಿದುಕೊಂಡು ಮಾನವ ಜನಾಂಗಕ್ಕೆ ಎಚ್ಚರಿಕೆಯನ್ನು ಒಂಟುಮಾಡಿ, ಅವರನ್ನು ಸನ್ಮಾರ್ಗಕ್ಕೆ ಹಚ್ಚುವ ವಾಣಿಗೆ ಭವಿಷ್ಯವಾಣಿ ಎಂದು ಹೇಳುವರು

ಆಷ್ಟಾದಶಪುರಾಣಕರ್ತರಾದ ವೇದವ್ಯಾಸಮಹರ್ಷಿಗಳು ಮೇಲೆ ವಿವರಿಸಿದ ಮಾನವಹಿತದೃಷ್ಟಿಯಿಂದ ಬರೆದ ಭವಿಷ್ಯವಾಣಿಗೆ ನೇದವ್ಯಾಸರ ಭವಿಷ್ಯತ್ಪುರಾಣ ವೆಂದು ಕರೆಯುವರು ಆ ಪುರಾಣದಲ್ಲಿ ವ್ಯಾಸಮಹರ್ಷಿಗಳು ತಮ್ಮ ಕಾಲದಿಂದ ಮುಂದೆ ಒದಗುವ ಅರ್ಧಾತ್ ಭವಿಷ್ಯತ್ಕಾಲದ ಸ್ಥಿತಿಗತಿಗಳ ವಿನೇಚನೆಮಾಡಿ, ಆಯಾಕಾಲದ ರಾಜ್ಯಪುರುಷರ, ಧರ್ಮಗುರುಗಳ ಮತ್ತು ಮಾನವಜನಾಂಗದ ವಿಷಯವನ್ನು ವಿಸ್ತಾರವಾಗಿ ನಿರೂಪಿಸುವರೆಂಬ ವಿಷಯವು ಆ ಭವಿಷ್ಯತ್ಪುರಾಣವನ್ನು ಓದಿದರೆ ಸ್ಪಷ್ಟವಾಗುವುದು ಆ ವಿಷಯವನ್ನು ಎಷ್ಟೋ ವಿಚಾರಜ್ಞರು ತಮ್ಮ ಅನುಭವಕ್ಕೆ ತಂದುಕೊಂಡಿದ್ದಾರೆ ಇದರಂತೆ ಗೌತಮ, ಭೃಗು, ಸಾನಂದ ಮೊದಲಾದ ಮಹರ್ಷಿಗಳು ತಮ್ಮ ಭವಿಷ್ಯವಾಣಿಯಲ್ಲಿ ಕೆಲಕೆಲವು ವಿಷಯಗಳನ್ನು ಉಪದೇಶಮಾಡಿದ್ದಾರೆ

ಶ್ರೀ ಜ॥ ಗು॥ ರೇಣುಕಾದಿ ಪಂಚಾಚಾರ್ಯರು ಹಾಗೂ ಶ್ರೀ ಶಂಕರಾಚಾರ್ಯರು ಇವರೇ ಮೊದಲಾದ ಧರ್ಮಗುರುಗಳು ತಮ್ಮ ಕಾಲದಿಂದ ಮುಂದೊದಗುವ ಮಾನವಜನಾಂಗದ ಸ್ಥಿತಿಗತಿಗಳನ್ನು ಉಪದೇಶಮಾಡಿದ್ದಾರೆ ಅಲ್ಲದೆ ರುದ್ರಮುನಿ, ಬಸವಣ್ಣ, ಮಹಮ್ಮದ ಪೈಗಂಬರರೇ ಮೊದಲಾದವರು ಸಹ ನುಂಡೊದಗುವ ಅನಯಗಳನ್ನು ತಮ್ಮ ಸರ್ವಜ್ಞ ಚಿತ್ಪಕ್ಕೆ ವೇದ್ಯವಾಗುವಂತೆ ಉಪದೇಶಮಾಡಿದ್ದಾರೆ ಅವರೀ ಭವಿಷ್ಯವಾಣಿ ರೂಢಿಯಲ್ಲಿ ಕಾಲಜ್ಞಾನವೆಂದು ಕರೆಯುವರು ಅವರ ಬೋಧದಲ್ಲಿ ಮಾನವಜನಾಂಗದ ಭವಿಷ್ಯತ್ಕಾಲದ ಜ್ಞಾನವನ್ನು ಒಟುಮಾಡುವುದರಿಂದ ಅದಕ್ಕೆ ಕಾಲಜ್ಞಾನವೆಂಬ ಹೆಸರು ಸಮಂಜಸವಾಗಿ ತೋರುತ್ತದೆ

ಇವೆಲ್ಲ ಕಾಲಜ್ಞಾನಗಳಲ್ಲಿ ಭವಿಷ್ಯತ್ಕಾಲದ ವಸ್ತುಸ್ಥಿತಿಯನ್ನು ಇನ್ನಷ್ಟೇದ್ದಂತೆ ವರ್ಣನೆಮಾಡುವ ಜ್ಞಾನಬೋಧವು ತುಳುಕುತ್ತಿದೆ ಈ ವಿಷಯವು ಶ್ರೀ ಪೂರ್ವಲ್ಲಿ ಪಂಚವರ್ಣಲ್ಲಿ ಸಿದ್ಧನಂಜೇಶಶಿವಯೋಗಿಗಳ ಭವಿಷ್ಯವಾಣಿಯಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿದ್ದು ಈ ಕಾಲಜ್ಞಾನದಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿದ

ಇಂಗ್ಲೀಷ್ ರಾಜ್ಯವನ್ನು ದೂರಮಾಡಿ ಪ್ರಜಾರಾಜ್ಯವನ್ನು ಸ್ಥಾಪನೆಮಾಡಿದ ವಿಷಯವು—

ಬಡಗಣದಿ ನಾಲ್ಕೇಳು। ಪಡವಣದಿ ಮೂರೇಳು।
ಪಡಿದು ತೆಂಕಣದಿ ಹತ್ತೇಳು। ಜನಗೂಡಿ।
ಪಡೆಯುತ್ತರು ರಾಜ್ಯ ನಂಜೇಶ ॥

ವೆಂಬ ಪದ್ಯವನ್ನು ವಿಚಾರಮಾಡಿ ನೋಡಿದರೆ ಕಾಂಗ್ರೇಸದ ಮುತ್ಸದ್ದಿಗಳಿಂದ ಸ್ವರಾಜ್ಯಸ್ಥಾಪನೆಯ ವಿಷಯವು ಸೂರ್ಯಸ್ಪಷ್ಟವಾದಷ್ಟು ವಡೆದು ಕಾಣುವದು ಇದರ ಮುಂದೆ—

ತತ್ಕ್ಷೇತ್ರೇಷು ಸರ್ವತ್ರ। ಸರ್ವಧಾಸಾಧಿವಯಾನಿಂ।
ತತ್ತದ್ಯಾಸಾಧಿಧಾನೇನ। ರಾಜ್ಯಧಾಗೂಭವಿಷ್ಯತಿ ॥

ಅಂದರೆ ಈ ಪ್ರಜಾರಾಜ್ಯದಲ್ಲಿ ಹಿಂದುಸ್ಥಾನವು ಆಯಾ ಭಾಷೆಗಳ ಭೇದಧಿಂದ ಬೇರೆ ಬೇರೆ ರಾಜ್ಯಖಂಡಗಳುಂಟಾಗುವದೆಂದು ಭಾಷಾವಿಭಾಗದಿಂದ ರಾಜ್ಯಕಾಸನ ಭೇಧವು ಉಲ್ಲೇಖವಾಗಿದೆ

ಇದರಂತೆ ಶ್ರಮೇಣ ಸರ್ವಜನಾಂಗದಲ್ಲಿ ಜಾತಿಭೇದವು ಅಡಗಿ ಶಾಖಾಹಾರಿಗಳು ಮಾಂಸಾಹಾರಿಗಳು ಎಂಬ ವರ್ಗಗಳು ಉಂಟಾಗುವದೆಂದು—

ತತಃ ಸರ್ವೇಷು ದೇಶೇಷು ಆಹಾರಪರಿಭೇದತಃ।
ಶಾಕಾಹಪಹಾರಿಣಃ ಕೇಚಿನ್ಮಾಂಸಾಪಹಾರಿಣಃ।
ದ್ವಿಧಾ ವಿಧಾಯದೇಶೇಷು। ಕರಿಷ್ಯಂತಿ ಸ್ವಶಾಸನಂ ॥

ಎಂದು ಉಲ್ಲೇಖ ಮಾಡಿದ್ದಾರೆ ಇದರಂತೆ ಇನ್ನೂ ಅನೇಕ ವಿಷಯಗಳು ಕಾಲ ಕ್ರಮದಿಂದ ಪರಿವರ್ತನ ಹೊಂದಿದ ವಿವರವನ್ನು ಅದ್ಭುತ ಕಾಲಜ್ಞಾನದಲ್ಲಿ ನೋಡಿ ಕೊಳ್ಳಬಹುದು

ಈ ಕಾಲಜ್ಞಾನದಲ್ಲಿ ಸಂಸ್ಕೃತ ಪದ್ಯಗಳಿಂದಲೂ ಕನ್ನಡ ಪದ್ಯಗಳಿಂದಲೂ "ಶ್ರೀ ಸಿದ್ಧನಂಜೇಶ ಭವಿಷ್ಯವಾಣಿ" ಅತ್ಯಂತ ಸಮಂಜಸವಾಗಿ ಉಲ್ಲೆಪಿಸಲ್ಪಟ್ಟಿದೆ ಇದರ ಬೆಲೆ ೪ ಆಣೆ ಬೇಕಾದವರು ವೇ॥ ಸಿದ್ಧಾಂತಿಗಳು, ಸೂವಲ್ಲಿ (ಹೂಲಿ) ಬೃಹನ್ಮಠ ಪಂಚಾಂಗಕರ್ತರು, ಮು॥ ಪೋ॥ ಹೂಲಿ, ಜಿ॥ ರೆಚಗಾಂವ ಇವರಿಗೆ ಬರೆದು ತರಿಸಿಕೊಳ್ಳಬಹುದು.

ಈ ಭವಿಷ್ಯವಾಣಿಯಂತೆ ಎನ್ನೆಗಳ ಕಾಲದಲ್ಲಿ ಧರ್ಮಾತ್ಮರೆಂದು ಪ್ರಸಿದ್ಧಿಹೊಂದಿದ ಇಂದೂರ ಮಹಾರಾಜಿಯಾದ ಅಹಲ್ಯಾಬಾಯಿ ಮತ್ತಾಮಾತೆಯ ಉಲ್ಲೇಖವು ಸ್ಪಷ್ಟವಾಗಿ ಓದಿದು ಕಾಣುವುದು

ತತಸ್ತಾಮ್ರಮುಖೀರಾಜ್ಯಂ ಸರ್ವರಾಜ್ಯೇಷ್ವಸುತ್ತಮಂ।
ಸರ್ವಶಕ್ತಿಸಮೋಪೇತಂ ಸರ್ವಮಾನ್ಯಂ ಭವಿಷ್ಯತಿ ॥

ಅಂದರೆ ಪೇಶ್ವೆಗಳ ಕಾಲದ ನಂತರ ತಾಮ್ರಮುಖಿರಾಜ್ಯವು, ಅರ್ಧಾತ್ ಇಂಗ್ಲೀಷ್ ಸಾರ್ವಭೌಮಾಧಿಕಾರವು ಸರ್ವರಾಜ್ಯಗಳಲ್ಲಿ ಪ್ರಸಿದ್ಧಹೊಂದುವದೆಂದು ಸ್ಪಷ್ಟವಾಗುವುದು

ಇಂಗ್ಲೀಷರ ರಾಜ್ಯಶಾಸನದ ಸುಧಾರಣೆಯನ್ನು ಅತ್ಯಂತ ಸಮಂಜಸವಾಗಿ ಈ ಕಾಲಜ್ಞಾನದಲ್ಲಿ ಉಲ್ಲೇಖವಾಗಿರುವದನ್ನು ಪ್ರತಿಯೊಬ್ಬರೂ ಓದಿ ತಿಳಿದುಕೊಳ್ಳತಕ್ಕದ್ದು ಮತ್ತು ಇವರ ರಾಜ್ಯದಲ್ಲಿ ವೈದಿಕಧರ್ಮದ ಹ್ರಾಸವು, ಆಯಾ ಜಾತಿಗಳ ಸಾಂಕರ್ಯವು ಉತ್ಪನ್ನವಾಗುವ ವಿಷಯಗಳನ್ನು ಕಂಡುಕೊಳ್ಳುವುದಾಗಿದೆ ಈ ವಿಷಯವನ್ನು

ತತಃ ಪಂಚಸಹಸ್ರಾಂತೇ ಜಾಯತೇ ಜಾತಿಸಂಕರಃ।
ಸರ್ವಜಾತಿಷು ಸರ್ವತ್ರ ಜಾತಿಭೇದೋ ವಿನಶ್ಯತಿ ॥

ಎಂದ ಈಗಿನ ವರ್ತಮಾನಸಮಯದಲ್ಲಿ, ಅಂದರೆ ಕಲಿಯುಗದ ೫೦೦೦ ವರ್ಷಗಳ ಅಂತ್ಯದಲ್ಲಿ ಸಂಭವಿಸಿದ ಧರ್ಮಸಂಕರ, ಜಾತಿಸಂಕರದ ವಿಷಯವು ಯಥಾಸ್ಥಿತವಾಗಿ ತಿಳಿದುಕೊಳ್ಳಲು ಸಾಧ್ಯವಿದೆ

ಕಲಿಯುಗದ ೫೦೦೦ ವರ್ಷಗಳ ಸಮಯದಲ್ಲಿ ಪ್ರಾಪ್ತವಾದ ಜಾತಿಸಂಕರ, ವರ್ಣಸಂಕರವರ್ಣನೆಯನ್ನು ಶ್ರೀ ಸಿದ್ಧನಂಜೇಶಶಿವಯೋಗಿಗಳು ಹಿಂದೂಧರ್ಮ ಶಾಸ್ತ್ರದೃಷ್ಟಿಯಿಂದ ಚತುರ್ವರ್ಣಗಳಲ್ಲಿ ಒದಗಿದ ವಿಷಯಗಳನ್ನು ಸರಸವಾಗಿ ಸಂಸ್ಕೃತಪದ್ಯಗಳಿಂದ ಉಲ್ಲೇಖಿಸಿದ್ದಾರೆ ಅದೇ ವಿಷಯವನ್ನು ನುತ್ತು ಈಗಿನ ನವನುಡಾರದನೆಯನ್ನು ಕನ್ನಡ ಪದ್ಯಗಳಿಂದ ಒಳ್ಳೇ ಮನೋಹರವಾಗಿ ಬೋಧಿಸಿದ್ದಾರೆ

ಏನಂ ಕೃಮಾಗತಃ ಕಶ್ಚಿತ್ । ಅಂತ್ಯಜೋಲೋಕಸಮ್ಮತಃ ॥
ಗುರುರ್ಭೂತ್ವಾ ಸ್ವಧರ್ಮಸ್ಯ । ಧರ್ಮಧಾರಂ ಕರಿಷ್ಯತಿ ।
ಸ್ವಯಂ ರಾಜಾ ಸ್ವಯಂ ಮಂತ್ರಿ । ಸ್ವಯಂ ಧರ್ಮ ಗುರುಃ ಸ್ವಯಂ।
ಪ್ರಜಾಸತ್ತಾತ್ಮಕಂ ರಾಜ್ಯಂ । ತದಾನೀಂ ಸ್ಥಾ ಪ್ಯತೆಶ್ಚಿರ್ಭವಂ ।
ಪ್ರಜಾರಾಜಾ ಪ್ರಜಾಮಂತ್ರೀ । ಪ್ರಜಾಸರ್ವ ಗುರುಃಸ್ವಯಂ ।
ಪ್ರಜಾಸರ್ವೇಷು ಧರ್ಮೇಷು । ಧರ್ಮಭಾರಂ ಕರಿಷ್ಯತಿ ।
ಸರ್ವೇಸ್ವತಂತ್ರ ಧರ್ಮೇಧ್ಯಃ । ಚರಿಷ್ಯಂತಿ ವಿಶೇಷತಃ ॥

ಅಂದರೆ ಒಬ್ಬಾನೊಬ್ಬ ಪ್ರಮುಖನಾದ ಅಂತ್ಯಜನು ಪ್ರಜಾಸತ್ತಾತ್ಮಕರಾಜ್ಯದಲ್ಲಿ ಧರ್ಮಶಾಸ್ತ್ರಾಧಿಕಾರವನ್ನು ವಹಿಸಿಕೊಳ್ಳುವನೆಂದು ಉಲ್ಲೇಖಮಾಡಿದ್ದಲ್ಲದೆ ಪ್ರಜಾಸತ್ತಾತ್ಮಕ ರಾಜ್ಯದ ಪದ್ಧತಿಯಿಂ,ಸರ್ವರಲ್ಲಿ ಧರ್ಮಸ್ವಾತಂತ್ರ್ಯವೂ ಉಂಟಾದದ್ದು ಈ ಕಾಲಜ್ಞಾನದಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿದ

ಇಂಗ್ಲೀಷ್ ರಾಜ್ಯವನ್ನು ದೂರಮಾಡಿ ಪ್ರಜಾರಾಜ್ಯವನ್ನು ಸ್ಥಾಪನೆಮಾಡಿದ ವಿಷಯವು—

ಬಡಗಣದಿ ನಾಲ್ಕೇಳು। ಪಡವಣದಿ ಮೂರೇಳು।
ಪಡಿದು ತೆಂಕಣದಿ ಹತ್ತೇಳು। ಜನಗೂಡಿ।
ಪಡೆಯುತ್ತರು ರಾಜ್ಯ ನಂಜೇಶ ॥

ವೆಂಬ ಪದ್ಯವನ್ನು ವಿಚಾರಮಾಡಿ ನೋಡಿದರೆ ಕಾಂಗ್ರೇಸದ ಮುತ್ಸದ್ದಿಗಳಿಂದ ಸ್ವರಾಜ್ಯಸ್ಥಾಪನೆಯ ವಿಷಯವು ಸೂರ್ಯಸ್ಪಷ್ಟವಾದಷ್ಟು ವಡೆದು ಕಾಣುವದು ಇದರ ಮುಂದೆ—

ತತ್ಕ್ಷೇತ್ರೇಷು ಸರ್ವತ್ರ। ಸರ್ವಧಾಸಾಧಿವಯಾನಿಂ।
ತತ್ತದ್ಯಾಸಾಧಿಧಾನೇನ। ರಾಜ್ಯಧಾಗೂಭವಿಷ್ಯತಿ ॥

ಅಂದರೆ ಈ ಪ್ರಜಾರಾಜ್ಯದಲ್ಲಿ ಹಿಂದುಸ್ಥಾನವು ಆಯಾ ಭಾಷೆಗಳ ಭೇದಧಿಂದ ಬೇರೆ ಬೇರೆ ರಾಜ್ಯಖಂಡಗಳುಂಟಾಗುವದೆಂದು ಭಾಷಾವಿಭಾಗದಿಂದ ರಾಜ್ಯಕಾಸನ ಭೇಧವು ಉಲ್ಲೇಖವಾಗಿದೆ

ಇದರಂತೆ ಶ್ರಮೇಣ ಸರ್ವಜನಾಂಗದಲ್ಲಿ ಜಾತಿಭೇದವು ಅಡಗಿ ಶಾಖಾಹಾರಿಗಳು ಮಾಂಸಾಹಾರಿಗಳು ಎಂಬ ವರ್ಗಗಳು ಉಂಟಾಗುವದೆಂದು—

ತತಃ ಸರ್ವೇಷು ದೇಶೇಷು ಆಹಾರಪರಿಭೇದತಃ।
ಶಾಕಾಹಪಹಾರಿಣಃ ಕೇಚಿನ್ಮಾಂಸಾಪಹಾರಿಣಃ।
ದ್ವಿಧಾ ವಿಧಾಯದೇಶೇಷು। ಕರಿಷ್ಯಂತಿ ಸ್ವಶಾಸನಂ ॥

ಎಂದು ಉಲ್ಲೇಖ ಮಾಡಿದ್ದಾರೆ ಇದರಂತೆ ಇನ್ನೂ ಅನೇಕ ವಿಷಯಗಳು ಕಾಲ ಕ್ರಮದಿಂದ ಪರಿವರ್ತನ ಹೊಂದಿದ ವಿವರವನ್ನು ಅದ್ಭುತ ಕಾಲಜ್ಞಾನದಲ್ಲಿ ನೋಡಿ ಕೊಳ್ಳಬಹುದು

ಈ ಕಾಲಜ್ಞಾನದಲ್ಲಿ ಸಂಸ್ಕೃತ ಪದ್ಯಗಳಿಂದಲೂ ಕನ್ನಡ ಪದ್ಯಗಳಿಂದಲೂ "ಶ್ರೀ ಸಿದ್ಧನಂಜೇಶ ಭವಿಷ್ಯವಾಣಿ" ಅತ್ಯಂತ ಸಮಂಜಸವಾಗಿ ಉಲ್ಲೆಪಿಸಲ್ಪಟ್ಟಿದೆ ಇದರ ಬೆಲೆ ೪ ಆಣೆ ಬೇಕಾದವರು ವೇ॥ ಸಿದ್ಧಾಂತಿಗಳು, ಸೂವಲ್ಲಿ (ಹೂಲಿ) ಬೃಹನ್ಮಠ ಪಂಚಾಂಗಕರ್ತರು, ಮು॥ ಪೋ॥ ಹೂಲಿ, ಜಿ॥ ರೆಚಗಾಂವ ಇವರಿಗೆ ಬರೆದು ತರಿಸಿಕೊಳ್ಳಬಹುದು.

Edited, Printed and Published by Brahanmath Mahadevaiah at Shri Panchacharya Electric Press, Sayaji Rao Road, Mysore.

REGISTERED No. M. 2266 ॥ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಪಪಪಂಕಜಾತಜನಿತರ ಪಂಚಾಸ್ಯಪೀಠಾಧಿಪರ । ಪಂಚಕ್ಲೇಶವಿನಾಶಕರ ಪರಪರಶ್ರೀಪಂಚಲಿಂಗೋಪಾಸ್ಯರ ॥
ಪಂಚಾಚಾರವಿಧಾಯಮಕರ ಪರಲಸತ್ಪಂಚಾಕ್ಷರೀಮೋದಕರ । ಪಂಚಾಚಾರ್ಯಜಗದ್ಗುರೂತ್ತಮರವರ್ತಾಲಿಪ್ತು ದೀರೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ನೆಲಿ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬ್ಯಾ॥ ಮಹಾದೇವಯ್ಯನವರು ೨ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಅಕ್ಟೋಬರ್ ೧೯೫೦ [ಸಂಚಿಕೆ ೨೫

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ರಂಭಾಪುರೀವೀರಸಿಂಹ । ಸಿರನಾಪೋ ಜಗದ್ಗುರು । ಪ್ರಸನ್ನ ರೇಣುಕೋಜೇಯಾ ದ್ವೀರಗಂಗಾಧರಃ ಸ್ಮದಾ ॥

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನರೇಣುಕ ವೀರಗಂಗಾಧರರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರ

ಸುವರ್ಣರಜತತಿರ್ಯಗಾಂದೋಲಿಕಾ (ಅಡ್ಡಪಲ್ಲಕ್ಕಿ) ಮಹೋತ್ಸವ ಹಾಗೂ

ದಸರಾ ಮಹೋತ್ಸವಾಹ್ವಾನಪತ್ರಿಕಾ

ಅಸ್ಮಿಕಮಹಾಜನಗಳಲ್ಲಿ ವಿಜ್ಞಾಪನೆಗಳು—

ಇದೇ ವಿಕೃತಿನಾಮ ಸಂವತ್ಸರದ ದಸರಾಮಹೋತ್ಸವವು ನಮ್ಮಿ ನವಣೂರ ನಗರದಲ್ಲಿ ನೆರವೇರಬೇಕೆಂದು ನಾವುಗಳು ಪ್ರಾರ್ಥಿಸಿಕೊಂಡಿನೇರೆಗೆ ಶಿವ್ಯವಾತ್ಸಲ್ಯಪೂರಿತ ಹೃದಯರಾದ ಶ್ರೀಜಗದ್ಗುರುಗಳವರು ನಮ್ಮಗಳ ಪ್ರಾರ್ಥನೆಯನ್ನಂಗೀಕರಿಸಿ ಕೃಪೆಮಾಡಿ ಅಪ್ಪಣೆಯನ್ನು ದಯಪಾಲಿಸಿದ್ದರಿಂದ ಇದೇ ಧಾದ್ರಪದ ಬ॥ ೧೩ ಸೋಮವಾರ (ತಾ॥ ೯-೧೦-೧೯೫೦) ನೇ ದಿವಸ ಚತುರಂಗಬಲಸಮೇತ ಸಕಲ ಬಿರುದಾವಳಿಗಳೊಡನೆ ಅಡ್ಡಪಲ್ಲಕ್ಕಿಮಹೋತ್ಸವವೂ ಹಾಗೂ ಮಹಾಸಂಸ್ಥಾನದ ವಾರ್ಷಿಕವದ್ಯತಿಯಂತೆ ಇದೇ ಅಶ್ವಿಜ ಶು॥ ೧ (ತಾ॥ ೧೨-೧೦-೧೯೫೦)ನೇ ಗುರುವಾರ ಮೊದಲುಗೊಂಡು ವಿಕಾದಶೀ (ತಾ॥ ೨೧-೧೦-೧೯೫೦) ನೇ ಶನಿವಾರ ಪರ್ಯಂತ ಈ ಕೆಳಗೆ ಕಾಣಿಸಿದ ಕಾರ್ಯಕ್ರಮಗಳ ಪ್ರಕಾರ ಕಾರ್ಯಗಳು ನೆರವೇರುವವು.

ನವರಾತ್ರಿ ಕಾರ್ಯಕ್ರಮ

ವಿಕೃತಿನಾಮಸಂವತ್ಸರ ಆಶ್ವಿಜ ಶುದ್ಧ ೧ (ತಾ॥ ೧೨-೧೦-೫೦)ನೇ ಗುರುವಾರ ಮೊದಲುಗೊಂಡು ನವಮಿ (ತಾ॥ ೧೯-೧೦ ೫೦)ನೇ ಗುರುವಾರದ ವರೆಗೆ ಪ್ರತಿದಿನ ಪ್ರಾತಃಕಾಲ ೬ ಘಂಟೆಯಿಂದ ೮ ಘಂಟೆಯವರೆಗೆ ವೇದ, ಆಗಮ, ಉಪನಿಷತ್, ಸಿದ್ಧಾಂತತಿಪಾಮೆ.ನಿಗಳ ಪಾರಾಯಣ, ೯ ಘಂಟೆಯಿಂದ ಗಜಾಶ್ವಾದಿಗಳ ಪೂಜಾಲಂಕಾರಗಳೂ, ಆಗ್ರೋದಕಾನಯನವೂ (ಗಂಗೆ ತರುವದು) ಸಾಯಂಕಾಲ ೬ ಘಂಟೆಗೆ ದಸರಾ ದರ್ಬಾರ ಪೆಂಡಾಲಿನಲ್ಲಿ ಶ್ರೀಜಗದ್ಗುರುಗಳವರ ಸಿಂಹಾಸನಾರೋಹಣ, ಭಾಷಣ ಕೀರ್ತನ ಮುಂತಾದ ಕಲಾಪ್ರದರ್ಶನ, ಸಮಯಾನುಸಾರ ಶ್ರೀ॥ ॥ ಗಳವರ ಸಮುಪದೇಶವೂ, (ತಾ॥ ೧೯-೧೦-೧೯೫೦) ನೇ ಗುರುವಾರ ಆಯುಧಪೂಜೆಯೂ ವ ಶ್ರೀ ಸರಸ್ವತಿಪೂಜೆಯೂ ನಡೆಯುವವು

ವಿಜಯದಶಮಿ ಕಾರ್ಯಕ್ರಮ

ತಾ॥ ೨೦-೧೦-೧೯೫೦ ನೇ ಶುಕ್ರವಾರ ಮಧ್ಯಾಹ್ನ ೨ ಘಂಟೆಗೆ ಶ್ರೀ ಜಗದ್ಗುರುಗಳವರು ಅಡ್ಡಪಲ್ಲಕ್ಕಿ ಮಹೋತ್ಸವದೊಡನೆ ಶಮೀಮಂಟಪಕ್ಕೆ ವಿಜಯಂಗೈಸಿ ಶಮೀಪೂಜಾದಿಗಳನ್ನು ಪೂರೈಸಿಕೊಂಡು ದಸರಾ ಪೆಂಡಾಲಿಗೆ ದಯಮಾಡಿಸಿದ ನಂತರ ಸಿಂಹಾಸನಾರೋಹಣ ಪೂರ್ವಕ ಶಮೀ ಶುಭಾಶೀರ್ವಾದ, ವಿಜಯದಶಮಿ ಕಾಣಿಕಾಸಮರ್ಪಣ ಶ್ರೀ॥ ॥ ಗಳವರ ಶುಭಾಶೀರ್ವಾದ ಸಂದೇಶ, ಮಂಗಳ ಸಭಾವಿಸರ್ಜನೆ.

ಅಶ್ವಿಜ ಶುದ್ಧ ೧೧ ಕಾರ್ಯಕ್ರಮ

ತಾ॥ ೨೧-೧೦-೧೯೫೦ ನೇ ಶನಿವಾರ ಪ್ರಾತಃಕಾಲ ೧೧ ಘಂಟೆಗೆ ದಸರಾ ದರ್ಬಾರ ಪೆಂಡಾಲಿನಲ್ಲಿ ಹಂತಿತರಿಗೂ, ಕಲಾವಿದರಿಗೂ ಶ್ರೀಜಗದ್ಗುರುಗಳವರಿಂದ ಸಂಭಾವನಾಶೀರ್ವಾದಪೂರ್ವಕ ಮಹಾಮಂಗಲಮೊಡನೆ ಕಾರ್ಯಕ್ರಮಗಳು ಪರಿಸಮಾಪ್ತಿಯಾಗ್ಲಿರುವವು.

ನವಣೂರ ಸಭ್ಯಮಂಡಲಿ.

ತಾ॥ ೧—೧೦—೧೯೫೦.

ವಿ. ಸೂ.—ಹುಬ್ಬಳ್ಳಿ ಪಂಚಾಚಾರ್ಯಪಟ್ಟದ ನವಣೂರು ರೇಣುಕೇಶ್ವರ ಇವ್ಹ ಅವರು ೩ ಸೈಲು ಅಂತರದಲ್ಲಿರುವ. ಸ್ಟೇಷನ್‌ದಲ್ಲಿ ಜಟ್ಕಾಗಳ ಸೌಕರ್ಯವುಂಟು.

ಪಂಚಾಚಾರ್ಯಪ್ರಭಾ

೧೯೫೦ನೆಯ ಆಕ್ಟೋಬರ್ ಶಾ॥ ೯ನೆಯ ಸೋ॥ ವಾರ

ಭಕ್ತಸ್ಥಲದಲ್ಲಿ ಹೇಳಲ್ಪಟ್ಟ ಅಂಗಸ್ಥಲಗಳ ವಿಚಾರ

೨ ಪಿಂಡಜ್ಞಾನಸ್ಥಲ

[ಕಳಿದ ಸಂಚಿಕೆಯಿಂದ ಮುಂದುಸರೆದುಪು]

ದೇಹ ಮತ್ತು ಆತ್ಮ ಇವುಗಳ ವಿಲೇಕವುಳ್ಳವನೇ ಪಿಂಡಜ್ಞಾನಿಯೆನಿಸಿಕೊಳ್ಳುವನು ಲೋಕದಲ್ಲಿ ಮಾನವರಿಗೆ ಗೃಹಕ್ಷೇತ್ರಾದಿಗಳು (ಮನ ಹೊಲ ಮನೆ ಧಾನ್ಯಾದಿಗಳು) ಅಭಿವೃದ್ಧಿಯಾಗಲು ಸುಖವೂ, ಇವು ನಾಶವಾಗಲು ದುಃಖವೂ ಆಗುತ್ತಿರುವುದು ಸ್ವಭಾವಸಿದ್ಧವಾಗಿರುವುದರಿಂದ ವಿಷಯಾತ್ಮವಾದಿಗಳಾದ ಲೌಕಿಕರು ಗೃಹ ಕ್ಷೇತ್ರಾದಿಗಳೇ ಆತ್ಮನೆಂದು ತಿಳಿಯುತ್ತಿರುವರು ಇವರಿಗಿಂತಲೂ ಸ್ವಲ್ಪವುನ್ನಿಟ್ಟಿಗೆ ಹೆಚ್ಚಿನ ಜ್ಞಾನವುಳ್ಳ ಜಾರ್ವಾಕರು—ಮನೆ ಹೊಲ ಮೊದಲಾದವುಗಳಿಗೆ ಇದು ಪಶು, ಇದು ಪಕ್ಷಿ, ಇದು ಗ್ರಾಮ ಎಂಬ ವಿಶೇಷವಿಲ್ಲದಿರುವುದರಿಂದಲೂ, ಶರೀರಕ್ಕೆ ಆ ವಿಧವಾದ ಜ್ಞಾನವಿರುವುದರಿಂದಲೂ, ಶರೀರವೇ ಆತ್ಮನೆಂದು ನುಡಿಯುತ್ತಿರುವರು ಶರೀರದಲ್ಲಿ ಪ್ರಾಣವಾಯುವಿನ ಸಂಚಾರವಿಲ್ಲದಿರುವಾಗ ಯಾವ ಜ್ಞಾನವೂ ಉಂಟಾಗುವುದಿಲ್ಲವಾಗಿರುವುದರಿಂದ ಪ್ರಾಣನೇ ಆತ್ಮನೆಂದು ಕೆಲವರು ಹೇಳುತ್ತಿರುವರು ಮಲಗಿರುವ ಸಮಯದಲ್ಲಿ ಪ್ರಾಣವಾಯುವಿನ ಸಂಚಾರವಿದ್ದರೂ ಇಂದ್ರಿಯಗಳ ವ್ಯಾಪಾರವಿಲ್ಲದಿರುವ ಯಾವ ಜ್ಞಾನವೂ ಉಂಟಾಗದಿರುವುದರಿಂದ, ಇಂದ್ರಿಯಗಳೇ ಆತ್ಮನೆಂದು ಬೇರೆ ಕೆಲವರು ನುಡಿಯುತ್ತಿದ್ದಾರೆ ಇಂದ್ರಿಯಗಳಿಗೆ ಚಕ್ಷುರಾದೀಂದ್ರಿಯಗಳು ಜಡವಾಗಿದ್ದು, ಬುದ್ಧಿಯ ಅಧೀನಗಳಾಗಿರುವುದರಿಂದ ಬುದ್ಧಿಯೇ ಆತ್ಮನೆಂದು ಬೌದ್ಧರು ಹೇಳುತ್ತಿರುವರು ನಾನು ಸ್ಥೂಲನು, ನಾನು ಕೃಶನು ನಾನು ಸುಖಿಯು ನಾನು ದುಃಖಿಯು ಪೂರ್ವದಲ್ಲಿ ನಾನು ಬಾಲನಾಗಿದ್ದೆನು, ಈಗ ತರುಣನಾಗಿದ್ದೇನೆ, ವೃದ್ಧನಾಗಿದ್ದೇನೆ' ಎಂಬ ವ್ಯವಹಾರವು ಸಾಮಾನ್ಯವಾಗಿ ಸರ್ವರಲ್ಲಿಯೂ ಕಂಡುಬರುವುದರಿಂದ ಶರೀರವೂ ತತ್ಸ್ಥಲ್ಲ ಇಂದ್ರಿಯಗಳೂ ಆತ್ಮನಲ್ಲ ಶರೀರ ಇಂದ್ರಿಯ ಬುದ್ಧಿ ಇವೆಲ್ಲವುಗಳಿಗಿಂತಲೂ ವ್ಯತಿರಿಕ್ತನಾ 'ತಂ ತ್ವಂ ಅಸಿ' ಎಂಬ ಜ್ಞಾನಕ್ಕೆ ವಿಷಯ ಭೂತನೂ, ತನಿದಿಸ್ಸಂದ್ಧನೂ ಆದ ಆತ್ಮನ ಬೇರೊಬ್ಬ ನಿರುವನೆಂದು ಯಾವನು ತಿಳಿಸುವನೋ ತತ್ಪದಾರ್ಥವನ್ನು ತಿಳಿಯುವನೋ ಅವನೇ ಪಿಂಡಜ್ಞಾನಿಯೆಂದು ಹೇಳಿಸಿಕೊಳ್ಳುವನು ಪೂರ್ವಕರ್ಮಾನುಸಾರವಾಗಿ ನಾನಾಯೋನಿಗಳಲ್ಲಿ ಜನಿಸಿ ನಾನಾರೂಪುಗಳನ್ನು ಧರಿಸಿದ ಶರೀರಗಳು ನಾಶವಾಗುವುದುಗು ಅದರೆ ಇಂಥ ಶರೀರಗಳನ್ನು ಆಶ್ರಯಿಸಿರುವ ಆತ್ಮನು ಮಾತ್ರ ನಾಶರಹಿತನೂ ನಿತ್ಯನಾಗಿದ್ದಾನೆಂದು ತಿಳಿಯುವುದೇ ವಿನೇಕವಾಗಿದೆ ಶರೀರ ಕೈಂತಲೂ ಆತ್ಮನು ಭಿನ್ನನಾಗಿರುವನೆಂದೂ, ಆತ್ಮನಿಗಿಂತಲೂ ಪ್ರೇರಕನಾದ ಈಶ್ವರನು ಬಿನ್ನನಾಗಿರುವನೆಂದೂ, ಯಾವನು ಜೀವಾತ್ಮಪರಮಾತ್ಮರ ಸ್ವರೂಪವನ್ನು ತಿಳಿಯುತ್ತಾನೆಯೋ ಅವನು ಪಿಂಡಜ್ಞಾನಿ' ಯೆಂದು ಹೇಳಿಸಿಕೊಳ್ಳುವನು

೩ ಸಂಸಾರಹೇಯಸ್ಥಲ

ಜನ್ಮವನ್ನು ಧರಿಸಿದ ಪ್ರಾಣಿಗೆ ಎಂದಾದರೂ ಮರಣವು ಸಿದ್ಧವು, ಮರಣಹೊಂದಿದ ಪ್ರಾಣಿಗೆ ಪುನಃ ಜನ್ಮಧಾರಣವೂ ಸಿದ್ಧವು ಆದುದರಿಂದೀ ಲೋಕದಲ್ಲಿ ಪ್ರಾಣಿಯು ಜನನಮರಣಗಳಿಂದ ಕೂಡಿ ಚಿಕ್ಕತ್ತಿರುವುದು ಮತ್ಸ್ಯ ಕೂರ್ಮ ವರಾಹ ನೃಸಿಂಹ ರಾಮ ಕೃಷ್ಣ ಇತ್ಯಾದಿ ರೂಪದಿಂದ ನಾನಾಜನ್ಮಧಾರಣಮಾಡಿದ ವಿಷ್ಣುವಿಗೂ ಕೂಡ ಮರಣವು ಪ್ರಾಪ್ತವಾಯಿತು ಮಾನವನು ಪೂರ್ವ ಕರ್ಮಾನುಸಾರವಾಗಿ ಬ್ರಾಹ್ಮಣ-ಕ್ಷತ್ರಿಯ ವೈಶ್ಯ ಶೂದ್ರ ಮೊದಲಾದ ಜಾತಿಗಳಲ್ಲಿ ಜನಿಸಿ ತಾಪತ್ರಯರೂಪಮಹಾಗ್ನಿಯ ಸಂತಾಪದಿಂದ ಬೆಂದುಹೋಗುವನು ಪೂರ್ವ ಕರ್ಮನೇ ಮೂಲಕಾರಣವಾಗುಳ್ಳ ಅಧ್ಯಾತ್ಮಿಕಾದಿಮುಖಗಳಿಂದ ಪೀಡಿತನಾಗಿರುವನಿಗೆ ವಿಶ್ರಾಂತಿಯು ಎಲ್ಲಿ ದೊರೆಯುವುದು? ಮಹಾಮುಖಗಳನ್ನುಂಟುಮಾಡತಕ್ಕುದೂ, ಮಿಂಚಿಗೆ ಸಮಾನವಾದುದೂ ಆಗಾತ್ ಕ್ಷಣಿಕವಾದುದೂ ಮಲಕ್ಕೆ ಭಂಡಾರವಾಗುದೂ ಆದ ಈ ಶರೀರದಲ್ಲಿ ಯಾವ ವಿವೇಕಿಯೂ ಪ್ರೀತಿಯುಳ್ಳವನಾಗುವನು? ಸಚ್ಚಿದಾನಂದರೂಪವಾದ ಆತ್ಮತತ್ತ್ವವನ್ನು ಬಿಟ್ಟು ದುಃಖಮಯವೂ ನಾಶಶೀಲವೂ ಆದ ಶರೀರದಲ್ಲಿ ಯಾವ ವಿವೇಕಿಯೂ ಪ್ರೇಮವನ್ನು ವಹಿಸುವನು? ಶುದ್ಧಹೃದಯನೂ ಶ್ರುತಿ ಗುರು ಸ್ವಾನುಭವಗಳಿಂದ ನಿತ್ಯಾನಿತ್ಯ ವಸ್ತುವಿವೇಕಿಯೂ ವೈರಾಗ್ಯವುಳ್ಳವನೂ ಆದ ಮುಮುಕ್ಷುವಿಗೆ ಈ ಶರೀರವು ಒಂದು ಪಂಜರವಾಗಿಯೂ ಕಾಣುವುದು ಆತ್ಮನಿಗೆ ಶರೀರವು ಒಂದು ಸೆರೆಮನೆಯಾಗಿಯೂ ಕಾಣುವುದು ಆದುದರಿಂದ ಶರೀರವು ಆತ್ಮನಿಗೆ ಹೇಯವಾಗಿರುವುದು

(ಸಶೇಷ)

ವರ್ತಮಾನಸಂಗ್ರಹ

ಕೇಂದ್ರ ಆಹಾರ ಸಂಶೋಧನಾಶಾಲೆ ಆರಂಭೋತ್ಸವ

ಶ್ರೀಕಸ್ಮಹಾರ ಜರವರ ಅನ್ನಕ್ಷತೆಯಲ್ಲಿ

ಮೈಸೂರು ಸರ್ಕಾರದವರಿಂದ ಸ್ಥಾಪಿಸಲ್ಪಟ್ಟ ಆಹಾರ ಸರ್ಕಾರದವರಿಂದ ಸ್ಥಾಪಿಸಲಾಗಿರುವ ಕೇಂದ್ರೀಯ ಪ್ರಾಯೋಗಿಕ ಶಾಲೆಗಳ ಪೈಕೆ ಒಂದಾದ ಕೇಂದ್ರ ಆಹಾರ ಸಂಗ್ರೋಧನಾ ಶಾಲೆಯ ಆರಂಭೋತ್ಸವವನ್ನು ಕೇಂದ್ರ ಮಂತ್ರಿಗಳಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಬರುವ ೨೧ನೇ ತಾರೀಖು ಶನಿವಾರ ಸಂಜೆ ೫॥ ಗಂಟೆಗೆ ಚಲುವಾಂಬಾ ಪಬಲಿಕ್ ಪಬಲಿಸಿಟಿ ಸಭಾಭವನದಲ್ಲಿ ನೆರವೇರಿಸಿಯರು ಶ್ರೀಮನ್ಮಹಾರಾಜರವರು ಅಧ್ಯಕ್ಷತೆ ವಹಿಸುವರು

ಪ್ರಧಾನಿ ಪಂ॥ ನೆಹರೂರವರೂ ಆಹಾರ ಸಚಿವರಾದ ಶ್ರೀ ಕೆ ಎಂ ಮುನ್ಷಿಯವರೂ ಮತ್ತು ಕೈಗಾರಿಕಾ ಸಚಿವರಾದ ಶ್ರೀ ಹರಿಕೃಷ್ಣ ಮೆಹತಾಬ್‌ರವರುಗಳು ರಾಜಾಜಿಯವರ ಜೊತೆಯಲ್ಲಿಯೇ ಬಂದು ಈ ಸಮಾರಂಭದಲ್ಲಿ ಭಾಗವಹಿಸುವರು.

ಗಾಂಧಿ ಜಯಂತಿಯ ದಿನ ಪ್ರಧಾನರಾದ ಪಂ॥ ನೆಹರೂರವರು ನೂಡಿದ ಭಾಷಣ

ಕೊರಿಯಾ ಯುದ್ಧ ಜಾಗೃತಿ ಮುಖ್ಯಾಂಶಗಳು

ಕೊರಿಯ ಯುದ್ಧವು ವಿಸ್ತರಿಸಬಹುದೆಂಬ ಭೀತಿಯುಂಟಾಗಿದೆ ಕೊರಿಯ ಪಕ್ಷದಲ್ಲಿ ಬ್ರಹ್ಮ ರಾಷ್ಟ್ರಗಳಾದ ಚೀನಾ ಮತ್ತು ರಷ್ಯಗಳಿರುವುದೇ ಈ ಭೀತಿಗೆ ಮುಖ್ಯ ಕಾರಣ ಕೊರಿಯ ಘರ್ಷಣೆಯನ್ನು ತೀರ್ಪುರಲ್ಲಿ ಪರಿಸಮಾಪ್ತಿ ಮಾಡದಿದ್ದಲ್ಲಿ ಇಡಿ ಕೊರಿಯಾವು ಶಾಶ್ವತಾಗುವುದು ಕಾಂತಿ ಸಂಭವನೆಗಳನ್ನು 'ಕೊರಿಯಾ ಶವದ' ಮುಂದೆ ಪ್ರಶ್ನಿಸಬೇಕಾಗಿ ಬರುವುದು ಎಂದು ಪ್ರಧಾನರಾದ ಪಂ॥ ನೆಹರೂರವರು ಗಾಂಧಿ ಜಯಂತಿ ದಿನದ ದೆಹಲಿಯ ಗಾಂಧಿ ವೈದ್ಯಾನದಲ್ಲಿ ಸೇರಿದ್ದ ಭಾರಿ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ಹೇಳಿದರು

ನಾಸಿಕ್ ಅಧಿವೇಶನ ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡಿದೆ

ರಾಷ್ಟ್ರದಲ್ಲಿನ ಜಾತೀಯ ಮತ್ತು ಆರ್ಥಿಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಪಂ॥ ನೆಹರೂರವರು, ಈ ಸಮಸ್ಯೆಗಳ ಪರಿಹಾರಕ್ಕೆ ನಾಸಿಕ್ ಅಧಿವೇಶನ ಮಾರ್ಗೋಪಾಯಗಳನ್ನು ತೋರಿಸಿದೆ ನಾಸಿಕ್ ಅಧಿವೇಶನದಲ್ಲಿ ಸ್ವೀಕೃತವಾದ ರೂಪುರೇಷೆಗಳನ್ನು ಕಾರ್ಯಗತ ಮಾಡುವ ಮಾರ್ಗದಲ್ಲಿ ಆಡಿ ಆತಂಕಗಳನ್ನು ತೆಂಡೊಡ್ಡಿದಲ್ಲಿ ರಿಷ್ಯದ ಬಹು ಜನಗಳು ವಿರೋಧಿಸುವರು ನಾಸಿಕ್ ಅಧಿವೇಶನದ ರೂಪುರೇಷೆಗಳನ್ನು ಕೇವಲ ಕಾಗದದಲ್ಲಿಸ್ಸ ರೂಪುರೇಷೆಂದು ಪರಗಣಿಸಬಾರದು ಎಂದು ಹೇಳಿದರು

ಭಾರತ-ಪಾಕಿಸ್ತಾನಗಳ ಯುದ್ಧ ಪ್ರಸ್ತಾಪ ಖಂಡನೀಯ

ಭಾರತ ಪಾಕಿಸ್ತಾನಗಳ ಸಮಸ್ಯೆ ಪರಿಹಾರಕ್ಕೆ ಯುದ್ಧ ಪ್ರಸ್ತಾಪ ಮಾಡುವುದು ಮೂರ್ಖತನ ಅಲ್ಲದೆ ಖಂಡನೀಯ ಯುದ್ಧದಿಂದ ಅನೇಕ ಕಷ್ಟಗಳು ಮತ್ತು ಇನ್ನೂ ಹೆಚ್ಚಿನ ಸಮಸ್ಯೆಗಳು ಉದ್ಭವಿಸುವುವು

ನಿರಾಶ್ರಿತರ ಸಮಸ್ಯೆ

ನಿರಾಶ್ರಿತರ ಅನ್ನವಸ್ತ್ರಾಗ್ರಹ ಪ್ರಶ್ನೆ ಅದಷ್ಟು ಜಾಗ್ರತಿ ಬಗೆಹರಿದಷ್ಟು ಹೆಚ್ಚು ಅನುಕೂಲ ಭಾರತ-ಪಾಕ್ ಸಮಸ್ಯೆಗಳ ಪರಿಹಾರಕ್ಕೆ ಯುದ್ಧವಾಗಿಕೆಂದು ಕೆಲವರು ಕೂಗುತ್ತಿದ್ದಾರೆ ಯುದ್ಧವಾಗುವುದರಿಂದ ಎರಡು ಪಕ್ಷಗಳಿಗೂ ವಿಶೇಷ ಹಾನಿಯಾಗುವುದಲ್ಲದೆ, ಯಾವ ಸಮಸ್ಯೆಗಳೂ ಒಗೆಹರಿಯುವುದಿಲ್ಲ

ನಿರಾಶ್ರಿತರ ಪುನರ್‌ವ್ಯವಸ್ಥೆಗಾಗಿ 'ಉತ್ಪನ್ನದ' ನೆಲೆಗೆ ತೆರಿಗೆ ಹಾಕುವುದು ನನಗೆ ಇಷ್ಟು ಇಷ್ಟವಿಲ್ಲ ರಾಷ್ಟ್ರದ ಉತ್ಪತ್ತಿ ಈಗ ಕೆಲವು ಕೆಳದಜೆಯಲ್ಲಿದೆ

ಸಿಕ್‌ಖ್ಖಾನ ಕೇಳುತ್ತಿರುವುದು ಹುಡುಗಾಟಿಕೆ

ಇಂಡಿಯಾದಲ್ಲಿ ಪ್ರತ್ಯೇಕ ಸಿಕ್‌ಖ್ಖಾನ ಕೇಳುತ್ತಿರುವುದು ಕೇವಲ ಹುಡುಗಾಟಿಕೆ ಸಿಕ್ ಸ್ಥಾನದ ಕೂಗನ್ನು ಬೆಬ್ಬಿಸಿರುವವರು ಭಾರತದ ವಿಭಜನೆಯಿಂದಾಗಿಲಿ ಆಪದಾ ವಿಶ್ವ ಇತಿಹಾಸದಿಂದಾಗಿಲಿ ಪಾಠವನ್ನು ಇಲಿತ ಹಾಗೆ ಕಾಣುವುದಿಲ್ಲ ಭಾರತದ ಏಕ್ಯತೆಗೆ ಭಂಗವುಂಟು ಮಾಡಿ ರಾಷ್ಟ್ರವಲ್ಲಿ ಒಡಕೆನ್ನುಂಟುಮಾಡಲೆನ್ನಿ ಸುವವರು ರಾಷ್ಟ್ರದ್ರೋಹಿಗಳು ಎಂದು ಹೇಳಿದರು

ಖಾನ್ ಸಹೋದರರ ಜ್ಞಾಪಕ

ಎಂ॥ ನೆಹರೂರವರು ತಮ್ಮ ೭೦ ನಿಮಿಷಗಳ ದೀರ್ಘ ಭಾಷಣ ಮುಕ್ತಾಯ ಮಾಡುತ್ತಾ ಭವ್ಯೋದ್ರೇಕದಿಂದ ಮಹಾತ್ಮ ಗಾಂಧೀಜಿಯವರ ಜನ್ಮದಿನೋತ್ಸವದ ದಿನ ಅವರ ಪರಮ ಮಿತ್ರರಾದ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಅವರ ಸಹೋದರರಾದ ಡಾ ಖಾನ್ ಸಾಹೇಬರವರ ವಿಕಯವಾಗಿ ಪ್ರಸ್ತಾಪಿಸುತ್ತಾ ಈ ಸ್ವತಂತ್ರ ಯೋಧರು ತಮ್ಮ ತತ್ವ ಪರಿಪಾಲನೆಗಾಗಿ ಇಂದು ಪಾಕೀಸ್ತಾನದ ಜೈಲಿನಲ್ಲಿ ಕೊಳೆಯುತ್ತಾ ಬಿದ್ದಿದ್ದಾರೆ ಖಾನ್ ಸಹೋದರರ ಬಿಡುಗಡೆಗೆ ಭಾರತ ಏನನ್ನೂ ಮಾಡಲು ಸಾಧ್ಯವಿಲ್ಲವಾಗಿದೆ ಖಾನ್ ಸಹೋದರರು ಯಾವ ಉದಾತ್ತ ತತ್ವಗಳ ಪರಿಪಾಲನೆಗಾಗಿ ಜೈಲಿನಲ್ಲಿದ್ದಾರೋ ಆ ತತ್ವಗಳನ್ನು ಪಾಲಿಸಿಕೊಂಡು ಬರುವುದೊಂದೆ ಭಾರತಕ್ಕೆ ಉಳಿದಿರುವ ಮಾರ್ಗ ಎಂದು ಹೇಳಿದರು

ಕಾಶ್ಮೀರ ವಿಚಾರದಲ್ಲಿ ಭಾರತದ ಮೇಲೆ ದೂರು

ಲಿಯಾಕತಾಲಿಯವರ ಹೇಳಿಕೆ

ಪಾಕಿಸ್ತಾನದ ಪಾರ್ಲಿಮೆಂಟಿಗೆ ಹೇಳಿಕೆ ಕೊಡುತ್ತಾ ಲಿಯಾಕತ್ ಅಲಿಖಾನರು ಕಾಶ್ಮೀರ ಮಧ್ಯಸ್ಥಗಾರಾದ ಸರ್ ಓವೆನ್ ಡಿಕ್ಸನ್‌ರವರು ಭದ್ರತಾ ಸಮಿತಿಗೆ ಮುಂದಿನ ಕಾರ್ಯಕ್ರಮದ ಬಗ್ಗೆ ಯಾವ ತಿಳಿಕೆಯನ್ನೂ

ಮಾಡದೇ ಇರುವುದು ತಮಗೆ ಆಶ್ಚರ್ಯವನ್ನುಂಟು ಮಾಡಿದೆ

ಭಾರತೀಯ ಸೇನಾಪಡೆಗಳು ಆಜಾದ್ ಕಾಶ್ಮೀರ ಪ್ರದೇಶಗಳ ಮೇಲೆ ೧೯ನೇ ರಲ್ಲಿ ಪೂರ್ಣ ಆಕ್ರಮಣ ಕಾರ್ಯ ಕೈಗೊಂಡನಂತರ ಪಾಕಿಸ್ತಾನ ಮುಖ್ಯ ಹಿತ ವೈಷ್ಣಿಯ ರಕ್ಷಣೆಗಾಗಿ ಪಾಕಿಸ್ತಾನದ ಸೇನೆ ತೆರಲ ಬೇಕಾಯಿತು

ಕೊನೆಗೆ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನವು ಒಂದತಕ್ಕೆ ಸೇರಬೇಕೋ ಅಥವಾ ಪಾಕಿಸ್ತಾನಕ್ಕೆ ಸೇರ ಬೇಕೋ ಎಂಬ ಪ್ರಶ್ನೆಯ ಇತ್ಯರ್ಥದ ಬಗ್ಗೆ ಭಾರತವು ಪಾಕಿಸ್ತಾನ ಮತ್ತು ವಿಶ್ವಸಂಸ್ಥೆಯೊಡನೆ ಒಂದು ಒಪ್ಪಂದ ಮಾಡಿತು ಈ ಒಪ್ಪಂದವನ್ನು ಭಾರತ ಸರಕಾರವು ಎಲ್ಲ ಸೇನಾಸಿರ್ಗಮನಕಾರ್ಯಕ್ಕೆ ಒಡಂಬಡಲಿಲ್ಲ ಆಸ್ತಾನವು ಕಾಶ್ಮೀರದ ಪ್ರಜೆಗಳ ವಿಮೋಚನಾ ಸೈನ್ಯವೆಂದು ಹೇಳಿಕೊಂಡಿದ್ದರೂ ಆದರೆ ಭಾರತವು ಕಾಶ್ಮೀರಿಗಳನ್ನು ಮರನ್ನಾಗಿ ಆಳಲು ಯತ್ನಿಸುತ್ತಿದೆ ಸಾಂಸ್ಕೃತಿಕ, ಸೌಲಿಕ, ಆರ್ಥಿಕ ಮುಂತಾದ ಎಲ್ಲಾ ದೃಷ್ಟಿಯಿ ದಲೂ ಕಾಶ್ಮೀರವು ಪಾಕೀಸ್ತಾನದ ಒಂದು ಭಾಗವಾಗಿ ಉಳಿಯಬೇಕೆಂಬುದು ಸಿಪಿಎಂದವರಾದ ವಿಷಯ ಎಂದು ಲಿಯಾಕತ್‌ಅಲಿ ತಿಳಿಸಿದರು

ಆಫ್ಘನ್ ಗಡಿಯಲ್ಲಿ ಘರ್ಷಣೆ

ಪಾಕೀಸ್ತಾನ್ ಭೂ, ವಿಮಾನ ಸೇನೆ ಭಾಗವಹಿಸಿದೆ

ಆಫ್ಘನ್ ಗಡಿಯಾದ ಬೆಲೂಚಿಸ್ತಾನದಲ್ಲಿ ಪಾಕೀಸ್ತಾನದ ಸೈನ್ಯಗಳಿಗೂ ಮತ್ತು ಆಫ್ಘನ್ ಸಶಸ್ತ್ರ ಪಡೆಗಳಿಗೂ ಘರ್ಷಣೆ ನಡೆಯುವುದಾಗಿ ಪಾಕ್ ರಕ್ಷಣಾ ಸಚಿವ ಶಾಪೆಯ ಪ್ರಕಟಿಸಿದೆ

ಪಾಕೀಸ್ತಾನದ ಸೇನೆಗಳಿಗೆ ಪಾಕ್ ವೈಮಾನಿಕ ಪಡೆಗಳೂ ಮತ್ತು ಗೃಹರಕ್ಷಣಾ ಪಡೆಗಳೂ ಸಹಾಯ ಮಾಡುತ್ತಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ನಿಜಾಮರ ೫ ಲಕ್ಷ ರೂಪಾಯಿಗಳ ಉದಾರ ದಾನ

ಹೈದ್ರಾಬಾದ್ ನಿಜಾಮರು ಆಸ್ಥಾನ ಭೂತಂಪ ಸಂ ನಿಧಿಗೆ ೫ ಲಕ್ಷ ರೂಪಾಯಿಗಳನ್ನು ಉದಾರ ದಾನಮಾಡಿದ್ದಾರೆ

ಕೋಟ್ಯಾಧೀಶರ ದಸ್ತಗಿರಿ

ಕೈಗೆ ಬೇಡಿ ತೊಡಿಸಿ ರಸ್ತೆಯಲ್ಲಿ ಮೆರವಣಿಗೆ

ಗಯಾ ನಗರದ ಇಬ್ಬರು ಕೋಟ್ಯಾಧೀಶರುಗಳನ್ನು ಆ ವಾರ ದಸ್ತಗಿರಿ ಮಾಡಿ ಕೈಗೆ ಬೇಡಿ ತೊಡಿಸಿ, ಪ್ರಮುಖ ಬೀದಿಗಳಲ್ಲಿ ಕೋರ್ಟಿನವರೆಗೂ ನಡೆಸಿ ತಂದುಹೋದಾಗ ರಸ್ತೆಯ ಇಕ್ಕಡೆಗೂ ನೆರೆದಿದ್ದ ಜನ ತಬ್ಬಿಬ್ಬಾಗಿ ಮುಖಭಂಗವಾಗುವಂತಹಾ ಕೂಗುಗಳನ್ನು ಕೂಗಿದರು

ಒಬ್ಬ ಮತ್ತು ನೂರಿನ ಭಾರಿ ವರ್ತಕರಾದ ಕೋಟ್ಯಾಧೀಶರುಗಳು ಬಟ್ಟೆ ವ್ಯಾಪಾರದಲ್ಲಿ ಕಳ್ಳಲೆಕ್ಕ ಇಟ್ಟುಕೊಳ್ಳುತ್ತಿದ್ದುದನ್ನು ಪತ್ತೆ ಹಚ್ಚಿ ಪೋಲೀಸರು ದಸ್ತಗಿರಿ ಮಾಡಿದರು ಅಲ್ಲದೆ ಗಯೆಯ ಇನ್ನಿಬ್ಬರು ಭಾರೀ ವರ್ತಕರನ್ನು ಈ ಆಪಾದನೆ ಮೇಲೆ ದಸ್ತಗಿರಿಮಾಡಲಾಯಿತು

೧೦ ಸಹಸ್ರ ರೂಪಾಯಿಗಳ ಸಿಕ್ಕಾಪಾಕೆಟ್

ರೈಲುಗಾಡಿಯಲ್ಲಿ ಘರ್ಷ ಹಾರಿಸಿದರು

ಗದಗಿನ ಎಸ್ಟೇ ವರ್ತಕರೊಬ್ಬರು ಪೂನಾದಿಂದ ಮುಂಬೈಗೆ ಪ್ರಯಾಣ ಮಾಡುತ್ತಿದ್ದಾಗ ಅವರ ಬಳಿ ಇದ್ದ ೧೦ ಸಹಸ್ರ ರೂ.ಗಳನ್ನೊಳಗೊಂಡ ಘರ್ಷ ಒಂದನ್ನು ಯಾರೋ ಹಾರಿಸಿದ ಪ್ರಸಂಗವೊಂದು ನಡೆದು ಯಾಗಿದೆ

ಪೂನಾಕ್ಕೆ ಆಗಮಿಸಿದ ಬೆಂಗಳೂರು ಮೇಲ್ ಗಾಡಿ ಯಿಂದ ಇಳಿದ ವರ್ತಕರು ಮುಂಚೆಗೆ ಹೊರಡುವ ದರಲ್ಲಿದ್ದ ರೈಲುಗಾಡಿಯ ಇಂಟರ್ ಕ್ಲಾಸ್‌ನಲ್ಲಿ ಕುಳಿತು ಕೊಂಡರು ಅವರಲ್ಲಿ ಉತ್ತಮ ಪೋಷಾಕುಗಳನ್ನು ಧರಿಸಿದ ಇಬ್ಬರು ಗಾಡಿಯಬಳಿ ಬಂದು ತಮಗೆ ಸ್ಥಳ ರಿಸರ್ವ್ ಆಗಿದೆ ಎಂದು ಹೇಳಿ ವರ್ತಕರನ್ನು ಇಳಿಸಿದರು

ವರ್ತಕರು ೨ ಬೋಗಿಯಿಂದಿಳಿದು ಬೇರೆ ಬೋಗಿ ಯಲ್ಲಿ ಕುಳಿತು ಜೋಬು ನೋಡಿಕೊಂಡಾಗ ೧೦೦ ರೂಗಳ ಸೂಟುನೋಟುಗಳನ್ನೊಳಗೊಂಡ ಘರ್ಷ ನಾಯಿ ವಾಗಿತ್ತು ಪೋಲೀಸರಿಗೆ ದೂರುಕೊಟ್ಟಿದ್ದಾರೆ

ಉತ್ತರ ಕೊರಿಯಾ ಸರಹದ್ದಿನಲ್ಲಿ ವಿಶ್ವ ಸಂಸ್ಥೆ ಪಡೆಗಳ ಯುದ್ಧ ನ್ಯೂಹ

←

ಬ್ರಿಟಿಷ್ ಮತ್ತು ಅಮೆರಿಕಾ ಪಡೆಗಳು ಉತ್ತರ ಕೊರಿಯದಲ್ಲಿ ಪ್ರವೇ ತಿಸಲು ಒಂದೆಯ ಸರಹಾನಾಂತರ ರೇಯ ಒಂ ಮೂಹ ರಚನೆಯಲ್ಲಿ ತೊಡಗಿವೆ

ಉತ್ತರ ಕೊರಿಯಾದ ರಾಜಧಾನಿಯಾದ ಪ್ಯೋಂಗ್ಯಾಂಗ್ ನಗರಕ್ಕೆ ಉತ್ತರ ಕೊರಿಯನ್ನರ ಸೇನೆಗಳು ಹೆಚ್ಚು ಹೆಚ್ಚಾಗಿ ಒಂದಿಗೆಯುತ್ತಿವೆ

ಒಲಿಯೆ ರೇಖೆಯ ಬಳಿ ಜನರಲ್ ಮೆಕಾರ್ಥರ್ ರವರು ಬ್ರಿಟಿಷ್ ಕಾಮನ್‌ವೆಲ್ತ್, ಅಮೆರಿಕಾ ಮತ್ತು ಫಿಲಿಪೈನ್ ರಾಷ್ಟ್ರಗಳ ಸಂಯುಕ್ತ ಸೇನಾದಳಗಳನ್ನು ಉತ್ತರ ಕೊರಿಯದೊಳಗೆ ನಡೆಸುವರೆಂದು ಹೇಳಲಾಗಿದೆ

ಕೊರಿಯ ಪುನರ್ವ್ಯವಸ್ಥೆಯ ಕಾರ್ಯದಲ್ಲಿ ಸಹಾಯ ನೀಡಲು ವಿಶ್ವಸಂಸ್ಥೆ ಸಹಾಯಕ ದಳಗಳು ಆಗಲೇ ಆಗಮಿಸಿವೆ

ಸ್ವೀಕಾರ

ತೀರ್ಥಹಳ್ಳಿ ವಿ ಆರ್ ವೀರಭದ್ರಯ್ಯನವರು ಬೀರೂರಿನ ನೂತನ ಗೃಹಪ್ರವೇಶ ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ಸಮರ್ಪಿಸಿದ 5 ರೂ ಗಳು ಸಿ ಒಸವ ಲಿಂಗಯ್ಯಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಗುಲ್ಬರ್ಗಾ ಡಿ।। ಪರುತಾಬಾದ ಗ್ರಾಮದಲ್ಲಿ ಶ್ರೀಮಾನ್ ನಾಗಪ್ಪ ಶರಣಪ್ಪಸೇಶ್ವರಲಿಂಗಾಣಪ್ರವಚನ ಸಮಾಪ್ತಿಯ ನೇಳೆಯಲ್ಲಿ ಪ್ರಭಾಪೋಷಣಾರ್ಥವಾಗಿ ಸಮರ್ಪಿಸಿದ 2 ರೂ ಗಳು ಶ್ರೀ ಶರಣಬಸಪ್ಪ ಪಡಸೆಟ್ಟಿ ಇವರ ದ್ವಾರಾ ತಲ್ಪಿರುತ್ತವೆ

ಗಲ್ಬರ್ಗಾ ಜಿಲ್ಲಾ ಜಿಕ್ಕನಂದೂರ ಗ್ರಾಮದಲ್ಲಿ ಶಿವಜಯಂತ್ಯುತ್ಸವ ನಡೆಯುಸಿ ಪೂರ್ಣಗೊಳಿಸಿದ ಸಮಯದಲ್ಲಿ ಅಲ್ಲಿಯ ಒಕ್ಕರು ಪ್ರಭಾಪೋಷಣಾರ್ಥವಾಗಿ ಸಮರ್ಪಿಸಿದ 1 ರೂ ಯ ಶ್ರೀ ಕೋಪಕಟ್ಟೆ ಹಿರೇಮಠದ ಶ್ರೀಗಳವರಿಂದ ತಲ್ಪಿರುತ್ತವೆ

ಗದಗವಾಸಿಗಳಾದ ವೇ।। ರಾಜಯ್ಯ ಆಡಿಪೆಯ್ಯಾ ಕೆಲ್ಕರ ಇವರು ಶಾ।। ೯-೯-೪೦ನೇ ದಿವಸ ತಿಲ್ಲೆಕ್ಕೆ ರಾದ ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ಸಮರ್ಪಿಸಿದ 1 ರೂ ಯ ಶ್ರೀ ಬಸವನಗೌಡರು ಪೊಂಡಿಹಾಳ ಗದಗ ಇವರ ದ್ವಾರಾ ತಲ್ಪಿರುತ್ತದೆ

ಧಾರವಾಡ ಡಿ।। ಜಿಕ್ಕನರಗುಂದ ಗ್ರಾಮದ ಶ್ರೀ ಎಲ್ ಬಿ ಕುಲಕರ್ಣಿ ಇವರು ತಮ್ಮ ಗೃಹದಲ್ಲಿ ರುದ್ರಾಭಿಷೇಕ ನಡೆಸಿದ ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ಸಮರ್ಪಿಸಿದ 1 ರೂ ಯ ಕೊಣ್ಣೂರ ಶ್ರೀಗಳವರಿಂದ ತಲ್ಪಿರುತ್ತದೆ

ಶಿವಮೊಗ್ಗಾ ಡಿ।। ಅಬ್ಬಲಗೆರೆ ಗ್ರಾಮದ ಶ್ರೀ ಬಣಜಾರ್ ಧರ್ಮ್ಯಾನಾಯ್ಕರವರು ತಮ್ಮ ಗೃಹದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಯನ್ನು ನಡೆಯಿಸಿ ಸ್ತೋತ್ರಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ಸಮರ್ಪಿಸಿದ 1 ರೂ ಯ ಶ್ರೀ ಎಂ ಹಾಲಸಿದ್ದಯ್ಯ ಸ್ಕೂಲ್‌ಮಾಸ್ತರ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪರಮಪೂಜ್ಯ ಹೋಟಿಗಿ ಶ್ರೀಗಳವರ ಅನುಷ್ಠಾನಸಮಾಪ್ತಿ

ಸೊಲ್ಲಾಪೂರ ಡಿ।। ಧೋತ್ರಿ ಗ್ರಾಮದ ನಾಗನಾಥ ದೇವಾಲಯದಲ್ಲಿ ಹೋಟಿಗಿ ಶ್ರೀ ಬಾಲಶಪ್ಪ ಜನ್ನ ವೀರಶಿವಾಚಾರ್ಯಸ್ವಾಮಿಗಳವರು ಇದೇ ಶ್ರಾವಣಮಾಸಾ ದಿಯಿಂದ ಅನುಷ್ಠಾನಪ್ರಾರಂಭಮಾಡಿದ್ದು ಈ ಮೊದಲೇ ಪ್ರಭಾ ಪತ್ರಿಕೆಯಲ್ಲಿ ಪ್ರಸಿದ್ಧವಾಗಿರ ತ್ತದಲ್ಲಿ ಆ ಅನುಷ್ಠಾಯಿತು ಅಲ್ಲಿ ಶ್ರೀ ಜಗದ್ಗುರು ಸಿದ್ಧಲಿಂಗಸಿವಯೋಗಿಪುಣ್ಯಾರಣ್ಯ ಪ್ರವೇಶನವೂ ಕೂಡ ನೇ।। ಸಂ।। ಗುರುಬಸವದೇಶಿಕೇಂದ್ರ ಶಾಸ್ತ್ರಿಗಳು ತಲಾದೂರ ಇವರಿಂದ ಸುಲಲಿತವಾಗಿ ಬೋಧಿಸಲ್ಪಟ್ಟಿತು ಪೂಜ್ಯತೋಷಿಧಿಗಳು ತಮ್ಮ ಅಯುಷ್ಯವನ್ನು ಅನುಷ್ಠಾನದಲ್ಲಿಯೇ ಕಳೆದುದಲ್ಲದೆ ಸಮಾಜ ಕಾರ್ಯವನ್ನೂ ಮಾಡಿ ಕೀರ್ತಿಪಡೆದಿರುವರು ಇಂಥ ಸಮಾಜಪ್ರೇಮಿಗಳು ಇಂದಿನ ಕಾಲದಲ್ಲಿ ದೊರೆಯುವದ ವಿರಳ ಈ ಮೊದಲೇ ಪ್ರಸಿದ್ಧಪಡಿಸಿದಂತೆ ದಿನಾಂಕ ೨ ಅಕ್ಟೋಬರ್‌ನಂಗೆ ಶ್ರೀಗಳವರ ಅನುಷ್ಠಾನ ಸಮಾಪ್ತಿಯಾಯಿತು ಅಂದು ಸೂರ್ಯಾಪೂರ, ಬಾಗಲಕೋಟೆ, ವಿಜಾಪುರ, ಅಕ್ಕಲಕೋಟೆ, ಬಾಸಿ, ವಳಸಂಗ, ಪೈಂದೂರ್, ಕಲ್ಬುರ್ಗಿ ಮೊದಲಾದ ಊರುಗಳಿಂದ ಲಕ್ಷಾವಧಿ ಜನರು ಕೂಡಿದ್ದರು ಇಂಥ ಜನಸಮುದಾಯವು ಎಲ್ಲಿಯೂ ಕೂಡಿರಲಿಕ್ಕಿಲ್ಲವೆಂದು ಭಾಸವಾಯಿತು. ಅಂದು ಮುಂಜಾನೆ ಶ್ರೀಗಳವರ ಪಾದ ಪೂಜೆ ನಾಗನಾಥನಿಗೆ ರುದ್ರಾಭಿಷೇಕಗಳಾದ ಮೇಲೆ ಪಲ್ಲಕ್ಕಿಯಲ್ಲಿ ಪೂಜ್ಯಶಪ್ಪಗಳ ಉತ್ಸವವು ಪೂರ್ತಿ ಗೊಂಡನಂತರ ಸಾಯಂಕಾಲ ೬ ಘಂಟೆಗೆ ಪೂಜ್ಯ ಶ್ರೀಗಳ ಪ್ರಾ ಶ್ರೀ ರಾಚಲಿಂಗಶಿವಾಚಾರ್ಯ ಪರಾಂಡೇಶ್ವರ ಸಂಪಾದಕ "ವೀರಶೈವಗರ್ಜನಾ" ಬಾಸಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯುತ್ತಿತ್ತು

ಮೈಂದರ್ಗಿ, ಹುಣಸಿಕಟ್ಟಿ, ಜೇವರ್ಗಿ ಶ್ರೀಗಳವರು ಹಾಗು ಇನ್ನಿತರ ಭಕ್ತರು ಪೂಜ್ಯ ತಪಸ್ವಿಗಳವರ ಬಗ್ಗೆ ಮನೋಹರವಾಗಿ ಭಾಷಣ ಮಾಡಿದರು ಅಮೇಲೆ ಸದರ ಗ್ರಾಮದ ವತಿಯಿಂದ ಶ್ರೀ ಎಲ್ ಜಿ ಪೋಕ ದಾರ ಬಿ ಎ, ಇವರು ಪೂಜ್ಯ ಹೋಟಿಗಿ ಪಟ್ಟಾಧ್ಯಕ್ಷರಿಗೆ ಮಾನಪತ್ರ ಸಲ್ಲಿಸಿ ಮಾಡಿದರು ಶ್ರೀಗಳವರ ಭಾಷಣದೊಂದಿಗೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು

ಈ ಕಾರ್ಯಕ್ರಮಕ್ಕಾಗಿ ಅನೇಕ ಗ್ರಾಮಗಳಿಂದ ಒಂದ ಭಜನಾ ಮಂಡಳಿ ಸಂಘದ ಭಜನಾ ರಭಸವೂ ಮಂಗಲವಾದ್ಯಗಳ ಇಂಪಾದ ನಾದವೂ ಪ್ರಚಂಡ ಜನ ಸಮುದಾಯದ ಆಚಾರ್ಯರ ಜಯಘೋಷವು ಗಗನ ಮಂಡಲದಲ್ಲಿ ಮುಮಧ್ಯಮಿಸಿತು!!

ಸಾಯಂಕಾಲ ೧೧ ಗಂ ಟೆಗೆ ಸರಿಯಾಗಿ ಶ್ರೀಮದ್ವೀರ ಶೈವ ಗುರುಕುಲದ ಸಂಸ್ಥೆಗಳ ವಿದ್ಯಾರ್ಥಿಗಳು "ಜಗದ್ಗುರು ಸಿದ್ಧಲಿಂಗಲೀಲಾ ಎಂಬ ನಾಟಕವನ್ನು ಅಭಿನಯಿಸಿದ ಮೇಲೆ ಪೂಜ್ಯ ಶ್ರೀಗಳವರು ಒರೆದಿರುವೆಂತಹ "ತಿರುವಾಲಂಕಾರ ಚಿಧಾತ್ ಬಂಗಾರಪಟ್ಟಿಲ" ನೀತಿ ನಾಟಕವನ್ನು "ಜಗದ್ಗುರು ಪಂಚಾಚಾರ್ಯ ನಾಟಕ ಮಂಡಳಿ"ಯವರು ಚೆನ್ನಾಗಿ ಅಭಿನಯಿಸಿದರು

ಸದರಿ ಗ್ರಾಮದ ಭಕ್ತರು ಬಂದ ಜನರಿಗೆ ಸನ್ಮಾನವೆಯ್ಯನ್ನು ವಿಸರ್ಜಿಸಿದ ಮೂಲಕ ಎಲ್ಲ ಜನರು ಅವರನ್ನು ಅಭಿನಂದಿಸುತ್ತಿರೆ ಇಂತಹ ಧೋತ್ರಿ ಕ್ಷೇತ್ರದ ಸರ್ವ ಭಕ್ತಜನಸಮುದಾಯಕ್ಕೆ ಶ್ರೀ ಜಗದ್ಗುರು ಪಂಚಾಚಾರ್ಯರು ಸಕಲ ಸನ್ಮಂಗಲವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ,

ಏ. ಈ ಪಟೇಲ ಜೇವರ್ಗಿ

ತುರುವೇಕೆರೆ

ಶ್ರೀ ಜಗದ್ಗುರು ರಂಭಾಪುರೀಸಂಸ್ಥಾನಕ್ಕೆ ಒಳಪಟ್ಟ ತುಮಕೂರು ಜಿಲ್ಲಾ ಕುಂಭಕೋಣದ ಪೆರಿಯ ಮಠಂ ಶ್ರೀ।। ಶಾಂತವೀರೇಸಾರಂಗದೇಶಿಕೇಂದ್ರಸ್ವಾಮಿಗಳವರು ಕುಣಿಗಲ್ ತಾಲ್ಲೂಕು ಯಡಿಯೂರು ಶ್ರೀ।। ಸಿದ್ಧಲಿಂಗಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿ ೩ ತಿಂಗಳು ಅಗತ್ತು ಅಕ್ಟೋಬರ್ ತುರುವೇಕೆರೆ ಪೇಟೆಯವರಾದ ಪಿ. ಎಸ್. ಎಂ. ಪರ್ವತಕ್ಕುತಿಮ್ಮಪಿ ಎಸ್ ಎಂ

ರುದ್ರಪ್ಪಶೆಟ್ಟಿ ಇವರೆ ಮೊದಲಾದವರು ಹೋಗಿ ಸ್ವಾಮಿಗಳಿಗೆ ಬಿನ್ನಹವನ್ನು ಸಲ್ಲಿಸಿದ್ದರಿಂದ ಮೇಲ್ಕಂಡ ಸ್ವಾಮಿಯವರು ತಾ|| ೨೩-೯-೩೦ ನೇ ಶುಕ್ರವಾರ ಸಾಯಂಕಾಲ ೬ ಘಂ ಟೆಗೆ ದಯಮಾಡಿಸಿದರು ತುರುವೇಕೆರೆ ತಾಲ್ಲೂಕು ಅಮಲ್ದಾರರಾದ ಮೂ|| ರಾ|| ಸಿ ಡಿ ಅದಿಮೂಲಂರವರು, ವೀರಶೈವ ಜನಾಂಗದವರು ಮತ್ತು ಎಲ್ಲಾ ಮತಸ್ಥರೂ ಸೇರಿ ಗ್ರಾಮದವನ್ನು ತಳಿರು ತೋರಣ ಚಪ್ಪರಗಳಿಂದ ಅಲಂಕರಿಸಿ ಮಂಗಳವಾದ್ಯಗಳ ವೈಭವದೊಡನೆ ಪೇಟ್ಲಂದ ಸ್ವಾಮಿಗಳವರನ್ನು ವಿಜೃಂಭಣೆಯಿಂದ ಹೊರಪೇಟೆ ಶ್ರೀ ಬಸವೇಶ್ವರದೇವಸ್ಥಾನಕ್ಕೆ ಬಿಜಯಮಾಡಿಸಿಕೊಂಡರು ಸರ್ವಜನಾಂಗದೊಡನೆ ಸಭೆ ಸೇರಿದ್ದಿತು. ತುರುವೇಕೆರೆ ವೀರಶೈವ ಜನಾಂಗದ ಪರವಾಗಿ ಶೃಂಗಿಶೆಟ್ಟಿ ಎಂ ಪರ್ವತಶೆಟ್ಟಿ ಸ್ವಾಮಿಗಳವರ ಸನ್ನಿಧಿಯಲ್ಲಿ ಓದಿದ ಬಿನ್ನವತ್ತಳೆಯನ್ನು ಸಮರ್ಪಿಸಿದನಂತರ ಸ್ವಾಮಿಯವರ ಕಡೆಯ ಎಜಂಟರು ಕುಮಾರ ವೀರಯ್ಯನವರ ಭಾಷಣವಾಯಿತು ಸ್ವಾಮಿಯವರು ವೀರಶೈವ ಮತದ ವಿಚಾರವಾಗಿ ಕೆಲವು ವಿಷಯಗಳನ್ನು ಬೋಧಿಸಿದರು ನಂತರ ಸರ್ವಜನಾಂಗದವರಿಗೂ ಆಶೀರ್ವಾದವನ್ನು ಕೊಟ್ಟು ಆ ದಿವಸ ಕಾರ್ಯ ಮುಕ್ತಾಯಗೊಳಿಸಲ್ಪಟ್ಟಿತು ತುರುವೇಕೆರೆ ಶೃಂಗಿಶೆಟ್ಟಿ ಎಂ ಪರ್ವತಶೆಟ್ಟಿಯು ಈ ಮೊದಲೆ ಬಿನ್ನಹ ಮಾಡಿಕೊಂಡ ಪ್ರಕಾರ ಸ್ವಾಮಿಗಳವರು ತಾ|| ೨೫-೯ ೩೦ ನೇ ಸೋಮವಾರ ಬೆಳಿಗ್ಗೆ ದಯಮಾಡಿಸಿ ಮಂಗಳವಾರ ಸಾಯಂಕಾಲದವರೆಗೂ ರುದ್ರಾಭಿಷೇಕ, ಪಾದಪೂಜಾ ನಡೆದು ಮನೆಯಲ್ಲಿ ಸಂತರ್ಪಣೆಯನ್ನು ನಡೆಯಿಸಲಾಯಿತು ಪರ್ವತಶೆಟ್ಟಿಯು ಇವರ ಕುಟುಂಬದವರು ಸಮರ್ಪಿಸಿದ ಕಾಣಿಕೆಯನ್ನು ಸ್ವೀಕರಿಸಿ ಮಂಗಳಾರತಿನಾದವನ್ನು ಮಾಡಿ ದೇವಸ್ಥಾನಕ್ಕೆ ಬಿಜಯಂಗೈಸಿದರು ತಾ|| ೨೬ ೯ ೩೦ ನೇ ಬುಧವಾರ ದಿವಸ ತಾಲ್ಲೂಕು ಜಮೆತ್ದಾರರವರಾದ ಮೂ|| ರಾ|| ಸಿ ಡಿ ಅದಿಮೂಲಂರವರು ಮನೆಗೆ ಸ್ವಾಮಿಗಳವರನ್ನು ಬಿಜಮಾಡಿಸಿಕೊಂಡು ಪಾದಪೂಜೆ ಮಾಡಿ ೫೦ ರೂಪಾಯಿಗಳ ಕಾಣಿಕೆ ಸಲ್ಲಿಸಿ ಧನ್ಯರಾದರು ಇದರಂತೆಯೇ ಇನ್ನೂ ಅನೇಕ ಜನ ಗುರುಭಕ್ತರು ತಮ್ಮ ಮನೆಗಳಿಗೆ ಬರಮಾಡಿಕೊಂಡು ಸೇವೆ ಸಲ್ಲಿಸಿದರು ತಿಪಟೂರು ತಾಲ್ಲೂಕು ನೊಣವಿನಕೆರೆಯ ವೀರಶೈವ ಜನಾಂಗದವರು ಬಿನ್ನವಿಸಿಕೊಂಡ ಮೇರೆಗೆ ತಾ|| ೨೮-೯ ೩೦ ನೇ ಗುರುವಾರ ಸಾಯಂಕಾಲ ಸ್ವಾಮಿಗಳವರು ನೊಣವಿನಕೆರೆಗೆ ದಯಮಾಡಿಸಿದ್ದಾರೆ ಓರ್ವ ಗುರುಭಕ್ತ

ಪುರಾಣ ಮಹೋತ್ಸವ ಸಮಾರಂಭ
ಪರುತಾಬಾದ

ಗುಲಬರ್ಗಾ ಜಿಲ್ಲಾ ಪರುತಾಬಾದ ಗ್ರಾಮದ ಶರಣ ಬಸವೇಶ್ವರ ದೇವಾಲಯದಲ್ಲಿ ಶ್ರೀ ಶರಣ ಬಸವೇಶ್ವರ ಪುರಾಣವು ಶ್ರಾವಣ ಶು|| ೫ ರಿಂದ ಪ್ರಾರಂಭವಾಗಿ ಭಾ|| ಶು|| ೧೦ ಗೆ ಸಮಾಪ್ತಿಯಾಯ ಗಣಾರಾಧನೆಯೂ ಭಾ|| ಶು|| ೧೧ ಶುಕ್ರವಾರ ಪಲ್ಲಕ್ಕಿ ಉತ್ಸವವೂ ನೆರವೇರಿತು ಪುರಾಣಪಟುಗಳಾದ ನಂದೂರ ತೋಪಣ್ಣಪ್ಪ ಹಿರೇಮಠದ ಮರಿದೇವರು ಓದುವವರು, ವೇ|| ಪಂಡಿತ ಕರಬಸವ ಶಾಸ್ತ್ರಿಗಳು ಹಿರೇಮಠ ಉಡಚಣ ಇವರುಗಳ ಪ್ರವಚನ ದಿಂದ ಪುರಾಣವು ರಸವತ್ತಾಗಿ ನಡೆದಿತೆಂದು ಹೇಳಲು ಸಂತೋಷವೆನಿಸುತ್ತದೆ. ಶುಕ್ರವಾರ ಮಧ್ಯಾಹ್ನ ೩ ಘಂಟೆಗೆ ಈ ಮಹೋತ್ಸವಕ್ಕೆ ಆಗಮಿಸಿದ ನಂದೂರ ತೋಪಣ್ಣಪ್ಪ ಹಿರೇಗುತ್ತಿ ಪಟ್ಟಾಧ್ಯಕ್ಷ ವೈದ್ಯ ಭೂಷಣ ಶ್ರೀ ಸದಾಶಿವಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಜನರ ಭಾಷಣಗಳಾದವು. ವೇ|| ಶಂಕರಾ ನಂದಶರ್ಮ ತೇರಲಂಗಿಮಠ ಇವರು ಭಕ್ತಿ ವಿಷಯವಾಗಿ ಹೇಳಿದರು. ಈ ಮಹೋತ್ಸವಕ್ಕೆ ತೆಳಗುಳ, ಹಗರ ಗುಂಡಿಗಿ, ತೇಗನೂರ, ಕೆರೆಗಾ, ಮರತೂರ ಗ್ರಾಮದ ಅನೇಕ ಜನರು ಆಗಮಿಸಿದ್ದರು ವ್ಯವಸ್ಥಾಪಕರಾದ ಶ್ರೀಮಂತ ಶಾಂತಪ್ಪ ಶಿವಶೆಟ್ಟಿ, ಶ್ರೀ ಶರಣಪ್ಪ ಜಂಜಾ, ಶ್ರೀಬಸಣ್ಣ ಮುನ್ನೂರೆ, ಶ್ರೀ ಶರಣಬಸಪ್ಪ ಪಡಶೆಟ್ಟಿ, ಶ್ರೀ ರಾಚಪ್ಪ ಮಾತಶೆಟ್ಟಿ ಇವರು ಗ್ರಾಮದ ಈ ಕಾರ್ಯವನ್ನು ಭಕ್ತಿಪುರಸ್ಸರವಾಗಿ ಮಾಡಿದ್ದಕ್ಕಾಗಿ ಭಗವತ್ಕಾಪರು ಭಗವಂತನು ಸರ್ವರಾ ಮಂಗಳವನ್ನೀಯಲೆಂದು ಸ್ವರ್ಗಪುರದಲ್ಲಿ ಹಾರೈಸುತ್ತೇನೆ. ಓರ್ವ ಉತ್ಸವಭಾಗಿ.

ವೀರಭದ್ರೇಶ್ವರ ಭಜನ ಸಮಾಪ್ತಿ ಮಹೋತ್ಸವ
ಚಿಕ್ಕನಂದೂರು

ಗುಲಬರ್ಗಾ ಜಿಲ್ಲಾ ಚಿಕ್ಕನಂದೂರ ಶ್ರೀ ವೀರಭದ್ರೇಶ್ವರ ದೇವಾಲಯದಲ್ಲಿ ಇದೇ ಶ್ರಾ|| ೪ನೆ ಗುರುವಾರ ಶಿವ ಭಜನ ಪ್ರಾರಂಭಮಾಡಿ ಭಾ|| ಶು|| ೧೪ ಸೋಮವಾರ ಮುಕ್ತಾಯಗೊಳಿಸಲ್ಪಟ್ಟಿ ಸಮಯದಲ್ಲಿ ಗಣಾರಾಧನೆ ಮಾಡಲ್ಪಟ್ಟಿತು ಶು|| ೧೫ ಮಂಗಳವಾರ ದಿವಸ ಪಲ್ಲಕ್ಕಿ ಉತ್ಸವವು ನೆರವೇರಿತು ಮಧ್ಯಾಹ್ನ ೨ ಘಂಟೆಗೆ ಸ್ವಗ್ರಾಮದ ತೋಪಕಟ್ಟೆ ಹಿರೇಮಠದ ಪಟ್ಟಾಧ್ಯಕ್ಷ ಶ್ರೀ ಸದಾಶಿವಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೆಲಜನರ ಭಾಷಣಗಳಾದವು ಕಡೆಗೆ ಶ್ರೀಗಳವರು ಧರ್ಮ ಮತ್ತು ರಾಜನೀತಿ ಮೇಲೆ ಭಾಷಣ ಮಾಡಿದರು. ಜಯಜಯಕಾರದೊಡನೆ ಸಭೆ ಮುಕ್ತಾಯವಾಯಿತು ಈ ಮಹೋತ್ಸವಕ್ಕೆ ಆಜುಬಾಜು ಗ್ರಾಮದ ಅನೇಕ ಜನರು ಆಗಮಿಸಿದ್ದರು ದೃಂಬವರು ಈ ಕಾರ್ಯವನ್ನು ಭಕ್ತಿಪುರಸ್ಸರವಾಗಿ ಮಾಡಿದರು ಭಗವಂತನು ಸರ್ವರಿಗೂ ಮಂಗಲವನ್ನೀಯಲಿ

ಶಿವಲಿಂಗಪ್ಪ ಪೋಲಿಸ ಪಾಟೀಲ ನಂದೂರು

ಅಬ್ಬಲಗೆರೆ

ಶಿವಮೊಗ್ಗಾ ತಾಲ್ಲೂಕು ಅಬ್ಬಲಗೆರೆ ಗ್ರಾಮವಾಸಿ ಗಳಾದ ಮಃ ಬಣಜಾರ್ ಧರ್ಮಣ್ಣಾಯ್ಕರವರು ಹಿಂದುಳಿದ ಜನಾಂಗದವರಾದಾಗ್ಯೂ ಇವರಲ್ಲಿರತಕ್ಕ ನಯ ವಿನಯ, ಭಯ-ಭಕ್ತಿ, ಹರ-ಗುರುಸೇವೆ, ಧರ್ಮಾಚರಣೆಯೇ ಮೊದಲಾದ ಸದ್ಗುಣಗಳು ವರ್ಣನಾತೀತ ವಾಗಿವೆ

ಭಕ್ತಿಗೆ ಭಜನೆಯೇ ಕಾರಣ ಮುಕ್ತಿಗೆ ಗುರು ಕೃಪೆಯೇ ಕಾರಣವೆಂಬಂತೆ ಇವರು ತಾ|| ೩-೯-೩೦ನೇ ದಿವಸ ಸ್ವರ್ಗಪದಲ್ಲಿ ತಳಲುತೋರಣಗಳಿಂದಲಂಕೃತವಾದ ಮಂಟಪವನ್ನು ರಚಿಸಿ ಪುರಪ್ರಮುಖರು ದೈವಭಕ್ತರೂ ಆದ ಶ್ರೀ ಪಟೇಲ ಶಾನುಭೋಗರು, ಸ್ಟೂಲ ಮಾಸ್ತರ ಹಾಗೂ ಇನ್ನು ಲೆಂದ ಒನರ ಸಹಾಯದಿಂದ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಯನ್ನಾ ಶಿವಭಜನೆಯನ್ನೂ ಒಳ್ಳೆ ಭಕ್ತಿಯಿಂದ ನಡೆಯಿಸಿ ಸಮಾಪ್ತಿಯ ಸಮಯದಲ್ಲಿ ಪ್ರಭಾವೋಪಣಕ್ಕೋಸ್ಕರ ೧ ರೂ. ಸಮರ್ಪಿಸಿದರು ಶ್ರೀ ಜಗದ್ಗುರು ಪಂಚಾಚಾರ್ಯರು ಧರ್ಮಾನ್ಯಾಯ್ಕರವರಿಗೂ ಇವರ ಕುಟುಂಬಕ್ಕೂ ಉತ್ತರೋತ್ತರ ಅಭಿವೃದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇನೆ

ಎಮ್ ಹಾಲಸಿದ್ದಯ್ಯಾ

ಚಿಕ್ಕನೆರಗುಂದ

ಧಾರವಾಡ ಜಿಲ್ಲಾ ನರಗುಂದ ಪೇಠಾ ಪೈಕಿ ಚಿಕ್ಕ ನರಗುಂದ ಗ್ರಾಮದ ಎಲ್ ಬಿ ಕುಲಕರ್ಣಿಯವರು ತಮ್ಮ ಗೃಹದಲ್ಲಿ ಮಹಾರುದ್ರಾಭಿಷೇಕ ಮತ್ತು ಪಾದ ಪೂಜೆಯನ್ನು ಮಾಡುವುದರ ಸಲುವಾಗಿ ಶ್ರೀ|| ಷ|| ಬ್ರ|| ಪಟ್ಟದ ಸ್ವಾಮಿಗಳು ಹಿರೇಮಠ ಕೊಣ್ಣೂರು ಇವರನ್ನು ಕರೆಯಿಸಿ ಇದೇ ವಿಳ್ಯತಿನಾಮಸಂವತ್ಸರ ಭಾದ್ರಪದ ಶು|| ೪ ಶುಕ್ರವಾರದಿಂದ ಪ್ರಾರಂಭಮಾಡಿ ಇದೇ ಭಾದ್ರಪದ ಶು|| ೧೪ ಚಂದ್ರವಾರಕ್ಕೆ ಒಳ್ಳೇ ವೈಭವದಿಂದ ಪೂರ್ತಿ ಗೊಳಿಸಿದರು. ಈ ಸತ್ಕರ್ಮದಲ್ಲಿ ಅಕ್ಕಂತ ಭಕ್ತಿಶ್ರದ್ಧೆ ಯನ್ನು ಪಡಿಸಿದ ಎಲ್. ಬಿ. ಕುಲಕರ್ಣಿಯವರಿಗೂ ಅವರ ಯಾವತ್ತು ಕುಟುಂಬವರ್ಗಕ್ಕೂ ಶ್ರೀ ಜಗದಾ ಚಾರ್ಯರು ಆಯುಷಾರೋಗ್ಯಭಾಗ್ಯಾದಿ ಸಕಲ ಸಂಪ ತ್ಸಮೃದ್ಧಿಯಷ್ಟುಂಟುಮಾಡಲೆಂದು ಹಾರೈಸುವ,

ಸಿದ್ದಪ್ಪ ಗೆವಿ, ಚಿಕ್ಕನೆರಗುಂದ

ಸೂಚನೆಗ್ಯಹಪ್ರತ್ಯವೇಚಸಮಾರಂಭ, ಬೀರೂರು

ಶರೀರಕೆರೆಯಲ್ಲಿರುವ ವಿ. ಆರ್. ವೀರಭದ್ರಯ್ಯನವರು ಬೀರೂರಿನಲ್ಲಿ ಸೂಚಕವಾಗಿ ಕಟ್ಟಿಸಿರುವ ಗೃಹಪ್ರತಿಷ್ಠೆಯನ್ನು ಇದೇ ಭಾದ್ರಪದ ಬಾ|| ೮ ರಲ್ಲಿ ಶ್ರೀ ಕಲ್ಯಾಣದ ಪ್ರಭು ಸ್ವಾಮಿಗಳ ನೇತೃತ್ವದಲ್ಲಿ ಜರುಗಿತು ಪ್ರಭುಲಿಂಗಾತ್ಮಜ

ವಿದ್ಯಾರ್ಥಿನಿಲಯ ವೃಂದಕ್ಕೆ ಸಂತರ್ಪಣೆ ಏರ್ಪಡಿಸಿದ್ದವರ ಪ್ರಭಾವೋಪಣಕ್ಕಾಗಿ ೫ ರೂಪಾಯಿಗಳನ್ನು ಅರ್ಪಿಸಿದರು ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಯಿಂದ ನೂತನ ಗೃಹವು ಅಭಿವೃದ್ಧಿಯಾಗಿ ಮೆರೆಯಲೆಂದು ಹಾರೈಸುತ್ತೇವೆ

ಸಿ|| ಬಸವಲಿಂಗಯ್ಯಶಾಸ್ತ್ರಿಗಳು
ಪ್ರಭುಲಿಂಗಾಶ್ರಮದ ವೇದಾಧ್ಯಾಪಕ ಬೀರೂರು

ಭಾರತಕ್ಕೆ ೩ ಲಕ್ಷ ಟೆನ್ ಆಹಾರ ಪದಾರ್ಥಗಳು

ಈ ಮಾಸದಲ್ಲಿ ಹೊರದೇಶಗಳಿಂದ ಭಾರತವು ೩,೨೭,೦೫೦ ಟೆನ್ ಆಹಾರ ಪದಾರ್ಥಗಳ ಆಮದನ್ನು ನಿರೀಕ್ಷಿಸಿದೆ ಎಂದು ತಿಳಿದು ಬಂದಿದೆ.

ಬ್ಯಾಂಕ್‌ಗಳಲ್ಲಿ ಭಾರೀ ಕಳವು
೧,೩೦,೦೦೦ ಸಹಸ್ರ ರೂಪಾಯಿಗಳ ಮಾಯ

ಒಟ್ಟು ೧,೩೦,೦೦೦ ಸಹಸ್ರ ರೂ ಬೆಲೆಬಾಳುವ ಕರೆನ್ಸಿ ನೋಟುಗಳ ಭಾರೀ ಕಳುವಾಗಿದೆ ಎಂದು ಮುಂಬೈನ ಎರಡು ಬ್ಯಾಂಕುಗಳು ಕಳೆದ ಶುಕ್ರವಾರ ಪೋಲೀಸರಿಗೆ ದೂರು ಇತ್ತಿವೆ

ಅದೇದಿನ ಮಧ್ಯಾಹ್ನದ ವ್ಯವಹಾರಗಳು ಮುಗಿದ ನಂತರ ಬೌಲೆರ್ಡ್‌ರ ಪ್ರದೇಶದಲ್ಲಿದ್ದ ಒಂದು ಬ್ಯಾಂಕ್ ನಲ್ಲಿ ೪೦ ಸಹಸ್ರ ರೂ.ಗಳ ಕೋಟೆ ಪ್ರದೇಶದಲ್ಲಿದ್ದ ಒಂದು ಬ್ಯಾಂಕಿನಿಂದ ೮೦ ಸಹಸ್ರ ರೂ ಗಳ ಕರೆನ್ಸಿ ನೋಟುಗಳು ಕಳುವಾಗಿರುವುದು ಕಂಡುಬಂದಿತು. ಬ್ಯಾಂಕಿನ ಇಬ್ಬರು ಅಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿದೆ

ಸಿದ್ಧಾಂತ ಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಷಣಗದ್ದು ಮರೀಡಾಹಾಚಾರ್ಯರು ಜಗದ್ಗುರುತಾರದ ಆಗಮ್ಯಗುಹಸಿರ್ಗಳಿಗೆ ವೀರಶೈವವಿದ್ಧಾಂತವನ್ನು ಅಚಾರವಿಚಾರಮಾಡಿ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಶಕ್ಯ ಬೋರೆಯಂತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೩೫ಸಾವಿರ ವರ್ಷಗಳ ಪೂರ್ವದಲ್ಲಿಯೆ ಶ್ರೀಶಿವಯೋಗಿವಾಣಾರ್ಯರಿಂದ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವೆಂದರೆ ಅತಿಶಯೋಕ್ತಿಯಾಗಲಾರದು ಇಂದಿನವರೆಗೆ ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನವಸ್ತುವಿಯಾದರೂ ಗಹಭಾರ್ಥಗಳಿಂದ ಕೂಡಿ ಕ್ಲಿಷ್ಟ ಳಗಳಿಗೆ ಸರಿಯಾದ ಅರ್ಥವನ್ನು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ಪೂರೈಸಬೇಕುವುದಕ್ಕಾಗಿ **ಹಿಂದಿನ ಶ್ರೀಅಕ್ಷರಿಚಾರ್ಯ ಶಾಸ್ತ್ರಿಗಳೆವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಸ್ಪಷ್ಟ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಹಿಂದೀಭಾಷೆಯಿಂದಲೇ ಬರೆದಿರುವ ಕಾರಣ ಕನ್ನಡ ಜನರಿಗೆ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಾಂತಶಿಖಾ ವಿಷಯಾಸಕ್ತಿಮಹೇಯಾಂ ಕ್ಲಿಷ್ಟಾಸುಸ್ಪಷ್ಟಗೊಳಿಸಿ ಈ ಗ್ರಂಥವನ್ನು ಕುಸ್ಪಷ್ಟಗೊಳಿಸಿದ್ದಾರೆ ಈ ಗ್ರಂಥವು ಒಟ್ಟು ೨೩೩ ಪುಟಗಳಿಂದ ಕೂಡಿದ್ದು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂಪಾದಕರಾಗಿ ಶ್ರೀಜಗದ್ಗುರುತೋಂಟದಾರ್ಯರಿಂದ ಲೀಲಾಪ್ರಸಾದ ಪಟ್ಟಾಭಿಷಿಕ್ತರಾಗಿರುವ ಶ್ರೀಮದ್ವಿಶ್ವಾರಾಧ್ಯ ಸೋಮಶೇಖರಶಿವಾಚಾರ್ಯರು ಪೀಠಿಕೆಯನ್ನು ಬರೆದಿರುವುದು ಗ್ರಂಥಕ್ಕೆ ಶೋಭೆಯನ್ನುಂಟುಮಾಡಿದೆ. ಕೈವಲ್ಯಪಥಪ್ರಕಾಶಕರಾದ ಶ್ರೀಮದ್ವಿಶ್ವಾರಾಧ್ಯ ಯತಿ ಈ ಅಮೂಲ್ಯಗ್ರಂಥವನ್ನು ವೀರಕೈವಲ್ಯಪುರದ ಅಕ್ಕಿಪಾ ಓಕರು. **ಬೆಲೆ ೨ ರೂಪಾಯಿ.**

ವ್ಯವಸ್ಥೆಯವರು—
ಶ್ರೀಜಂಗಮಾಚಾರ್ಯರ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

Edited, Printed and Published by Brahmasmath Mahadevaiah at Shri Panchacharya Electric Press, Sayaji Rao Road, Mysore.

REGISTERED No. M. 2266 ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವತಪಂಚಜಾತಜನಿಕರ್ ಪಂಚಾಸ್ಯಪೀಠಾಧಿಕರ್ । ಪಂಚಕ್ಲೇಶವಿನಾಶಕರ್ ಪರಕರ್ತಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಧಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬ್ರ॥ ಮಹಾದೇವಯ್ಯನವರು ೨ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೬ ನೇ ಅಕ್ಟೋಬರ್ ೧೯೩೦ [ಸಂಚಿಕೆ ೨೬

ಶ್ರೀಶೈಲಶ್ರೀಜಗದ್ಗುರು ನಾಗೀಶಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ದಸರಾಮಹೋತ್ಸವ

ಪ್ರತಿವರ್ಷ ಪದ್ಧತಿಯಂತೆ ನಡೆಯುವ ಶ್ರೀಜಗದ್ಗುರು ನಾಗೀಶಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ದಸರಾಮಹೋತ್ಸವವು ಈ ವರ್ಷ ಶಿವಮೊಗ್ಗಾ ಜಿಲ್ಲಾ, ಚೆನ್ನಗಿರಿ ತಾ॥ ಚೆನ್ನಾ ಪುರದಲ್ಲಿ ವೈಭವದಿಂದ ನಡೆಯುವದು

ವಿಜಯದಶಮಿಯ ದಿನ ಪಂಡಿತರಿಗೂ, ಇನ್ನಿತರ ಸಮಾಜಮುಂದಾಳುಗಳಿಗೂ, ಸಂಸ್ಥಾನದ ಉದ್ಧಾರಕರಿಗೂ ಬಿರುದುಗಳು ಅನುಗ್ರಹಿಸಲ್ಪಡುವುವು

ಶ್ರೀಜಗದ್ಗುರುಗಳವರ ಸಮಸದೇಶ ಕುಭಾಕೀರ್ತಾದಿ ಗಳಿಗೆ ಪಾತ್ರರಾಗಲು ಸರ್ವರಲ್ಲಿಯೂ ಅರಿಕೆ

ಸಂಸ್ಥಾನದ ಪ್ರತಿನಿಧಿಗಳು
ಹೊ॥ ಹಾ॥ ಶ್ರೀ ಸಿದ್ಧಲಿಂಗಸ್ವಾಮಿಗಳು

ನವರಾತ್ರಿಯ ಕಾರ್ಯಕ್ರಮ ಕುಂಜಗೋಳ

ಕುಂದಗೋಳ ಸಂಚಿಗ್ರಹ ಹಿರೇಮಸಿದಲ್ಲಿ ಸದರಿ ಮಠದ ಪಟ್ಟಾಧಿಕಾರಿಗಳಾದ ಶ್ರೀ॥ ಪ॥ ಬ್ರ॥ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿ ಒಡಾಮಿ ತಾಲೂಕ ವೈಕೆ ಗುಳೆದಗುಡ್ಡದ ಅತ್ಯಾಶ್ರಮವಿದ್ಯಾ ವಿಭೂಷಿತ, ಶ್ರೀ ಅಮರೇಶ್ವರಸ್ವಾಮಿಯವರ ಪ್ರವೇಚ ನವು ಇದೇ ಅಶ್ವಿಜ ಶು॥ ೧ (ತಾ॥ ೧೨ ೧೦-೩೦) ಗುರುವಾರ ಮೊದಲ್ಗೊಂಡು ತಾ॥ ೧೯-೧೦-೩೦ ನೇ ಗುರುವಾರದ ವರೆಗೆ ಪ್ರತಿದಿನ ಸಾಯಂಕಾಲ ೪ ಘಂಟೆ ಯಿಂದ ೧೦ ರ ವರೆಗೆ ಅಸ್ಖಲಿತವಾಣಿಯಿಂದ ಸುಶ್ರಾವ್ಯ ವಾಗಿ ನಡೆಯುವದಲ್ಲದೆ ತನ್ಮೂಲಕ ಸಮುದಾಯಾನುಸಾರ ಸದರಿ ಮಠದ ಸ್ವಾಮಿಗಳ ಸಮುಪದೇಶಗಳು ಬೇರೆ ಬೇರೆ ಪಂಡಿತರ ಭಾಷಣಗಳೂ ಜರುಗುತ್ತವೆ ಕಾರಣ ಇಂಥ ಮಹತ್ಕಾರವಾದ ಸದ್ಯೋಧಸುಸಂಧಿಯನ್ನು ಕಳೆದು ಕೊಳ್ಳದೇ ಸಮಸ್ತ ಶ್ರೀ-ಭಕ್ತಾದಿಗಳು ಸಕಾಲಕ್ಕೆ ಬಂದು ಲೇಳಿ ಧನ್ಯರಾಗಬೇಕಾಗಿ ಆಶಿಸುತ್ತೇವೆ

ಮಠದ ಸ್ವಾಮಿಗಳು

ಶ್ರೀಜಗದ್ಗುರು ಪಂಚಾಚಾರ್ಯ ಭಜನೆ ಸಮಾಪ್ತಿ ಮಹೋತ್ಸವ, ಗಾರವಾಡ ಹಡಗಲಿ.

ವಿಶ್ವಾವಸುನಾಮಸಂವತ್ಸರ ಭಾದ್ರಪದ ಶು॥ ೧ ಬಿಧವಾರ ಗಾರವಾಡ ಜಿಲ್ಲಾ, ರೋಣ ತಾಲೂಕು, ಹಡಗಲಿ ಗ್ರಾಮದಲ್ಲಿ ಪ್ರತಿವರ್ಷ ಪದ್ಧತಿಯಂತೆ ಶ್ರಾವಣಮಾಸದ ಶ್ರವಂಚಾರ್ಯ ಭಜನ ಸಮಾಪ್ತಿನಿಮಿತ್ತವಾದ ಮಹಾ ಗಣಾರಾಧನೆ ವಿಘ್ನಬಾಧೆಯಿಂದ ನೆರವೇರಿಸಲ್ಪಟ್ಟಿತು. ಇಂದು ಪ್ರಾತಃಕಾಲ ಶ್ರೀ ಭಗವತ್ಪಾದರವರ ಭಾವಚಿತ್ರ ನನ್ನು ಮನೋಹರವಾದ ಮಂಟಪದಲ್ಲಿ ಮೂರ್ತಗೊಳಿಸಿ ವಿಧಾನೋಕ್ತವಾಗಿ ಅರ್ಚಿಸಿ, ಅಭಿವಂದಿಸಿ, ಪ್ರಾರ್ಥಿಸಿ, ಪ್ರಸಾದವನ್ನು ವಿಘ್ನೋಗಿಸಿದನಂತರ ಸಾಯಂಕಾಲ ಪ್ರಮುಖಜನಗಳ ಆಗ್ರಹದಮೇರೆಗೆ ಇಳ್ಳಿಯ ಬೃಹನ್ಮಠ ರಾಧಿಪತಿಗಳಾದ ಶ್ರೀ॥ ಪ॥ ಬ್ರ॥ ಪಟ್ಟಾಧ್ಯಕ್ಷ ಸಂಗ ಮೇಶ್ವರ ಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು ಶ್ರೀಗಳವರು ಜಗದಾಚಾರ್ಯರ ನಾಮ ಸಂಕೀರ್ತನೆಯ ಮಹತ್ವವನ್ನು ಪ್ರತಿವರ್ಷ ಆಯಾಯ ಸೂಸ ತಿಥಿಗಳಲ್ಲಿ ಎಲ್ಲರು ತಪ್ಪದೇ ಆಚರಿಸಬೇಕಾದ ಶ್ರೀರೇಣುಕಾದಿಪಂಚಾಚಾರ್ಯರ ಜಯಂತಿಮಹೋತ್ಸವ ದ್ವೇಷವನ್ನು ಕುರಿತು ವಿಚಾರಪೂರಿತ ಉಪದೇಶವನ್ನು ಮಾಡಿ ನೆರೆದ ಭಕ್ತವೃಂದವನ್ನು ಆನಂದಗೊಳಿಸಿದರು. ನಂತರ ಶ್ರೀಸಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟರುವ ಪ್ರಾಚೀನವೀರಶೈವಧರ್ಮದ ನಿಜತತ್ವಗಳನ್ನು ತಿಳಿಯುವ ಬಹುಜನರು ಹಲವು ರೀತಿಯಾಗಿ ನರ್ತಿಸುತ್ತಿರುವುದನ್ನು ಕಂಡು ಕರ್ನಾಟಕ ಆಂಧ್ರಮಹಾರಾಷ್ಟ್ರ ಮೊದಲಾದ ಪ್ರಾಂತಗಳಲ್ಲಿ ಸಂಚರಿಸಿ ಸನಾತನ ವೀರಶೈವಮತದ ಮೂಲತತ್ವಗಳನ್ನು ಸರ್ವತ್ರ ಪ್ರಚಾರಮಾಡುವ ಸಮ ಯದಲ್ಲಿ ನಾನಾವಿಧ ಕಷ್ಟನಷ್ಟಗಳು ಪ್ರಾಪ್ತವಾದಾಗ್ಯೂ ಧೈರ್ಯಗೆಡದೆ ಪಂಚಾಚಾರ್ಯರ ವಿಜಯಧ್ವಜಗಳನ್ನು ಭರತಖಂಡದಲ್ಲೆಲ್ಲ ಮೆರೆಯಿಸಿ ಕೊನೆಗೆ ಪರಿವಧ್ವಜ ಸಮರಸಹೊಂದಿದ ಗುರುಕುಲಾವತಂಸ ಲೋಕಮಾನ್ಯ ನಾಗನೂರು ಬೃಹನ್ಮಠಾಧ್ಯಕ್ಷ ಪಂಡಿತ ಶ್ರೀಶಾಶೀನಾಥ ಶಾಸ್ತ್ರಿಗಳವರ ಸಮಾಧಿಯ ಮೇಲೆ ಪಂಚಲಿಂಗೋದ್ಭವನ ಮೂರ್ತಿಸ್ಥಾಪನೆಯೆಂಬ ಅತ್ಯಾವಶ್ಯಕವೆಂದು ರರಾಯಿಸಿ ಜಗದ್ಗುರು ಸಂಚಾಚಾರ್ಯರ ಜಯಘೋಷಮಾಡಿನೆ ಸಭೆ ಮುಕ್ತಾಯಗೊಳಿಸಿದರು

ದಾನಪ್ಪ ಹೊನ್ನಪ್ಪ ನಡ್ವಿನ

ಶ್ರಾವಣಮಾಸದ ಅನುಷ್ಠಾನ ಪರಿಸಮಾಪ್ತಿ ಶ್ರೀಕ್ಷೇತ್ರ ಕಲ್ಲೂರು

ಗದಗ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರ ಸ್ಥಾಪಕರೂ ಧರ್ಮಬೋಧಕರೂ ಆದ ಶ್ರೀ॥ ಪ॥ ಬ್ರ॥ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು ಗುರುಸಂಸ್ಥಾನ ಬೃಹನ್ಮಠ ಚಿಕ್ಕಮಣ್ಣೂರು ಈ ಮಹನೀಯರು ಸೈಜಾಂ ಸ್ಟೇಟ್ ಉಳ್ಳೂರು ಗ್ರಾಮದಲ್ಲಿ ಇದೇ ಶ್ರಾವಣ ಮಾಸದ ತಮ್ಮ ಶ್ರೀ ರುದ್ರಾಭಿಷೇಕ ಶ್ರೀ ಸದ್ಧಾರ್ಮಿಕಾಮಣಿ ನಾರಾಯಣದೊಂಡಿಗೆ ಅನುಷ್ಠಾನವನ್ನು ಕೈಕೊಳ್ಳುವ ರಿಂದ ವಿಷಯವು ಪ್ರಭಾಪತ್ರಿಕೆಯಲ್ಲಿ ಪ್ರಸಿದ್ಧವಾಗಿರುವ ದಷ್ಟೆ ? ಆ ಪ್ರಕಾರ ಅನುಷ್ಠಾನವು ಯಾವ ವಿಘ್ನವಿಲ್ಲದೆ ಸಂಗನುವಾಗಿ ನೆರವೇರಿತು ಆ ಭಾಗದಲ್ಲಿ ಬಹು ಪುರಾ ತನ ಕಾಲದಿಂದ ಪ್ರಸಿದ್ಧವಾದ ಕಲ್ಲೂರು ಗ್ರಾಮದಲ್ಲಿರುವ ಶ್ರೀ ಕಲ್ಲಿನಾಥೇಶ್ವರ ಮಂದಿರವು ಉನ್ನತವಾದ ಗೋಪುರದಿಂದಲೂ ದಟ್ಟವಾಗಿ ಬೆಳೆದ ಬಳ್ಳಿವೃಕ್ಷಗಳಿಂ ದಲೂ ವೀರಮಾಹೇಶ್ವರರ ಸಮೂಹದಿಂದಲೂ ವೀರಶೈವ ರಿಗೆ ಪವಿತ್ರಸ್ಥಾನವಾಗಿ ಕಂಗೊಳಿಸುತ್ತಿರುವದನ್ನು ನೋಡಿ ಸದರಿ ಶ್ರೀಗಳವರು ಕಲ್ಲೂರು ಗ್ರಾಮದ ಕಲ್ಲಿನಾಥೇಶ್ವರ ದೇವಸ್ಥಾನಕ್ಕೆ ಆಗಮಿಸಿದರು ಆ ಗ್ರಾಮದ ಪ್ರಮುಖರೂ ಗುರುಪೀಠಾಭಿಮಾನಿಗಳೂ ಆದ ಶ್ರೀ ಆಡಿವೆಪ್ಪಗೌಡರು ಮಾಲಿಪಾಟೀಲ ಇವರು ಶ್ರೀಗಳವರನ್ನು ಸೂತಕವಾಗಿ ಕಟ್ಟುಸಿಯುವ ತಮ್ಮ ಗೃಹಕ್ಕೆ ಒರಮಾಡಿಕೊಂಡರು ೩-೪ ದಿವಸ ದೇವ ಸ್ಥಾನದಲ್ಲಿ ಸಭೆ ನಡೆಯಿತು. ಸರ್ವಧರ್ಮಸಮನ್ವಯ ಈ ವಿಷಯವಾಗಿ ಶ್ರೀಗಳವರು ವಿಶದವಾಗಿ ಸಂಗೀತ ರಹಸ್ಯದೊಡನೆ ಬೋಧಮಾಡಿದರು ಭಾದ್ರಪದ ಶು॥ ೪ ಗೆ ಶ್ರೀಗಳವರು ತಮ್ಮ ಅನುಷ್ಠಾನದ ಪರಿಸಮಾಪ್ತಿ ಯನ್ನು ಸದರಿ ಪಾಟೀಲರ ನೂತನ ಗೃಹದಲ್ಲಿ ಅಷ್ಟ ಸಂತರ್ಪಣೆಯೊಂದಿಗೆ ಪೂರ್ತಿಗೊಳಿಸಿದರು

ಶ್ರೀ ಚಿಕ್ಕಮಣ್ಣೂರು ಶ್ರೀಗಳವರು ಸೈಜಾಂ ಪ್ರಾಂತದ ಎರಿಹಂಚಿನಾಳ, ಬಿಜ್ಜೂರು, ಚಿಕ್ಕೇನಕೊಪ್ಪ, ಸೊಂಪುರ, ಸಿದ್ಧೇಶ್ವರಪ್ಪ, ಕುಕನೂರು, ಗುದ್ದೆಪ್ಪನ ಮಕ, ಆಡೂರು, ರಾಜೂರು, ಕಲ್ಲೂರು ಮೊದಲಾದ ಗ್ರಾಮಗಳಲ್ಲಿ ಸಭೆಗಳನ್ನು ಮಾಡಿ ಗದಗಿನಲ್ಲಿ ಸ್ಥಾಪಿ ರಿಯನ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರದ ಕಟ್ಟಡದ ಬಗ್ಗೆ ಕಾಣಿಕೆಯನ್ನು ಸ್ವೀಕರಿಸಿ ಈಗ ಸಂಗನಾಳ ಗ್ರಾಮಕ್ಕೆ ದಯಮಾಡಿಸಿದ್ದಾರೆ. ಅಲ್ಲಿಯೂ ೩-೪ ಸಭೆಗಳನ್ನು ಮಾಡಿ ಕಾಣಿಕೆಯನ್ನು ಪಡೆದು ಅಲ್ಲಿಯ ಪ್ರಮುಖರೂ ಗುರುಪೀಠಾಭಿಮಾನಿಗಳೂ ಆದ ಶ್ರೀ ಅಯ್ಯನಗೌಡರು ಪಾಟೀಲ ಹಾಗೂ ಯಾವತ್ತೂ ಭಕ್ತಮಾಹೇಶ್ವರರಿಗೆ ಸರ್ವಿಟನ ವ್ಯವಸ್ಥೆಯನ್ನು ಪಟ್ಟಿಸಿ ತಮ್ಮ ಸಂಕಲ್ಪದಂತೆ ಕನ್ನಡಿಗರ ರಾಜಧಾನಿಯಾದ ಮೈಸೂರ ನಗರದಲ್ಲಿ ನಾಗನೂರ ಬ್ರ॥ ಪಂ॥ ಶ್ರೀಶಾಶೀ ನಾಥಶಾಸ್ತ್ರಿಗಳವರ ನೇತೃತ್ವದಲ್ಲಿ ಈವಳಗಾಗಿ ಮೈಸೂರ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳವರಿಂದ ಶಿಲೆ ಯಲ್ಲಿ ತಯಾರಿಸಿದ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿ ಹಾಗೂ ನಂದಿಸಮೇತ ತಯಾ ರಾದವುಗಳನ್ನು ತರುವದಕ್ಕೊಸ್ಕರ ಮೈಸೂರ ರಾಜಧಾ ನಿಗೆ ದಯಮಾಡಿಸಿದರು.

ಧರ್ಮಾಭಿಮಾನಿ

ಕನಿಷ್ಟ ವೇತನ ನೂರು ರೂ. ಗಳು ಇರಬೇಕು

ಒಬ್ಬ ಮನುಷ್ಯನ ಜೀವನಕ್ಕೆ ಆವ್ಯಾವಶ್ಯಕವಾಗಿ ಬೇಕಾಗುವಷ್ಟು ಅಂದರೆ ಕನಿಷ್ಟ ವೇತನ ತಿಂಗಳಿಗೆ ನೂರು ರೂ ಗಳಿಗೆ ಮಿಗದೆ ಇರಬೇಕು. ಅಂತೆಯೇ ಜಮಾನುದಾರರಿಗೆ ಕನಿಷ್ಟವಪ್ಪ ೧೩॥ ಎಕರೆಗೆ ಇಷ್ಟೆ ಇಪ್ಪತ್ತೆ ೩೦ ಎಕರೆಗೆ ಮಿಗದೆ ಇರಬೇಕು ಎಂದು ನೋಟಿಸಿಸ್ಸ ಜಾಯಕರಾದ ಶ್ರೀ ಶೈಕ್ರಾಷ್ ಹಾರಾ ಯಣಶಾಸಿಯಿಸಿದ್ದಾರೆ.

ಸೂಚನೆ

ಪ್ರತಿವರ್ಷ ಹಬ್ಬಿಕೆಯಂತೆ ನವರಾತ್ರಿ ಮಹೋತ್ಸವ ನಿಮಿತ್ತವಾಗಿ ನುಂದಿನವಾರದ (ತಾ|| ೨೩-೧೦-೧೯೫೦) ಪತ್ರಿಕೆಯು ಪ್ರಕಟಿಸಲಾಗುವುದಿಲ್ಲ

ಸಂಪಾದಕರು

ಪಂಚಾಚಾರ್ಯಪ್ರಭಾ

೧೯೫೦ನೆಯ ಅಕ್ಟೋಬರ್ ತಾ ೧೬ನೇ ಸೋಮವಾರ

ಭಕ್ತನ್ನಲದಲ್ಲಿ ಹೇಳಲ್ಪಟ್ಟ ಅಂಗಸ್ಥಲಗಳ ವಿಚಾರ

ಆ ಗುರುಕಾರುಣ್ಯಸ್ಥಲ

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಸಂಸಾರದಲ್ಲಿ ಹೇಯಬುದ್ಧಿಯು ಉತ್ಪನ್ನವಾದ ನಿರ್ಮಲಾಂತಃಕರಣವೂ ಶರೀರಾತ್ಮವಿವೇಕವುಳ್ಳವನೂ, ವಿರಾಗಿಯೂ ಆದ ಸಾಧಕನು ಸಮಸ್ತ ಸಂಸಾರದೋಷ ಗಳನ್ನು ನಾಶಮಾಡುವ ಮಹಾಲಿಂಗವನ್ನು ತಿಳಿಯಲಿಚ್ಛೆಯುಳ್ಳವನಾಗಿ ಜಗದ್ಬಿಲ್ಬಾತ್ಮನೂ, ಲೋಭಮೋಹ ವಿದೂರನೂ ಜೀವಾತ್ಮಪರಮಾತ್ಮರ ಯಥಾರ್ಥಸ್ವರೂಪ ವನ್ನು ತಿಳಿದವನೂ, ನಿಷಯಭೃಮದಿಂದ ವಿಮುಕ್ತ ನಾದವನೂ, ಶಿವಾದ್ವೈತಸಿದ್ಧಾಂತಸ್ವರೂಪವನ್ನು ತಿಳಿ ದವನೂ, ನಾನಾವಿಧಸಂಶಯ,ಗಳಿಂದುತ್ಪನ್ನವಾದ ವಿಭ್ರಮಗಳನ್ನು ದೂರಮಾಡುವವನೂ ಸಮಸ್ತ ತಂತ್ರಗಳ ಪ್ರಯೋಗನನ್ನು ಬಲ್ಲವನೂ, ಶಿವಧರ್ಮನಿಷ್ಠನೂ, ಸತ್ಯವಾದಿಯೂ, ಶಿಷ್ಯಸಂಪ್ರದಾಯವಿಶಿಷ್ಟಪವಿತ್ರಗುರು ಸ್ಥಲ (ಆಚಾರ್ಯ) ವಂಶಪರಂಪರೆಯಿಂದ ಪ್ರಾಪ್ತವಾದ ಆಚಾರಧರ್ಮಗಳುಳ್ಳವನೂ, ಕುಪ್ಪಿಸಾತಾಚಾರಿಗಳಿಂದ ದೂರೀಕೃತನಾದವನೂ, ಶಿವಧ್ಯಾನಾಸಕ್ತನೂ ಶಾಂತನೂ ಶಿವಸ್ವರೂಪವನ್ನು ಬಜ್ಜವನೂ ಭಸ್ಮೋದ್ಧೂಲನದಲ್ಲಿ ನಿಷ್ಣಾತನೂ, ಭಸ್ಮಸ್ವರೂಪವನ್ನು ಒಲ್ಲವನೂ, ಭಸ್ಮ ಪ್ರಸೃಂಡ್ಯಧಾರಣದಲ್ಲಿ ಇಚ್ಛೆಯುಳ್ಳವನೂ, ರುದ್ರಾಕ್ಷಿ ಮಾಲಿಕೆಗಳನ್ನು ಧರಿಸಿದವನೂ, ಶಿವಲಿಂಗಧಾರಣದಿಂದ ಯುಕ್ತನಾದವನೂ ಶಿವಲಿಂಗಾರ್ಚನೆಯಲ್ಲಿ ನಿರತನಾದ ವನೂ, ಲಿಂಗಾಂಗಸಾಮರಸ್ಯ (ಶಿವಜೀವೈಕ್ಯ) ಸ್ವರೂಪ ವನ್ನು ತಿಳಿದವನೂ, ಶಿವಾದ್ವೈತವಾಸನೆಯಲ್ಲಿ ಮಗ್ನ ನಾದವನೂ, ಅಂಗಸ್ಥಲ-ಲಿಂಗಸ್ಥಲತ್ಯಕ್ತಗಳಾದ ನೂರೊಂದು ಸ್ಥಲಗಳ ಭೇದಸ್ವರೂಪವನ್ನು ತಿಳಿದವನೂ, ಸದಾ ಮಂಗಲವಚಿನಗಳನ್ನಾಡುವವನೂ ಆದ ಶ್ರೀಗುರು ವನ್ನು ಆಶ್ರಯಿಸಬೇಕು. ಶಿಷ್ಯನು ಭಯಭಕ್ತಿಗಳಿಂ ದೊಡಗೂಡಿ ಆರುಷಿಂಗಳುಗಳವರೆಗಾಗಲಿ, ಒಂದು ವರ್ಷದ ವರೆಗಾಗಲಿ, ಎಲ್ಲಿಯವರೆಗೆ ಗುರುವು ಪ್ರಸನ್ನ ನಾಗುವನೋ ಅಲ್ಲಿಯವರೆಗೆ ಆ ಗುರುವರ್ಯನನ್ನು ಸೇವಿಸಬೇಕು. ಶಿಷ್ಯನು ಪ್ರಸನ್ನನೂ ಭೋಗೋಪೇಕ್ಷ ಪ್ರದನೂ ಆದ ಆಚಾರ್ಯನ ಮುಂದೆ ವಿನಯದೊಡನೆ ಅಂಜಲಿಬದ್ಧನಾಗಿ ನಿಂತುಕೊಂಡು ಈ ರೀತಿಯಾಗಿ ಸ್ವಾರ್ಥಿಸಬೇಕು. ಎಲೈ ಕಲ್ಯಾಣಮೂರ್ತಿಯೇ, ಮಹಾ ಭಾಗನೇ, ವಿಜ್ಞಾನಸಮುದ್ರನೇ, ಗುರುವರ್ಯನೇ, ಭವದೋಗದಿಂದ ನರಳುತ್ತಿರುವ ನನ್ನನ್ನು ಕಾಪಾಡು. ಎಂದು ಶುದ್ಧಾಂತಃಕರಣನಾದ ಶಿಷ್ಯನು ಪರಮಾಚಾರ್ಯ ನನ್ನು ಸ್ತುತಿಸಲು, ಆಗ್ಗೆ ಶ್ರೀಗುರುವು ಶಿಷ್ಯನ ಶಕ್ತಿ ಯನ್ನು ಪರಾಮರ್ಶಿಸಿ, ಅವನಿಗೆ ತಿವದೀಕ್ಷೆಯನ್ನು ಅನುಗ್ರಹಿಸಬೇಕು ಯಾವುದು ಶಿವಜ್ಞಾನವನ್ನುಂಟು ನಾಡುವುದೋ ಮತ್ತು ಮಲಮಾಯಾಕರ್ಮಬಂಧ ವನ್ನು ನಾಶಮಾಡುವುದೋ ಅದಕ್ಕೆ ಶಾಸ್ತ್ರಜ್ಞರು "ದೀಕ್ಷೆ"ಯೆಂದು ಹೇಳುವರು ಆ ದೀಕ್ಷೆಯು ವೇಧಾ ದೀಕ್ಷೆ-ಮಂತ್ರದೀಕ್ಷೆ-ಕ್ರಿಯಾದೀಕ್ಷೆ ಎಂದು ಮೂರು ಪ್ರಕಾರವಾಗಿರುವುದು. ಶ್ರೀಗುರುವಿನ ಕೃಪಾಕಟಾಕ್ಷ ವೀಕ್ಷಣಮಾತ್ರದಿಂದಲೂ ಹಸ್ತಮಸ್ತಕಸಂಯೋಗ ದಿಂದಲೂ ಯಾವ ಜ್ಞಾನಶಕ್ತಿಯಾತ್ಮಕಶಿವತತ್ತ್ವವನ್ನು ನೇತ್ರವು ಉತ್ಪನ್ನವಾಗುವುದೋ, ಅದು ವೇಧಾದೀಕ್ಷೆ ಯೆನಿಸುವುದು ಶಿವಪಂಚಾಕ್ಷರೀಮಂತ್ರೋಪದೇಶವನ್ನು ಮಾಡುವುದರಿಂದ ಅದು ಮಂತ್ರದೀಕ್ಷೆಯೆನಿಸಿಕೊಳ್ಳು ವುದು ಹೋಮಕುಂಡ ಸ್ಪಂಡಿಲ ಪುಂಚಕಲಶ ನೊದಲಾದ ದೀಕ್ಷಾಂಗಭೂತಕ್ರಿಯೆಗಳಿಂದ ಯುಕ್ತ ವಾದುದು ಕ್ರಿಯಾದೀಕ್ಷೆಯೆನಿಸಿಕೊಳ್ಳುವುದು ಶುಭ ಮಾಸ ಶುಭತಿಥಿ ಶುಭಕಾಲ ಶುಭದಿವಸಗಳಲ್ಲಿ ಶಿವಭಕ್ತ ರಿಗೆ ತಾಂಬೂಲಪ್ರಾಶ್ಯಾಕಮಾಡಿ ವಿಭೂತಿಯನ್ನು ಕೊಟ್ಟು ವಿಧ್ಯುಕ್ತವಾಗಿಯೂ ಶಾಸ್ತ್ರೋಕ್ತವಾಗಿಯೂ ದಂತಧಾವನ ಪೂರ್ವಕ ಸ್ನಾನಮಾಡಿದ ಶ್ವೇತವಸ್ತ್ರಧಾರಿಯಾದ ಶಿಷ್ಯ ನನ್ನು ಶ್ರೀಗುರುವು ತನ್ನ ಸಮಾಪಕ್ಕೆ ಕರೆದು, ಸ್ವಸ್ತಿಕ ಮಂಡಲದಲ್ಲಿ ಪೂರ್ವಾಭಿಮುಖನಾಗಿ ಕುಳ್ಳಿರಿಸಿ, ತಾನು ಉತ್ತರಾಭಿಮುಖನಾಗಿ ಕುಳಿತುಕೊಂಡು ಶಿಷ್ಯನಿಂದ ಶಿವನಾಮಸಂಕೀರ್ತನವನ್ನೂ, ಶಿವಧ್ಯಾನ ವನ್ನೂ ಮಾಡಿಸಬೇಕು ಭಸ್ಮಧಾರಣಯೋಗ್ಯನಾದ ಎಲ್ಲಾ ಅಂಗಗಳಲ್ಲಿ ವಿಧಿನಿಯಮಾನುಸಾರವಾಗಿ ಶಿಷ್ಯನಿಗೆ ಭಸ್ಮ ವನ್ನು ಧರಿಸಿ ಸರ್ವೋತ್ತಮ ವಾಮದೇವ ಆಘೋರ-ತತ್ಪುರುಷ ಈಶಾನಸಾಮಕಪಂಚಬ್ರಹ್ಮರೂಪಪಂಚಕಲಶ ಗಳನ್ನು ಸ್ಥಾಪಿಸಿ ಆ ಕಲಶಗಳಲ್ಲಿದ್ದ ಪವಿತ್ರೋದಕದಿಂದ ಆಚಾರ್ಯನು ಸಮಸ್ತ ಭುವನಪ್ರಸಿದ್ಧ ಶ್ರೀಮಜ್ಜಗ ದ್ಗುರು ಪಂಚಾಚಾರ್ಯರ ಸಂಪ್ರದಾಯಾನುಗತರಾದ ನಾಲ್ವರು ಮಹಿಷ್ಮರೊಡನೆ ಶಿಷ್ಯನನ್ನು ಮೂರುಸಾರಿ ಅಭಿಷೇಕಿಸಬೇಕು ಆಚಾರ್ಯನು ತನ್ನ ಮುಂದೆ ಕುಳಿ ತಿರುವ ಪರಿಶುದ್ಧನಾದ ಶಿಷ್ಯನಿಗೆ ಅಭಿಷೇಕಿಸಿದ ಮೇಲೆ ಸಂಸಾರಭಯನಾಶಕವಾದ ಶಿವಪಂಚಾಕ್ಷರೀಮಹಾ ಮಂತ್ರವನ್ನು ಆವನ ಬಲಗಿವಿಯ ಲ್ಲಿ ಗುಪ್ತವಾಗಿ ಉಪ ದೇಶಿಸಬೇಕು ಮತ್ತು ಆ ಮಹಾಮಂತ್ರದ ಸ್ವರೂಪ ವನ್ನೂ ಋಷಿ ದೇವತಾ ಛಂದಸ್ಸು ಶಕ್ತಿ-ಬೀಜ ಮೊದ ಲಾದುವುಗಳನ್ನೂ, ಅಂಗನ್ಯಾಸ ಕರನ್ಯಾಸ ದೇಹನ್ಯಾಸ ಪದ್ಧತಿಯನ್ನೂ ಬೋಧಿಸಬೇಕು

(ಸಶೇಷ)

ವರ್ತಮಾನ ಸಂಗ್ರಹ

ಕಾಳಸಂತೆಕೋರರನ್ನು ಮಟ್ಟಿ ಹಾಕಬೇಕು

ಬಿಹಾರ ಸರ್ಕಾರ ಕೃನುದ ಬಗ್ಗೆ

ಶ್ರೀ ಜಗಜೀವನರಾಂ ಮಟ್ಟಿಗೆ

"ದೇಶದಲ್ಲಿರುವ ಸಮಾಜದ್ರೋಹಿಗಳಾದ ಕಾಳ ಸಂತೆಕೋರರನ್ನು ಮಟ್ಟು ಹಾಕಿದ ಹೊರತು ಆಹಾರ ಅಥವಾ ಘೀಗಡು ಈ ಬಗ್ಗೆ ಬಿಹಾರ ಸರ್ಕಾರ ತೆಗೆದು ಕೊಂಡಿರುವ ಕ್ರಮವನ್ನು ನಾನು ಮೆಚ್ಚುತ್ತೇನೆ" ಎಂದು ಭಾರತ ಸರ್ಕಾರದ ಕಾರ್ಮಿಕ ಸಚಿವ ಶ್ರೀ ಜಗಜೀವನರಾಂರವರು ತಿಳಿಸಿದ್ದಾರೆ.

ಪಾಕೀಸ್ತಾನ ಧಾಳಿಕೋರರನ್ನು ಕೊಲ್ಲಲಾಯಿತು

ಪಾಕ್ ಗಡಿಯ ಜೋರೆ ಎಂಬ ಹಳ್ಳಿಯಿಂದ ದನ ಗಳನ್ನು ಕದ್ದುಕೊಂಡು ಹೋಗಲು ಪ್ರಯತ್ನ ಪಡು ತ್ತಿದ್ದ ಇಬ್ಬರು ಪಾಕೀಸ್ತಾನ ಧಾಳಿಕೋರರನ್ನು ಗುಂಡಿಕ್ಕಿ ಕೊಲ್ಲಲಾಯಿತು

ಕೊರಿಯ ಯುದ್ಧದಲ್ಲಿ ೫೫ ಚೀನ ತಲೆಹಾಕುವುದು ಅಪಾಯಕಾರಿ

ಕಮ್ಯೂನಿಸ್ಟ್ ಚೀನಕ್ಕೆ ಭಾರತದ ಹಿತೋಕ್ತಿ

ಮಂಚೂರಿಯ ಕೊರಿಯ ಗಡಿಯಲ್ಲಿ ಕಮ್ಯೂನಿಸ್ಟ್ ಚೀನದ ಬಲಪಡಲಿಕೆ ಹೆಚ್ಚಾಗಿದೆಯೆಂದು ನವದೆಹಲಿಗೆ ಸುದ್ದಿ ಬಂದಿದೆ ಆದರೆ ಈ ಬಲಪ್ರದಲಪಡ ಉದ್ದೇಶ ವೇನೆಂಬುದು ಇನ್ನೂ ಖಚಿತವಾಗಿ ವ್ಯಕ್ತಪಟ್ಟಿಲ್ಲ. ಮಂಚೂರಿಯ-ಕೊರಿಯಾ ಗಡಿಯ ರಕ್ಷಣಾ ವ್ಯವಸ್ಥೆ ಯನ್ನು ಬಲಪಡಿಸುವುದು ಇದರ ಉದ್ದೇಶವೇ ಆಥವಾ ಕೊರಿಯಾ ಯುದ್ಧದಲ್ಲಿ ತಲೆ ಹಾಕದೇಕೆಂದು ಚೀನ ಸರ್ಕಾರಕ್ಕೆ ದಿಟ್ಟ ಎಚ್ಚರಿಕೆಯೇ ಎಂಬುದು ಗೊತ್ತಾಗಿಲ್ಲ

ಕಮ್ಯೂನಿಸ್ಟ್ ಚೀನ ಕೊರಿಯ ಯುದ್ಧದಲ್ಲಿ ಪ್ರವೇಶಿಸುವುದರಿಂದ ದೂರಪ್ರಾಚ್ಯದಲ್ಲಿ ಮಹಾಘರ್ಷಣೆ ಒದಗುವುದೆಂಬ ಭೀತಿ ಭಾರತಕ್ಕಿದೆ. ಆದುದರಿಂದ ಈ ಘಟನೆಯು ಭಾರತಕ್ಕೆ ಕಳವಳವನ್ನು ಉಟುಮಾಡಿದೆ.

ಅದಕಾರಣ ಭಾರತ ಸರ್ಕಾರದವರು ಕೊರಿಯ ಯುದ್ಧವು ಮಹಾಸಂಗ್ರಾಮವಾಗಲು ಎಡೆಗೊಡುವಂ ತಹ ಯಾವ ಕ್ರಮವನ್ನೂ ಕೈಗೊಳ್ಳುವುದು ಈಗಿನ ಸ್ಥಿತಿಯಲ್ಲಿ ಸರಿಯಲ್ಲವೆಂದು ಕಮ್ಯೂನಿಸ್ಟ್ ಚೀನಾಕ್ಕೆ ಮನದಟ್ಟಾಗುವಂತೆ ತಮ್ಮ ಸೌಹಾರ್ಧಯುತವಾದ ಪ್ರಭಾವ ಬೀರುತ್ತಿದ್ದಾರೆಂದು ಗೊತ್ತಾಗಿದೆ

೩೮ನೇ ಸಮಾನಾಂತರ ರೇಖೆಯನ್ನು ದಾಟುವ ಬಗ್ಗೆ ಭಾರತವು ತಟಸ್ಥವಾಗಿದ್ದುದರಿಂದ ಭಾರತದ ಹಿತೋಕ್ತಿಗೆ ಕಮ್ಯೂನಿಸ್ಟ್ ಚೀನ ಮನ್ನಣೆ ಕೊಡಬಹು ದೆಂದು ನಿರೀಕ್ಷಿಸಲಾಗಿದೆ.

ಉತ್ತರ ಕೊರಿಯಾದಲ್ಲಿ ಅಮೆರಿಕನ್ನರ ನುಂದಗಮನ

೩೮ ನೇ ರೇಖೆ ಬಳಿ ಉಗ ಕೊರಿಯನ್ನರ ತೀವ್ರ ಪ್ರತಿಭಟನೆ

೩೮ ನೆಯ ಸಮಾನಾಂತರ ರೇಖೆಯ ಮಧ್ಯಭಾಗ ದಲ್ಲಿ ಉತ್ತರ ಕೊರಿಯನ್ನರು ಅಮೆರಿಕಾ ಸೇನೆಯನ್ನು ತೀವ್ರವಾಗಿ ಎದುರಿಸುತ್ತಿದ್ದಾರೆ ಇದರ ಪರಿಣಾಮವಾಗಿ ಅಮೆರಿಕಾ ಸೇನೆ ಒಂದು ಮೈಲಿಗಿಂತ ಹೆಚ್ಚಾಗಿ ಮುನ್ನುಗ್ಗಲಾರದೆ ಹೋಯಿತು ಅಮೆರಿಕದ ಮೊದಲ ನೆಯ ಅಶ್ವದಳದ ಸಾಹಾಯಕ್ಕೆ ಮಿತ್ರರಾಷ್ಟ್ರಗಳ ಯೋಧರು ಮತ್ತು ಸೈನ್ಯ ಸಾಮಗ್ರಿ ಬರಲಾರಂಭಿಸಿದೆ ಉತ್ತರ ಕೊರಿಯನ್ನರು ನಿರ್ಮಿಸಿರುವ ರಕ್ಷಣಾವ್ಯೂಹ ವನ್ನು ವಿಶ್ವಸಂಸ್ಥೆ ಪಡೆಗಳು ಛೇದಿಸುವುದೆಂದು ನಿರೀಕ್ಷೆ ಎಲಾಗಿದೆ

ಪೂರ್ವತೀರದ ಪ್ರೋಸಾನ್ ಪಟ್ಟಣದ ಬಳಿಯಲ್ಲೂ ಉಗ ಕೊರಿಯನ್ನರು ದಕ್ಷಿಣ ಕೊರಿಯನ್ನರನ್ನು ತೀವ್ರ ವಾಗಿ ಪ್ರತಿಭಟಿಸುತ್ತಿದ್ದಾರೆ.

ಮೆಕಾರ್ಥರ್‌ರವರ ಅಲ್ಟಿಮೇಟಂ ಪತ್ರವನ್ನು ಉತ್ತರ ಕೊರಿಯನ್ನರು ಗಮನಕ್ಕೇ ತಂದುಕೊಂಡಿಲ್ಲ.

ಪ್ರೋಸಾನ್ ಕ್ಷೇತ್ರದಲ್ಲಿ ಅಮೆರಿಕಾ ವಿಮಾನಗಳು ಸಾವಿರಗಟ್ಟಲೆ ಬಾಂಬುಗಳನ್ನು ಸುರಿಸಿವೆ ೧೫ ವಾರ ಗಳಿಂದ ನಡೆಯುತ್ತಿರುವ ಕೊರಿಯಾ ಯುದ್ಧ ಈ ತಿಂಗ ಳಲ್ಲಿ ಮುಗಿದುಹೋಗುವುದೆಂದು ಅಮೆರಿಕಾ ಎಂಟನೆಯ ಸೇನಾದಳದವರೊಬ್ಬರು ಹೇಳಿರುವರು

ದೆಹಲಿಯಲ್ಲಿ ಭಾರಿ ಬೆಂಕಿ

ಕೋಟ್ಯಾಂತರ ರೂ. ಗಳ ಆಸ್ತಿಪಾಸ್ತಿ ನಾಶವಾಗಿವೆ

ದೆಹಲಿ ನಗರದ ಅತಿ ಜನಭರಿತವಾದ ಪ್ರದೇಶಗಳ ಲ್ಲೊಂದಾದ ಸಾದಾರ್ ಬಜಾರಿನ ಹೊಸೈರಿ ಪೇಟೆಯಲ್ಲಿ ಕಳೆದ ೯ ನೇ ತಾ|| ಸಾಯಂಕಾಲ ಭಾರಿ ಬೆಂಕಿ ಬಿದ್ದು ಅನೇಕ ಕೋಟಿ ರೂ. ಗಳನ್ನು ಆಸ್ತಿಪಾಸ್ತಿಗಳು ಬೆಂಕಿಗೆ ಆಹುತಿಯಾಗಿರುವುದಾಗಿ ವರದಿಯಾಗಿದೆ ಸಾಯಂ ಕಾಲ ೮ ಗಂಟೆಗೆ ಪ್ರಾರಂಭವಾದ ಬೆಂಕಿ ಮಧ್ಯರಾತ್ರಿಯ ವರೆಗೂ ಶಮನವಾಗಲಿಲ್ಲ ಬೆಂಕಿ ಬಿದ್ದ ಸುದ್ದಿಯ-ತಿದ್ದ ಕೂಡಲೇ ಅಗ್ನಿನಿರೋಧಕ ಪಡೆಗಳು ೧೧ ಅಗ್ನಿ ನಿರೋಧಕ ಯಂತ್ರಗಳೊಂದಿಗೆ ಸ್ಥಳಕ್ಕೆ ಬಂದು ಅಗ್ನಿ ಜ್ವಾಲೆಯನ್ನು ನಂದಿಸಲು ಪ್ರಯತ್ನಪಟ್ಟರೆ ಬೆಂಕಿಯು ಅಕ್ಕಪಕ್ಕದ ಕಟ್ಟಡಗಳಿಗೆ ಹಬ್ಬದಂತೆ ಮತ್ತು ಜನಗಳನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸುವುದಕ್ಕೆ ಅಗ್ನಿ ನಿರೋಧಕ ಪಡೆಗಳವರು ಬಹುವಾಗಿ ಶ್ರಮಿಸಿದರು ಬೆಂಕಿಯ ಜ್ವಾಲೆ ವಿಶೇಷವಾಗಿದ್ದು ಬೆಂಕಿಬಿದ್ದ ಸ್ಥಳದಿಂ ದ೧೦ ಗಜ ಆಚೆ ನಿಲ್ಲಬೇಕಾಗಿದ್ದರೂ ಅಗ್ನಿ ನಿರೋಧಕ ಪಡೆಯವರು ಸಾಹಸಪಟ್ಟು ಮುನ್ನುಗ್ಗಿ ಅಗ್ನಿಯನ್ನು ಅರಿಸಲು ಪ್ರಯತ್ನಪಟ್ಟರು. ಅಗ್ನಿಯ ಬೃಹದಾಕಾ ರದಿಂದ ಜ್ವಾಲೆಗಳು ಮುಗಿಲು ಮುಟ್ಟಿದ್ದವು ಜನಗಳ ಗಾಬರಿಯಿಂದ ಪ್ರಾಣಭೀತಿಯಿಂದ ತಮಗೆ ಸಿಕ್ಕಿದ್ದನ್ನೆ

ತಮ್ಮ ಮನೆಗಳಿಂದ ಎತ್ತಿಕೊಂಡು ಸುರಕ್ಷಿತ ಸ್ಥಳಗಳಿಗೆ ಓಡಿಹೋಗುತ್ತಿದ್ದರು ಕೆಲವು ಸಮಾಜದ್ರೋಹಿಗಳು ಕೊಳ್ಳೆ ಸುಲಿಗೆ ದರೋಡೆಗಳಲ್ಲಿ ತೊಡಗಿ ಕೈಗೆ ಸಿಕ್ಕಿದ್ದನ್ನು ದೋಚಿಕೊಂಡು ಹೋದರು ಬೆಂಕಿಯ ಆಪತ್ಪೂತಿಂದ ಎಷ್ಟು ನಷ್ಟವಾದಿದೆಯೆಂಬುದು ಖಚಿತವಾಗಿ ಇನ್ನೂ ಗೊತ್ತಾಗದಿದ್ದಾಗ್ಯೂ ಅನೇಕ ಲಕ್ಷ ರೂ ಗಳ ಆಸ್ತಿಪಾಸ್ತಿಗಳು ನಷ್ಟವಾಗಿವೆಯೆಂದು ಅಂದಾಜು ಮಾಡಲಾಗಿದೆ ಈ ಪ್ರದೇಶದಲ್ಲಿದ್ದ ಒಂದು ಬ್ಯಾಂಕ್ ಮತ್ತು ಪೋಸ್ಟ್ ಆಫೀಸ್‌ಗಳೂ ಸಹ ಬೆಂಕಿಯ ಆಹುತಿಕ್ಕೆ ತುತ್ತಾಗಿರುವುದಲ್ಲದೆ ಅನೇಕ ನಿರಾಶ್ರಿತರ ಅಂಗಡಿಗಳೆಲ್ಲಾ ಭಸ್ಮವಾಗಿವೆ.

ಅಟ್ಟಾಮಿಕ್ ಆಸ್ಫೋಟನೆಯಾದರೆ ಉಪ್ಪಿನ ನೀರು ಕುಡಿಯಿರಿ

ಅಟ್ಟಾಮಿಕ್ ಆಸ್ಫೋಟನೆಯಾದಾಗ ಒಂದು ಲೋಟ ಉಪ್ಪಿನ ನೀರು ಕುಡಿಯುವುದು ಮಹಾ ಗುಣಕಾರಿ ಎಂದು ಅಮೆರಿಕಾದ ಪಬ್ಲಿಕ್ ಹೆಲ್ತ್ ಸರ್ವಿಸ್ ಸಲಹೆ ಇತ್ತಿದೆ ಸಾಕ್ ಚಿಕಿತ್ಸೆಗೆ ಪ್ಲಾಸ್ಮಾ ಎನ್ನು ಫಲಕಾರಿಯೋ ಇನ್ನೂ ಆಷ್ಟೇ ಫಲಕಾರಿ ಎಂದು ತಿಳಿಸಿದೆ

ವಿಮಾನ ಸಮುದ್ರದೊಳಗೆ ಬಿತ್ತು

ಒಬ್ಬನ ಮರಣ, ಮತ್ತೊಬ್ಬನಿಗೆ ತೀವ್ರಗಾಯ

ಏರಡು ಸೀಟಿರುವ ರಾಯಲ್ ಏರ್‌ಫೋರ್ಸ್ ಮೋಟಾರ್ ವಿಮಾನವೊಂದು ಆಕಸ್ಮಿಕ ಯಂತ್ರ ಕೆಟ್ಟುಹೋದುದರ ದೆಸೆಯಿಂದ ಸಮುದ್ರದಲ್ಲಿ ಬಿದ್ದಿತು ವಿಮಾನ ಚಾಲಕನಾದ ಇಬ್ಬರ ಪೈಕಿ ಸಾರಥಿ ಸಮುದ್ರದಲ್ಲಿ ಮುಳುಗಿ ಹೋದನು ಮತ್ತೊಬ್ಬನು ಬಳಿಯಲ್ಲಿದ್ದ ಬಂದಿನ ಮೇಲೆ ಬಿದ್ದನು ಬಿದ್ದ ರಭಸಕ್ಕೆ ತೀವ್ರಗಾಯಗಳಾಗಿ ಅವ್ಯತ್ರೆಗೆ ಸಾಗಿಸಲ್ಪಟ್ಟನು

ರೇಷನ್ ಡಿಪೋಗಳೆಲ್ಲಾ ಬಂದ್

ಮಜಿಲೀಪಟ್ಟಣದ ರೇಷನ್ ಡಿಪೋಗಳೆಲ್ಲಾ ತಾ॥ ೯ ರಿಂದ ಮುಚ್ಚಲ್ಪಟ್ಟಿವೆ ಆಹಾರಪದಾರ್ಥಗಳ ಸರಬರಾಜು ಆಗದಿರುವುದೇ ಇದಕ್ಕೆ ಕಾರಣ ಕಳೆದವಾರದಲ್ಲಿ ಜನರಿಗೆ ಕೇವಲ ೫ ದಿನದ ರೇಷನ್ ಮಾತ್ರ ಕೊಡಲಾಗಿತ್ತು

ಆಹಾರದ ಬೆಳೆ ಹೆಚ್ಚಿಸಲು ಮೈಸೂರು ಸರಕಾರದ ಪ್ರಯತ್ನ

ಮೈಸೂರು ದೇಶದಲ್ಲಿ ಆಹಾರ ಬೆಳೆಯನ್ನು ಹೆಚ್ಚಿಸಲು ಅನೇಕ ಪ್ರಯತ್ನಗಳು ನಡೆದಿವೆ. ಮೈಸೂರು ಸರಕಾರದ ಆಹಾರ ಕಾಮೆಯ ಸಚಿವರಾದ ಶ್ರೀ ಟಿ. ಮರಿಯಪ್ಪನವರ ಮುಖಂಡತ್ವದಲ್ಲಿ ಇದಕ್ಕಾಗಿ ಒಂದು ಯೋಜನೆ ಸಿದ್ಧವಾಗಿದೆ ಈ ಯೋಜನೆಯ ಅವಧಿ ಏರಡು ವರುಷ. ಇದಕ್ಕೆ ಬೇಕಾಗುವ ವೆಚ್ಚ ಮೂರುಕೋಟಿ ರೂಪಾಯಿ.

ದಕ್ಷಿಣ ಭಾರತದಲ್ಲಿ ಅಕ್ಕಿ ಉಪಯೋಗಿಸುವವರು ಹೆಚ್ಚು. ಅವರಿಗೆ ಸಾಕಾಗುವಷ್ಟು ಬತ್ತದ ಬೆಳೆ ಇಲ್ಲಿ ಆಗುತ್ತಿಲ್ಲ. ಆದ್ದರಿಂದ ಭಾರತ ಸರಕಾರವು ದಕ್ಷಿಣ ಭಾರತದ ಬತ್ತದ ಬೆಳೆಯನ್ನು ಉತ್ಪತ್ತಿಮಾಡಿಸಲು ಪ್ರಯತ್ನಮಾಡುತ್ತಿದ್ದಾರೆ. ಈ ಪ್ರಯತ್ನದ ಅಂಗವಾಗಿಯೇ ಮೈಸೂರು ಸರಕಾರ ಈ ಮೇಲೆ ತಿಳಿಸಿದ ಯೋಜನೆಯನ್ನು ಯಾರಿಸಿದೆ.

ಈ ಯೋಜನೆ ಸಫಲವಾದರೆ, ಮೈಸೂರು ಸರಕಾರ ೧೯೫೨ನೆಯ ಜೂನ್ ತಿಂಗಳ ವೇಳೆಗೆ ನಾಡಿಗೆ ಬೇಕಾಗುವಷ್ಟು ಆಹಾರ ಧಾನ್ಯವನ್ನು ತಾನೇ ಕೆಯುವ ಸ್ಥಿತಿಗೆ ಬರುತ್ತದೆ.

ಯೋಜನೆಯ ವಿವರ

ಈ ಯೋಜನೆಯ ಪ್ರಕಾರ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಒಟ್ಟು ನಾಲ್ಕು ಲಕ್ಷ ಎಕರೆ ಗಳಷ್ಟು ಭೂಮಿಯನ್ನು ಸಾಗುವಳಿಗೆ ತರಲಾಗುವುದು.

ನರುಷದಲ್ಲಿ ಸದಾಕಾಲವೂ ನೀರಿನ ಅಭಾವ ಉಂಡಾಗದಂತೆ ಮಾಡಲು ಸೂಕ್ತವಾದ ಕಾರ್ಯಕ್ರಮ ಕೈಗೊಳ್ಳಲಾಗುವುದು. ಕೆರೆಗಳು ಮತ್ತು ನಾಲೆಗಳ ರಿಪೇರಿ, ಹೊಸನಾಲೆಗಳ ನಿರ್ಮಾಣ ಈ ಕಾರ್ಯಗಳಿಗೆ ಹೆಚ್ಚು ಗಮನಕೊಡಲಾಗುವುದು. ರೈತರಿಗೆ ಒಳ್ಳೆಯ ಬೀಜ ಮತ್ತು ಸೀಮೆಗೊಬ್ಬರ ಗಳನ್ನು ಒದಗಿಸಲಾಗುವುದು ಗೊಬ್ಬರ ಮತ್ತು ಧಾನ್ಯಗಳನ್ನು ಸಾಗುವಳಿ ಪ್ರದೇಶಗಳಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಲು ಮಾರ್ಗ ಸೌಕರ್ಯವನ್ನು ಏರ್ಪಡಿಸಲಾಗುವುದು ರೈತರಿಗೆ ಸೊಬ್ಬರವನ್ನೂ ಒಳ್ಳೆಯ ಬೀಜವನ್ನೂ ಸಾಲದ ರೂಪದಲ್ಲಿ ಒದಗಿಸಲಾಗುವುದು

ಏರಡು ವರುಷದ ಈ ಯೋಜನೆಗೆ ತಗುಲುವ ನೂರು ಕೋಟಿ ರೂಪಾಯಿಗಳನ್ನು ಭಾರತ ಸರಕಾರವನರು ಕೊಡಲಿದ್ದಾರೆ, ಎಂದು ತಿಳಿದು ಬಂದಿದೆ.

ದಕ್ಷಿಣ ಭಾರತದ ಬತ್ತದ ಬೆಳೆಯನ್ನು ಹೆಚ್ಚಿಸಲು ಸೂಕ್ತವಾದ ಸಲಹೆ ಕೊಡುವುದಕ್ಕಾಗಿ ಒಂದು ಸಮಿತಿ ನಿರ್ಮಾಣವಾಗಿದೆ. ಭಾರತ ಸರಕಾರ ಈ ಸಮಿತಿಯನ್ನು ರೂಸಗೊಳಿಸಿದೆ. ಇದನ್ನು ದಕ್ಷಿಣ ಭಾರತದ ಆರ್ಥಿಕ ಸಮಿತಿ ಎಂದು ಕರೆಯಲಾಗಿದೆ. ಈ ಸಮಿತಿಯಲ್ಲಿ ಮೈಸೂರು, ಹೈದರಾಬಾದು, ಕೊಚಿನ್, ತಿರುವಾಂಕೂರು ಮತ್ತು ಮದರಾಸು ಪ್ರಾಂತಗಳ ಪ್ರತಿನಿಧಿಗಳಿದ್ದಾರೆ ೧೯೫೨ನೆಯ ಇಸವಿಯೊಳಗೆ ಭಾರತ ಆಹಾರ ರಂಗ ಸ್ವಯಂಪರಿಪೂರ್ಣತೆಯನ್ನು ಸಾಧಿಸಬೇಕು. ಇವನ್ನು ಸಾಧಿಸುವಂದ ಯೋಜನೆಗಳನ್ನು ಪರಿತೀಲಿಸುವುದೇ ಮೇಲ್ಕಂಡ ಸಮಿತಿಯ ಕೆಲಸ.

ಈ ಸಮಿತಿಯ ಮೊದಲನೆಯ ಸಭೆ ಈ ತಿಂಗಳು ೩೩ನೆಯ ತಾರೀಕು ಬೆಂಗಳೂರು ನಗರದಲ್ಲಿ ಸೇರುತ್ತದೆ ಕೇಂದ್ರ ಸರಕಾರವ ಆಹಾರ ಮಂತ್ರಿಗಳಾದ ಶ್ರೀ ಕೆ ಎಂ ಮುನ್ಷಿ ಅವರು ಸಭೆಯ ಅಧ್ಯಕ್ಷತೆ ವಹಿಸುವರು.

ಕಾರ್ನಿಯಲ್ ಟ್ರಾನ್ಸ್‌ಪ್ಲಾಂಟೇಶನ್ (ಕಣ್ಣಿನ ಆಪರೇಶನ್)

ಡಾ॥ ಎಂ ಸಿ ಮೋದಿ ನೇತೃತ್ವಜ್ಞ ಇವರು ಹುಬ್ಬಳ್ಳಿಯಲ್ಲಿ ನಡೆಯಿಸಿದ ಧರ್ಮಾರ್ಥ ಕಣ್ಣಿನ ಕ್ಯಾಂಪಿನಲ್ಲಿ ಇದುವರೆಗೆ ೧೦,೦೦೦ ಜನ ಕಣ್ಣಿನ ರೋಗಿಗಳನ್ನು ಪರೀಕ್ಷಿಸಿದ್ದಲ್ಲದೆ ೭೦೦ ಮಂದಿಯ ಕಣ್ಣಿನ ಆಪರೇಶನ್ ಮಾಡಿರುವರು ಮತ್ತು ಈ ಕ್ಯಾಂಪಿನಲ್ಲಿ ಎರಡನೆಯವರ ಕಣ್ಣಿನ ಕರೀಗುಡ್ಡೆಯನ್ನು ಬೇರೊಬ್ಬ ಕುರುಡರಿಗೆ ಕೂಡಿಸುವ ಆಪರೇಶನ್ ಕೆಲಸವನ್ನು ಒಳ್ಳೆ ಯಶಸ್ವಿ ರೀತಿಯಿಂದ ನಡೆಯಿಸಿದರು ಈ ಆಪರೇಶನ್ ಕೆಲಸ ನನ್ನು ನೋಡಲು ಸ್ಥಳೀಯ ಡಾಕ್ಟರರು ಹಾಗೂ ಧಾರವಾಡದ ಸಿವ್ಹಿಲ್ ಸರ್ಜನ್‌ರು ಇನ್ನಿತರ ಮಹನೀಯರೂ ಆಗಮಿಸಿ ನೋಡಿದುವರೆ ಕಾರ್ಯಕುಶಲತೆಯನ್ನು ವರ್ಣಿಸುತ್ತ ತಮ್ಮ ಆನಂದವನ್ನು ವ್ಯೆಕ್ತಗೊಳಿಸಿದರು

ಪ್ರಮುಖ ಮುಖಂಡರ ಭೆಟ್ಟಿ

ಡಾ॥ ಎಂ ಸಿ ಮೋದಿ ನೇತೃತ್ವಜ್ಞ ಹುಬ್ಬಳ್ಳಿಯಲ್ಲಿ ಜರಿಸಿದ ಕಣ್ಣಿನ ಕ್ಯಾಂಪಿಗೆ ನೋಡಲಿಕ್ಕೆಂದು ಕೆ. ವಿ. ಸಿ. ಸಿ ಯ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರೂ, ಡಾ॥ ಎಸ್ ಎಸ್ ಹರ್ದೀಕರರೂ ಮತ್ತು ಶ್ರೀಮತಿ ಉಮಾಬಾಯಿ ಮುದಾಪುರ ನೆಹರುರವರೂ ಇಂದು ತಮ್ಮ ಆನಂದವನ್ನು ವ್ಯಕ್ತಪಡಿಸಿದರು.

ಏರ್ ಪ್ರೇಕ್ಷಕ

ಮೈಸೂರಿನಲ್ಲಿ ದಸರಾ ವೈಭವ

೧೭ನೆಯ ತಾರೀಕು ಪ್ರಾತಃಕಾಲ ಆರಮನೆಯಲ್ಲಿ ದಸರಾ ಮಹೋತ್ಸವವು ಶಾಸ್ತ್ರೋಕ್ತವಾಗಿ ಆರಂಭವಾಯಿತು. ಶ್ರೀಮನ್ಮಹಾರಾಜರವರು ಮಂಗಳಸ್ನಾನಮಾಡಿ ಕಲಶ ಮತ್ತಿತರ ಪೂಜಾವಿಧಿಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದರು ಈ ಶುಭ ಸಂದರ್ಭದಲ್ಲಿ ೨೧ ಕುಶಾಲ ತೋಪುಗಳನ್ನು ಹಾರಿಸಲಾಯಿತು

ದಿನವೂ ಬೆಳಿಗ್ಗೆ ೮ ಗಂಟೆಗೆ ಮತ್ತು ಸಂಜೆ ೬ ಗಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಶ್ರೀ ಸೋಮೇಶ್ವರ ದೇವಸ್ಥಾನಕ್ಕೆ ಬಿಜಯಮಾಡುತ್ತವೆ. ಸಂಜೆ ೬ ಗಂಟೆಗೆ ದರ್ಬಾರ್ ಮತ್ತು ನವರ್ ನಡೆಯುವುದು

ಆಕ್ಟೋಬರ್ ೧೯ನೆಯ ತಾರೀಕು ಮಹಾನವಮಿ ಅಂದು ಬೆಳಿಗ್ಗೆ ೬-೪೯ ಗಂಟೆಗೆ ಪಟ್ಟದ ಆನೆ, ಪಟ್ಟದ ಕುದುರೆ ಮತ್ತು ಆಯುಧ ಸೋಮೇಶ್ವರ ದೇವಸ್ಥಾನಕ್ಕೆ ಸಂದು. ಆರಮನೆಗೆ ೬-೪೪ ಗಂಟೆಗೆ ಬಿಜಯಮಾಡುವುವು. ಆನಂತರ ಆಯುಧ, ಆನೆ, ಕುದುರೆ ಮುಂತಾದುವುಗಳ ಪೂಜೆ, ಸಂಜೆ ೬ ಗಂಟೆಗೆ ದರ್ಬಾರ್ ಮತ್ತು ನವರ್.

ಆಕ್ಟೋಬರ್ ೨೦ ನೆಯ ತಾರೀಕು ವಿಜಯದಶಮಿ. ಬೆಳಿಗ್ಗೆ ಪೂಜೆ ಆದನಂತರ ೧೦-೩೦ ಗಂಟೆಗೆ ಆಯುಧ, ಆನೆ, ಕುದುರೆ ಮೊದಲಾದುವು ಬನ್ನಿಮಂಟಪಕ್ಕೆ ಬಿಜಯಮಾಡುವುವು ಆನಂತರ ಬಟ್ಟೇಣಾಳಗ ನಡೆಯುವುದು

ಈ ಬಾರಿ ಮೆರವಣಿಗೆ ಇಲ್ಲ

ದಸರಾ ವಸ್ತುಪ್ರದರ್ಶನದ ಆರಂಭೋತ್ಸವ

ಮೈಸೂರು ದಸರಾ ವಸ್ತುಪ್ರದರ್ಶನದ ಪ್ರಾರಂಭೋತ್ಸವವನ್ನು ೧೮ನೇ ತಾರೀಕು ಗುರುವಾರ ಸಾಯಂಕಾಲ ೧೧ ಗಂಟೆಗೆ ಮುಖ್ಯ ಮಂತ್ರಿಗಳಾದ ಶ್ರೀ ಕೆ ಸಿ ರೆಡ್ಡಿಯವರು ನೆರವೇರಿಸಿದರು

ಸ್ವೀಕಾರ

ಧಾರವಾಡ ಡಿ॥ ಡಂ॥ ಸಂ॥ ಹಡಗಲಿ ಗ್ರಾಮದಲ್ಲಿ ಶ್ರಾವಣಮಾಸದ ಶಿವಭಜನೆ ಸಮಾಪ್ತಿ ಸಮಯದಲ್ಲಿ ಪಂ॥ ಶ್ರೀಜಾಶೀನಾಥಜಪ್ತಿಗಳವರ ಸಮಾಧಿ ಲಿಂಗ ಸ್ಥಾಪನೆಗಾಗಿ ಅರ್ಪಿಸಿದ 2 ರೂ ಗಳು ಶ್ರೀ ದಾನಪ್ಪ ಹೊನ್ನಪ್ಪ ವಡ್ಡಿನ ಇವರ ದ್ವಾರಾ ತಲ್ಪಿರುತ್ತವೆ

ಶಿವಮೊಗ್ಗಾ ಡಿ॥ ತುರುವೇಕೆರೆ ಪ್ರಸ್ಪೋಶಿಟ್ಸ ಯಂ ಪರ್ವತಪ್ಪನಕೆಟ್ಟರು ತಾ॥ ೨೬-೯-೫೦ ನೇ ದಿವಸ ತಮ್ಮ ಮಾತೃ ಪುಣ್ಯತಿಥಿಯ ಸಮುಯದಲ್ಲಿ ಪ್ರಭಾಪೋಷಣಾರ್ಥ ಕ್ಕಾಗಿ 2 ರೂ ಗಳನ್ನು ಸಮರ್ಪಿಸಿ ಳಿಸಿರುತ್ತಾರೆ.

ಶಿವಮೊಗ್ಗಾ ತಾಲೂಕು ಅಬ್ಬಲಗೆರೆ ಗ್ರಾಮದಲ್ಲಿ ಮಃ॥ ಗೆಂಜನ ರಾಮಾನಾಯ್ಕರು ಹಿಂಡುಗಿಡವರಾ ದಾಗ್ಯೂ ಗುರುಭಕ್ತಿಯುತರಾದ್ದರಿಂದ ತಾ॥ ೬-೧೦-೫೦ ರಲ್ಲಿ ಗ್ರಾಮದ ಸತ್ಪಮಾಜದ ಸಹಾಯದಿಂದ ತಮ್ಮ ಗೃಹದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ಭಜನೆಯನ್ನು ಶಿವಭಜನೆಯೊಂದಿಗೆ ಪೂರ್ತಿಗೊಳಿಸಿ ಸತ್ಕೋಪಕ್ಕಾಗಿ ಪ್ರಭಾಪೋಷಣೆಗೆ ಸಮರ್ಪಿಸಿದ 1 ರೂ ಯು ಎಂ ಶಾಲಸಿದ್ದಯ್ಯ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ಶಿಕ್ಷಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಿದ್ಧಾಂತ ಶಿಖಾಮಣಿ

ವೀರಶೈವಮತದಲ್ಲಿ ಜಗದ್ಗುರುಗಳು ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಯನ್ನು ಪ್ರಾಣದಂತಿರಲು ಪ್ರಭು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುವೇ ಆಚಾರ್ಯರ ಜನ್ಮದಿನಾಂಕದ ಆಗ್ಮಿಸ್ಸಾರ್ಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಕ್ಕೆ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೨೫೨೦ ವರ್ಷಗಳ ಪೂರ್ವದಲ್ಲಿದ್ದ **ಶ್ರೀಕಿವಯೋಗಿಶಿವಾಚಾರ್ಯರಿಂದ** ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರಿಯುತ್ತಾ ಅದರಲ್ಲಿ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ತ್ರುಟಿಗಳಿಗಳಿಗೆ ಸರಿಯಾದ ಅರ್ಥವು ಬರಿಯಲ್ಪಟ್ಟಿಲ್ಲ ಈ ತೊಡಕುಗಳನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವಾಖ್ಯಾನದ ಮಹತ್ವವು ಪಾಠಕರಿಗೆ ನೇರ್ಪಡುವುದು ಪಾಠಕರು ಆಸಕ್ತರಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯಿಂದ ಕ್ಷೇಪಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿದೆ ಈ ಗ್ರಂಥವು ಒಟ್ಟು ೭೩೨ ಪುಟಗಳಿಂದ ಕೂಡಿದ್ದು ಸರ್ವರಿಗೂ ಸುಲಭವಾಗಿ ದೊರಕುವಂತೆ ಮುದ್ರಿಸಲ್ಪಟ್ಟಿದೆ ಈ ಗ್ರಂಥವನ್ನು ಸಂಪೂರ್ಣಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಜ್ಞವಾದ ಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥವು ಹೊಂದಿರುವ ವರ್ಣಾತೀತವಾದ ಕೈನ್ಮಲ್ಕಲ್ಪತರುವಿನಂತಿರುವ ಈ ಅಪೂರ್ವಗ್ರಂಥವನ್ನು ವೀರಶೈವರಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೫ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಒಂಭತ್ತು ಅಮೃತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦x೧೪ ಬೆಲೆ ೧೫ ಕ್ಕೆ ೦—೬—೦

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.)ಸೈಜು ೧೪x೧೦ ಬೆಲೆ ೦—೪—೦

ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವತತ್ವೋಪದೇಶವನ್ನು ಉಪದೇಶಿಸುವ ಫೋಟೋ ೦—೪—೦

" ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪x೧೦ ಬೆಲೆ ೧೫ ಕ್ಕೆ ೦—೪—೦

" " ಚಿಕ್ಕ ಸೈಜು ಬೆಲೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ವಿಧ್ಯುಕ್ತವಾಗಿ ಪ್ರಾಣಪ್ರತಿಷ್ಠೆಯಿಂದ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೪—೦

" ೪ ಕೋಟಿ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—೦

ಶ್ರೀಲ ಶ್ರೀಲ ರುಗಳಿಗೆ ಶ್ರೀಲಂಕಾಪುರೀ ಜಗದ್ಗುರುಗಳು ಕಿರೀಟಧಾರಣಮಾಡಿಸುವ ಫೋಟೋ ೦—೧—೬

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಶಾಶೀನಾಥಶಾಸ್ತ್ರಿಗಳವರು ಶುಶ್ರೂಷೆಮಾಡಿರುವ ಫೋಟೋ ೦—೧—೬

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೪ಕ್ಕೆ ೦—೨—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು.) ದೊಡ್ಡಸೈಜು ೧೪ಕ್ಕೆ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಪ್ರಭೆಯ ಅತ್ಯಂತ ಸುಂದರವಾದ ಫೋಟೋ ೧೪ಕ್ಕೆ ೦—೧—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಳ್ಪಿದ ಸುಂದರ ಫೋಟೋ ೧೪ಕ್ಕೆ ೦—೧—೬

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪ್ಪರದ ಫೋಟೋ ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರು ವಿರಾಜಮಾನರಾಗಿರುವ ಫೋಟೋ .. ೦—೧—೬

ಬೆಂಗಳೂರು ಕಂಟೋನ್ಮೆಂಟನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅದ್ದಲ್ಲಕ್ಕಿ ಮಹೋತ್ಸವದ ಫೋಟೋ ೦—೧—೬

ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೩—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟ (೩ನೆಯ ಆವೃತ್ತಿ)	೧	ವೀರಶೈವನುಷ್ಠಾನ	೪
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧	ಬಸವಧ್ಯಾನಕಾವಿವಾಕರ (೨ನೆಯ ಆವೃತ್ತಿ) ..	೪
ಪಂಚಮಿಂಶತಿ ಪ್ರಶ್ನ ಪ್ರಕಾಶ (೫ನೆಯ ಆವೃತ್ತಿ)	೧	ಆಗಮಪರಿಜ್ಞಾನ	೪
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧	ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೪
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)	೨	ಶ್ರೀಜಗದ್ಗುರು ಶಿವಾನಂದವಿಜಯ ..	೪
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨	ಸಿದ್ಧಾಂತಸಾರಾವಳಿ (ಶ್ರೀರೋಚನಶಿವಾಚಾರ್ಯಕೃತ)	೧೨
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨	ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಬಸವಾದಿಸಿಜತತ್ವದರ್ಪಣ (೪ನೆಯ ಆವೃತ್ತಿ)	೨	ಶಿವಾಸೂತ್ರಸಿದ್ಧಾಂತದರ್ಪಣ	೧೨
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨	ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ..	೧೫
ಶ್ರೀರುದ್ರಮುನಿವಾಚಾರ್ಯಶತಕ	೨	ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) ..	೧೫
ಶಿವಶಕ್ತಿವಿಲಾಸ	೨	ವಿನೇಕಮುಕ್ತಾವಳಿ ..	೧೫
ವಿಜಯನಗರ ಸಾಮ್ರಾಜ್ಯವು ಶ್ರೀರೇಣುಕಾಚಾರ್ಯರೂ	೨	ವಿಚಾರಸಾರಾವಳಿ	೧೫
ಬಲ್ಲಮಾಹಾತ್ಮ್ಯ (೩ನೆಯ ಆವೃತ್ತಿ)	೩	ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೩ನೆಯ ಆವೃತ್ತಿ)	೧೫
ಪಂಚಾಚಾರ್ಯಪ್ರಕಾಶ	೩	ಶ್ರೀಕರಧಾನ್ಯಂ (ಜಪಸೂತ್ರಿಗೆ)	೩
ಪಂಚಾಚಾರ ಪ್ರಕಾಶಿಕಾ	೩	ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವುದು)	೩
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ..	೪	ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಪಟ್ಟದ್ದು) ..	೩
ಲಿಂಗಧಾರಣವಿಧಿ	೪	ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ..	೩
ವಿವಾಹವಿಧಿ (೪ನೆಯ ಆವೃತ್ತಿ)	೪	ಶಿವಾಗಮಸಂಗ್ರಹ: (ಚಂದ್ರಜ್ಞಾನಾಗಮ-ಶಿವರಹಸ್ಯಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩
ತ್ರಿಪಥಿಪಂಡಿತಾರಾಧ್ಯರ ಕಾಲನಿರ್ಣಯ	೪	ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ..	೪
ಕೈಲೋಪಪತ್ತಿಸ್ಪಂಗ್ರಹ: (ಸಂಸ್ಕೃತ) (೨ನೆಯ ಆವೃತ್ತಿ) ..	೩	A brief life-sketch of Pandit Sri Kashinatha Shastriya (*English*)	4
ವೀರಶೈವ ಪ್ರಾಯಶ್ಚಿತ್ತವಿಧಿ	೪	The Philosophical Aspect of Virasaivism (*English*)	8
ವೈದಿಕವಾಙ್ಮಯರಹಸ್ಯ	೪	Speeches by Pandit Shri Kashinatha Shastriya (*English*)	12
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ) ..	೩	ಲಿಂಗಧಾರಣಚಂದ್ರಿಕಾ (ಉತ್ತರ)	೩
ವೀರಶೈವಾಹ್ನಿಕ್ಷಿ-ಶ್ರಾದ್ಧವಿಧಿ	೩	ಶೀಲವಿಚಾರ (ಮರಾಠಿ)	೧
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ..	೪	ಮಹಾಚಾರಾಭಿಲಾಷಿಣಿ (ಶೀಲವಿಚಾರ-ಉತ್ತರ)	೧
ಶಿವಾದ್ವೈತಪರಿಭಾಷಾ (ಸಂಸ್ಕೃತ)	೪	ಶೀಲವಿಚಾರಚಂದ್ರಿಕಾ (ಉತ್ತರ)	೨

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು

Edited, Printed and Published by Eruhanmath Mahadevaiah at Shri Panchacharya Electric Press, Sayaji Rao Road, Mysore.

REGISTERED No. M 2266 ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಧ್ಯಯನಸಂಕಥಾಜನಿತರ ಪಂಚಾಸ್ಯಪೀಠಾಧಿಪರ । ಪಂಚಕ್ಲೇಶವಿನಾಶಕರ ಪರತರಶ್ರೀಪಂಚಲಿಂಗೋದ್ಭವರ ॥
ಪಂಚಾಚಾರನಿಯಾಮಕರ ಪರಿಲಸತ್ಪಂಚಾಕ್ಷರೀಮೋದಧರ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮತಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಶೀಪಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬೃ॥ ಮಹಾದೇವಪಯ್ಯನವರು ಏ ಪಿ ಖರ್ಚು ಸೇರಿ ೩ ರೂ ೪ ಆ

ಸಂಪುಟ ೨೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩೦ ನೇ ಅಕ್ಟೋಬರ್ ೧೯೫೦ [ಸಂಚಿಕೆ ೨೪

ವೀರಪೀಠಾಧೀಶ್ವರರ-ಭೀಷ್ಮಪ್ರತಿಜ್ಞೆ

ವೀರಶೈವರಿಗೆ—ರಂಭಾಪುರೀ, ಉಜ್ಜಯಿನಿ, ಹಿಮವತ್ಕೇದಾರ, ಶ್ರೀಶೈಲ, ಕಾಶೀ ಪಂಚಪೀಠಗಳು ಮೂಲ ಗುರುಸ್ಥಾನಗಳಾಗಿವೆ, ಇವು ಬಹುಪ್ರಾಚೀನಗಳಾದವು ಗಳು—ವೀರಗಳ ಪರಂಪರೆಯು, ಇಂದಿನವರೆಗೂ ಅಬಾಧಿತವಾಗಿ ನಡೆದುಕೊಂಡುಬರುತ್ತಲಿದೆ—ಒಮ್ಮೊಮ್ಮೆ ಕೆಲವು ಕೊಂದರೆಗಳೂ ಒರುವುದುಂಟು ಪ್ರಬಲ ಪ್ರಯತ್ನದಿಂದ ಮಹಾವಿಪತ್ತುಗಳು ಮಾಯಾ ಶ್ರೀ ಮಹಾ ಗುರುಪೀಠಗಳು ಉಜ್ಜ್ವಲಾವಸ್ಥೆಯನ್ನೈದುತ್ತಿವೆ ಸಧ್ಯ ಕೇದಾರ ಪೀಠವು ಕಾರಣಾಂತರದಿಂದ ಕೊಂಚ ವಿಪತ್ತಿಗೆ ಗುರಿಯಾದ ಸಂಗತಿಯು ಸರ್ವರಿಗೂ ತಿಳಿದಿಯದೆ ಈ ವಿಷಯಾವರಣೆಗಾಗಿ ಅನೇಕ ಪ್ರಯತ್ನಗಳೂ ನಡೆಯುತ್ತಲಿವೆ ಆದಷ್ಟು ಬೇಗನೆ ಶ್ರೀ ಕೇದಾರ ಪೀಠವು ಮಹೋನ್ನತಿಯನ್ನೈದಿ ವೀರಶೈವರ ಮನಸ್ಸನ್ನು ಆನಂದಗೊಳಪಬೇಕಾಗಿದೆ. ಶ್ರೀ ಮುಕ್ತಿಮಂದಿರದಲ್ಲಿ ಶ್ರೀ ರಂಭಾಪುರೀ ಜಗದ್ಗುರುಗಳವರು ಶ್ರೀ ಚತುರಾಚಾರ್ಯರ ಸಮ್ಮೇಲನವನ್ನು ನೆರವೇರಿಸಿದರು ಶ್ರೀ ಕೇದಾರ ಪೀಠದ ವಿಷಯವಾರ ಮಹಾಸಂಸ್ಥಾನಕ್ಕೆ ಅನೇಕ ಖರ್ಚುಗಳಭಾರವಿದ್ದರೂ ಅದನ್ನು ಲೆಕ್ಕಿಸದೆ—ಶರೀರಾಯಾಸವನ್ನು ಪರಿಗಣಿಸದೆ ಪ್ರಾಪ್ತಿಯಕಾಲದ ಸಂಚಾರವನ್ನು ಸಹ ಪಲ್ಲಿಸಿ ಸಮ್ಮೇಲನಕ್ಕೆ ಗಮನಕೊಡಬೇಕಾಯಿತು—ಶಿರ್ವಾನಾಕಾರ್ಯದಲ್ಲಿ ಕೆ ಕೊಂಡ ಕಾರ್ಯವು ಶ್ರೀ ಗಳವರ ತಪಃಪ್ರಭಾವದಿಂದ ಸಾಂಗವಾಗಿನೆರವೇರಿತು ಇತರ ಪೀಠಾಚಾರ್ಯರು ಶ್ರೀ ರಂಭಾಪುರೀ ಜಗದ್ಗುರುಗಳವರ ಅಮಂತ್ರಣಕ್ಕೆ ಸಂ ಯಾಗಿ ಶ್ರೀ ಮುಕ್ತಿಮಂದಿರಕ್ಕೆ ಚಿಕ್ಕೆಸಿದರು ಶ್ರೀ ಗಳವರು ಶ್ರೀಪೀಠಾಚಾರ್ಯರನ್ನು ಮಹಾನ್ಮೆಳವದೊಡನೆ ಸ್ವಾಗತಿಸಿದರು. ಯಜ್ಞಕಾರ್ಯಕಲಾಪಗಳನ್ನು ಶ್ರೀ ಗಳವರು ಹಗಲಿರುಳೆನ್ನದೆ ದಿಬಿಸುನೆರೆಳೆನ್ನದೆ ಶ್ರೀ ಶಿವಪೂಜಾಪ್ರಸಾದಗಳ ಕ್ರಮತಪ್ಪಿದರೂ ಸ್ವಯಂದಕ್ಷತೆ ಯಿಂದ ನಿರ್ವಹಿಸಬೇಕಾಯಿತು—ಶ್ರೀಕೇದಾರ ಪೀಠದ ಪುನೋಭಿವೃದ್ಧಿಗಾಗಿ ನೀರಿಯಂತೆ ಧನವನ್ನು ಸುರಿ ಬೇಕಾಯಿತು—ಶ್ರೀ ಕೇದಾರ ಪೀಠದ ಕಾರ್ಯನಿರ್ವಾಹ ಕ್ಯಾಗಿ ೨೫—೩೦ ಸಾವಿರ ರೂಪಾಯಿಗಳ ನಿಧಿಯು ಅವಶ್ಯವಾಗಿದೆ ಎಂದು ಶ್ರೀ ಮಹಾಪಾದಗಳವರೆದೆಯೂ ಆಲೋಚಿಸಿದರು ಶ್ರೀ ಚತುರಾಚಾರ್ಯರು, ಶ್ರೀ ಮುಕ್ತಿ ಮಂದಿರದಲ್ಲಿಯೇ ತಾ॥ ೧೫ ೨೦ ದಿನಗಳವರೆಗೆ ವಾಸಮಾಡಿ ನಾನಾಸ್ಥಾನಮಗಳಿಂದ ಅಭಿಮಾನಿಗಳನ್ನು ಬರಮಾಡಿಕೊಂಡು ಸಭಿಸಂಗ್ರಹ ಮಾಡಿದರೆ ಅನಾಯಾಸವಾಗಿ ಕಾರ್ಯಸಿದ್ಧಿಯಾಗುವದೆಂದು ಶ್ರೀ ರಂಭಾಪುರೀ ಶ್ರೀಗಳವರು ಪರ್ಯಾಲೋಚಿಸಿದರು ಈ ಅವಧಿಯಲ್ಲಿ ಶ್ರೀ ಪಟ್ಟಚಾರಾಧಿಕಾರಿಗಳ ಸಮ್ಮೇಲನೆ ನೆರವೇರಿಸ ಬೇಕೆಂದು ಸಂಕಲ್ಪಿಸಿದರು ಆದರೆ ದಯಾವಿಯಂಥ ಶ್ರೀಪೀಠಾಚಾರ್ಯರು ಶ್ರೀ ರಂಭಾಪುರೀ ಪೀಠಕ್ಕೆ ಏಜೀನ ಮರಣಾಧಿಕಾರಿಯು ಅಧಿಕವಾಗಬಹುದೆಂದೂಹಿಸಿ ನಾಲ್ವರು ಮಹಾಚಾರ್ಯರು ಆರಾರು ಸಾವಿರೂಪಾಯಿಗಳನ್ನು ಕೊಡಿಸಿಕೊಟ್ಟರೆ ಬಹಳ ಉತ್ತಮವಾಗುವದೆಂದು ಅಭಿ ಪ್ರಾಯ ಪಟ್ಟು ಈ ಅಭಿಪ್ರಾಯವನ್ನು ಶ್ರೀ ರಂಭಾಪುರೀ ಜಗದ್ಗುರುಗಳವರಿಗೆ ಸೂಚಿಸಿ ಕಾರ್ಯ ಗೌರವನಿಮಿತ್ತ ವಾಗಿ ಶ್ರೀಪೀಠಾಚಾರ್ಯರು ಬೇರೆಬೇರೆ ಸ್ಥಾನಗಳಿಗೆ ಬೀಜಯಂಗೈಸಿದರು ಶ್ರೀ ರಂಭಾಪುರೀ ಜಗದ್ಗುರು ಗಳವರಿಗೆ ಶ್ರೀಕೇದಾರ ಪೀಠದ ವ್ಯಥೆಯು ಪ್ರಬಲ ವಾಗಿದೆ—ಶ್ರೀರಂಭಾಪುರೀ ಜಗದ್ಗುರುಗಳವರು, ಸರಳ ಸ್ವಾಭಾವದವರು ಹಿಡಿದಕಾರ್ಯವನ್ನು ಸಾಧಿಸುವವರು ಶ್ರೀಗಳವರು ಶ್ರೀ ಕೇದಾರ ಪೀಠದ ಮರವನ್ನೂ ದುರಾಗುವವರೆಗೂ ಅಲ್ಪಾಹಾರವ್ರತ ಕೈಕೊಳ್ಳಬೇಕೆಂದು ಸಂಕಲ್ಪಿಸಿ ಇದೇ ವಿಶ್ವತ ಸಂವತ್ಸರ ಭಾದ್ರಪದ ಬಹುಳ ಅಮಾವಾಸ್ಯ ತಾ॥ ೧೧ ೧೦ ೫೦ ಬುಧವಾರ ಮೊದಲುಗೊಂಡು ವಿತ ಪಲಾಹಾರವ್ರತ ವನ್ನು ಕೈಕೊಂಡಿರುವರು ಮನಸ್ಸಿಗೆ ಅಸಾಧ್ಯ ವಾಯಿತು' ಶ್ರೀ ಮುಕ್ತಿಮಂದಿರದೇಗೆನಾಗಿ ಈ ಹಿಂದೆ ಐದನವರೆ ವರ್ಷ ಕಠಿಣವ್ರತಕರಂಯಂದಾಗಿ ಅಲ್ಪಾಹಾರದಿಂದ ಕೊರಿಕಿರಗಿದರು, 'ಕಾರ್ಯಂ ವಾ ಸಾಧಯಾಮಿ ದೇಹಂ ವಾ ಪಾತಿ ಯಾಮಿ' ಎಂಬ ಮಹಾಮಂತ್ರವು ಶ್ರೀ॥ ॥ ಗಳವರ ಜ್ಞಾಕೋಚ್ಚಾಸ ಗಳಲ್ಲಿ ಬೆರೆತುಕೊಂಡಿದೆ ಬಾಲ್ಯದಿಂದಲೂ ಕಠಿಣ ಪ್ರಾಣವು ಮರೆಯದಿರುವುದಾಗಿದೆ ಸತ್ಪಸೀಲರು ಸ್ವಯಂ ಸ್ಫೂರ್ತಿಯಿಂದ ಶಾಸ್ತ್ರಕರ್ತರಾಗಿಯದು ಶಿಷ್ಯ ಪ್ರೇಣಿಯ ಸೇವಾಸೌಭಾಗ್ಯವು—ಶ್ರೀಗಳವರ ಮಹಾ ಕಾರ್ಯಗಳೆಲ್ಲ ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲ ಶ್ರೀ॥ ॥ ಗಳವರು ವಿರಾಮವಿಲ್ಲದೆ ಶ್ರಮಪಡುತ್ತಿರುವ ದನ್ನು ಶಿಷ್ಯಸಮೂಹವು ಈಈದಿನ ತಿಳಿದುನೋಡಲಿ—ಶ್ರೀ ಮಾಗಾರುಗಳ ಜೀಷ್ಯಪ್ರತಿಜ್ಞೆಯು ಬೇಗನೆ ನೆರವೇರಲಿ ಶ್ರೀ ಕೇದಾರ ಪೀಠವು ಪ್ರಕಾಶಮಾನ ವಾಗಲಿ ಶ್ರೀ ಕೇದಾರ ಪೀಠವು ವಿಪದ್ವಿಮುಕ್ತವಾಗಿ ಸನಾಥವಾದನ್ಯೆಯನ್ನು ಹೊಂದಿ ಮೆರೆಯುವದೆನ್ನು ಕೇಳಿ ಯಾಗಲೀ, ನೋಡಿಯಾಗಲೀ ಅನುಕೂಲಸ್ಥಲದಲ್ಲಿ ಪುಂಚಪೀಠಾಚಾರ್ಯರ ಅಷ್ಟಸಲ್ಲಕ್ಕೀ ಮಹೋತ್ಸನ ಮೂಲಾಚಾರ್ಯರ ಪಂಚಂಭೋತ್ಸವಗಳಾದ ಮೇಲೆ ಶ್ರೀರಂಭಾಪುರೀ ಜಗದ್ಗುರುಗಳವರು ಅಲ್ಪಾಹಾರ ವ್ರತವನ್ನು ಬಿಡುವರು—

ಮನಸ್ವೀ ಕಾರ್ಯಾರ್ಥೀ ನ ಗಣಯತಿದುಃಖಂ ನ ಚ ಸುಖಂ

ಮಹಾದೇವಪ್ಪನಾಗಪ್ಪ ಬೆಂಗಿ

ಶ್ರೀಶೈಲಜಗದ್ಗುರು ಶ್ರೀ ವಾಗೀಶ ಪಂಡಿತಾಧ್ಯ ಮಹಾಸ್ವಾಮಿಗಳವರ ದಸರಾ ಮಹೋತ್ಸವ, ಸಂತೆಬೆನ್ನೂರು

ಶಿವಮೊಗ್ಗಾ ಜಿಲ್ಲಾ, ಸಂತೆಬೆನ್ನೂರಿಗೆ ಆಗಮಿಸಿದ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ವಾಗೀಶ ಪಂಡಿತಾಧ್ಯ ಮಹಾಸ್ವಾಮಿಗಳವರು ತಾ॥ ೧೯ ೧೦ ೫೦ನೇ ದಿನದ ದರ್ಬಾರಿನಲ್ಲಿ ಸಕಲ ಮಹ ಬಾಂಧವರನ್ನುದ್ದೇಶಿಸಿ "ಮಾಹಿತ-ಧರ್ಮ" ಈ ವಿಷಯ ವನ್ನು ೩ ಘಂಟೆಗಳಕಾಲ ಅಪ್ಯತಕೆಕೊಡಿಸಿದರು. ಇಹರೆಲ್ಲಿ ಮನುಷ್ಯಸೃಷ್ಟಿಯ ಅದಿಯನ್ನು ದೇವತೆಗಳಿಗೂ ಮಾನವನಿಗೂ ಇರುವ ಸಂಬಂಧವನ್ನು ದೇವಾಂತರಾದಿ ಜೀವನು ಪುನ: ತನ್ನ ಸ್ವಾಭವನ್ನು ಹೊರಕಿಸಿಕೊಳ್ಳಲು ಕೈಗೊಳ್ಳಬೇಕಾದ ಉಪಾಯಗಳನ್ನು ಬಹು ಸಮರ್ಪಕ ವಾಗಿ ವಿವರಿಸಿದರು ಶ್ರೀಮಾನ್ ಖಂದರರಾಜ ಅಯ್ಯಂಗಾರರು ಮತ್ತು ಪೈಸ್ಕೂಲು ಹೆಡ್ಮಾಸ್ಟರವರು "ಗುರುಸ್ತವ" ವ ಮತ್ತು "ಅಹಂಕಾರ ವಿಸರ್ಜನೆ" ಎಂಬ ವಿಚಾರವಾಗಿ ಮನೋಹರವಾದ ವ್ಯಾಖ್ಯಾನವನ್ನು ಮಾಡಿದರು

ದಿವಸದೇ ನಿರ್ಣಯವಾದಂತೆ ತಾ॥ ೨೦ ೧೦ ೫೦ ನೇ ವಿಜಯದಶಮಿ ನಿಮಿತ್ತವಾಗಿ ಶ್ರೀಶೈಲ ಜಗದ್ಗುರು ಗಳವರ ಪಲ್ಲಕ್ಕಿ ಮಹೋತ್ಸವವು ಸಂಜೆ ೫ ಘಂಟೆಗೆ ಪ್ರಾರಂಭವಾಗಿ ಸಕಲ ಮಹೀಯರೊಡನೆ ಶಮಾಶೋಭಾಯ ಮಾನವಾಗಿ ವಿದ್ಯುಚ್ಛಕ್ತಿವಾಗಿ ನೆರವೇರಿಸಲ್ಪಟ್ಟಿತು ಮೈಸೂರು ಛತ್ರಸಕಾರಿವರು ದಯಪಾಲಿಸಿರುವ ಬಿಡುದಾವಳಿಗಳ-ಡ ಉತ್ಸವಕ್ಕೆ ಶೋಭೆಯುಂಟುಗಿತ್ತು ಶ್ರೀಮಾನ್ ಪೋಲೀಸ್ ಸಬ್ ಇನ್ಸ್ಪೆಕ್ಟರವರು ತಮ್ಮ ಸಿಬ್ಬಂದಿ ಯೊಡನೆ ಈ ಮಹೋತ್ಸವವು ಬಹು ಶಾಂತಿ ಶಿಸ್ತು ಗಳಿಂದ ನೆರವೇರುವಂತೆ ನೋಡಿಕೊಂಡರು

ಉತ್ಸವವು ಸಭಾ ಮಂಟಪಕ್ಕೆ ಬರುತ್ತಲೇ ಸ್ವಾಗತ ಕಮಿಟಿಯವರ ಪ್ರಾರ್ಥನೆಯಂತೆ ಶ್ರೀ ಜಗದ್ಗುರುಗಳು ಸಿಂಹಾಸನದಲ್ಲಿ ಮಂಡಿಸಿದರು ಅರಂಭದಲ್ಲಿ ದೇವರ ಪ್ರಾರ್ಥನೆ ನಡೆಯಿತು ಹೈಸ್ಕೂಲು ಹೆಡ್ಮಾಸ್ಟರವರು ಸ್ವಾಗತಭಾಷಣವನ್ನು ಮಾಡಿದರು ಶ್ರೀಮತಿ ಸೀತಮ್ಮ ಮತ್ತು ಗರುಸ್ವಾಮಿ ಇವರ ಸಂಗೀತ ನಡೆಯಿತು ಬಳಿಕ ಹರಿಹರದ ಹೊಸಮಠದ ವೇದಮೂರ್ತಿ ಶ್ರೀ ಶಂಭುಲಿಂಗಯ್ಯನವರು ಜಗದ್ಗುರುಗಳವರ ಮೇಲೆ ರಚಿಸಿರುವ "ಭಾವ ಪುಷ್ಪಮಾಲೆ" ಎಂಬ ಕವನವನ್ನು ಒಪ್ಪಿಸಿದಾದ ಮೇಲೆ ಇದೇ ಗ್ರಾಮದ ಪಾಜಿ ಅಜ್ಜುಲ್ ವಹಾಬ್ ಸಾಹೇಬರವರ ಮೈಕ್ಕಳು ಶ್ರೀ ಜಬ್ಬಾರ್ ಸಾಹೇಬರವರು ಉರ್ದು ಭಾಷೆಯಲ್ಲಿ ಮುಸ್ಲಿಂ ಸಮಾಜ ದವರ ಪರವಾಗಿ ಭಿನ್ನವತ್ಸಲೆಯನ್ನು ಅರ್ಪಿಸಿದರು ಗ್ರಾಮದ ಎಲ್ಲರಪರವಾಗಿ ಇನ್ನೊಂದು ಭಿನ್ನವತ್ಸಲೆಯು ಅರ್ಪಿತವಾಯಿತು ದಾವಣಗೆರೆ ಪೌರಾಣಿಕ ಮಹಿದ ವೇದಮೂರ್ತಿ ಶ್ರೀ ವೀರಬಸವಯ್ಯನವರು ಧರ್ಮ ಪ್ರಚಾರವನ್ನು ಕ.ರಿತು ವ್ಯಾಖ್ಯಾನಮಾಡಿದರು. ಶ್ರೀ ಮಾನ್ ಕುಲಕರ್ಣಿ ಶೇಷಗಿರಿರಾಯರು ಜಗದ್ಗುರು ಗಳವರ ವೈಶಿಷ್ಟ್ಯ, ಪಾಂಡಿತ್ಯ, ಸಾಹಿತ್ಯಸೇವೆ, ದೇಶ ಸೇವೆ ಧರ್ಮೋದ್ಧಾರ, ತತ್ವಪ್ರಚಾರಾದಿಗಳನ್ನು ಉಲಿತು ಹೃದಯಂಗಮವಾಗಿ ವ್ಯಾಖ್ಯಾನಮಾಡಿದರು. ಕೆಪ್ಪನೆಗೆ ಜಗದ್ಗುರುಗಳವರು ವಿಜಯದಶಮಿಯ ಕಮೋಪಾಜೆ ಎಂಬ ವಿಷಯವಾಗಿ ಧಿರಗಂಭೀರವಾಗಿ ಉಪದೇಶವಿತ್ತರು

ಈ ಉತ್ಸವಕ್ಕೆ ಅನೇಕ ಗ್ರಾಮಗಳಿಂದ ಬಹುಜನರು ಆಗಮಿಸಿದ್ದರು ಕೊನೆಗೆ ಗುರುಗಳಿಗೆ ತಮೀಸಮರ್ಪಣೆ ಯಾಗಿ ಮಂಗಳಗೀತೆಯೊಂದಿಗೆ ಜಯಘೋಷವಾಗಿ ಕಾರ್ಯಕಲಾಪಗಳು ಸಾಂಗಗೊಂಡಿಸಲ್ಪಟ್ಟವು.

ದಸರಾ ಸ್ವಾಗತಮುಂಡಿಗೆ, ಸಂತೆಬೆನ್ನೂರು.

ಪಂಚಾಚಾರ್ಯಪ್ರಭಾ
೧೯೫೦ನೆಯ ಅಕ್ಟೋಬರ್ ತಾ॥ ೩೦ನೇ ಸೋಮವಾರ

ನವರಾತ್ರಿ ನಾಡಹಬ್ಬ

ಹಿಂದುಗಳು ಆಚರಿಸಬೇಕಾದ ಅತಿ ಪ್ರಾಚೀನ ಹಬ್ಬಗಳಲ್ಲಿ ಈ ನವರಾತ್ರಿ ಹಬ್ಬವೂಂದಾಗಿದೆ ಪ್ರತಿವರ್ಷದ ಆಶ್ವೀಜ ಶು॥ ಪ್ರತಿಪದೆಯಿಂದ ನವಮಿಪರ್ಯಂತ ೯ ದಿವಸ ರಾತ್ರಿಯಲ್ಲಿ ದೇವತಾರಾಧನೆ ನಡೆಯಬೇಕಾದ ಪ್ರಯುಕ್ತ ಈ ಹಬ್ಬಕ್ಕೆ ನವರಾತ್ರಿಹಬ್ಬವೆಂದು ಕರೆಯುವರು ಹಿಂದುಗಳು ತಮ್ಮ ತಮ್ಮ ಮತಾನುಸಾರವಾಗಿ ಇಷ್ಟದೇವತೆಗಳನ್ನು ಅನನ್ಯವಾದ ಭಕ್ತಿಯಿಂದ ಪೂಜಿಸುವರು ವ್ಯಾಮಮಿಶ್ರವಾಗಿ ಈ ಹಬ್ಬದಲ್ಲಿ ದೇವಿಯ ಆರಾಧನೆಯೇ ಹೆಚ್ಚಾಗಿ ನಡೆಯುವದು ಯಾಕಂದರೆ ಜಗನ್ಮಾತೆಯಾದ ಚಾಮುಂಡೇಶ್ವರಿ ದೇವಿಯು ಈ ದಿನಗಳಲ್ಲಿ ಲೋಕಕಂಟಕರಾದ ವ ಹಿಷಾಸುರಾದಿ ರಾಕ್ಷಸರ ಸಂಗಡ ಹೋರಾಡಿ ಅವರನ್ನೆಲ್ಲ ಸಂಹರಿಸಿ ಹತ್ತನೆಯ ದಿವಸ ಜಯಸಂಪಾದಿಸಿ ಜಗತ್ತಿಗೆ ಕಲ್ಯಾಣಮಾಡಿದ್ದರಿಂದ ಹಿಂದುಗಳೆಲ್ಲರೂ ಈ ದಿನಗಳನ್ನು ಪವಿತ್ರದಿನಗಳೆಂದು ತಿಳಿದು ದೇವತಾರಾಧನೆಯೊಂದಿಗೆ ಹಬ್ಬವನ್ನಾಗಿ ಆಚರಿಸುವರು ದೇವಿಯು ಜಯಪಡೆದ ಹತ್ತನೇ ದಿವಸವೇ ವಿಜಯದಶಮಿ ಎಂದು ಪ್ರಸಿದ್ಧವಾಗಿದೆ

ಮಹಿಷಾಸುರನನ್ನು ವಧೆಮಾಡಿದ ಸ್ಥಾನವೇ ಮಹಿಷೂರೆಂಬ ಅಭಿಧಾನದಿಂದ ಪ್ರಕಾಶಿಸುತ್ತಿದ್ದು ಕನ್ನಡ ನಾಡಿನ ಅರಸರ ರಾಜಧಾನಿಯಾಗಿದೆ ಸಮೀಪದ ಬೆಟ್ಟದಲ್ಲಿಯೇ ಮಹಾಪ್ರಭುಗಳ ಕುಲದೈವತವಾದ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನವಿದೆ ಪ್ರತಿವರ್ಷ ನವರಾತ್ರಿಯಲ್ಲಿ ಈ ದೇವಿಯು ಆರಾಧನೆಯು ಪ್ರಭುಗಳ ವರಿಂದ ಒಳ್ಳೇ ಆನಂದಕರವಾಗಿ ನಡೆಯುತ್ತದೆ ಈ ಒಂಭತ್ತು ಶುಭದಿನಗಳಲ್ಲಿ ಶ್ರೀಮನ್ಮಹಾರಾಜರವರು. ಸಿಂಹಾಸನಾರೋಹಣಮಾಡುನರು ಆಗ್ಗೆ ಮೈಸೂರಿನಲ್ಲಿ ನಡೆಯುವ ವೈಭವದ ವರ್ಣನೆಯನ್ನು ಮಾಡಲು ಅದಿತೀಪತಿಗಿಗೂ ಅಸಾಧ್ಯವಾದುದು ಇದನ್ನು ನೋಡುವದಕ್ಕಾಗಿ ಹಿಂದುಸ್ಥಾನದ ನಾನಾಭಾಗಗಳಿಂದ ಜನರು ಆಗಮಿಸುವರಲ್ಲದೆ ಪರರಾಷ್ಟ್ರಗಳಿಂದಲೂ ಕೂಡಾ ಜನರು ಬರುತ್ತಿರುವದನ್ನು ಕಾಣಬಹುದು ಇಂಥಾ ಮನೋರಂಜಕವಾದ ನಾಡಹಬ್ಬವು ಜಗತ್ತಿನಲ್ಲಿ ಇನ್ನಾವದೇಶದಲ್ಲಿಯೂ ನಡಿಯಲಾರದೆಂದು ಧಾರಾಳವಾಗಿ ಹೇಳಬಹುದು ಇದೇ ರೀತಿ ವಿಜಯನಗರಾಸ್ಥಾನವೈಭವವು ಉತ್ಕರ್ಷದಲ್ಲಿರುವಾಗ ಕೂಡ ಈ ನಾಡಹಬ್ಬದ ವೈಭವವು ಉತ್ಕರ್ಷತೆಯಿಂದಲಿತ್ತು

ಪಾಂಡವರು ತಮ್ಮ ಸತ್ಯ ಧರ್ಮ ಪರಿಪಾಲನೆಗಾಗಿ ಈ ವಿಜಯದಶಮಿದಿವಸ ಸಕಲ ಪ್ರಜಾವರ್ಗದಿಂದ ಸಮ್ಮಿಲಿತರಾಗಿ ಬನ್ನಿಮಹಾಕಾಳಿಯ ಪೂಜೆಗೈದು ತಮ್ಮ ಶಸ್ತ್ರಾಸ್ತ್ರಗಳನ್ನು ದೇವಿಗೆ ಅರ್ಪಿಸಿ ಜಯಘೋಷವಾದ ವೆನ್ನು ಪಡೆದು ಜನಕಯಜ್ಞದ ಪ್ರೇಮವಾದರವು ಸದಾ ಇರಲೆಂದು ಬನ್ನಿದಳವನ್ನು ಕೊಟ್ಟುದ್ದರಿ ಅನುಕರಣವನ್ನು ಇಂದಿಗೂ ಹಿಂದುಗಳು ಆಚರಿಸುತ್ತ ಬಂದುದಾಗಿದೆ ಈ ಅನುಕರಣದಿಂದ ಜಗತ್ತಿನಲ್ಲಿ ಪ್ರೇಮವು ಹೆಚ್ಚಿ ಸುಖಶಾಂತಿಗಳು ನೆಲೆಗೊಳ್ಳುವವು ಪೂರ್ವಿಕರು ಹಾಕಿ ಕೊಟ್ಟ ಈ ರೀತಿಯ ಎಷ್ಟೋ ಸನ್ಮಾರ್ಗಗಳು ಮಾನವ ಸಮಾಜದ ಏಳಿಗೆಗಾಗಿಯೇ ಎಂದು ಹೇಳಬಹುದು

ಇಂಥ ಪವಿತ್ರವಾದ ನವರಾತ್ರಿ ನಾಡಹಬ್ಬದಲ್ಲಿ ವೀರಶೈವಧರ್ಮಗುರುಗಳಾದ ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ವೀರಗಂಗಾಧರಶಿವಾಚಾರ್ಯ ಮಹಾ ( ) ಗಳವರು ಧಾರವಾಡ ಡಿ॥ ಸವಣೂರಿನಿಯೂ ಹಾಗೂ ಶ್ರೀಶೈಲಜಗದ್ಗುರು ಸೂರ್ಯಸಿಂಹಾಸನಾಧೀಶ್ವರ ಶ್ರೀಪಾಗೀಶಪಂಡಿತಾರಾಧ್ಯಶಿವಾಚಾರ್ಯ ಮಹಾ ( ) ಗಳವರು ಶಿವಮೊಗ್ಗಾ ಡಿ॥ ಸಂತೆಬೆನ್ನೂರಲ್ಲಿಯೂ ತಮ್ಮ ಸರ್ಕಿಟು ಕ್ಯಾಂಪನ್ನೆರ್ಪಡಿಸಿ ಪ್ರತಿ ನಿತ್ಯ ಧರ್ಮಾನೀತಿಯನ್ನು ಬೋಧಿಸುತ್ತ ಸನಾತನೋನ್ನತಿಯ ರಾಷ್ಟ್ರೋದ್ಧಾರಕಾರ್ಯ ಮಾಡುತ್ತಿರುವದು ವೀರಶೈವಧರ್ಮದ ಸೌಭಾಗ್ಯವೆಂದೇ ಹೇಳಬೇಕಾಗಿದೆ ಆದ್ದರಿಂದ ಸಕಲ ವೀರಶೈವಬಂಧುಗಳು ಆರ್ಷಾತ್ ಹಿಂದುಗಳು ಇಂಥ ಪವಿತ್ರದಿನಗಳಲ್ಲಿ ಗುರುಗಳ ದರ್ಶನವನ್ನು ಪಡೆದು ಸಮುದೇಶವನ್ನು ಕೇಳಿ ಧನ್ಯರಾಗಬೇಕೆಂದು ಆತಿಸುಕ್ತಿನೆ

ವರ್ತಮಾನಸಂಗ್ರಹ

ಸಾರ್ವತ್ರಿಕ ಚುನಾವಣೆ ೧೯೫೧ ನೇ ಏಪ್ರಿಲ್ ೧೦ ರಲ್ಲಿ ನಡೆಸುವ ನಿರ್ಧಾರ

ಭಾರತದಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳ ಬಗ್ಗೆ ಭಾರತ ಸರ್ಕಾರದ ಚುನಾವಣಾ ಮುಖ್ಯಾಧಿಕಾರಿಗಳಾದ ಶ್ರೀ ಸೇನ್‌ರವರು ಮಹಾಪ್ರಧಾನಿ ಪಂ॥ ನೆಹರೂರವರೊಡನೆ ಸಮಾಲೋಚನೆ ನಡೆಸಿ ಪ್ರತ್ಯೇಕ ಸಾರ್ವತ್ರಿಕ ಚುನಾವಣೆಯು ೧೯೫೧ ನೇ ಏಪ್ರಿಲ್ ೧೦ ನೇ ತಾರೀಖಿನ ದಿನ ನಡೆಯಬೇಕೆಂದು ನಿರ್ಧರಿಸಿದ್ದಾರೆಂದು ಗೊತ್ತಾಗಿದೆ ಈ ಬಗ್ಗೆ ಸೂಕ್ತಕ್ರಮಗಳನ್ನು ಕೈಗೊಂಡು ಆ ವೇಳೆಗೆ ಸವ ತ್ತೆಗಳನ್ನು ಮಾಡಿಕೊಳ್ಳಬೇಕೆಂದು ಎಲ್ಲ ಪ್ರಾಂತಗಳ ಮುಖ್ಯಮಂತ್ರಿಗಳಿಗೂ ಪತ್ರ ಬರೆದಿದ್ದಾರೆಂದು ತಿಳಿದುಬಂದಿದೆ ಮುಂಬರುವ ನ ೧೪ ರಿಂದ ಪ್ರಾರಂಭವಾಗುವ ಪಾರ್ಲಿಮೆಂಟ್ ಅಧಿವೇಶನದಲ್ಲಿ ಗಡಿ ನಿರ್ಧಾರದ ಬಗ್ಗೆ ವಿಶೇಷ ಮಸೂದೆಯೊಂದನ್ನು ಮಂಡಿಸಲಾಗುವುದೆಂದು ಗೊತ್ತಾಗಿದೆ

ಮುಂದಿನ ವರ್ಷದಿಂದ ಹಿಂದೀ ಟೆಲಿಪ್ರಿಂಟರುಗಳು

ಭಾರತದಲ್ಲಿ ಮುಂದಿನ ವರ್ಷ ಪ್ರಯೋಗಾರ್ಥವಾಗಿ ಹಿಂದೀ ಟೆಲಿಪ್ರಿಂಟರುಗಳನ್ನು ಪ್ರಯೋಗಿಸಲಾಗುವುದೆಂದು ಕಮ್ಯೂನಿಕೇಷನ್ ಮಂತ್ರಿ ಮಿ॥ ರಫಿ ಅಹಮದ್ ಕಿದ್ವಾಯಿಯವರು ತಿಳಿಸಿರುವರು

ಪಾಕಿಸ್ತಾನಕ್ಕೆ ಸೇರಿದರೆ ಕಾಶ್ಮೀರದ ನಾಶ

ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನದ ಕೆಲಸಗಾರರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಪಾಕಿಸ್ತಾನಕ್ಕೆ ಕಾಶ್ಮೀರವು ಸೇರಿದರೆ ಅದರ ಸರ್ವನಾಶವಾಗುವುದೆಂದು ಪಂ॥ ನೆಹರೂರವರು ಎಚ್ಚರಿಕೆಯಿತ್ತಿದ್ದಾರೆ

ಕೇಂದ್ರಸರ್ಕಾರದಿಂದ ಬೆಲ್ಲದ ಬೆಲೆ ನಿಗದಿ

ಮೈಸೂರಿನಲ್ಲಿ ಮಣಕ್ಕೆ ೩೧ ರೂ ಗಳು

ಒರಿಸ್ಸಾ ಪಂಜಾಬ್, ಪೆಪ್ಸು, ಭೂತಾಲ್ ಮತ್ತು ದೆಹಲಿ ಪ್ರಾಂತಗಳಲ್ಲಿ ಬೆಲ್ಲವನ್ನು ಒಂದು ಮಣಕ್ಕೆ ೨೦ ರೂ ಗಳಂತೆ ಭಾರತ ಸರ್ಕಾರ ನಿಗದಿ ಮಾಡಿದೆ ಬೊಂಬಾಯಿ ಪ್ರದೇಶ, ಪಶ್ಚಿಮಬಂಗಾಳ, ಹೈದ್ರಾಬಾದು, ಮೈಸೂರು, ಮಧ್ಯಭಾರತ, ರಾಜಸ್ಥಾನ, ತಿರುವಾಂಕೂರು, ವಿಂಧ್ಯಪ್ರದೇಶ, ಅಜ್ಮೀರ್ ಮತ್ತು ತ್ರಿಪುರ ಸಂಸ್ಥಾನಗಳಲ್ಲಿ ಮಣ ೧ ಕ್ಕೆ ೩೧ ರೂ ಗಳೆಂದು ನಿಗದಿ ಮಾಡಿದೆ

ಈ ಆಜ್ಞೆ ತೀಕ್ಷ್ಣಜ್ಞೆಯ ಜಾರಿಗೆ ಒರೆದಿ ಅಯಾ ಪ್ರದೇಶಗಳಲ್ಲಿ ನಿಗದಿಯಾದ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಿದಲ್ಲಿ ಅದು ಅಕ್ರಮವೆಂದು, ಅಂಥವರ ಸಂಬಧ್ಧಗಳಲ್ಲಿ ಜುಲ್ಮಾನೆ ಮತ್ತು ಶಿಕ್ಷೆ ಇವೆರಡನ್ನು ವಿಧಿಸಲಾಗುವುದು ಎಂದು ಸರ್ಕಾರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ಮೋಟಾರು ಮತ್ತು ಜಂ ಸಹಸ್ರ ರೂ. ಗಳೊಡನೆ ಪರಾರಿ

ಳಬ್ಳಕ್ಕದ ಧಾರಿ ವರ್ತಕರ ಮೋಟಾರಿನ ಡ್ರೈವರ ನೊಬ್ಬನು ಮೊನ್ನೆ ನಗದು ಹಣ ಮತ್ತು ಒಡವೆಗಳೂ ಸೇರಿ ಒಟ್ಟು ಜಂ ಸಹಸ್ರ ರೂ. ಗಳಷ್ಟು ಹಣವನ್ನು ತೆಗೆದುಕೊಂಡು ಮಾಲೀಕರ ಮೋಟಾರು ಸಮೇತ ಪರಾರಿಯಾದನೆಂದು ವರದಿಯಾಗಿದೆ. ಕಾರು ಊರಿನಿಂದ ಆಚೆ ಸ್ವಲ್ಪ ದೂರದಲ್ಲಿ ನಿಂತಿತ್ತು ಆದರೆ ಡ್ರೈವರು ಮತ್ತು ಹಣ ಪತ್ತೆಯಿಲ್ಲ

೧೦೯ಜ ರೂ. ಗಳ ನೋಟುಗಳ ಅಪಹಾರ

ಕಳೆದ ೩೬ ನೇ ತಾ॥ ಮೈಸೂರು ನಗರದಲ್ಲಿರುವ ಮೈಸೂರು ಬ್ಯಾಂಕ್ ಕಚೇರಿಯಲ್ಲಿ ಬಾಡಿಗಾರ್ಡ್ ಹವಾಲ್ದಾರ್ ಅಂತೋಣಿ ಎಂಬಾತನು ೨೦೦೦ ರೂ ನೋಟುಗಳನ್ನು ಬ್ಯಾಂಕಿಗೆ ಕಟ್ಟಲು ಪ್ರಯತ್ನಪಡುತ್ತಿದ್ದನು ಆಗ ಕೌಂಟರ್ ಬಳಿ ಇದ್ದ ಕಾಶಿಯ ೩೫ ವರ್ಷದ ಮೋಹನ್ ಎಂಬುವನು ೧೦೯ಜ ರೂ ಬೆಲೆ ಬಾಳುವ ೫ ರೂ ನೋಟುಗಳ ಕಂತೆಯನ್ನು ಅಪಹರಿಸಿ ಓಡಿಹೋದನೆಂದೂ, ಆತನನ್ನು ಪೋಲೀಸ್ ಸ್ಟೇಷನ್ ಬಳಿ ಹಿಡಿದು ಬಂಧನದಲ್ಲಿಡಲಾಗಿದೆಯೆಂದೂ ವರದಿಯಾಗಿದೆ

ಮುಂಬೈ ಪ್ರಾಂತದಲ್ಲಿ ಐದುಸಾವಿರ ವಿವಾಹವಿಚ್ಛೇದನ

೧೯೪೬ ರಲ್ಲಿ ವಿವಾಹವಿಚ್ಛೇದನ ಮಸೂದೆಗೆ ಅಂಗೀಕಾರ ದೊರೆತ ಮೇಲೆ ಈ ವರ್ಷದ ಮಧ್ಯದವರೆಗೂ ಮುಂಬೈ ಪ್ರಾಂತದಲ್ಲಿ ೨,೯೦೪ ಹಿಂದೂ ಹೆಂಗಸರೂ, ೨,೪೫೨ ಹಿಂದೂ ಗಂಡಸರೂ ವಿವಾಹ ವಿಚ್ಛೇದನಿಸಿದ್ದಾರೆ

ಸಮುದ್ರದ ಕೆಳಭಾಗದಲ್ಲಿ ಜೀವಿಸುವ ಜಲಚರಗಳು

ಕಂಡುಹಿಡಿಯಲು ವಿಜ್ಞಾನಿಗಳ ನಿಯೋಗದ ಪ್ರವಾಸ

ಸಮುದ್ರದಲ್ಲಿ ಸುಮಾರು ೪೫೫ ಮೈಲಿ ಕೆಳಭಾಗದಲ್ಲಿ ಜೀವಿಸುವ ಜಲಚರ ಪ್ರಾಣಿಗಳನ್ನು ಕಂಡುಹಿಡಿಯಲು ಕೋಪನ್‌ಹೇಗನ್ ನಗರದಿಂದ ವಿಜ್ಞಾನಿಗಳ ನಿಯೋಗವೊಂದು ಪ್ರಯಂಜ ಪ್ರವಾಸ ಕೈಗೊಂಡಿದೆ ಡೆನ್‌ಮಾರ್ಕಿನ ಸುಪ್ರಸಿದ್ಧ ವಿಜ್ಞಾನಿಗಳಾದ ಡಾ॥ ಆಂಟನ್‌ಬ್ರನ್‌ರವರು ಈ ನಿಯೋಗದ ನಾಯಕರು

ಸುಮಾರು ೨೪೦೦ ಅಡಿಗಳಗಿಂತ ಕೆಳಭಾಗದಲ್ಲಿ ಜೀವಿಸುವ ಪ್ರಾಣಿಗಳ ವಿಚಾರವೇ ವಿಜ್ಞಾನಿಗಳಿಗೆ ಗೊತ್ತಿಲ್ಲ ಮಾನವನು ಇದುವರೆಗೂ ನೋಡಿರುವ ವಿಚಿತ್ರ ಪ್ರಾಣಿಗಳು ಅಲ್ಲಿ ಜೀವಿಸುತ್ತಿರಬಹುದು ಅವುಗಳನ್ನು ಕಂಡುಹಿಡಿಯುವುದೇ ನಮ್ಮ ಉದ್ದೇಶ— ಎಂದು ಡಾ॥ ಆಂಟನ್‌ರವರು ತಿಳಿಸಿದರು

ದಕ್ಷಿಣ ಕೊರಿಯನ್ನರು ಮಂಚೂರಿಯಾ ಗಡಿ ತಲುಪಿದರು

ದಕ್ಷಿಣ ಕೊರಿಯನ್ನರು ಮಂಚೂರಿಯಾ ಗಡಿಯನ್ನು ತಲುಪಿದರೆಂದು ತಿಳಿಬಂದಿದೆ ಪ್ಯೋಂಗ್‌ಯಾಂಗ್ ಉತ್ತರದಲ್ಲಿ ೧೨೫ ಮೈಲಿ ದೂರದಲ್ಲಿರುವ ಚೋಸಾನ್ ಪಟ್ಟಣದಿಂದ ಮುನ್ನುಗ್ಗಿ ದಕ್ಷಿಣಕೊರಿಯನ್ನರು ಯಾಲು ನದಿಯ ದಕ್ಷಿಣ ತೀರವನ್ನು ಸೇರಿದರು ಪಶ್ಚಿಮ ತೀರದಲ್ಲಿ ಸಿನಾನ್ಜು ಪಾಕ್‌ಜಾನ್ ರಕ್ಷಿಯಲ್ಲಿ ವಿಶ್ವಸಂಸ್ಥೆ ಪಡೆಗಳು ಮುನ್ನಡೆಯುತ್ತಿವೆ

ಕಳೆದ ೩೪ ಗಂಟೆಗಳಲ್ಲಿ ಚೀನಾ ಕಮ್ಯೂನಿಸ್ಟ್ ಪಡೆ ಮಂಚೂರಿಯಾ ಗಡಿಯಲ್ಲಿ ವ್ಯೂಹರಚನೆಮಾಡಿರುವುದಕ್ಕೆ ಪೊಡಗಿದೆಯೆಂದು ವದಂತಿ ಹಬ್ಬಿದೆ ಕೊರಿಯದಲ್ಲಿ ೫೦೦೦ ಚೀನಾ ಕಮ್ಯೂನಿಸ್ಟ್ ಯೋಧರು ಪ್ರವೇಶಿಸಿದ್ದಾರೆಂದೂ ವದಂತಿ ಹಬ್ಬಿದೆ.

ವರ್ತಕರಿಂದ ಕಾಳಸಂತೆ ನಿರ್ಮೂಲ ಸಂಘದ ಸ್ಥಾಪನೆ

ಕಾನ್ಪುರದ ಸುಮಾರು ನೂರು ಬಟ್ಟೆವರ್ತಕರು ಕಳೆದವಾರ ಸಭೆ ಸೇರಿ, ಕಾಳಸಂತೆಯನ್ನು ನಿರ್ಮೂಲನಮಾಡುವ ಸಲುವಾಗಿ ಒಂದು ಸಂಘವನ್ನು ಸ್ಥಾಪಿಸಿದರು ಸಂಘದ ಸದಸ್ಯರಲ್ಲಿ ಯಾರಾದರೂ ಕಾಳಸಂತೆ ನಡೆಸಿದರೆ ಅವರನ್ನು ಸಂಘದಿಂದ ಹೊರದೂಡಿ, ಅವರ ಜೊತೆಯನ್ನು ಬಯಲುಮಾಡಬೇಕೆಂದು ತೀರ್ಮಾನಿಸಿ ನಾಯಿತು.

ನೌಕರರಿಂದ ಭಾ॥ ಸರ್ಕಾರಕ್ಕೆ ನಿಷ್ಠೆಯ ಪ್ರಮಾಣ ಅಗತ್ಯ

ಮೈಸೂರು ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ಸಂಸ್ಥಾನದ ಸರ್ಕಾರಿ ನೌಕರಿಯಲ್ಲಿ ಈಗ ಕೆಲಸದಲ್ಲಿರುವವರೂ ಮತ್ತು ಹೊಸದಾಗಿ ಸೇರುವವರೂ ಭಾರತ ಸರ್ಕಾರಕ್ಕೆ ವಿಧೇಯತೆಯನ್ನು ಸೂಚಿಸುವ ಪ್ರಮಾಣ ವಚನ ಸ್ವೀಕಾರ ಮಾಡಬೇಕೆಂದು ವಿಧಾಯಕ ಮಾಡಿದ್ದಾರೆ

ಶ್ರೀ ರಾಮಕೃಷ್ಣ ವಿದ್ಯಾರ್ಥಿನಿಲಯದ ಪ್ರಾರಂಭೋತ್ಸವ

ಮೈಸೂರು ನಗರದ ವಾಣಿವಿಲಾಸ ಮೊಹಲ್ಲಾದಲ್ಲಿ ಶ್ರೀ ರಾಮಕೃಷ್ಣಾಶ್ರಮ ಎಂಬುದು ಇದೆ ಆ ಆಶ್ರಮದವರು ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಿದ್ದಾರೆ ಶ್ರೀ ರಾಜಾಜಿಯವರು ಈ ತಿಂಗಳು ೨೨ನೆಯ ತಾರೀಖು ಅದರ ಪ್ರಾರಂಭೋತ್ಸವವನ್ನು ನೆರವೇರಿಸಿದರು ನಮ್ಮ ಮಹಾರಾಜರವರಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು

ಆಹಾರ ಸಂಶೋಧನಾಲಯದ ಪ್ರಾರಂಭೋತ್ಸವ

ಈ ತಿಂಗಳು ೨೧ನೆ ತಾರೀಖು ಇದರ ಪ್ರಾರಂಭೋತ್ಸವ ನಡೆಯಿತು. ಕೇಂದ್ರ ಸರಕಾರದ ಮಂತ್ರಿಗಳಾದ ಶ್ರೀ ಜಕ್ಕಲವರ್ ರಾಜಗೋಪಾಲಚಾರಿಯವರು ಸಂಶೋಧನಾಲಯದ ಪ್ರಾರಂಭೋತ್ಸವವನ್ನು ನೆರವೇರಿಸಿದರು

ಅರೆಹೊಟ್ಟೆ ಉಂಡು ದುಡಿಯುತ್ತಿರುವ ಜಡವರಿಗೆ ಈ ಕಾರ್ಖಾನೆಯುದಿಂದ ಸಹಾಯವಾಗಲಿ, ಇದರ ಪ್ರಯತ್ನದಿಂದ ಅವರ ಹಸಿವು ನೀಗಲಿ' ಎಂದು ಶ್ರೀ ರಾಜಾಜಿಯವರು ಈ ಸಂದರ್ಭದಲ್ಲಿ ತಿಳಿಸಿದರು

ಶ್ರೀರೇಣುಕಾಚಾರ್ಯರ ಶಿಲಾಲಿಂಗೋದ್ಭವ ಮೂರ್ತಿ ಆಗಮನ, ಸದಸ

ಲೋಕಮಾತೃಕರೂ ಭಿಕ್ಷುಬ್ರಹ್ಮಚ್ಯವರಿಷ್ಠರೂ, ಪಂಚಾಚಾರ್ಯಪ್ರಭಾ ಸಂಪಾದಕರೂ ಆದ ಶ್ರೀ॥ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಮೈಸೂರಿನಲ್ಲಿ ಜೀವಂತ ರಾಗಿ ಇರುವಾಗಿ ಶಿಲ್ಪಕಲೆಯಲ್ಲಿ ಪ್ರಜ್ಞಾತಿಯಮ್ಮ ಪಡೆದ ಶ್ರೀ ಸಿದ್ಧಲಿಂಗಸ್ವಾಮಿಗಳವರ ನೇತೃತ್ವದಲ್ಲಿ ಲಿಂಗೋದ್ಭವಮೂರ್ತಿಯಮ್ಮ ಮಾಡಲಿಕ್ಕೆ ತಂದೀ ಸಮೀಪವಾಗಿ ಅರೋರ ಕೊಟ್ಟು ಪಟ್ಟಿಣದ ಮಂದಿರಕ್ಕೆ ಒಂಟು ಸುಂದರವಾದ ಮೂರ್ತಿಯನ್ನು ಮಾಡಿಸಿ ಲಿಂಗೈಕ್ಯರಾದರು. ಪುನಃ ಸದರಿ ಪಂಡಿತರ ಕರೆಯಂತೆ ಕೋಥಿಯವ ಇವರ ತಮ್ಮಂದಿರಾದ ಪ್ರಭಾ ಸಂಪಾದಕ ಬ್ಯು॥ ಶ್ರೀ ವೇ॥ ಮಹಾದೇವಯ್ಯನವರು ಈ ವಳಗಾಗಿ ಸ್ವಲ್ಪಭಾಗ ಧವಮನ್ನು ಕೊಟ್ಟು ಹೆಸರು ವಾಸಿಗಳಾದ ಧರ್ಮವೀರ ಶ್ರೀಮಾನ್ ಮುದಗಲ್ಲು ಕೊಟ್ಟಪ್ಪನವರು ವಘಸಿಗಳಿ ಇವರಿಗೆ ಪೂರ್ತಿ ಧವವನ್ನು ಕಳಸಬೇಕೆಂದು ಪತ್ರಬರೆದಾಕ್ಷಣವೇ ಸಂತೋಷಪೂರ್ವಕ ಮನ್ನು ಭರ್ತಿಯಿಂದ (೩೦೦) ಪೂರು ರೂಪಾಯಿಗಳನ್ನು ಮೂರ್ತಿ ತರಲಿಕ್ಕೆ ಕಳುಹಿಸಿ ಕೃತಾರ್ಥರಾದರು ಆಗ್ಗೆ ಮಂದಿರಸ್ಥಾಪಕರಾದ ಶ್ರೀ ಚಿಕ್ಕಮಹಾದೇವ ಮಹಾಸ್ವಾಮಿಗಳು ಮೈಸೂರಿಗೆ ದಯಮಾಡಿಸಿ ಸಂಪಾದಕರಾದ ವೇ॥ ಮಹಾದೇವಯ್ಯನವರ ದೀರ್ಘಾಯುಷ್ಯದಿಂದ ಮೂರ್ತಿಗಳನ್ನು ಪೆಟ್ಟಿಗೆಗಳಲ್ಲಿ ಪ್ಯಾಕಮಾಡಿಸಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಧವನಕ್ಕೆ ತೆಗೆದು ಕೊಂಡು ಒಂದು ಫಲಪುಷ್ಪಾದಿಯೊಡನೆ ಪೂಜೆಗೊಳಿಸಿ ಮಂಗಳಾರತಿಯಮ್ಮು ಮಾಡಿ ಕೈಬೆಳ್ಳಿಪಾತಳಿಕೆಯಿಂದು ಪೀಠದ ಮಾಡಿಸಿ ಗದಿಗೆ ಮೂರ್ತಿಗಳನ್ನು ಕಳಸಿದರು ಮಾಡಿದ ಮಹೋಪಕಾರದ ಸ್ಮರಣೆ ಎಷ್ಟು ಬೆರೆದೂ ತೀರದು. ಕಾಶೀನಾಥಶಾಸ್ತ್ರಿಗಳವರು ಈ ಮೂರ್ತಿ ಸಲುವಾಗಿ ನಮ್ಮ ಕೂಡ ಗಣಿಗೆ ಪತ್ರವ್ಯವಹಾರ ಒಂದು ವರ್ಷ ಪರ್ಯಂತರ ಮಾತಿ ಸುಂದರವಾದ ಮೂರ್ತಿ ಮಾಡಿಸಿ ತೀರ್ಥಕಾಯಿಸಿದರು ಸದರಿ ಪಂಡಿತರು ಹೇಳಿದಂತೆ ಶ್ರೀ ತಿಲ್ಲಿ ಸಿದ್ಧಲಿಂಗಸ್ವಾಮಿಗಳು ಒಳ್ಳೇ ಪರಿಶ್ರಮಪೂರ್ವಕ ಮೂರ್ತಿಗಳನ್ನು ಬಹು ಸುಂದರವಾಗಿ ಮಾಡಿಕೊಟ್ಟಿರುವರು ಇವರಿಬ್ಬರ ಹಾಗೂ ವಾನ್ಸಾಸಸ್ಥಕಾರ ಸಜ್ಜಾಲಕ್ಕೆ ದುಡ್ಡಿನ ಸಹಾಯ ಮಾಡಿದ ವನಸಿಗಿರಿ ಶ್ರೀ ಮುದಗಲ್ ಕೊಟ್ಟಪ್ಪನವರ ಆಧಾರ ಎಷ್ಟು ಮೆಚ್ಚಿಸಿದರೂ ತೀರದೆಂದು ತಿಳಿಸುವ,

ಗದಗ ರೇಣುಕಮಂದಿರದ ನೆಕ್ರೆಟರಿ

ಪ್ರಕಟಣೆ

ಬಳ್ಳಾರಿ ಡಿ॥ ಹೊಸಪೇಟೆ ತಾಲ್ಲೂಕ ಬೈಲವದ್ದಿರಿ ಶ್ರೀಜಗದ್ಗುರು ವಿಶ್ವಾರಾಧ್ಯ ಸೇವಾಶ್ರಮದಲ್ಲಿ ಸ್ವತಂತ್ರ ವಾಗಿ ಸಂಸ್ಕೃತ, ಕನ್ನಡ, ಮತ್ತು ಹಿಂದೀ ವೈದಿಕ ಅಭ್ಯಾಸಮಾಡಲಿಚ್ಛೆಯುಳ್ಳ ಕುದ್ದ ಮಾಹೇಶ್ವರರಿಗಷ್ಟು ಗೌಣಗಲಿ, ಇಲ್ಲವೆ ಚಿಕ್ಕ ಉಪಾಚಾರ್ಯರಾಗಲಿ ತಿಳಿಪ್ಪವಾಗಿ ಇಲ್ಲಿಯ ಪಾಕಶಾಲೆಗೆ ಸೇರಬೇಕೆಂದು ಅಶ್ರಮದ ಸಂಚಾಲಕರು ಸರ್ವರಿಗೂ ಸೂಚಿಸುತ್ತಾರೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು

ಅಕ್ಷರರು
ಶ್ರೀಜಗದ್ಗುರು ವಿಶ್ವಾರಾಧ್ಯ ಸೇವಾಶ್ರಮ, ಬೈಲವದ್ದಿರಿ
ಪೋಷ್ಟ್॥ ಪಾಪಿನಾಯಕನಹಳ್ಳಿ, ತಾ॥ ಹೊಸಪೇಟೆ,
ಡಿ॥ ಬಳ್ಳಾರಿ

ಶಂಕುಸ್ಥಾಪನೆ, ಬೈಲವದ್ದಿರಿ

ಬಳ್ಳಾರಿ ಡಿ॥ ಹೊಸಪೇಟೆ ತಾಲೂಕ ಬೈಲವದ್ದಿರಿ ಶ್ರೀಜಗದ್ಗುರು ವಿಶ್ವಾರಾಧ್ಯ ಸೇವಾಶ್ರಮದಲ್ಲಿ ಶ್ರೀ ಜ॥ ವಿಶ್ವಾರಾಧ್ಯಮಂದಿರದ ಶಂಕುಸ್ಥಾಪನಕಾರ್ಯವು ಶ್ರೀ ವಿಜಯದಶಮಿಯ ಶುಕ್ರವಾರದ ಸುಮುಹೂರ್ತದಲ್ಲಿ ಶ್ರೀಮಂತ ಧರ್ಮವೀರ ಯಜಮಾನ ಸಿದ್ಧಪ್ಪ, ರಾಜಾಪುರ ಕಾಕಟಾಳು ಈ ಮಹೋದಯರ ಉದಾರ ಹಸ್ತದಿಂದ ಯಥಾವಿಧಿ ನೆರವೇರಿತು ಈ ಸಮಯದಲ್ಲಿ ಪಾಪಿನಾಯ್ಕನಹಳ್ಳಿ ಮತ್ತು ಬೈಲವದ್ದಿರಿ ಗ್ರಾಮಗಳ ಮೊಹಜಬುಗಳು ಆಗಮಿಸಿದ್ದರು ಸದ್ರಿ ಕಟ್ಟಡದ ಮಹಾ ಭಾರವನ್ನು ಸ್ವತಃ ಯಜಮಾನರೇ ವಹಿಸಿದ್ದಾರೆ ಅಕ್ಕಮಹಾದೇವಿಯಕ್ಕನವರ ಶ್ರೀಯೋಭಿವೃದ್ಧಿಗೆ ಯಜಮಾನರೇ ಅಗ್ರಣಿಗಳಾಗಿರುವರು ಇವರ ವಂಶಕ್ಕೆ ಶ್ರೀಮದಾಚಾರ್ಯರು ಇಹೋಪ್ಯಕಲ್ಯ ಮಂಗಲವನ್ನು ನೀಯಲಿ

ಪ್ರತ್ಯಕ್ಷದರ್ಶಿ,
ಕೊಡಾಲು ಪಂಪಾಪತಿ

ಶ್ರೀ ಜ॥ ಪಂಡಿತ ವಿಶ್ವಗುರು ವಾಚನಾಲಯ ಸ್ಥಾಪನೆ

ಧಾರವಾಡ ಜಿಲ್ಲಾ ಹಿರೇಕೆರೂರು ತಾ॥ ಯಡಗೋಡ ಗ್ರಾಮದಲ್ಲಿ ತಾ॥ ೨೦ ೧೦ ೫೦ ನೇ ದಿನ ಅಂದರೆ ವಿಜಯದಶಮಿಯ ಶುಭದಿನದಂದು ಹಗಲಿಡಿ ೪ ಗಂಟೆಯ ವೇಳೆಗೆ ಸಭೆ ಕೂಡಿ ಅನೇಕರು ಅನೇಗಳಕದಿಂದ ವಿಜಯ ದಶಮಿಯ ವಿಜಯಗಳನ್ನು ಹೇಳಿದರು

ಅನಂತರ ಇಲ್ಲಿ ಸ್ಥಾಪಿಸಲಾಗಿರುವ "ಶ್ರೀ ಜ॥ ಪಂಡಿತ ವಿಶ್ವಗುರು" ಧರ್ಮಾರ್ಥಸಾಹಿತ್ಯಪ್ರಕಾಶ ವೇದಾಧ್ಯಾಪ್ಯಶಾಸ್ತ್ರಿಗಳು ವಿಜಯದಶಮಿಯ ವಿಜಯ ವೆನ್ನು ಮನನಾಂದನಗಾಗುವಂತೆ ತಿಳುಹಿಸಿ ಕತೆಗೆ ಈ ಗ್ರಾಮದ ಪಾಠಶಾಲೆಯ ಹೊತೆಗೆ "ಶ್ರೀ ಜ॥ ಪಂಡಿತ ವಿಶ್ವಗುರು ವಾಚನಾಲಯ" ವನ್ನು ಸ್ಥಾಪಿಸಲಾಯಿತು ಅಲ್ಲಿ ನೆರೆದ ಸಭಿಕರು ಈ ವಾಚನಾಲಯದ ಅಭಿವೃದ್ಧಿ ಗೋಸುಗ ಪುಸ್ತಕ, ಮಾಸಿಕ ಪುಸ್ತಕ, ವರ್ತಮಾನಪತ್ರ ಇವುಗಳಿಗಾಗಿ ಒಂದು ನೂರು ರೂಪಾಯಿ ವಿಧಿ ಕೂಡಿಸಿ ಪ್ರಯ ಇದಕ್ಕೆ ವೇ॥ ರುದ್ರಸ್ವಯ್ಯನವರು-ಕೈರವಕಾದ ಮಕ ಇವರನ್ನು ಜೀವಮನ್ನ ಕಲ್ಲಾಗಿಯೂ, ಖಾಲಿಲ್ಲ ನಾಮದೇವ ಇವರನ್ನು ಸೆಕ್ರೆಟರಿಯನ್ನಾಗಿಯೂ ನೇಮಿಸಿ ಜ ಪಂಚಾಚಾರ್ಯರ ಜಯಘೋಷದೊಡನೆ ಸಭೆ ಮುಕ್ತಾಯಗೊಳಿಸಲ್ಪಟ್ಟಿತು

ಕಾರ್ಯದರ್ಶಿ.

ನೂತನ ಪ್ರಾಣ್ಯಾಸಿಕ ವಿಜಯಬೋಧಪತ್ರಿಕೆ

ಶಾಶೀ ವೀರಶೈವ ವಿದ್ವತ್ಸಂಘದಿಂದ 'ವಿಜಯಬೋಧ' ಎಂಬ ಹೆಸರಿನ ಪ್ರಾಣ್ಯಾಸಿಕ ಪತ್ರಿಕೆಯು ಆಕಿ ೨೬೫೨-ನಾಗಿ ಅಂದರೆ ಇದೇ ದೀಪಾವಳಿಯ ಸಮಯಕ್ಕೆ ಹೊಸ ಹುಟ್ಟಿದಿದೆ. ಈ ಪತ್ರಿಕೆಯಲ್ಲಿ ಧಾರ್ಮಿಕ ಸಾಹಿತ್ಯ-ಸಾಮಾಜಿಕ ಇತ್ಯಾದಿ ವಿವಿಧವಿಷಯಾದಿ ಪಂಡಿತೋತ್ತಮರ ವಿದ್ವತ್ಪೂರ್ಣ ಪ್ರಬಂಧಗಳನ್ನು ಪ್ರಸಿದ್ಧವಾಗುವಂತೆ ಪ್ರಯತ್ನಿಸುವುದೇ ಅಲ್ಲದೆ ಶ್ರೀಜಗದ್ಗುರು-ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರು ದಾವಣಗೆರೆ ಗ್ರಾಮಕ್ಕೆ ೧೯೩೪ ರಲ್ಲಿ ವಿಜಯಂಗೈದಿದ ಕಾಲಕ್ಕೆ ಸಕಲ ೫೬ ತಿಂಗಳವರೆಗೆ ಶ್ರಮವಹಿಸಿ ಕಾರ್ಯಮಾಡಿ ಶ್ರೀಜಗದ್ಗುರುಗಳವರ ವಿಜಯೋತ್ಸವದ ಯಶಸ್ಸಿಗೆ ಕಾರಣರಾದವರಲ್ಲಿ ಇವರು ಒಬ್ಬರು ಮತ್ತು ಶ್ರೀಜಗದ್ಗುರು ಅಭಿವರೇಣ್ಯಾಶ್ರಮದಿರದ ಬ್ರೆಜರಾಗಿ ಕಟ್ಟುವಕ್ಕೆ ಸಕ ಕಾರ್ಯಭಾರ-ಸಹಾಯಮಾಡಿರುವದಲ್ಲದೆ ಶ್ರೀ ಕಾಶೀಜಗದ್ಗುರು ವೀರಭದ್ರಶಿವಾಚಾರ್ಯರ ಪಟ್ಟಾಭಿಷೇಕಕಾಲದಲ್ಲಿ ಹೋಗಿ-ತಮ್ಮ ಶಕ್ತ್ಯನುಸಾರ ಸೇವೆ ಸಲ್ಲಿಸಿದವರಾಗಿರುತ್ತಾರೆ ಇವರಿಗೆ ಮರಣಕಾಲದಲ್ಲಿ ೨೮ ವರ್ಷಗಳಾಗಿದ್ದಿವು ಶ್ರೀ ಜಗದ್ಗುರುಗಳವರು ಅವರ ಪತ್ನೀಪುತ್ರಾದಿಗಳೀಗೂ ಬಂಧುವರ್ಗಕ್ಕೂ ಅರೋಗ್ಯಕಾಗ್ಯಾದಿಗಳನ್ನು ತೊಟ್ಟು ಅಮಗ್ರಹಿಸಲಿ ಎಂಬುದಾಗಿ ಜಗದಾಚಾರ್ಯರಮ್ಮ ಪ್ರಾರ್ಥಿಸುತ್ತೇವೆ

ಓರ್ವ ದುಃಖಭಾಗಿ

ಸ್ವೀಕಾರ

ಬೆಳಗಾಂವ ಡಿ॥ ಹುಲಗಬಾಳ ಶ್ರೀ ಬಸವಗೌಡಾ ಪಾಟೀಲ ಇವರು ಹಂ॥ ಶ್ರೀಕಾಶೀನಾಥ ಶಾಸ್ತ್ರಿಗಳವರ ಸ್ಮಾರಕ ನಿಧಿಗಾಗಿ 5 ರೂ.ಗಳನ್ನು ಅರ್ಪಿಸಿದ್ದಾರೆ.

ಬಾಣಾವರ ಸಿಟಿ ಯಜಮಾನ ಹೆಳ್ಳಿಕಿ ವೀರಭದ್ರ ಸವರು ನಿಧಿಪ್ರವಹದ ಸಮಯದಲ್ಲಿ ಪ್ರಧಾನಾಚಾರ್ಯಾಗಿ ಅರ್ಪಿಸಿದ ೨ ರೂ. ಗಳು ಮಲೆಬೆನ್ನೂರಮಠದ ಹಾಲಸಿದ್ಧಯ್ಯನವರಮ್ಮಾಗಿ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿಷ್ಕಳಂಗಲಷ್ಟೈಶ್ವರ್ಯವನ್ನು ಪ್ರಾರ್ಥಿಸುತ್ತೇವೆ.

ಸಿದ್ಧಾಂತಶಿಖಾಮಣಿ.

ವೀರಶೈವಮತಪ್ರತಿಪಾದಕವಾದ ಜನ್ಮಧಾರಣಮಾಡಿದ ಪ್ರತಿಯೊಬ್ಬ ಶಿವಭಕ್ತನೂ ಓದಿ ತಿಳಿದುಕೊಳ್ಳಲೇಬೇಕಾದ ಸಿದ್ಧಾಂತಶಿಖಾಮಣಿಯೆಂಬ ಮಹಾಗ್ರಂಥವನ್ನು ಶ್ರೀಜಗದ್ಗುರು ರೇಣುಕಾಚಾರ್ಯರು ಸಂಸ್ಕೃತದಲ್ಲಿ ಬರೆದಿರುತ್ತಾರೆ. ಈ ಮಹಾಗ್ರಂಥವನ್ನು ಕನ್ನಡಿಗರಿಗೆ ಅನುಕೂಲವಾಗಲೆಂದು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಲಾಗಿದೆ. ಈ ಗ್ರಂಥವು ಒಟ್ಟು ೩೪೩ ಪುಟಗಳಲ್ಲಿ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂಧ್ಯಾವಂದನೆ ಮೊದಲಾದ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾವತಾರದ ಮನೋಹರಕಥಾವಳಿಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರು ವಿನಿಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವೆಲ್ಲರೂ ಅವಶ್ಯವಾಗಿ ಓದಬೇಕು ಬೆಲೆ ೨ ರೂಪಾಯಿ.

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಒಂಭತ್ತು ಅವ್ಯವಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ಗಲ ಬೆಲೆ ಗಿಳ್ಕೆ	೦—೮
ಶ್ರೀರೇಣುಕಾಚಾರ್ಯರ ಲಿಂಗಾವತಾರ ರವ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ	೦—೬
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಗಿಳ್ಕೆ	೦—೬
,, ,, ,, ಚಳ್ಕೆ ಸೈಜು ಬೆಲೆ	೦—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಜಂಧ್ಯನುಪೋಕ್ಷಣೆಯಿಂದನ್ನು ಅನುಗ್ರಹಿಸುವ ಫೋಟೋ	೦—೦
ಶ್ರೀರೇಣುಕಾಚಾರ್ಯರು ವಿಭೂತಿಪುರಾಣ ಸ್ವಾಧ್ಯಾಯನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೦
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿ ಗಳವರ ಫೋಟೋ (ನಾನಾವಿಧಬಣ್ಣದ್ದು)	೦—೪
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕೀರಿಟಧಾರಣಮಾಡುವ ಫೋಟೋ	೦—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವ್ಯಲಿಂಗಶಿವಾಚಾರ್ಯರ ಫೋಟೋ	೦—೦
ಶ್ರೀಮಪ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತಿರೂಪಿರುವ ಫೋಟೋ	೦—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಳ್ಕೆಸೈಜು ಗಿಳ್ಕೆ	೦—೨
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಗಿಳ್ಕೆ	೦—೪
ಶ್ರೀ ಜಗದ್ಗುರು ಉಜ್ಜಯಿನೀ ಸೀಗೆ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಗಿಳ್ಕೆ	೦—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಗಿಳ್ಕೆ	೦—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆಸಿರಿದ ರಂ ಸಾಖೀರ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦
ಶ್ರೀಜಗದ್ಗುರುಸ್ತಂಭಾಪುರೀ ವೀರಪಲ್ಲಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೩

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ) ...	೧ ಆಣೆ
ಸಪ್ತಾಸಾತ್ರಿಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ -	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ) -	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ) ...	೨ ಆಣೆ
ಬಸವಾದಿನಿಜಶತ್ಪದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) -	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ...	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ -	೨ ಆಣೆ
ಉಲ್ಲಮಾಹಾತ್ಮ್ಯ (೨ನೆಯ ಆವೃತ್ತಿ) ..	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ ...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ)	೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸಪ್ತಾಸಾತ್ರಿಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂಶ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಸೂಲಪಮಾತ್ರ. ಚಳ್ಕೆಸೈಜು)	೮ ಆಣೆ
ಶಿವಾದ್ವೈತಪರಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮
೬ ಸವಧ್ಯಾಂತದಿವಾಕರ (೨ನೆಯ ಆವೃತ್ತಿ)	೮
ಆಗಮಪರಿಜ್ಞಾನ	೮
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮
ಶ್ರೀಜಗದ್ಗುರು ಶಿವಾನಂದವಿಜಯ	೮
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಶಿವಾಸೂತ್ರಸಿದ್ಧಾಂತದರ್ಪಣ	೧೨
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ -	೧
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧
ವಿನೇಶಮುಕ್ತಾವಳಿ ..	೧
ವಿಚಾರಸಾರಾವಳಿ ...	೧
ವೈದಿಕಶಿವಪೂಜಾವಿಧಿ (ವೈದಿಕಸ್ತ್ರಯುಕ್ತವಾದುದು ೩ನೆಯ ಆವೃತ್ತಿ)	೧
ಶ್ರೀಶರಭಾಷ್ಯಂ (ಚಿತ್ರಸೂತ್ರಿಸ್ತ)	೩
ವೀರಶೈವವರತ್ನ (೫ನೆಯ ಆವೃತ್ತಿ, ೩೦ ಮಹತ್ಪದ ಫೋಟೋಗಳಿರುವುದು)	೩
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಾಸಟ್ಟಿದಿ)	೩
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩
ಶಿವಾಗಮಸಂಗ್ರಹ (ಚಿಂದ್ರಜ್ಞಾನ ಸಾಮಾನ್ಯಾಕಾರಜ್ಞಾನ-ಮುಕುಟಾಗಮ-ಸಂಕ್ಷಾಗಮಗಳಿಂದ ಕೂಡಿರುವುದು)	೩
ಶಿವಾದ್ವೈತಮಂಜರಿ (ಕನ್ನಡ ಡಿಮ್ಯಾಯ್ಡ ೧೩೪ಳ ಪುಟ)	೮
A brief life-sketch of Pandit Sri Kashinatha Shastrigi (*English*)	
The Philosophical Aspect of Virasaivism (*English*)	
Speeches by Pandit Shri Kashinatha Shastriji (*English*)	
ಶಿವಾಚಾರಚಂದ್ರಿಕಾ (ತೆಲುಗು)	
ವೀರಶೈವರತ್ನ (ಮರಾಠಿ)	
ಮಹಾಚಾರಚಂದ್ರಿಕಾ (ವೀರಶೈವಾಚಾರ-ತೆಲುಗು)	
ಗಣಿತಿಕಾಚಂದ್ರಿಕಾ (ತೆಲುಗು)	

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಸೈಯ

Edited, Printed and Published by Rudrappa Chanmath Mahadevaiah at Shri Panchacharya Electric Press, Sayaji Rao Road, Mysore.

REGISTERED No. M 2266 (ಶ್ರೀಜಗದ್ಗುರು ಪಂಚಾಚಾರ್ಯಾಗಃ ಪ್ರಸೀದಂತು) REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾದಿಪಶಿವಜಾತಿಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರವರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರ್ಯವಿಧಾಯಮಕರ್ ಪರಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪ ದೀರೋತ್ತಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಶಾಸ್ತ್ರಾಧ್ಯಕ್ಷರಾದ ನೆಲೆ ಪಂ॥ ಶ್ರೀ ಅಖಿಲೇಶಾಪಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರ್ಯಾಳದವರಿಗೆ ೩ ರೂ ಸಂಪಾದಕರು— ನಾಗನೂರು ಬೃ॥ ಮಹಾದೇವಶಾಸ್ತ್ರಿಗಳವರು ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೩೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ ನೇ ನವೆಂಬರ್ ೧೯೫೦ [ಸಂಚಿಕೆ ೩೦

ಮಹಾತ್ಮಾ ಪಂ॥ ಶ್ರೀ ಅಖಿಲೇಶಾಪಶಾಸ್ತ್ರಿಗಳವರ ಸ್ಮಾರಕವು ಆಗತ್ಯವಾದುದು

ಪಂಚಾಚಾರ್ಯ ಪ್ರಭಾ ಪತ್ರಿಕಾ ಸಂಪಾದಕರೂ, ಮೈಸೂರು ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮಾಲೀಕರೂ ಆದ ಶ್ರೀ॥ ನಾಗನೂರ ಬೃ॥ ಪಂ॥ ಶ್ರೀ ಅಖಿಲೇಶಾಪಶಾಸ್ತ್ರಿಗಳವರು ವೀರಶೈವ ಮಹಾಮಹಾಸ್ವಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ನಾಮವನ್ನು ಜಗತ್ತಿಗೆ ಬೀರಿ ಆಡಗಿದ್ದ ಆ ಮಹಾಚಾರ್ಯರ ಕೀರ್ತಿಯನ್ನು ಪ್ರಕಾಶಪಡಿಸಿದರು ವೀರಶೈವಧರ್ಮದ ನಿಜ ತತ್ವವನ್ನೂ, ಪಂಚಾಚಾರ್ಯರ ಪ್ರಾಚೀನತ್ವವನ್ನೂ ಸಾರ್ವಜನಿಕರಿಗೆ ಅನೇಕ ಗ್ರಂಥಗಳನ್ನು ಮುದ್ರಿಸಿ ಸಮಾಜಕ್ಕೆ ಮಹದುಪಕಾರವನ್ನು ಮಾಡಿರುವರು ಶ್ರೀ ಪಂಚಪೀಠಗಳ ಶ್ರೇಯೋಭಿವೃದ್ಧಿಗಾಗಿ ತಮ್ಮನ ಧನಗಳನ್ನು ಧಾರೆಯೆರೆದರು ಈಶ್ವರಾ ಗುರುವರ್ಗದಲ್ಲಿ ಜಾಗೃತಿಯನ್ನು ಮಾಡಿ ಜಗದ್ಗುರುಗಳ ವಿಜಯ ಧ್ವಜವು ಭರತಖಂಡದಲ್ಲೆಲ್ಲಾ ಮಹಾರಾಜಾಧಿರಾಜರಿಂದ ಮನ್ನಣೆಗೊಂಡು ಮೆರೆಯುವಂತೆ ಏರ್ಪಡಿಸಿ ಕೀರ್ತಿಕಾಯರಾಗಿ ಕೈಲಾಸಕ್ಕೆ ತಿವಳ್ಳಲ್ಲಿ ಬೆಡೆತು ಹೋದ ಆ ಮಹಾತ್ಮರ ಸ್ಮಾರಕವು ಇರಬೇಕಾದುದು ಆಗತ್ಯ ಸ್ಮಾರಕವನ್ನು ಲೋಕಪ್ರಿಜತವಾಗುವಂತೆಯೂ, ಚಿರಕಾಲ ಉಳಿಯುವಂತೆಯೂ ವೀರಶೈವಧರ್ಮಾಭಿಮಾನಿಗಳಾದ ನಾವೆಲ್ಲರು ಮಾಡಬೇಕಾದುದು ತವಕ್ಕವ ದೆಯ್ಯುತ್ತ ಪದರಿ ಕಾರ್ಯಕ್ಕಾಗಿ ನನ್ನ ಅಲ್ಪಸೇವೆ ಯೆಂದು ೫ ರೂ ಗಳನ್ನು ಸಮರ್ಪಿಸಿದ್ದೇನೆ

ಬಸವಗೌಡಾ-ರಾಮಗೌಡಾ ನಾಟ್ಪಲ

ಸುಪ್ರಸಿದ್ಧ ಗುರುಭಕ್ತರ ನಿಧನ
ಹೂವಿನೆಹಡಗಲಿ

ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ಶಹರ ನಿವಾಸಿಗಳೂ ವೀರಶೈವ ಮುಖಂಡರೂ ವರ್ಯೋವೃದ್ಧರೂ ಶ್ರೀಮಂತರೂ ಸುಪ್ರಸಿದ್ಧ ಗುರುಭಕ್ತರೂ ಆದ ಶ್ರೀಮಾನ್ ಚತ್ತನಾಥಿ ಗೌಡ್ರಿ ಹುಚ್ಚಪ್ಪನವರು ಇದೇ ತಿಂಗಳು ಆಳೆದ ೪ ನೇ ತೇದಿ ಕಾಲವಾಶ ಸಾಯಂಕಾಲ ಸುಮಾರು ೫ ಘಂಟೆಗೆ ತಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಪರಮ ವಿಷಾದವೆನಿಸುತ್ತದೆ ಇವರು ಶ್ರೀಮತೀಲರೂ ನಿಷ್ಕ ತಿವಪೂಜಕರೂ ಕೇವಲ ಗುರುಭಕ್ತರೂ ಪರೋಪಕಾರಿಗಳೂ, ಸದಾ ಜಗದ್ಗುರುಭಕ್ತರಲ್ಲಿ ನಿಸ್ಪೃಹ ಮನಸ್ಕರಾಗಿದ್ದರಲ್ಲದೆ ಅಜಪ್ಪಳವೂ ಪಂಚಪೀಠಕ್ಕೆ ಸೇವೆಯನ್ನು ಅತ್ಯಾದರದಿಂದ ಮಾಡಿದವರಾಗಿದ್ದರು ಯಾವ ಪೀಠದಲ್ಲಿಯೇ ಆಗಲಿ ವಿಶೇಷ ಸಮಾರಂಭಗಳಲ್ಲಿ ಇವರ ಕಾರ್ಯಕುಶಲತೆಯ ಕೈವಾಡ ಇಲ್ಲಿರುತ್ತಿರಲಿಲ್ಲ ಅಂತಹ ಸಂದರ್ಭಗಳಲ್ಲಿ ಪೀಠಾಚಾರ್ಯರು, ಇವರನ್ನು ಕರೆಯಿಸಿಕೊಂಡು ಇವರ ಸಲಹೆಯನ್ನು ಅಳವಡಿಸಿಕೊಳ್ಳುತ್ತಿರಲಿಲ್ಲ ಗುರುಸಾರ್ವಭೌಮರ ಶಿಷ್ಯೋತ್ತಮರಾದ ಬಂದಳಿಕೆಯ ಅಧ್ಯಾತ್ಮಯೋಗಿಗಳಿಗೆ ಲಕ್ಷ್ಮಿ ಗೊಡದೆ ಸ್ವಸಂತೋಷದಿಂದ ಸೇವೆ ಸಲ್ಲಿಸಲು ಧಾವಿಸುತ್ತಿದ್ದರು ಇವರು ಜಗದ್ಗುರುಗಳ ಸೇವೆಗೂ ಪಂಚಪೀಠಗಳ ಉದ್ಧಾರಕ್ಕೂ ಪೀಠಾಚಾರ್ಯರ ವಿಜಯೋತ್ಸವಕ್ಕೂ ತುಂಬಾ ಹೆಚ್ಚು ಸಾರಿ ಸುತ್ತಾಡಿದ್ದರು ಇವರ ಸೇವಾತತ್ಪರತೆಯನ್ನು ಕಂಡು ಪೀಠಾಧಿಕ್ಷರು ಇವರಿಗೆ ಅನೇಕ ಪ್ರಶಸ್ತಿಪೂರ್ವಕ ಪ್ರೇಮದಿಂದ ಸಂಭೋಧಿಸುತ್ತಿದ್ದರು ಇವರಿಗೆ ಯಾವ ಪ್ರಶಸ್ತಿಗಳು ಕೊಡಲ್ಪಡದಿದ್ದರೂ ಯಾವ ಪ್ರಶಸ್ತಿಗಳಗೂ ಅನರ್ಹರಾಗಿರಲಿಲ್ಲ ಅಸ್ತು!

ಅವಸಾನಕಾಲದಲ್ಲಿ ಇವರಿಗೆ ೬೫ ವರ್ಷಗಳಾಗಿದ್ದವು ಗುರುವರ್ಗದವರಿಗಂತೂ ಇವರನ್ನು ಕಂಡರೆ ತುಂಬಾ ಅಭಿಮಾನ ಇವರ ನಿಸ್ವಾರ್ಥ ಸೇವೆಗೆ ಪೀಠಾಧಿಪತಿಗಳು ಇವರಿಗೆ ಪೀಠಾಚಾರ್ಯರ ಜೊತ್ತೆಲು ಮಗ ಎಂದು ಕರೆಯುತ್ತಿದ್ದರು ನಾವು ಇತ್ತರಲ್ಲಿಯೇ ಗುರು ಪೀಠಾಭಿಮಾನಿಗಳನ್ನೂ ಜಗದ್ಗುರುಗಳ ಸೇವಾತತ್ಪರರನ್ನೂ ಕಳೆದುಕೊಂಡುದು ವಿಧಿಯ ದುರುಳುತನವೋ ಅಥವಾ ಗುರುವರ್ಗದ ದೌರ್ಭಾಗ್ಯವೋ ತಿಳಿಯದಾಗಿದೆ ಇತ್ತೀಚೆಗೆ ಗುರುವರ್ಗದ ಅಭ್ಯುದಯಾಭಿಮಾನಿಗಳನ್ನು ಒಬ್ಬೊಬ್ಬರನ್ನಾಗಿ ಹೊಂಚುಹಾಕಿ ಆಪತ್ತರಿಸುತ್ತಿರುವ ಆ ಕಾಳ ವಿಧಿಯ ಧೂರ್ತತನಕ್ಕೆ ಎಷ್ಟು ಧಿಕ್ಕಾರವಿಟ್ಟರೂ ತೀರದಾಗಿದೆ ಇವರ ಶ್ರಾದ್ಧಾನಂತರ ಶ್ರಾದ್ಧಾಯಿಯು ಪುರುದಿನ ವಿಶೇಷ ಜನಸಂದಣಿಯಿಂದ ನೆರವೇರಿತು ಅಂದು ಇವರ ಒಂಭೂ ವರ್ಗದವರೂ ಅಜ್ಜೇಶ್ವರೂ ಬಂದಿದ್ದು ಸಮಾಧಿ ಕ್ರಿಯೆಯು ವಿಧ್ಯುಕ್ತವಾಗಿ ಕೊನೆಗೊಂಡಿತು ಜಗದಾಚಾರ್ಯರು ಈವರ ಆತ್ಮಕ್ಕೆ ಚಿರಶಾಂತಿಯನ್ನು ದಯಪಾಲಿಸಿ, ಇವರ ಶುಟುಂಬವರ್ಗಕ್ಕೆಲ್ಲಾ ಆಕಾರದು ಐವನ್ನು ಕ್ಷಿಪ್ರದಲ್ಲಿಯೇ ಶಮನಮಾಡಲೆಂದು ಪ್ರಾರ್ಥಿಸುವ

ಗುರುಸೇವಾಕಿಂಕರ, ಹೂವಿನಹಡಗಲಿ

ದೊಡ್ಡ ಗುಣಿ

ತಂಜಾವೂರು ಜಿಲ್ಲಾ ಕುಂಭಕೋಣಂ ಪೆಯರು ಶ್ರೀ। ಶಾಂತವೇನ ಸಾರಂಗದೇಶಿಕೇಂದ್ರಸ್ವಾಮಿಗಳ ಸನಾಧಿಯು ತುರುವೇಕೆರೆ ಮೊಕ್ಕಾಬುನಿಂದ ನೊಣವಿನಕೆರೆ ನ್ಯಗ್ರೋಧ್ಯ ಸಂತೆವರ ರ್ಮಾಗವಾಗಿ ಸಂಚಿಗೆ ಬಿಜಮಾಡಿಸಿ ಎಲ್ಲಾ ಭಕ್ತಾದಿಗಳ ಸೇವೆಯನ್ನು ಮನ್ನಿಸಿ ಆಶೀರ್ವದಿಸಿ ಅಲ್ಲಿಂದ ದೊಡ್ಡಗುಣಿಗೆ ಅಲ್ಲಿನ ಭಕ್ತಾದಿಗಳ ಆರತಿಯಂತೆ ಶ್ರೀಗಳವರು ದಯಮಾಡಿಸಿ ಅಲ್ಲಿನ ಭಕ್ತಾದಿಗಳ ಸೇವೆಯನ್ನು ಮನ್ನಿಸುತ್ತಾ ಲಿಂಗಾನಂದೀಂದಿರವರ ವಿಷಯವನ್ನು ತಿಳಿಸಲು ಸಂತೋಷವೆನಿಸುತ್ತಿದೆ ದರ್ಶನ ಪೀಠಾವಾರಣವನ್ನು ದಯಪಾಲಿಸುತ್ತಿ ತಮ್ಮ ದಿವ್ಯ ವಾಣಿಯಿಂದ ಸದುಪದೇಶವನ್ನು ಮಾಡುತ್ತ ಭಕ್ತಾದಿಗಳನ್ನು ಆನಂದಸಾಗರದಲ್ಲಿರುವಂತೆ ಮಾಡಿರುತ್ತಾರೆ ಅದುದರಿಂದ ದೊಡ್ಡಗುಣಿ ನೊಜ್ಜಾಮಿಗೆ ಮಹಾಭಕ್ತಾದಿಗಳು ದಯಮಾಡಿಸಿ ಸ್ವಾಮಿಕೃಪೆಗೆ ಪಾತ್ರರಾಗಬೇಕೆಂದು ಆಶಿಸುವ

ಓಮ್ ಗುರುಭಕ್ತ

ಹುಬ್ಬಳ್ಳಿಯಲ್ಲಿ ಡಾ॥ ಎಂ ಸಿ ಮೋದಿಯವರು

ಕೆಲವು ದಿವಸ ಹುಬ್ಬಳ್ಳಿಯಲ್ಲಿ ಕ್ಯಾಂಪು ಮಾಡಿದ್ದ ಡಾ॥ ಎಂ ಸಿ ಮೋದಿ (ಆಯ್ ಸರ್ಜನ್) ಇವರು ೧೫೦೦೦ ಕಣ್ಣಿನ ರೋಗಿಗಳ ಚಿಕಿತ್ಸೆ, ೭೧೪ ಕಣ್ಣಿನ ಆಪರೇಷನ್, ಬಹಳೇ ಯಶಸ್ವಿನಿಂದ ಮಾಡಿ ತಾರೀಖು ೨೪-೧೦-೧೯೫೦ ರಿಂದ ಕರ್ನಾಟಕ ಆಯುರ್ವೇದ ವಿದ್ಯಾಪೀಠ ಪಾಸಬಾಗ-ಬೆಳಗಾವಿ ಇಲ್ಲಿ ಆಪರೇಷನ್ ಸುರುವು ನಡೆಯಿಸಿದ್ದಾರೆ

ತಿದ್ದುಪಡಿ

ತಾರೀಖು ೯-೧೦-೧೯೫೦ ನೇ ದಿವಸ ಹೊರಟ ಪ್ರಭಾಪತ್ರಿಕೆ ೨೫ ನೇ ಸಂಚಿಕೆಯಲ್ಲಿ ತುರುವೇಕೆರೆ ಎಂಬ ಹೆಡ್ಡಿಂಗಿನಿಂದ ಬರೆದ ಲೇಖನದ ಆರಂಭದಲ್ಲಿದ್ದ ಶ್ರೀ ಜಗದ್ಗುರು ರಂಭಾಪುರೀ ಸಂಸ್ಥಾನಕ್ಕೆ ಒಳಪಟ್ಟ ಎಂಬ ವಿಷಯವು ತಪ್ಪಾಗಿದೆಯು ಲೇಖಕರು ಒಪ್ಪುತ್ತಾರೆ ವಾಚಕರು ಅದನ್ನು ಬಿಟ್ಟು ಓದಬೇಕಾಗಿ ಆಶಿಸುತ್ತೇವೆ

— ಸಂ

ಸ್ವೀಕಾರ

ತುಮಕೂರು ಡಿ॥ ತುರುವೇಕೆರೆ ಪೃಥ್ವೀಪಟ್ಟಿರ ಯಂ ಪರ್ವತಪ್ಪ ಶೆಟ್ಟಿರವರು ತಿದ್ದುಪಡಿ ಲೇಖನದ ಬಾಬತು 2 ರೂ ಗಳನ್ನು ಆರ್ಪಿಸಿದ್ದಾರೆ

ಧಾರವಾಡ ಡಿ॥ ಅಕ್ಕಿ ಆಲೂರು ಗ್ರಾಮವಾಸಿಗಳಾದ ಮಳಿಯಯ್ಯ, ರಾಚಯ್ಯ-ಹಿರೇಮಠ ಸೋದರ ಗುರು ಸ್ವಾಮಿಮಠ ಇವರು ಹಾವೇರಿ ಮೋಟಾರ ಸ್ಟ್ಯಾಂಡಿನಲ್ಲಿ ಒಂದು ಬೆಳ್ಳಿಗೆಜ್ಜೆ ಪಟ್ಟಿಯನ್ನು ಕಳೆದುಕೊಂಡಿದ್ದು ಮುಂದೆ ೨-೩ ತಾರೀಖಿನಲ್ಲಿ ಜಗದ್ಗುರುಗಳ ಅನುಗ್ರಹದಿಂದ ದೊರೆತ ಮಾಲಕ ಪ್ರಭಾಪೋಷಣಾರ್ಥಾಗಿ ಆರ್ಪಿಸಿದ 1 ರೂಪಾಯಿ ಶ್ರೀ ಉಜ್ಜಯ್ಯನವರು ಹಿರೇಮಠ ಇವರ ದ್ವಾರಾ ಕಲ್ಪಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಸೂಚನೆ

ತಾರೀಖು ೬-೧೧-೧೯೫೦ ನೇ ದಿವಸ ಹೊರಡ ಬೇಕಾಗಿದ್ದ ನಮ್ಮ ಪ್ರಭಾ ಪತ್ರಿಕೆಯ ೩೯ ನೇ ಸಂಚಿಕೆಯನ್ನು ಕಾರ್ಯಾಂತರ್ಯುದಿಂದ ಪ್ರಕಟಿಸಲು ಸಾಧ್ಯವಾಗಲಿಲ್ಲವೆಂಬ ವಿಷಯವನ್ನು ತಿಳಿಸಲು ವಿಷಾದಿಸುತ್ತೇವೆ

ಸಂಪಾದಕರು.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಮಂದ್ರಂಭಾಪುರೀ ನೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ವೃಷಭ ವೀರೇಣುಕ ವೀರಗಂಗಾಧರರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ

ವಿಜಯದಶಮಿಯ ವೀರಸಂದೇಶ

ಮಾನವನು ಸಕಲ ಸಂಪತ್ತುಗಳನ್ನು ಒಯಸುತ್ತಾನ ಆದರೆ ತನ್ನ ಶಕ್ತಿಯು ತನ್ನ ಸಂಕಲ್ಪಗಳನ್ನು ಪೂರೈಸಲು ಸಮರ್ಥವಾಗಿದೆಯೇ ? ಎಂದು ಆಲೋಚಿಸುವುದಿಲ್ಲ ತನ್ನ ಸಾಮರ್ಥ್ಯವನ್ನರಿಯದೇ ಮುಂದೋಡುವ ಯತ್ನಿಸುತ್ತಾನೆ ಸ್ವಕೀಯ ಶಕ್ತಿಯು ವಿಕಾಸಗೊಂಡರೆ ಯಾವ ಫಲವನ್ನಾದರೂ ಪಡೆಯಬಹುದು ಸರ್ವಾರ್ಥಸಿದ್ಧಿಗೆ ಸಾಧನವಾದ ಶಕ್ತಿಯನ್ನು ತಿಳಿವಳಿಕೆಯಿಂದ ಕಳೆದುಕೊಂಡು ದುರ್ಬಲನಾಗಿ ಅಸಾಧ್ಯ ಸಂಕಲ್ಪಗಳನ್ನು ಮಾಡಿದರೆ ನೆರವೇರುವುದೆಂತ ? ದುಬಾರಿದ್ರ್ಯಾದಿಗಳು ವನಸ್ಪತಿ ದೌರ್ಬಲ್ಯದ ದುಷ್ಫಲಗಳು ನಾಡಿನಲ್ಲಿರುವ ಸಕಲ ಸ್ತ್ರೀಪುರುಷರು ಸರ್ವ ವಿಧದಲ್ಲಿಯೂ ಸಮರ್ಥರಾಗಿದ್ದರೆ ಆ ನಾಡು ಗೆಲುವಿನ ಬಿಡಾಗುವುದು ಅಸಮರ್ಥ ಪ್ರಜರಸ್ಮಾಳುವ ಸರಕಾರವು ಬಹಳ ತೊಂದರೆಗೀಡಾಗುವದು ಬಲಿಷ್ಠ ಶಾಸನಗಳು ಆಒಲ ಪ್ರಜರನ್ನು ಸುಧಾರಿಸಲು ಒಪುಕಾಲಬೇಕಾಗಬಹುದು ವಿಶ್ವವಿಜಯಕ್ಕೆ ವಿಶ್ವಶಾಂತಿಗೆ ಬಲಿಷ್ಠ ಪ್ರಜರೇ ಕಾರಣರು ಅಬಲರ ಬೆಂಬಲದಿಂದ ವಿಜಯವನ್ನ ಪೇಕ್ಷಿಸುವುದು ಹಾಸ್ಯಾಸ್ಪದವಾಗಿದೆ ಸ್ತ್ರೀವರ್ಗದ ಮಾತು ಬೇರಿರಲಿ ಈಗ ಎಲ್ಲೆಡೆಯಲ್ಲಿ ಸುಧಾರಣೆಯ ಗಾಳಿಯು ಬೀಸುತಲಿದೆ ಆದರೂ ರಾಷ್ಟ್ರದಲ್ಲಿ ನೇಕ ಕೆಲಸಗಳು ಇನ್ನೂ ಇವೆ ರಾಷ್ಟ್ರ ರಕ್ಷಣೆಯ ಭಾರವು ಪುರುಷನ ಮೇಲೆ ಅಧಿಕವಾಗಿದೆ ಕೃಷಿಯಂತೂ ಪುರುಷರ ಪ್ರಧಾನ ಕಾರ್ಯಕ್ಷೇತ್ರ ವ್ಯಾಪಾರ ಉದ್ಯೋಗಗಳು ಪುರುಷನ ರಿಯಾಗಿ ಕತ ವ್ಯಗಳಾಗಿವೆ ಪುರುಷನ ಬಲದಿಂದಲೇ ಜಗತ್ಪಿತ ಎಲ್ಲ ಕಾರ್ಯಗಳು ಪ್ರಡೆಯ ಬೇಕಾಗಿವೆ ಎಂದರೆ ಅತಿಶಯೋಕ್ತಿ ಎಲ ವಿದ್ಯಾಬಲ ಬುದ್ಧಿಬಲ ಮನೋಬಲ ಧನಬಲಗಳು ಮನುಷ್ಯನಿಗೆ ಬೇಕು, ಆದರೆ ಶರೀರ ಬಲವಿಲ್ಲದಿದ್ದರೆ ಯಾವ ಬಲಗಳೂ ಸಫಲಗಳಾಗುವದಿಲ್ಲ ಸರ್ವ ಕಾಲಗಳಲ್ಲೂ ಶರೀರಬಲವು ಸ್ವಥಾನವಾಗಿ ಬೇಕಾಗಿದೆ ಶರೀರಬಲವಿಲ್ಲದೆ ರಾಷ್ಟ್ರಗಳು ಉನ್ನತಿಯನ್ನೈದಲಾರವು ಆಒರ ವಿಜಯಪೇಕ್ಷೆಯಂತೂ ಗಗನಕುಸುಮವೆ ಸದೃಶವಾಗಿದೆ

ನಮ್ಮ ಭರತಖಂಡವು ವೀರಪುರುಷರ ಬೀಡು ಭವನಾಡ ನ ದಿವೀರರನ್ನು ಸೃರಿಸಿದರೆ ಮೈಗೂಡಲುಗಳು ನೆಟ್ಟಗಾಗುತ್ತವೆ ವೀರರ ಸಂಖ್ಯೆಯು ಕಡಿಮೆಯಾದಂತೆ ರಾಷ್ಟ್ರವು ಪರಾಧೀನವಾಗುವದು ಸಹಜನ ಗಿದ ಎ ರರನು ಹುಟ್ಟಿಸಲು ನಮ್ಮ ದೇಶದಲ್ಲಿ ಪ್ರತಿಗ್ರಾಮಾಗ್ರಾಮಗಳಲ್ಲಿಯೂ ವ್ಯಾಯಾಮಮಂದಿರಗಳು (ಗರಡೀ ಮನೆ) ಸ್ಥಾಪಿಸಲ್ಪಟ್ಟವೆ ಇದು ಒಂದು ಪಾ ಚೀನ ಪದ್ಧತಿಯಾಗಿದೆ, ಪೂರ್ವಕಾಲದಲ್ಲಿ ಎಲ್ಲಿನೋಡಿದರಲ್ಲಿ ವೀರಪುರುಷರು ಕಂಗೊಳಿಸುತ್ತಿದ್ದರು ಈಗ ಗರಡೀಮನೆಗಳ ಅವಸ್ಥೆಯನ್ನು ನೋಡಿದರೆ ಮನಸ್ಸು ನೋಯುತ್ತದೆ ವ್ಯಾಯಾಮ ಮಾಡುವವರ ಸಂಖ್ಯೆಯು ಬಹಳ ಕಡಿಮೆಯಾಗುತ್ತಿದೆ ಅಲಸ್ಯದ ರಾಜ್ಯವು ವಿಸಾರಗೊಳ್ಳುತ್ತಿದೆ ಇದರ ಫಲವಾಗಿ ಒಕ್ಕಲುತನ ಮುಂತಾದ ಶ್ರಮದ ಕಾರ್ಯಗಳು ಕುಸಿದುಬೀಳುತ್ತಿವೆ ಆಹಾರದ ಅಭಾವವು ನಾಡಿನಲ್ಲಿ ತಾಂಡವವಾಡುತ್ತಿದೆ ರೋಗಗಳೂ ಸ್ವೇಚ್ಛೆಯಿಂದ ನಿರಾತಂಕವಾಗಿ ಹರಡುತ್ತಿವೆ ಕ್ಷಯರೋಗವಂತೂ ತೀವ್ರ ಗತಿಯಿಂದ ಜಗತ್ತನ್ನು ನುಂಗಲಿಕ್ಕುವಾಗಿದೆ ಅಲ್ಪವಯಸ್ಸಿನಲ್ಲಿಯೇ ಅಕಾಲವೃದ್ಧತ್ವವಿಗೆ ತುತ್ತಾಗುವ ಕರುಣಾಕರುಣಿಯರ ವಿಕಂತ ವಿಧುರ ವಿಧವೆಯರ ಮರವನ್ನೆ ದು ಖ ದುರ್ಗತಿಗಳು ಒನ್ನಿಸಲಸಾಧ್ಯವಾಗಿವೆ ಔಷಧೋಪಚಾರಗಳನ್ನು ರೋಗಗಳೇ ಗೆಲ್ಲುತ್ತಿವೆ ದೇಶವಿದೇಶಿಯ ಔಷಧಗಳ ಬೆಲೂಲವೇ ಜೀವನಕ್ಕೆ ಧೈರ್ಯದಾಯಕವಾಗಿವೆ ಒಲಿಷ್ಟ ಸಂತತಿಯು ನಿರವಾಯಿತು ಆಹಾರ ವಿಹಾರಗಳ ನಿಯಮಗಳು ಸ್ವತಂತ್ರ ಜೀವನದಲ್ಲಿ ನಿರಾಧಾರಗಳಾಗಿವೆ ಶುದ್ಧ ಪೌಷ್ಟಿಕ ಆಹಾರದಲ್ಲಿ ಆಸಕ್ತಿಯೆಯಿಲ್ಲ ಹಾಲು ಬೆಣ್ಣೆ ಮುಂತಾದ ಪೌಷ್ಟಿಕ ಪದಾರ್ಥಗಳಿಗೆ ಉಗುಮಸ್ಥಾನವಾದ ಭಾರತವು ಮುಸುಗಿನ ಜೋಳ (ಗೋಜಾ) ಮಿಲ್ಮಾಸೌದ್ ಹಾಲಿನ ಡಬ್ಬಿ ಮುಂತಾದ ಬಲಹೀನ ರೋಗಜನಕ ಪದಾರ್ಥಗಳಿಗಾಗಿ ಪರದೇಶಗಳ ಮುಂದೆ ಕೈಯೊಡ್ಡಿ ಭಿಕ್ಷೆಬೇಡಬೇಕಾಯಿತು ಇದೆಲ್ಲವನ್ನು ಶಾಂತಮನಸ್ಸಿನಿಂದ ಆಲೋಚಿಸಿದರೆ ನಿಜವಾದ ಭಾರತೀಯರಿಗೆ ಕಂಬನಿರು ಬಾದಿರುವದಿಲ್ಲ ಈ ಆನರ್ಥಪರಂಪರೆಗೆ ರಾಷ್ಟ್ರನಿವಾಸಿಗಳ ದೌರ್ಬಲ್ಯವೇ ಮೂಲ ವ್ಯಾಯಾಮದಿಂದ ಪುರುಷನ ಶರೀರವು ಒಲಗೊಳ್ಳುವದು ರೋಗ ಅಲಸ್ಯಗಳಿಗೆ ಅಸ್ಪದವಿಲ್ಲ ಮುತ್ಸಿನಂತಹ ಸಂತಾನವಾಗುವಮ್ಮ ಕ್ಷಯರೋಗಗಳ ಸಂಖ್ಯೆಯು ಕ್ರಮೇಣ ಕಡಿಮೆಯಾಗುವುದು ಸಮಯ ಬಂದಾಗ ವೀರಪುರುಷರು ಗುಂಪುಗುಂಪಾಗಿ ಹೊರಡು ನಾಡಿನ ಮೇಲೆ ಬಂದ ವಿಪತ್ತುಗಳನ್ನು ಹೊಡೆದೋಡಿಸಲು ಸಿದ್ಧರಾಗಬಹುದು ಇಂತಹ ವೀರಶ್ರೇಣಿಯು ಇಲ್ಲದಿದ್ದರೆ ಸ್ತ್ರೀಯರನ್ನು ಮುಂದುಮಾಡುವ ಪರಾಕ್ರಮವನ್ನು ತಾಳ ಬೇಕಾಗುವದು ಅತ್ಯಬಲ ಶರೀರಒಲವಿಲ್ಲದ ಶುಷ್ಕಸುಧಾರಣೆ ಬಲೆಯಲ್ಲಿ ಬಿದ್ದು ಮಹಾನರ್ಥಕ್ಕೆ ಗುರಿಯಾಗಬೆ ಡಿರಿ ಕಾಲವು ವಿಚಿತ್ರವಾಗಿದೆ

ಸ್ವಾತಂತ್ರ್ಯಾನಾತಾವರಣದಲ್ಲಿ ಶಾಂತಿಜೀವನಕ್ಕೆ ಸೈರ್ಯವಿಲ್ಲದಾಗಿದೆ ದುರ್ಬಲರಿಗೆ ಎಷ್ಟು ಸಹಾಯವನ್ನಿತ್ತರೂ ಸಾಲಲಾರದು ಎಲ್ಲಕ್ಕೂ ಹೆದರಿ ಕೈಮೋರೆಗಳನ್ನು ನೋಡುವದು ಸರಿಯಲ್ಲ ಉತ್ಸಾಹಂತಿಯಾದರೆ ಕಠಾಕಾಲದಲ್ಲಿ ಸ್ವಸಾಮರ್ಥ್ಯದಿಂದಲೇ ಸ್ವದೇಶ, ಸ್ವಗೃಹ ಸ್ವಕುಟುಂಬ, ಸ್ವಕೀಯ ಸಂಪತ್ತುಗಳನ್ನು ಕಾಪಾಡಿಕೊಳ್ಳಬೇಕಾಗಿವೆ ವೀರರಿಲ್ಲದ ರಾಜ್ಯವು ಜೀವವಿಲ್ಲದ ಶರೀರವಿದ್ದಂತೆ ಈಗಿನ ಕಳಾನಗಳನ್ನು ನೋಡಿದರೆ ಮುಂದಿನ ಪರಿಣಾಮವು ದುರಂತವಾಗುವದೆಂದು ನೀತಿಜ್ಞರು ಊಹಿಸದಿರಲಾರರು ಮಹಾನರ್ಥವು ದೂರದಲ್ಲಿರುವಾಗಲೇ ಎಚ್ಚರಗೊಳ್ಳಿರಿ ಸ್ವಸಂರಕ್ಷಣೆಗೆ ಸಿದ್ಧರಾಗಿರಿ ಪ್ರತಿ ಗ್ರಾಮ ಗ್ರಾಮಗಳಲ್ಲಿಯೂ ವ್ಯಾಯಾಮ ಮಂದಿರಗಳನ್ನು ಸ್ಥಾಪಿಸಿರಿ, ಇದ್ದವುಗಳನ್ನು ಅಭಿವೃದ್ಧಿಗೊಳಿಸಿರಿ, ಕೆಟ್ಟವುಗಳನ್ನು ಜೀರ್ಣೋದ್ಧಾರಗೊಳಿಸಿರಿ, ಹತ್ತು ವರ್ಷದ ಹುಡುಗರಾದಿಯಾಗಿ ಎಲ್ಲರೂ ವ್ಯಾಯಾಮಮಾಡಿ ಬಲಿಷ್ಠರಾಗಿರಿ ಕುಸ್ತಿಗಾಗಿಯೇ ಗರಡೀಸಾಧನ, ಗರಡೀಸಾಧನ ಪುಂಡರ ಕೆಲಸ ಎಂಬ ವಿಪರೀತ ಭಾವನೆಯನ್ನು ಹೊಡೆದೋಡಿಸಿರಿ ಬೆಳೆಯುವ ಮಕ್ಕಳಿಗೆ ಹಾಲು ಬೆಣ್ಣೆ ಗಳನ್ನು ಹೆಚ್ಚಾಗಿ ಕ್ಕಿಸಿರಿ, ಭಾವೀರಾಷ್ಟ್ರದ ಪೀಳಿಗೆಯನ್ನು ಒಲಗುಂದಿಸದೇಡಿರಿ ದುಡ್ಡಿನ ಆಶೆಗಾಗಿ ಕಾಲು ಮುಂತಾದ ಜೈನವನ್ನು ಪೇಟೆಗಟ್ಟಿ ಮಕ್ಕಳನ್ನು ವ್ಯತ್ಯುವಿನ ಮುಖದಲ್ಲಿ ದೂಡದೇಡಿರಿ ಗ್ರಾಮಸುಧಾರಣೆಯನ್ನ ಪೇಕ್ಷಿಸುವವರು ವ್ಯಾಯಾಮ ಪ್ರಚಾರ ಸಿದೇಕು " ವ್ಯಾಯಾಮ ಮಂದಿರವಿಲ್ಲದ ಊರು, ಸ್ಮಶಾನಕ್ಕೆ ಸಮಾನ " ಎಂಬುದಕ್ಕೆ ಬದಲಾಗಿ, ಪಿಯ ರಸಾಲಯ ಯಮರಸಾಲಯ (ಚೆನಾದಂಗಡಿ)ಗಳಲ್ಲದ ಊರು ಸುಡುಗಾಡವಿದ್ದಂತೆ ಎಂದು ಅನೇಕರು ಅನ್ನುತ್ತಿರುವರು, ಶಿವ ಶಿವ! ಇಂದೆಂತಹ ವಿಪರೀತ ಕಾಲವಿದು ಹರೆ! ಎಲ್ಲ ಬಗೆಯ ಶುದ್ಧ ಪೌಷ್ಟಿಕಾಹಾರಗಳಿಗೆ ಬೀಡಾದ ಭಾರತಭೂಮಿಯಲ್ಲಿ ದೌರ್ಬಲ್ಯದ ಅಂಧಕಾರವೇ ? ಇದಕ್ಕೆ ಎಷ್ಟು ಕೋಕಿಸಿದರೂ ತೀರದಾಗಿದೆ ಶ್ರೀಸರಮಾತ್ಮನ ಕೃಪೆಯಿಂದ ವ್ಯಾಯಾಮವು ಭಾರತದಲ್ಲಿ ಭರದಿಂದ ಹರಡಲಿ, ಹಾಲು ಬೆಣ್ಣೆಗಳು ಸಮೃದ್ಧಿಗಾಗಲಿ, ವೀರಪುರುಷರು ಹೆಚ್ಚಾಗಲಿ, ಭಾರತಭೂಮಿಯು ಸ್ವತಂತ್ರ್ಯತ ಸ್ಥಿರವಾಗಿರಲಿ, ಭಾರತೀಯರ ಶೌರ್ಯ ಪರಾಕ್ರಮಗಳು ಒಗತ್ತಿಗೆ ಆದರ್ಶಗಳಾಗಲಿ, ವಿಜಯಲಕ್ಷ್ಮಿಯು ಭಾರತೀಯರ ಅಕ್ಷಯ್ಯ ನಿಧಿಯಾಗಲಿ

ಶಾತೀ ಜಂಗಮವಾಡೀ ಸಂಸ್ಥಾನ ಮಹಾಮಠದಲ್ಲಿ ದಶಠಾಮಹೋತ್ಸವವೂ ಅನ್ನಪೂರ್ಣಾಮೂರ್ತಿಯ ಪ್ರತಿಷ್ಠಾಪನಸಮಾರಂಭವೂ

